ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೭ || ಬೆಂಗಳೂರು, ಗುರುವಾರ, ಏಪ್ರಿಲ್ ೨೬, ೨೦೧೨ (ವೈಶಾಖ ೬, ಶಕ ವರ್ಷ ೧೯೩೪) || ಸಂಚಿಕೆ ೧೭

ವಿಷಯಸೂಚಿ

ವಿಶೇಷ ರಾಜ್ಯಪತ್ರಗಳು

ದಿನಾಂಕ 26-04-2012

ವಿಶೇಷ ರಾಜ್ಯಪತ್ರ ಸಂಖ್ಯೆ	ಪ್ರಕಟಣೆ ದಿನಾಂಕ	ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ
238	29-03-2012	No. SARIE 6 SAENI 2012, Bangalore, Dated: 29.3.2012
239	29-03-2012	No. SARIE 5 SAENI 2012, Bangalore, Dated: 29.3.2012
243	30-03-2012	No. KLA/LGA/18/Bill/2012, Bangalore, Dated: 30.3.2012
244	30-03-2012	No. KLA/LGA/13/Bill/2012, Bangalore, Dated: 30.3.2012
248	31-03-2012	ಸಂಖ್ಯೆ: ಸಂವ್ಯಶಾಇ 22 ಶಾಸನ 2012, ಬೆಂಗಳೂರು, ದಿನಾಂಕ: 31.03.2012
249	31-03-2012	ಸಂಖ್ಯೆ: ಸಂವ್ಯಶಾಇ 23 ಶಾಸನ 2012, ಬೆಂಗಳೂರು, ದಿನಾಂಕ: 31.03.2012
250	31-03-2012	ಸಂಖ್ಯೆ: ಸಂವ್ಯಶಾಇ 25 ಶಾಸನ 2012, ಬೆಂಗಳೂರು, ದಿನಾಂಕ: 31.03.2012
251	31-03-2012	ಸಂಖ್ಯೆ: ಸಂವ್ಯಶಾಇ 28 ಶಾಸನ 2012, ಬೆಂಗಳೂರು, ದಿನಾಂಕ: 31.03.2012
252	31-03-2012	ಸಂಖ್ಯೆ: ಸಂವ್ಯಶಾಇ 24 ಶಾಸನ 2012, ಬೆಂಗಳೂರು, ದಿನಾಂಕ: 31.03.2012
253	31-03-2012	No. FD 57 CSL 2012, Bangalore, Dated: 31.3.2012
256	31-03-2012	No. FD 03 PES 2012, Bangalore, Dated 31-03-2012
258	30-03-2012	No. SAMVYASHAE 50 SHASANA 2011, Bangalore, dated: 30.03.2012.
259	02-04-2012	ಸಂಖ್ಯೆ: ಅ1/ಪ್ರೌಶಾಶಿನೇ/01/2012-13, ಬೆಂಗಳೂರು, ದಿನಾಂಕ: 02ನೇ ಏಪ್ರಿಲ್ 2012
262	02-04-2012	ಸಂಖ್ಯೆ: ಇ1(ಎ)/ಆಡಳಿತ/ಪ್ರೌಶಾಶಿ/ಆಯ್ಕೆ/01/2012-13, ದಿನಾಂಕ: 02ನೇ ಏಪ್ರಿಲ್ 2012
282	18-04-2012	No. CO 103 MAYISE 2011(P), Bangalore, Dated: 18/04/2012
245	30-03-2012	ಸಂಖ್ಯೆ: ಲೋಇ : 64 : ಇಎಪಿ : 2011, ಬೆಂಗಳೂರು, ದಿನಾಂಕ : 30-03-2012

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೭	ಬೆಂಗಳೂರು, ಗುರುವಾರ, ಏಪ್ರಿಲ್ ೨೬, ೨೦೧೨ (ವೈಶಾಖ ೬, ಶಕ ವರ್ಷ ೧೯೩೪)	ಸಂಚಿಕೆ ೧೭

ಭಾಗ – ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನೇಮಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ: ಯೋಇ 309 ಪಿಟಿಪಿ:94 ದಿನಾಂಕ: 07-08-1995.
2. ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಹಾಗೂ ವಿಜಾಪುರ ಜಿಲ್ಲಾ ಉಸ್ತುವಾರಿ ಸಚಿವರ ಪತ್ರ ಸಂಖ್ಯೆ: ಬೃಮಕೈಸ/940/2011 ದಿನಾಂಕ: 03-11-11.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಆದೇಶದಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಜಿಲ್ಲಾಮಟ್ಟದ/ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗಳನ್ನು ರಚಿಸಲಾಗಿರುತ್ತದೆ. ಮೇಲೆ ಓದಲಾದ (2)ರ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಹಾಗೂ ವಿಜಾಪುರ ಜಿಲ್ಲಾ ಉಸ್ತುವಾರಿ ಸಚಿವರು ಸೂಚಿಸಿರುವ ಸದಸ್ಯರುಗಳನ್ನು ಮಾನ್ಯ ಯೋಜನಾ ಸಚಿವರ ಶಿಫಾರಸ್ಸಿನ ಮೇರೆಗೆ ಮಾನ್ಯ ಮುಖ್ಯಮಂತ್ರಿಯವರು ಅನುಮೋದಿಸಿರುವಂತೆ ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕು ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಲು ಸರ್ಕಾರ ತೀರ್ಮಾನಿಸಿ ಈ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಯೋಇ 20 ಯೋವಿವಿ 2012 ಬೆಂಗಳೂರು, ದಿನಾಂಕ: 03ನೇ ಮಾರ್ಚ್ 2012

ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಈ ಹಿಂದೆ ಹೊರಡಿಸಲಾದ ಆದೇಶವನ್ನು ರದ್ದುಪಡಿಸಿ ಈ ಕೆಳಕಂಡ ಅಧಿಕಾರೇತರ ಸದಸ್ಯರನ್ನು ನಾಮ ನಿರ್ದೇಶನ ಮಾಡಲಾಗಿದೆ:

ಬಾಗಲಕೋಟೆ ಜಿಲ್ಲೆ ಬೀಳಗಿ ತಾಲ್ಲೂಕು

ಕ್ರ.ಸಂ.	ಹೆಸರು ಮತ್ತು ವಿಳಾಸ	ವರ್ಗ
1.	ಶ್ರೀ ಹಣಮಂತ, ಎಲ್. ಪಾಟೀಲ, ಸಾ: ಯಡಹಳ್ಳಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ	ಸಾಮಾನ್ಯ
2.	ರಾಚಣ್ಣ ಜಿ. ಗೂಳಿಪಲ್ಲೆ, ಸಾ; ಗಲಗಲಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ	ಸಾಮಾನ್ಯ
3.	ಶ್ರೀಮತಿ ಯಲ್ಲವ್ವ ಈ ಕೊಡಬಾಗಿ, ಸಾ: ಚಿಕ್ಕಹಂಚಿನಾಳ ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ	ಮಹಿಳೆ
4.	ಶ್ರೀ ಪಡಿಯಪ್ಪ ಪಕೀರಪ್ಪ ಹೂಡೇದಮನಿ, ಸಾ: ನಾಗರಾಳ ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ	ಪ.ಪಂ.
5.	ಶ್ರೀ ರಜಾಕ್‌ಸಾಬ್ ಹುಸೇನ್ ಸಾಬ್ ದಳವಾಯಿ, ಸಾ: ಅನಗವಾಡಿ ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ	ಅ.ಸಂ.
6.	ಶ್ರೀ ಮಲ್ಲಪ್ಪ ಹನುಮಂತ ನೇನನ್ನಿ, ಸಾ: ಚಿಕ್ಕಾಲಗುಂಡಿ, ಬೀಳಗಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ	ಹಿಂದುಳಿದ ವರ್ಗ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ.ಜಿ. ಮುಳಕೂರ್

ಸರ್ಕಾರದ ಅಧೀನ ಕಾರ್ಯದರ್ಶಿ 1 ಮತ್ತು 2

ಯೋಜನೆ, ಕಾರ್ಯಕ್ರಮ ಸಂಯೋಜನೆ

ಮತ್ತು ಸಾಂಖ್ಯಿಕ ಇಲಾಖೆ.

ಪಿಆರ್ ನಂ. 803

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನೇಮಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ: ಯೋಇ 309 ಪಿಟಿಪಿ:94 ದಿನಾಂಕ: 07-08-1995.

2. ಅಧ್ಯಕ್ಷರು, ಭಾರತೀಯ ಜನತಾ ಪಾರ್ಟಿ, ಬೆಂಗಳೂರು ಇವರ ಪತ್ರ ಸಂಖ್ಯೆ: ರಾಕಾ/ನಾನಿ/1113/2011, ದಿನಾಂಕ: 12-01-2012.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಆದೇಶದಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಜಿಲ್ಲಾಮಟ್ಟದ/ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗಳನ್ನು ರಚಿಸಲಾಗಿರುತ್ತದೆ. ಮೇಲೆ ಓದಲಾದ (2)ರ ಪತ್ರದಲ್ಲಿ ಅಧ್ಯಕ್ಷರು, ಭಾರತೀಯ ಜನತಾ ಪಾರ್ಟಿ, ಬೆಂಗಳೂರು ಇವರ ಶಿಫಾರಸ್ಸಿನ ಮೇರೆಗೆ ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕು ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಲು ಸರ್ಕಾರ ತೀರ್ಮಾನಿಸಿದೆ. ಆದ್ದರಿಂದ ಈ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಯೋಇ 21 ಯೋಎವಿ 2012 ಬೆಂಗಳೂರು, ದಿನಾಂಕ: 02ನೇ ಮಾರ್ಚ್ 2012

ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಈ ಹಿಂದೆ ಹೊರಡಿಸಲಾದ ಆದೇಶವನ್ನು ರದ್ದುಪಡಿಸಿ ಈ ಕೆಳಕಂಡ ಆರು ಜನರನ್ನು ಅಧಿಕಾರೇತರ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಲಾಗಿದೆ:

ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕು ಕೆ.ಡಿ.ಪಿಗೆ

ಕ್ರ.ಸಂ.	ಹೆಸರು ಮತ್ತು ವಿಳಾಸ	ವರ್ಗ
1.	ಶ್ರೀ ನಟೇಶ್ ಕೆ. ಬಿನ್ ಲೇ. ಕಂಬೇಗೌಡ, ಚಕ್ರಬಾವಿ, ಮಾಡಬಾಳ್ ಹೋಬಳಿ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ	ಸಾಮಾನ್ಯ
2.	ಶ್ರೀ ಹೊಸಳಪ್ಪ ಬಿನ್ ಮರಿಯಪ್ಪ, ಗುಡೇಮಾರನಹಳ್ಳಿ ಸೋಲೂರು ಹೋಬಳಿ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ.	ಹಿಂದುಳಿದ ವರ್ಗ
3.	ಶ್ರೀಮತಿ ವಿಜಯ ಕೋಂ ಜಯರಾಮ್, ಗೊಲ್ಲರಪಾಳ್ಯ, ಕಸಬಾ ಹೋಬಳಿ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ	ಮಹಿಳೆ
4.	ಶ್ರೀ ರೇಣುಕೇಶ್ ಎಲ್.ಎಸ್. ಬಿನ್ ಸಿದ್ದಲಿಂಗಪ್ಪ, ಲಕ್ಕೇನಹಳ್ಳಿ, ಕುದೂರು ಹೋಬಳಿ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ	ಸಾಮಾನ್ಯ
5.	ಶ್ರೀ ಮುರಳಿದರ ಬಿನ್ ವೆಂಕಟಪ್ಪ ಬೈಚಾಪುರ, ಮಾಗಡಿ ತಾ: ರಾಮನಗರ ಜಿಲ್ಲೆ	ಎಸ್.ಸಿ.
6.	ಶ್ರೀ ವೀರೇಂದ್ರಕುಮಾರ್ ಜೈನ್ ಬಿನ್ ಜೀವೇಂದ್ರಯ್ಯ ಸಂಕೀಘಟ್ಟ, ತಿಪ್ಪಸಂದ್ರ ಹೋಬಳಿ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ.	ಅ.ಸಂ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ.ಜಿ. ಮುಳಕೂರ್

ಸರ್ಕಾರದ ಅಧೀನ ಕಾರ್ಯದರ್ಶಿ 1 ಮತ್ತು 2

ಯೋಜನೆ, ಕಾರ್ಯಕ್ರಮ ಸಂಯೋಜನೆ

ಮತ್ತು ಸಾಂಖ್ಯಿಕ ಇಲಾಖೆ.

ಪಿಆರ್ ನಂ. 804

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನೇಮಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ: ಯೋಇ 309 ಪಿಟಿಪಿ:94 ದಿನಾಂಕ: 07-08-1995.

2. ಅಧ್ಯಕ್ಷರು, ಭಾರತೀಯ ಜನತಾ ಪಾರ್ಟಿ, ಬೆಂಗಳೂರು ಇವರ ಪತ್ರ ಸಂಖ್ಯೆ: ರಾಕಾ/ನಾನಿ/955/2011, ದಿನಾಂಕ: 14-12-2011.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಆದೇಶದಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಜಿಲ್ಲಾಮಟ್ಟದ/ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗಳನ್ನು ರಚಿಸಲಾಗಿರುತ್ತದೆ. ಮೇಲೆ ಓದಲಾದ (2)ರ ಪತ್ರದಲ್ಲಿ ಅಧ್ಯಕ್ಷರು, ಭಾರತೀಯ ಜನತಾ ಪಾರ್ಟಿ, ಬೆಂಗಳೂರು ಇವರ ಶಿಫಾರಸ್ಸಿನ ಮೇರೆಗೆ ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಲು ಸರ್ಕಾರ ತೀರ್ಮಾನಿಸಿದೆ. ಆದ್ದರಿಂದ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಯೋಇ 67 ಯೋವಿವಿ 2009 ಬೆಂಗಳೂರು, ದಿನಾಂಕ: 23ನೇ ಫೆಬ್ರವರಿ 2012

ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಈ ಕೆಳಕಂಡ ಆರು ಜನರನ್ನು ಅಧಿಕಾರೇತರ ಸದಸ್ಯರನ್ನು ನಾಮ ನಿರ್ದೇಶನ ಮಾಡಲಾಗಿದೆ:

ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕು

ಕ್ರ.ಸಂ.	ಹೆಸರು ಮತ್ತು ವಿಳಾಸ	ವರ್ಗ
1.	ಶ್ರೀ ಎಲ್.ವಿ. ಪುರುಷೋತ್ತಮ್ (ಕಿಶೋರ್) ಬಿನ್ ಎ.ಎಚ್. ವೆಂಕಟೇಶ ಗೌಡ ಗಿಡದ ಲಕ್ಷ್ಮೀಪುರ ಕಸಬಾ ಹೋಬಳಿ ಕೃಷ್ಣರಾಜಪೇಟೆ ತಾಲ್ಲೂಕು ಮಂಡ್ಯ ಜಿಲ್ಲೆ.	ಸಾಮಾನ್ಯ
2.	ಶ್ರೀ ಚಂದ್ರಪ್ಪ ಬಿನ್ ವೀರಪ್ಪ, ದುಡುಕನಹಳ್ಳಿ, ಅಕ್ಕಿ ಹೆಬ್ಬಾಳು ಅಂಚೆ ಮತ್ತು ಹೋಬಳಿ ಕೃಷ್ಣರಾಜಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ	ಸಾಮಾನ್ಯ
3.	ಶ್ರೀ ಮೋಹನ್ ಎಂ.ಕೆ. ಬಿನ್ ಕಾಳಶೆಟ್ಟಿ, ಮಂದಗೆರೆ, ಅಕ್ಕಿ ಹೆಬ್ಬಾಳು ಹೋಬಳಿ, ಕೃಷ್ಣರಾಜಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ	ಹಿಂದುಳಿದ ವರ್ಗ
4.	ಶ್ರೀ ಜಮೀರ್ ಪಾಷಾ ಬಿನ್ ಅಬ್ದುಲ್ ಸತ್ತಾರ್ ಸಾಬ್, ಮಸೀದಿ ಬೀದಿ, ಸಿಂಧೂಘಟ್ಟ, ಕೃಷ್ಣರಾಜಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ	ಅ.ಸಂ.
5.	ಶ್ರೀಮತಿ ಸುಕನ್ಯಾ ಕೋಂ, ಆರ್.ಡಿ. ಲಕ್ಷ್ಮಣ ಗೌಡ, ರಂಗನಾಥಪುರ, ಸಂತೇಬಾಚನಹಳ್ಳಿ ಹೋಬಳಿ, ಕೃಷ್ಣರಾಜಪೇಟೆ ತಾಲ್ಲೂಕು ಮಂಡ್ಯ ಜಿಲ್ಲೆ	ಮಹಿಳೆ
6.	ಶ್ರೀ ಎನ್. ಗೋಪಾಲ, ಎಲ್ಎಲ್‌ಬಿ. ಬಿನ್ ನಂಜಪ್ಪ ಊಗಿನ ಹಳ್ಳಿ ಅಂಚೆ, ಕಿಕ್ಕೇರಿ ಹೋಬಳಿ ಕೃಷ್ಣರಾಜಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ.	ಎಸ್.ಸಿ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ.ಜಿ. ಮುಳಕೂರ್
ಸರ್ಕಾರದ ಅಧೀನ ಕಾರ್ಯದರ್ಶಿ 1 ಮತ್ತು 2
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

ಪಿಆರ್ ನಂ. 805

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಹೊಸ ಜಿಲ್ಲೆಯಾದ ಯಾದಗಿರ್ ಜಿಲ್ಲೆಯ ಅಭಿವೃದ್ಧಿ ಕಾಮಗಾರಿಗಳಿಗೆ ಎರಡನೇ ಕಂತಿನ ಅನುದಾನ ರೂ. 12.50 ಕೋಟಿಗಳನ್ನು ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ :
1. ಯಾದಗಿರ್ ಜಿಲ್ಲಾಧಿಕಾರಿಗಳ ಪತ್ರ ಸಂಖ್ಯೆ: ಕಂ/ಜಿಯಾಜಿ/2011-12, ದಿನಾಂಕ: 10-05-2011.
2. ಸರ್ಕಾರದ ಆದೇಶ ಸಂಖ್ಯೆ: ಯೋಇ 17 ಹೈಕಮಂ 2011, ದಿನಾಂಕ: 22-08-2011.
3. ಯಾದಗಿರ್ ಜಿಲ್ಲಾಧಿಕಾರಿಗಳ ಪತ್ರ ಸಂಖ್ಯೆ: ಕಂ/ಶಾಸ್ಥ.ಪ್ರ.ಅ/2011-12, ದಿನಾಂಕ: 02-02-2012.

ಪ್ರಸ್ತಾವನೆ :

2011-12ನೇ ಸಾಲಿನಲ್ಲಿ ಹೊಸ ಜಿಲ್ಲೆಯಾದ ಯಾದಗಿರ್ ಜಿಲ್ಲೆಯ ಅಭಿವೃದ್ಧಿ ಕಾಮಗಾರಿಗಳಿಗೆ ಒಂದು ಬಾರಿಯ ವಿಶೇಷ ಅನುದಾನವಾಗಿ ಲೆಕ್ಕಶೀರ್ಷಿಕೆ "4515-00-800-0-06-132 (ಬಂಡವಾಳ ವೆಚ್ಚಗಳು)" ಅಡಿ ರೂ. 40.00 ಕೋಟಿಗಳನ್ನು (ರೂ. ನಲವತ್ತು ಕೋಟಿಗಳು ಮಾತ್ರ) ಲೆಕ್ಕಶೀರ್ಷಿಕೆ "4515-00-800-0-06-422 (ವಿಶೇಷ ಘಟಕ ಯೋಜನೆ)" ಅಡಿ ರೂ. 7.00 ಕೋಟಿಗಳನ್ನು (ರೂ. ಏಳು ಕೋಟಿಗಳು ಮಾತ್ರ) ಮತ್ತು ಲೆಕ್ಕಶೀರ್ಷಿಕೆ "4515-00-800-0-06-423 (ಗಿರಿಜನ ಉಪಯೋಜನೆ)" ಅಡಿ ರೂ. 3.00 ಕೋಟಿಗಳನ್ನು (ರೂ. ಮೂರು ಕೋಟಿಗಳು ಮಾತ್ರ) ಒಟ್ಟು ರೂ. 50.00 ಕೋಟಿಗಳನ್ನು ಒದಗಿಸಲಾಗಿದ್ದು ಈಗಾಗಲೇ ಮೇಲೆ ಓದಲಾದ (2)ರ ಆದೇಶದಲ್ಲಿ ಮೊದಲನೇ ಕಂತಾಗಿ ರೂ. 12.50 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (3)ರ ಪತ್ರದಲ್ಲಿ 2ನೇ ಕಂತಿನ ಅನುದಾನ ರೂ. 12.50 ಕೋಟಿಗಳನ್ನು ಬಿಡುಗಡೆ ಮಾಡುವಂತೆ ಜಿಲ್ಲಾಧಿಕಾರಿ, ಯಾದಗಿರ್, ಇವರು ಕೋರಿರುತ್ತಾರೆ. ಅಂತೆಯೇ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಯೋಇ 17 ಹೈಕಮಂ 2011 ಬೆಂಗಳೂರು, ದಿನಾಂಕ: 23ನೇ ಫೆಬ್ರವರಿ 2012

ಯಾದಗಿರ್ ಜಿಲ್ಲೆಯ ಅಭಿವೃದ್ಧಿ ಕಾಮಗಾರಿಗಳಿಗೆ ಈ ಕೆಳಕಂಡಂತೆ ಒಟ್ಟು ರೂ. 1250 ಲಕ್ಷಗಳನ್ನು ಎರಡನೇ ಕಂತಾಗಿ ಬಿಡುಗಡೆ ಮಾಡಲಾಗಿದೆ.

ಕ್ರ.ಸಂ.	ಲೆಕ್ಕಶೀರ್ಷಿಕೆ	ಬಿಡುಗಡೆ ಮೊತ್ತ (ರೂ. ಲಕ್ಷಗಳಲ್ಲಿ)
1.	4515-00-800-0-06-132	675.00
2.	4515-00-800-0-06-422	425.00
3.	4515-00-800-0-06-423	150.00
	ಒಟ್ಟು	**1250.00**

(1) ಬಿಡುಗಡೆ ಮಾಡಿರುವ ಮೊತ್ತವನ್ನು ಜಿಲ್ಲಾಧಿಕಾರಿಗಳ ವೈಯಕ್ತಿಕ ಖಾತೆ (ಪಿ.ಡಿ. ಖಾತೆಯಲ್ಲಿ)ಮೊದಲು ಜಮಾ ಮಾಡಿ ನಂತರ ಕಾರ್ಯಕ್ರಮದ ಅನುಗುಣವಾಗಿ ಖರ್ಚು ಮಾಡತಕ್ಕದ್ದು. ಬಳಕೆಯಾದ ನಂತರ ಸರ್ಕಾರಕ್ಕೆ ಬಳಕೆ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು.

(2) ಈ ಆದೇಶವನ್ನು ದಿನಾಂಕ: 17-02-2012ರ ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: ಆಇ 265/ವೆಚ್ಚ-06/2011ರಲ್ಲಿ ಅನುಮೋದಿಸಿರುವ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ.ಜಿ. ಮುಳಕೂರ್
ಸರ್ಕಾರದ ಅಧೀನ ಕಾರ್ಯದರ್ಶಿ 1 ಮತ್ತು 2
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

ಪಿಆರ್ ನಂ. 806

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : 2011-12 ಮತ್ತು 2012-13ನೇ ಸಾಲಿಗೆ ಫಲಿತಾಂಶಗಳ ಚೌಕಟ್ಟು ದಾಖಲೆಗಳನ್ನು ಕಾರ್ಯಗತಗೊಳಿಸುವ ಬಗ್ಗೆ.

ಪ್ರಸ್ತಾವನೆ :

ಕರ್ನಾಟಕ ರಾಜ್ಯವು ತನ್ನ ನಾಗರೀಕರಿಗೆ ನಿಗದಿತ ಕಾಲಮಿತಿಯೊಳಗೆ ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ ಮೊದಲಿಗೆ 11 ಇಲಾಖೆಗಳ 152 ಸೇವೆಗಳನ್ನೊಳಗೊಂಡ ಕರ್ನಾಟಕ ನಾಗರೀಕತೆಗೆ ಸೇವೆಗಳ ಖಾತರಿ ವಿಧೇಯಕ, 2011 ನ್ನು ಜಾರಿ ಮಾಡಿದೆ. ವಿಧೇಯಕವು ಸಾರ್ವಜನಿಕರಿಗೆ ಸೇವೆಗಳನ್ನು ಒದಗಿಸುವುದನ್ನು ಉತ್ತಮ ಪಡಿಸುವಲ್ಲಿ ಸರ್ಕಾರಿ ನೌಕರರನ್ನು ಜವಾಬ್ದಾರರನ್ನಾಗಿಸುವ ಉದ್ದೇಶ ಹೊಂದಿದೆ. ಇದಲ್ಲದೆ, ಆಡಳಿತದಲ್ಲಿ ಪಾರದರ್ಶಕತೆ ಮತ್ತು ದಕ್ಷತೆಯನ್ನು ಹೆಚ್ಚಿಸುವುದಲ್ಲದೇ ಸಾರ್ವಜನಿಕ ದೂರುಗಳು ಮತ್ತು ಭ್ರಷ್ಟ ಪದ್ಧತಿಗಳನ್ನು ಕಡಿಮೆ ಮಾಡುವುದು. ರಾಜ್ಯವು ತನ್ನ ಕಾರ್ಯಕ್ಷಮತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಅಭಿವೃದ್ಧಿ ಪಡಿಸಿರುವ ಫಲಿತಾಂಶ ಚೌಕಟ್ಟು ದಾಖಲೆಗಳನ್ನು (Result Framework Document) ಪಾಲಿಸುತ್ತಿದೆ.

2. ಫಲಿತಾಂಶ ಚೌಕಟ್ಟು ದಾಖಲೆಗಳನ್ನು (Result Framework Document) ಸಚಿವರು ಮತ್ತು ಇಲಾಖೆಯ ಕಾರ್ಯದರ್ಶಿಗಳ ನಡವಣ ತಿಳುವಳಿಕೆಯ ಪ್ರಮುಖ ದಾಖಲೆಯಾಗಿದೆ. ಶೇಕಡಾ 60 ಕ್ಕಿಂತ ಕಡಿಮೆ ಇರುವ ಸಾಧನೆಯನ್ನು ಕೆಳಮಟ್ಟದ ಸಾಧನೆಯೆಂದು ಪರಿಗಣಿಸಲಾಗುವುದು. ಇಲಾಖೆಯ ವಾರ್ಷಿಕ ಕಾರ್ಯನಿರ್ವಹಣೆಯನ್ನು ಈ ಸಾಧನಾ ಸೂಚಕದ ಹಾಗೂ ಗುರಿಯ ಬದ್ಧತೆಗಳಿಗನುಗುಣವಾಗಿ ಅಳೆಯಬೇಕಾಗುವುದು. ಸಾರ್ವಜನಿಕ ಹಣವನ್ನು ಉತ್ತಮವಾಗಿ ಕಾಲಮಿತಿಯೊಳಗೆ ಮುಕ್ತವಾಗಿ, ಪಾರದರ್ಶಕವಾಗಿ ಹಾಗೂ ಮೀಸಲಾಗಿರಿಸಿರುವ ಉದ್ದೇಶಗಳಿಗಾಗಿ ವೆಚ್ಚ ಮಾಡುವ ಬಗ್ಗೆ ಇಲಾಖೆಗಳನ್ನು ಹೊಣೆಗಾರರನ್ನಾಗಿ ಮಾಡುವ ಒಂದು ಸಾಧನವಾಗಿ ಫಲಿತಾಂಶಗಳ ಚೌಕಟ್ಟುಗಳ ದಾಖಲೆಗಳನ್ನು ತಯಾರಿಸಲಾಗಿದೆ. ಫಲಿತಾಂಶಗಳ ಚೌಕಟ್ಟು ದಾಖಲೆಯು ಇಲಾಖೆಯ ಕಾರ್ಯತಂತ್ರ ರೂಪಿಸುವುದಕ್ಕಾಗಿ ತನ್ನ ದೂರದೃಷ್ಟಿ, ಗುರಿ, ಧ್ಯೇಯೋದ್ದೇಶಗಳು ಹಾಗೂ ಈ ಗುರಿ ಮತ್ತು ಉದ್ದೇಶಗಳಿಗನುಗುಣವಾಗಿ ಇಲಾಖೆಯ ಕಾರ್ಯ ಚಟುವಟಿಕೆಗಳನ್ನು ಖಚಿತಗೊಳಿಸುತ್ತದೆ.

3. ಪ್ರತಿಯೊಂದು ಫಲಿತಾಂಶಗಳ ಚೌಕಟ್ಟು ದಾಖಲೆಯು ಇಲಾಖೆಯ ಉದ್ದೇಶಿತ ಕಾರ್ಯಚಟುವಟಿಕೆ/ಯೋಜನೆಗಳನ್ನು ಅಳತೆ ಮಾಡಬಹುದಾದ ಸಾಧನಾ ಸೂಚಕಗಳನ್ನು ವಿವರಿಸುವುದು ಹಾಗೂ ಸ್ಪಷ್ಟತೆಯನ್ನು ಪ್ರಚುರ ಪಡಿಸುವುದು. ಶೇ. 80 ರಷ್ಟು ಕಾರ್ಯಚಟುವಟಿಕೆಗಳು ಇಲಾಖೆಗೆ ನಿರ್ದಿಷ್ಟವಾಗಿದ್ದರೆ ಇನ್ನುಳಿದ ನಾಗರೀಕ ಸನ್ನದು ಕಾರ್ಯಗತಗೊಳಿಸುವಿಕೆ, ದೂರು ನಿವಾರಣೆ, ಭ್ರಷ್ಟತನ ನಿರ್ಮೂಲನೆ, ನಿಯಮಗಳ ಸರಳೀಕರಣ, ಇ-ಸೇವೆಗಳ ಪೂರೈಕೆ ಮುಂತಾದ ಶೇ. 20 ಚಟುವಟಿಕೆಗಳು ಸಾಮಾನ್ಯವಾಗಿ ಎಲ್ಲಾ ಇಲಾಖೆಗಳಿಗೆ ಉತ್ತಮ ಆಡಳಿತಕ್ಕಾಗಿ ಬೇಕಾದ ಸಾಧನಗಳಾಗಿರುತ್ತದೆ. ಈ ಕಾರ್ಯಚಟುವಟಿಕೆಗಳು ಉತ್ತಮ ಆಡಳಿತ ತರುವುದೆಂದು ಉದ್ದೇಶಿಸಲಾಗಿದೆ.

4. ಕೇಂದ್ರ ಸರ್ಕಾರದ ಮಂತ್ರಾಲಯಗಳು/ಇಲಾಖೆಗಳು ಮತ್ತು ಹಿಮಾಚಲ ಪ್ರದೇಶ, ಕೇರಳ, ಮಹಾರಾಷ್ಟ್ರ ಮತ್ತು ಪಂಜಾಬ್‌ಗಳಂತಹ ಆಯ್ದ ರಾಜ್ಯಗಳ ಅನುಭವದ ಆಧಾರದ ಮೇಲೆ ಕೇಂದ್ರ ಸರ್ಕಾರದ ಸಾಧನಾ ನಿರ್ವಹಣೆ ವಿಭಾಗ, ಸಚಿವ ಸಂಪುಟ ಸಚಿವಾಲಯ (Performance Management Division, Cabinet Secretariat) ಇವರು ರಾಜ್ಯದಲ್ಲಿ ಫಲಿತಾಂಶಗಳ ಚೌಕಟ್ಟು ದಾಖಲೆಗಳನ್ನು ತಯಾರಿಸುವಲ್ಲಿ ತಾಂತ್ರಿಕ ನೆರವನ್ನು ಒದಗಿಸುವರು ರಾಜ್ಯದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಆರ್ಥಿಕ ಇಲಾಖೆ, ಯೋಜನಾ ಇಲಾಖೆ, ಇ-ಆಡಳಿತ, ಸಿ.ಆ.ಸು. ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು ಹಾಗೂ ಮುಖ್ಯಮಂತ್ರಿಯವರ ಆರ್ಥಿಕ ಸಲಹೆಗಾರರನ್ನೊಳಗೊಂಡ ಒಂದು ಟಾಸ್ಕ್‌ಫೋರ್ಸ್ ರಚಿಸಲಾಗಿದ್ದು ವಿತ್ತೀಯ ಕಾರ್ಯನೀತಿ ಸಂಸ್ಥೆಯ ನಿರ್ದೇಶಕರನ್ನು ಸಂಚಾಲಕರನ್ನಾಗಿ ನೇಮಿಸಲಾಗಿದೆ. ಸೆಪ್ಟೆಂಬರ್ 2011 ರಲ್ಲಿ ಬೆಂಗಳೂರಿನಲ್ಲಿ ಎಲ್ಲಾ ಇಲಾಖೆಗಳಿಗಾಗಿ ಒಂದು ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು. ತದನಂತರದಲ್ಲಿ ದಿನಾಂಕ: 28-09-2011 ರಂದು ನಡೆದ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳ ಮತ್ತು ಇಲಾಖಾ ಮುಖ್ಯಸ್ಥರ ಸಭೆಯಲ್ಲಿ ಮುಖ್ಯ ಕಾರ್ಯದರ್ಶಿಗಳು ನಂತರದಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಿದರು. ಕೇಂದ್ರ ಸರ್ಕಾರದ ಸಚಿವ ಸಂಪುಟ ಸಚಿವಾಲಯದ ಪಿ.ಎಡಿ. ವಿಭಾಗವು ರಚಿಸಿದ Adhoc Task Force (ATF) ಫಲಿತಾಂಶಗಳ ಚೌಕಟ್ಟು ದಾಖಲೆಗಳನ್ನು ದಿನಾಂಕ: 18 ಮತ್ತು 19ನೇ ನವೆಂಬರ್ 2011 ರಂದು ಮೌಲ್ಯಮಾಪನ ಮಾಡಿದೆ.

2011-12 ಮತ್ತು 2012-13ನೇ ಸಾಲಿಗೆ ಫಲಿತಾಂಶಗಳ ಚೌಕಟ್ಟು ದಾಖಲೆಗಳನ್ನು ಕಾರ್ಯಗತಗೊಳಿಸುವ ಬಗ್ಗೆ ಸಿ.ಆ.ಸು. ಇಲಾಖೆಯ ಈ ಕೆಳಗೆ ಕಾಣಿಸಿದ ಅಂಶಗಳ ಮೇಲೆ ನಿರ್ಣಯ ಕೈಗೊಳ್ಳಲು ಪ್ರಸ್ತಾವನೆಯೊಂದನ್ನು ಸಚಿವ ಸಂಪುಟದ ಸಮಿತಿಗೆ ಸಲ್ಲಿಸಲಾಗಿತ್ತು.

1) ಎಲ್ಲಾ ಇಲಾಖೆಗಳು ಫಲಿತಾಂಶಗಳ ಚೌಕಟ್ಟು ದಾಖಲೆಗಳನ್ನು Task Force ಪರಿಶೀಲಿಸಿದಂತೆ ತಮ್ಮ ತಮ್ಮ ಫಲಿತಾಂಶಗಳ ಚೌಕಟ್ಟು ದಾಖಲೆಗಳನ್ನು ಅಂತಿಮಗೊಳಿಸಿ ಸಂಬಂಧಿತ ಸಚಿವರ ಅನುಮೋದನೆ ಪಡೆದು ಡಿಸೆಂಬರ್ 31 ರೊಳಗೆ ಇಲಾಖೆಗಳ ಅಂತರ್ಜಾಲಕ್ಕೆ (Websites) ಹಾಕುವ ಮೂಲಕ (ಆಂಗ್ಲ ಮತ್ತು ಕನ್ನಡ ಭಾಷೆಗಳಲ್ಲಿ) ಸಾರ್ವಜನಿಕ ಪಡಿಸಬೇಕು.

2) ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಮತ್ತು ವಿತ್ತೀಯ ಕಾರ್ಯನೀತಿ ಸಂಸ್ಥೆಯು ಇ-ಆಡಳಿತ ಮತ್ತು ರಾಷ್ಟ್ರೀಯ ಮಾಹಿತಿ ಕೇಂದ್ರಗಳ ಸಹಯೋಗದೊಂದಿಗೆ ಎಲ್ಲಾ ಫಲಿತಾಂಶಗಳ ಚೌಕಟ್ಟು ದಾಖಲೆಗಳ ಒಂದು ಸಂಗ್ರಹವನ್ನು (Compendium) ದಿನಾಂಕ: 15ನೇ ಜನವರಿ 2012 ರೊಳಗೆ ತಯಾರಿಸುವುದಲ್ಲದೆ ಅದನ್ನು ಸಿ.ಆ.ಸು. ಇಲಾಖೆ, ಆರ್ಥಿಕ ಇಲಾಖೆ ಮತ್ತು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಗಳ ಅಂತರ್ಜಾಲದಲ್ಲಿ (Website) ಪ್ರಕಟಿಸುವುದು. ಅಲ್ಲದೆ ಎಂಪಿಕ್ (MPIC) ನಮೂನೆಯೊಂದಿಗೆ ಸೇರಿಸಿದಂತಹ ಫಲಿತಾಂಶಗಳ ಚೌಕಟ್ಟು ದಾಖಲೆಗಳ ನಿರ್ವಹಣಾ ಪದ್ಧತಿಯನ್ನು ತಯಾರಿಸುವುದು.

3) ಎಲ್ಲಾ ಇಲಾಖಾ ಮುಖ್ಯಸ್ಥರು ಕೂಡಲೇ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಚರ್ಚಿಸಿ ಫಲಿತಾಂಶಗಳ ಚೌಕಟ್ಟು ದಾಖಲೆಗಳಲ್ಲಿ ಹೇಳಿರುವ ಇಲಾಖೆಯ ವಿವಿಧ ಕಾರ್ಯ ಚಟುವಟಿಕೆಗಳ ಸಾಧನೆಯ ಯಶಸ್ಸನ್ನು ಎಂಪಿಕ್ (MPIC) ಮುಂತಾದ ಮಾನದಂಡದ ಮೂಲಕ ಅಳೆಯಬೇಕು. ಅವಶ್ಯವಿರುವೆಡೆಗಳಲ್ಲಿ ಪ್ರಸ್ತುತ ಇಲಾಖೆಯಲ್ಲಿ ಪ್ರಚಲಿತದಲ್ಲಿರುವ/ಬಳಸುತ್ತಿರುವ ಮೇಲ್ವಿಚಾರಣಾ ಮಾನದಂಡದ ಪದ್ಧತಿಗಳ ಗುಣಮಟ್ಟವನ್ನು ಹೆಚ್ಚಿಸುವ/ಪೂರಕವಾಗಿಸುವ ಸಾಧನಗಳ ಮೂಲಕ ಅಳೆಯಬೇಕು.

4) ವಿತ್ತೀಯ ಕಾರ್ಯನೀತಿ ಸಂಸ್ಥೆಯು ತರಬೇತಿ ಮಾರ್ಗಸೂಚಿಗಳ ಜಾರಿ, ಕಾರ್ಯಾಗಾರ, ವಿಚಾರ ಸಂಕೀರ್ಣಗಳನ್ನು ಫಲಿತಾಂಶಗಳ ಚೌಕಟ್ಟು ದಾಖಲೆಗಳಿಗಾಗಿ Strategy Sessions ಏರ್ಪಡಿಸುವುದು ಹಾಗೂ ಅವುಗಳಿಗಾಗಿ ಅಲ್ಪಾವಧಿಗಾಗಿ ಪರಿಣಿತರನ್ನು ನೇಮಿಸುವುದು ಮುಂತಾದ ನೆರವನ್ನು ಒದಗಿಸುವುದು. ಈ ಉದ್ದೇಶಗಳಿಗಾಗಿ ವಿತ್ತೀಯ ಕಾರ್ಯನೀತಿ ಸಂಸ್ಥೆಯು ಯೋಜನೆಯಡಿಯಲ್ಲಿನ ಬೇಡಿಕೆ ಸಂಖ್ಯೆ "2052 03 2052-00-090-0-21, Programme Performance Budget and Programme Evaluation" ಅನುದಾನವನ್ನು ಉಪಯೋಗಿಸುವುದು.

5) ಎಲ್ಲಾ ಇಲಾಖೆಗಳು ಮಾರ್ಗಸೂಚಿಗಳಲ್ಲಿ ತೋರಿಸಿರುವ ಕಾಲಮಿತಿಯೊಳಗೆ ಫಲಿತಾಂಶಗಳ ಚೌಕಟ್ಟು ದಾಖಲೆಗಳು 2012-13 ನ್ನು ಮಾರ್ಚ್ 31, 2012 ರೊಳಗೆ ತಯಾರಿಸುವುದು ಹಾಗೂ ಸಕಾಲದಲ್ಲಿ ಅವುಗಳನ್ನು ಸಾರ್ವಜನಿಕಗೊಳಿಸುವುದು.

6) ಫಲಿತಾಂಶಗಳ ಚೌಕಟ್ಟು ದಾಖಲೆಗಳು 2011-12 ನ್ನು Task Force ಮೇ 2012 ರಲ್ಲಿ ಪರಿಶೀಲಿಸುವುದು ಹಾಗೂ ಪರಿಶೀಲಿಸಿದ ವರದಿಯನ್ನು ಜೂನ್ 2012 ರಲ್ಲಿ ಸಚಿವ ಸಂಪುಟದ ಮುಂದೆ ತರುವುದು.

7) ಹೀಗೆ ತಯಾರಿಸಲಾದ ಫಲಿತಾಂಶಗಳ ಚೌಕಟ್ಟು ದಾಖಲೆಗಳ ಉಪಯೋಗ ಹಾಗೂ ಯಶಸ್ಸಿನ ಬಗ್ಗೆ ಸಾರ್ವಜನಿಕರಿಗೆ ಅರಿವು ಹೆಚ್ಚಿಸಲು ವಾರ್ತಾ ಮತ್ತು ಪ್ರಚಾರ ಇಲಾಖೆಯು ವರ್ಷಾಂತ್ಯದಲ್ಲಿ ಅಗತ್ಯ ಕ್ರಮ ಕೈಗೊಳ್ಳುವುದು.

ಸಚಿವ ಸಂಪುಟವು ದಿನಾಂಖ: 03-01-2011 ರಂದು ನಡೆದ ಸಭೆಯಲ್ಲಿ ಮೇಲಿನ ಪ್ರಸ್ತಾವನೆಗಳಿಗೆ ಅನುಮೋದನೆ ನೀಡಿರುತ್ತದೆ. ಆದುದರಿಂದ ಈ ಆದೇಶ.

ಸರ್ಕಾರಿ ಆದೇಶದ ಸಂಖ್ಯೆ: ಪಿಡಿ 02 ಪಿಎಂಐ 2012, ಬೆಂಗಳೂರು, ದಿನಾಂಕ: 22ನೇ ಫೆಬ್ರವರಿ 2012

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಸರ್ಕಾರವು ಫಲಿತಾಂಶಗಳ ಚೌಕಟ್ಟು ದಾಖಲೆಗಳನ್ನು ಕಾರ್ಯಗತಗೊಳಿಸುವ ಬಗ್ಗೆ ಈ ಕೆಳಗೆ ಕಾಣಿಸಿದ ಅಂಶಗಳಿಗೆ ಅನುಮೋದನೆ ನೀಡಿ ಆದೇಶಿಸಿದೆ.

1. ಎಲ್ಲಾ ಇಲಾಖೆಗಳ ಫಲಿತಾಂಶಗಳ ಚೌಕಟ್ಟು ದಾಖಲೆಗಳನ್ನು Task Force ಪರಿಶೀಲಿಸಿದಂತೆ ತಮ್ಮ ತಮ್ಮ ಫಲಿತಾಂಶಗಳ ಚೌಕಟ್ಟು ದಾಖಲೆಗಳನ್ನು ಅಂತಿಮಗೊಳಿಸಿ ಸಂಬಂಧಿತ ಸಚಿವರ ಅನುಮೋದನೆ ಪಡೆದು ಡಿಸೆಂಬರ್ 31 ರೊಳಗೆ ಇಲಾಖೆಗಳ ಅಂತರ್ಜಾಲಕ್ಕೆ (Websites) ಹಾಕುವ ಮೂಲಕ (ಆಂಗ್ಲ ಮತ್ತು ಕನ್ನಡ ಭಾಷೆಗಳಲ್ಲಿ) ಸಾರ್ವಜನಿಕ ಪಡಿಸಬೇಕು.
2. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಮತ್ತು ವಿತ್ತೀಯ ಕಾರ್ಯನೀತಿ ಸಂಸ್ಥೆಯು ಇ-ಆಡಳಿತ ಮತ್ತು ರಾಷ್ಟ್ರೀಯ ಮಾಹಿತಿ ಕೇಂದ್ರಗಳ ಸಹಯೋಗದೊಂದಿಗೆ ಎಲ್ಲಾ ಫಲಿತಾಂಶಗಳ ಚೌಕಟ್ಟು ದಾಖಲೆಗಳ ಒಂದು ಸಂಗ್ರಹವನ್ನು (Compendium) ದಿನಾಂಕ 15ನೇ ಜನವರಿ 2012 ರೊಳಗೆ ತಯಾರಿಸುವುದಲ್ಲದೆ ಅದನ್ನು ಸಿ.ಆ.ಸು. ಇಲಾಖೆ, ಆರ್ಥಿಕ ಇಲಾಖೆ ಮತ್ತು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಗಳ ಅಂತರ್ಜಾಲದಲ್ಲಿ (Website) ಪ್ರಕಟಿಸುವುದು. ಅಲ್ಲದೆ ಎಂಪಿಕ್ (MPIC) ನಮೂನೆಯೊಂದಿಗೆ ಸೇರಿಸಿದಂತಹ ಫಲಿತಾಂಶಗಳ ಚೌಕಟ್ಟು ದಾಖಲೆಗಳ ನಿರ್ವಹಣಾ ಪದ್ಧತಿಯನ್ನು ತಯಾರಿಸುವುದು:
3. ಎಲ್ಲಾ ಇಲಾಖಾ ಮುಖ್ಯಸ್ಥರು ಕೂಡಲೇ ಅವರ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಚರ್ಚಿಸಿ ಫಲಿತಾಂಶಗಳ ಚೌಕಟ್ಟು ದಾಖಲೆಗಳಲ್ಲಿ ಹೇಳಿರುವ ಇಲಾಖೆಯ ವಿವಿಧ ಕಾರ್ಯ ಚಟುವಟಿಕೆಗಳ ಸಾಧನೆಯ ಯಶಸ್ಸನ್ನು ಎಂಪಿಕ್ (MPIC) ಮುಂತಾದ ಮಾನದಂಡದ ಮೂಲಕ ಅಳೆಯಬೇಕು. ಅವಶ್ಯವಿರುವೆಡೆಗಳಲ್ಲಿ ಪ್ರಸ್ತುತ ಇಲಾಖೆಯಲ್ಲಿ ಪ್ರಚಲಿತದಲ್ಲಿರುವ/ಬಳಸುತ್ತಿರುವ ಮೇಲ್ವಿಚಾರಣಾ ಮಾನದಂಡದ ಪದ್ಧತಿಗಳ ಗುಣವಟ್ಟವನ್ನು ಹೆಚ್ಚಿಸುವ/ಪೂರಕವಾಗಿರುವ ಸಾಧನಗಳ ಮೂಲಕ ಅಳೆಯಬೇಕು.:
4. ವಿತ್ತೀಯ ಕಾರ್ಯನೀತಿ ಸಂಸ್ಥೆಯು ತರಬೇತಿ ಮಾರ್ಗಸೂಚಿಗಳ ಜಾರಿ, ಕಾರ್ಯಾಗಾರ, ವಿಚಾರ ಸಂಕೀರ್ಣಗಳನ್ನು ಫಲಿತಾಂಶಗಳ ಚೌಕಟ್ಟು ದಾಖಲೆಗಳಿಗಾಗಿ Strategy Sessions ಏರ್ಪಡಿಸುವುದು ಹಾಗೂ ಅವುಗಳಿಗಾಗಿ ಅಲ್ಪಾವಧಿಗಾಗಿ ಪರಿಣಿತರನ್ನು ನೇಮಿಸುವುದು ಮುಂತಾದ ನೆರವನ್ನು ಒದಗಿಸುವುದು. ಈ ಉದ್ದೇಶಗಳಿಗಾಗಿ ವಿತ್ತೀಯ ಕಾರ್ಯನೀತಿ ಸಂಸ್ಥೆಯು ಯೋಜನೆಯಡಿಯಲ್ಲಿನ ಬೇಡಿಕೆ ಸಂಖ್ಯೆ "2052 03 2052-00-090-0-21, Programme Performance Budget and Programme Evaluation" ಅನುದಾನವನ್ನು ಉಪಯೋಗಿಸುವುದು.
5. ಎಲ್ಲಾ ಇಲಾಖೆಗಳು ಮಾರ್ಗಸೂಚಿಗಳಲ್ಲಿ ತೋರಿಸಿರುವ ಕಾಲಮಿತಿಯೊಳಗೆ ಫಲಿತಾಂಶಗಳ ಚೌಕಟ್ಟು ದಾಖಲೆಗಳು 2012-13 ನ್ನು ಮಾರ್ಚ್ 31, 2012 ರೊಳಗೆ ತಯಾರಿಸುವುದು ಹಾಗೂ ಸಕಾಲದಲ್ಲಿ ಅವುಗಳನ್ನು ಸಾರ್ವಜನಿಕಗೊಳಿಸುವುದು:
6. ಫಲಿತಾಂಶಗಳ ಚೌಕಟ್ಟು ದಾಖಲೆಗಳು 2011-12 ನ್ನು Task Force ಮೇ 2012 ರಲ್ಲಿ ಪರಿಶೀಲಿಸುವುದು ಹಾಗೂ ಪರಿಶೀಲಿಸಿದ ವರದಿಯನ್ನು ಜೂನ್ 2012 ರಲ್ಲಿ ಸಚಿವ ಸಂಪುಟದ ಮುಂದೆ ತರುವುದು.
7. ಹೀಗೆ ತಯಾರಿಸಲಾದ ಫಲಿತಾಂಶಗಳ ಚೌಕಟ್ಟು ದಾಖಲೆಗಳ ಉಪಯೋಗ ಹಾಗೂ ಯಶಸ್ಸಿನ ಬಗ್ಗೆ ಸಾರ್ವಜನಿಕರಿಗೆ ಅರಿವು ಹೆಚ್ಚಿಸಲು ವಾರ್ತಾ ಮತ್ತು ಪ್ರಚಾರ ಇಲಾಖೆಯು ವರ್ಷಾಂತ್ಯದಲ್ಲಿ ಅಗತ್ಯ ಕ್ರಮ ಕೈಗೊಳ್ಳುವುದು.
8. ಫಲಿತಾಂಶಗಳ ಚೌಕಟ್ಟು ದಾಖಲೆಗಳ ವಿಷಯವನ್ನು ಇನ್ನು ಮುಂದೆ ಪರಿಣಾಮಕಾರಿಯಾಗಿ ನಿರ್ವಹಿಸಲು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯು ನಿರ್ವಹಿಸತಕ್ಕದ್ದು.

ಈ ಮೇಲಿನ ಆದೇಶವನ್ನು ಸಚಿವ ಸಂಪುಟದ ಸಭೆಯ ದಿನಾಂಕ 03-01-2012 ರಂದು ವಿಷಯ ಸಂಖ್ಯೆ: ಸಿ 628/2012 ರಲ್ಲಿ ನಿರ್ಣಯಿಸಿರುವನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ.ಜಿ. ಮುಳಕೂರ್

ಸರ್ಕಾರದ ಅಧೀನ ಕಾರ್ಯದರ್ಶಿ

ಯೋಜನೆ, ಕಾರ್ಯಕ್ರಮ ಸಂಯೋಜನೆ

ಮತ್ತು ಸಾಂಖ್ಯಿಕ ಇಲಾಖೆ. (ಎಸ್. 1 ಮತ್ತು 2)

ಪಿಆರ್ ನಂ. 807

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಪಿಡಿ 14 ಇಎಎನ್ 2012 ಬೆಂಗಳೂರು, ದಿನಾಂಕ: 25-02-2012

ಸರ್ಕಾರದ ಆದೇಶ ಸಂಖ್ಯೆ: ಪಿಡಿ 8 ಇಎಎನ್ (2) 2011, ದಿನಾಂಕ: 11-07-2011 ರಲ್ಲಿ ಚಾಲಕರ ಹುದ್ದೆಯ ವೇತನ ಶ್ರೇಣಿ "ರೂ. 4800-7275" ಎಂದು ಆದೇಶಿಸಿದ್ದು ಅದರ ಬದಲಿಗೆ ವೇತನ ಶ್ರೇಣಿ "ರೂ. 5800-10500" ಎಂದು ಓದಿಕೊಳ್ಳತಕ್ಕದ್ದು.

ಎಂ.ಜಿ. ಮುಳಕೂರ್
ಸರ್ಕಾರದ ಅಧೀನ ಕಾರ್ಯದರ್ಶಿ-1 ಮತ್ತು 2
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

ಪಿ.ಆರ್. 808

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಪಿ.ಹೆಚ್. ಭೀಮಕ್ಕನವರ, ಪಿ.ಐ., ಪಿ.ಟಿ.ಎಸ್. ಖಾನಾಪುರ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :
1. ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಆಯುಕ್ತರು, ಹುಬ್ಬಳ್ಳಿ-ಧಾರವಾಡ, ಇವರ ಆದೇಶ ಸಂಖ್ಯೆ: ಸಿಬಿ/ಸಿಬ್ಬಂದಿ (3)/ನಿಯಮ6/19/2008 (ಓ.ಬಿ. ಸಂಖ್ಯೆ: 382/2010) ದಿನಾಂಕ: 12-05-2010.
2. ಮೇಲ್ಮನವಿ ಪ್ರಾಧಿಕಾರ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಆದೇಶ ಸಂಖ್ಯೆ: ಸಿಬಿ(8)72/2008-09 ದಿನಾಂಕ: 14-12-2010.
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ: 05-04-2011.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಸಿಬಿ(8) 72/2008-09 ದಿನಾಂಕ: 17-12-2011.

ಪ್ರಸ್ತಾವನೆ :

ಶ್ರೀ ಪಿ.ಹೆಚ್. ಭೀಮಕ್ಕನವರ, ಪಿ.ಐ., ಇವರು ಈ ಹಿಂದೆ ಗುಲ್ಬರ್ಗಾ ಸಂಚಾರಿ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಇವರ ವಿರುದ್ಧ ಈ ಕೆಳಕಂಡ ಆರೋಪಗಳ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು, 1965ರ ನಿಯಮ 6 ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:

1) ಶ್ರೀ ಮಲ್ಲಣ್ಣ, ಸಿ.ಪಿ.ಸಿ.-670 ರವರು ನೋ ಪಾರ್ಕಿಂಗ್‌ನಲ್ಲಿ ಇಟ್ಟ ಸ್ಕೂಟರ್ ಸಂಖ್ಯೆ: ಎಪಿ-22-8587 ನೇದ್ದನ್ನು ಠಾಣೆಗೆ ತಂದು ಅದನ್ನು ಗುಜರಿ ಅಂಗಡಿಗೆ ಮಾರಾಟ ಮಾಡಿದ ಬಗ್ಗೆ ಆಪಾದನೆಯು.

2) ಎಸ್.ಪಿ. ಗುಲ್ಬರ್ಗಾ ರವರಿಂದ ಬಂದ ಕಂಟಿನ್‌ಜೆನ್ಸಿ ಬಿಲ್ಲಿನ ಹಣವನ್ನು ಠಾಣೆಗೆ ಖರ್ಚು ಮಾಡದೇ ನಿಮ್ಮ ಸ್ವಂತ ಖಾತೆಗೆ ಜಮಾ ಮಾಡಿಕೊಂಡ ಬಗ್ಗೆ ಆಪಾದನೆ.

3) ವಾರಸುದಾರರು ಇಲ್ಲದ ಮೋಟಾರ್ ಸೈಕಲ್‌ಗಳನ್ನು ಹರಾಜು ಮಾಡಿದ ಬಗ್ಗೆ ಆಪಾದನೆ.

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿಲ್ಲವೆಂದು ಸಲ್ಲಿಸಿದ ವರದಿಯನ್ನು ಒಪ್ಪದೆ ಶಿಸ್ತು ಪ್ರಾಧಿಕಾರಿ ಹಾಗೂ ಪೊಲೀಸ್ ಆಯುಕ್ತರು, ಹುಬ್ಬಳ್ಳಿ-ಧಾರವಾಡ, ಇವರು ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ದಿನಾಂಕ: 12-05-2010ರ ಆದೇಶದಲ್ಲಿ ಅರ್ಜಿದಾರರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ತದನಂತರದ ವಾರ್ಷಿಕ ವೇತನ ಬಡ್ತಿಯ ಮೇಲೆ ಪರಿಣಾಮ ಬೀರದಂತೆ ಒಂದು ವರ್ಷ ಕಾಲ ಮುಂದೂಡಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: 14-12-2010ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನು ಇಲಾಖಾ ವಿಚಾರಣೆ ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಸದರಿ ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಹೊಸ ಅಂಶಗಳು ಇರುವುದಿಲ್ಲ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವಾದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 40 ಪೊಸಿಅ 2011 ಬೆಂಗಳೂರು, ದಿನಾಂಕ: 03-03-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಪಿ.ಹೆಚ್. ಭೀಮಕ್ಕನವರ, ಪಿ.ಐ., ಪಿ.ಟಿ.ಎಸ್. ಖಾನಾಪುರ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಟಿ.ಎನ್. ರವಿಪ್ರಕಾಶ್
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್. 809

ಇಂಧನ ಸಚಿವಾಲಯ

ವಿಷಯ : ಮೆ॥ ಆರ್‌ಎಸ್‌ಆರ್ ಪವರ್ ಪ್ರೈವೇಟ್ ಲಿಮಿಟೆಡ್ ಇವರ 30.60 ಮೆಗಾವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ ಸಂಬಂಧಿಸಿದಂತೆ.-

ಓದಲಾಗಿದೆ :
1) ಸರ್ಕಾರಿ ಆದೇಶ ಸಂಖ್ಯೆ: ಇನ್ 337 ಎನ್‌ಸಿಇ 2006, ದಿನಾಂಕ 16-10-2006
2) ಸರ್ಕಾರಿ ಆದೇಶ ಸಂಖ್ಯೆ: ಇನ್ 09 ಎನ್‌ಸಿಇ 2007, ದಿನಾಂಕ 12-01-2007
3) ಸರ್ಕಾರಿ ಆದೇಶ ಸಂಖ್ಯೆ: ಇನ್ 432 ಎನ್‌ಸಿಇ 2010, ದಿನಾಂಕ 16-12-2010
4) ಸರ್ಕಾರಿ ಆದೇಶ ಸಂಖ್ಯೆ: ಇಎನ್ 318 ಎನ್‌ಸಿಇ 2011, ದಿನಾಂಕ 26-07-2011
5) ಸರ್ಕಾರಿ ಆದೇಶ ಸಂಖ್ಯೆ: ಇಎನ್ 166 ಎನ್‌ಸಿಇ 2011, ದಿನಾಂಕ 25-07-2011
6) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: KRED/08/RSR-30.6/2012/434, ದಿನಾಂಕ 07-02-2012.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರಿ ಆದೇಶದಲ್ಲಿ ಮೆ॥ ಆರ್. ಶ್ರೀ ರಾಮುಲು ರೆಡ್ಡಿ ಮತ್ತು ಕೋ ಕಂಪನಿಗೆ ದಾವಣಗೆರೆ, ಬಳ್ಳಾರಿ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ 63 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಅನುಷ್ಠಾನ ಮಾಡಲು ಅನುಮತಿ ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಸರ್ಕಾರಿ ಆದೇಶದಲ್ಲಿ ಮೆ॥ ಆರ್. ಶ್ರೀರಾಮುಲು ರೆಡ್ಡಿ ಮತ್ತು ಕೋ ಹೆಸರನ್ನು ಮೆ॥ ಅರ್‌ಎಸ್‌ಆರ್ ಪವರ್ ಪ್ರೈವೇಟ್ ಲಿಮಿಟೆಡ್ ಎಂದು ಬದಲಾಯಿಸಲು ಅನುಮತಿ ನೀಡಲಾಗಿತ್ತು.

ಮೆಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಆದೇಶದಲ್ಲಿ ಅನುಮತಿಸಿರುವ ಒಟ್ಟು ಸಾಮರ್ಥ್ಯದಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಅನುಮತಿಸಿರುವ ಅಂಶಿಕ ಸಾಮರ್ಥ್ಯವಾಗಿರುವ 7 ಮೆ.ವ್ಯಾ. ಸಾಮರ್ಥ್ಯವನ್ನು 30.60 ಮೆ.ವ್ಯಾಗೆ 25 ಮೆ.ವ್ಯಾ. ವಿದ್ಯುತ್ತನ್ನು ರಾಜ್ಯದ ಗ್ರಿಡ್‌ಗೆ ಸರಬರಾಜು ಮಾಡತಕ್ಕದ್ದು ಹಾಗೂ ಈ ಯೋಜನೆಯನ್ನು ದಿನಾಂಕ 31-3-2011ರೊಳಗೆ ಅನುಷ್ಠಾನಗೊಳಿಸತಕ್ಕದ್ದೆಂಬ ಷರತ್ತಿಗೊಳಪಟ್ಟು ಹೆಚ್ಚಿಸಲು ಮೇಲೆ (3)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಅನುಮೋದನೆ ನೀಡಲಾಗಿತ್ತು. ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಆದೇಶದಲ್ಲಿ ಈ ಯೋಜನೆಯ ಅನುಷ್ಠಾನಕ್ಕಾಗಿ ಕಾಲಾವಕಾಶವನ್ನು ದಿನಾಂಕ 31-12-2011 ರವರೆಗೆ ವಿಸ್ತರಿಸಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (5)ರಲ್ಲಿ ಓದಲಾದ ಆದೇಶದಲ್ಲಿ ಮೆ॥ ಆರ್‌ಎಸ್‌ಆರ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರಿಗೆ ಬೆಳಗಾವಿ ಜಿಲ್ಲೆಯ ನೆಲಗಂಟಿ ಗ್ರಾಮದ ಅಂಶಿಕ ಸಾಮರ್ಥ್ಯವನ್ನು 15 ಮೆ.ವಾ ನಿಂದ 40 ಮೆ.ವ್ಯಾಗೆ ಹಾಗೂ ಉಮ್ರಾಣಿ ಗ್ರಾಮದ ಅಂಶಿಕ ಸಾಮರ್ಥ್ಯವನ್ನು 15 ಮೆ.ವ್ಯಾ. ನಿಂದ 100 ಮೆ.ವ್ಯಾಗೆ ಹೆಚ್ಚಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ (6)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ॥ ಆರ್‌ಎಸ್‌ಆರ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರಿಗೆ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನಲ್ಲಿ ಅನುಷ್ಠಾನ ಮಾಡಲು ಅನುಮತಿಸಿರುವ 30.60 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಲ್ಲಿ ಈಗಾಗಲೇ 8.5 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಅನುಷ್ಠಾನಗೊಂಡಿರುವುದಾಗಿ ತಿಳಿಸುರುತ್ತಾರೆ ಹಾಗೂ ಅನುಷ್ಠಾನಗೊಳಿಸಲು ಕಾಲಾವಕಾಶವನ್ನು ದಿನಾಂಕ 30-06-2012 ರವರೆಗೆ ವಿಸ್ತರಿಸಲು ಶಿಫಾರಸ್ಸು ಮಾಡಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕಳಗಿನಂತೆ ಅದೇಶಿಸಲಾಗಿದೆ:-

ಸರ್ಕಾರದ ಆದೇಶ ಸಂಖ್ಯೆ: ಇಎನ್ 89 ಎನ್‌ಸಿಇ 2012 (4), ಬೆಂಗಳೂರು, ದಿನಾಂಕ 05-03-2012

ಮೆ॥ ಆರ್‌ಎಸ್‌ಆರ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಬೆಳಗಾವಿ ಜಿಲ್ಲೆಯಲ್ಲಿ ಅನುಮತಿಸಿರುವ 7.00 ಮೆಗಾ ವ್ಯಾಟ್ ಸಾಮರ್ಥ್ಯವನ್ನು 30.60 ಮೆ.ವ್ಯಾ. ಸಾಮರ್ಥ್ಯಕ್ಕೆ ಹೆಚ್ಚಿಸಿ ಈ ಸಾಮರ್ಥ್ಯದಲ್ಲಿ 25 ಮೆ.ವ್ಯಾ. ಸಾಮರ್ಥ್ಯವನ್ನು ರಾಜ್ಯದ ಗ್ರಿಡ್‌ಗೆ ಸರಬರಾಜು ಮಾಡುವಂತೆ ಸರ್ಕಾರಿ ಆದೇಶ ಸಂ:ಇಎನ್ 432 ಎನ್‌ಸಿಇ 2010, ದಿನಾಂಕ 16-12-2010 ರಲ್ಲಿ ವಿಧಿಸಿರುವ ಷರತ್ತನ್ನು ತೆಗೆದುಹಾಕಲಾಗಿದೆ.

ಮೆ॥ ಆರ್‌ಎಸ್‌ಆರ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪೆನಿಯು ಬೆಳಗಾವಿ ಜಿಲ್ಲೆಯಲ್ಲಿ ಕೈಗೊಳ್ಳುತ್ತಿರುವ 40 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಲ್ಲಿ 25 ಮೆ.ವ್ಯಾ. ಸಾಮರ್ಥ್ಯವನ್ನು ರಾಜ್ಯದ ಗ್ರಿಡ್‌ಗೆ ಸರಬರಾಜು ಮಾಡತಕ್ಕದ್ದು.

ಮೆ॥ ಆರ್‌ಎಸ್‌ಆರ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲಕಿನಲ್ಲಿ ಅನುಷ್ಠಾನ ಮಾಡಲು ಬಾಕಿ ಇರುವ 17.00 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಅನುಷ್ಠಾನಕ್ಕಾಗಿ ಕಾಲಾವಕಾಶವನ್ನು ದಿನಾಂಕ 30-06-2012 ರವರೆಗೆ ವಿಸ್ತರಿಸಲಾಗಿದೆ.

ಈ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಓದಲಾದ (1)ರ ಹಂಚಿಕೆ ಆದೇಶದ ಇತರ ನಿಬಂಧನೆಗಳು ಯಥಾವತ್ತಾಗಿ ಮುಂದುವರೆಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಸುರೇಶ್. ಬಿ. ಕೃಷ್ಣಪ್ಪನವರ್

ಸರ್ಕಾರದ ಅಧೀನ ಕಾರ್ಯದರ್ಶಿ

ಇಂಧನ ಇಲಾಖೆ

ಪಿ.ಆರ್. 846

ಇಂಧನ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಇಎನ್ 89 ಎನ್‌ಸಿಇ 2012 (1) ಬೆಂಗಳೂರು, ದಿನಾಂಕ 05-03-2012

ಮೆ॥ ಆರ್‌ಎಸ್‌ಆರ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರಿಗೆ ಹಂಚಿಕೆಯಾಗಿರುವ 30.60 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಲ್ಲಿ 0.85 ಮೆ.ವ್ಯಾ. ಸಾಮರ್ಥ್ಯವನ್ನು ಮೆ: ಗೋಲ್ಡನ್ ಹ್ಯಾಚರೀಸ್ ರವರಿಗೆ ವರ್ಗಾವಣೆ ಮಾಡಿರುವ ಸರ್ಕಾರಿ ಆದೇಶ ಸಂಖ್ಯೆ: ಇಎನ್ 445 ಎನ್‌ಸಿಇ 2011, ದಿನಾಂಕ 16-1-2012ರ ಆದೇಶದ ಭಾಗದ ಷರತ್ತಿನ ಕ್ರಮ ಸಂಖ್ಯೆ (2) ಮತ್ತು (3)ರಲ್ಲಿ ನಮೂದಿಸಲಾಗಿರುವ.

ಮೆ: ಗೋಲ್ಡನ್ ಹ್ಯಾಚರೀಸ್ ರವರು ವಿದ್ಯುತ್ ಖರೀದಿ ಒಪ್ಪಂದವನ್ನು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಇವರೊಂದಿಗೆ ಮಾಡಿಕೊಳ್ಳತಕ್ಕದ್ದು ಮತ್ತು ಸದರಿ ಯೋಜನೆಯನ್ನು ದಿನಾಂಕ 29-2-2012ರೊಳಗಾಗಿ ಅನುಷ್ಠಾನಗೊಳಿಸತಕ್ಕದ್ದು.

ಎಂಬುದರ ಬದಲಾಗಿ

ಮೆ: ಗೋಲ್ಡನ್ ಹ್ಯಾಚರೀಸ್ ರವರು ನೀತಿ ನಿಯಮಗಳಿಗನುಸಾರವಾಗಿ ವೀಲಿಂಗ್ ಮತ್ತು ಬ್ಯಾಂಕಿಂಗ್ ಮಾಡಿಕೊಳ್ಳಲು ಅನುಮತಿಸಿದೆ ಹಾಗೂ ಯೋಜನೆಯನ್ನು ದಿನಾಂಕ 30-4-2012ರೊಳಗೆ ಅನುಷ್ಠಾನಗೊಳಿಸತಕ್ಕದ್ದು.

ಎಂದು ತಿದ್ದಿಕೊಂಡು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸುರೇಶ್. ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿ.ಆರ್. 847

ಇಂಧನ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಇಎನ್ 89 ಎನ್‌ಸಿಇ 2012 (2) ಬೆಂಗಳೂರು, ದಿನಾಂಕ 05-03-2012

ಮೆ॥ ಆರ್‌ಎಸ್‌ಆರ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರಿಗೆ ಹಂಚಿಕೆಯಾಗಿರುವ 30.60 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಲ್ಲಿ 1.7 ಮೆ.ವ್ಯಾ. ಸಾಮರ್ಥ್ಯವನ್ನು ಮೆ: ಗೋಲ್ಡನ್ ಹ್ಯಾಚರೀಸ್ ರವರಿಗೆ ವರ್ಗಾವಣೆ ಮಾಡಿರುವ ಸರ್ಕಾರಿ ಆದೇಶ ಸಂಖ್ಯೆ: ಇಎನ್ 446 ಎನ್‌ಸಿಇ 2011, ದಿನಾಂಕ 10-1-2012ರ ಆದೇಶದ ಭಾಗದ ಷರತ್ತಿನ ಕ್ರಮ ಸಂಖ್ಯೆ (2) ಮತ್ತು (3)ರಲ್ಲಿ ನಮೂದಿಸಲಾಗಿರುವ.

ಮೆ: ಗೋಲ್ಡನ್ ಹ್ಯಾಚರೀಸ್ ರವರು ವಿದ್ಯುತ್ ಖರೀದಿ ಒಪ್ಪಂದವನ್ನು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಇವರೊಂದಿಗೆ ಮಾಡಿಕೊಳ್ಳತಕ್ಕದ್ದು ಮತ್ತು ಸದರಿ ಯೋಜನೆಯನ್ನು ದಿನಾಂಕ 31-01-2012ರೊಳಗಾಗಿ ಅನುಷ್ಠಾನಗೊಳಿಸತಕ್ಕದ್ದು.

ಎಂಬುದರ ಬದಲಾಗಿ

ಮೆ: ಗೋಲ್ಡನ್ ಹ್ಯಾಚರೀಸ್ ರವರು ನೀತಿ ನಿಯಮಗಳಿಗನುಸಾರವಾಗಿ ವೀಲಿಂಗ್ ಮತ್ತು ಬ್ಯಾಂಕಿಂಗ್ ಮಾಡಿಕೊಳ್ಳಲು ಅನುಮತಿಸಿದೆ ಹಾಗೂ ಯೋಜನೆಯನ್ನು ದಿನಾಂಕ 30-4-2012ರೊಳಗೆ ಅನುಷ್ಠಾನಗೊಳಿಸತಕ್ಕದ್ದು.

ಎಂದು ತಿದ್ದಿಕೊಂಡು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸುರೇಶ್. ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿ.ಆರ್. 848

ಇಂಧನ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಇಎನ್ 89 ಎನ್‌ಸಿಇ 2012 (1) ಬೆಂಗಳೂರು, ದಿನಾಂಕ 05-03-2012

ಮೆ॥ ಆರ್‌ಎಸ್‌ಆರ್ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರಿಗೆ ಹಂಚಿಕೆಯಾಗಿರುವ 30.60 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಲ್ಲಿ 2.55 ಮೆ.ವ್ಯಾ. ಸಾಮರ್ಥ್ಯವನ್ನು ಮೆ: ಗೋಲ್ಡನ್ ಹ್ಯಾಚರೀಸ್ ರವರಿಗೆ ವರ್ಗಾವಣೆ ಮಾಡಿರುವ ಸರ್ಕಾರಿ ಆದೇಶ ಸಂಖ್ಯೆ: ಇಎನ್ 450 ಎನ್‌ಸಿಇ 2011, ದಿನಾಂಕ 11-1-2012ರ ಆದೇಶದ ಭಾಗದ ಷರತ್ತಿನ ಕ್ರಮ ಸಂಖ್ಯೆ (2) ಮತ್ತು (3)ರಲ್ಲಿ ನಮೂದಿಸಲಾಗಿರುವ.

ಮೆ: ಗೋಲ್ಡನ್ ಹ್ಯಾಚರೀಸ್ ರವರು ವಿದ್ಯುತ್ ಖರೀದಿ ಒಪ್ಪಂದವನ್ನು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಇವರೊಂದಿಗೆ ಮಾಡಿಕೊಳ್ಳತಕ್ಕದ್ದು ಮತ್ತು ಸದರಿ ಯೋಜನೆಯನ್ನು ದಿನಾಂಕ 31-01-2012ರೊಳಗಾಗಿ ಅನುಷ್ಠಾನಗೊಳಿಸತಕ್ಕದ್ದು.

ಎಂಬುದರ ಬದಲಾಗಿ

ಮೆ: ಗೋಲ್ಡನ್ ಹ್ಯಾಚರೀಸ್ ರವರು ನೀತಿ ನಿಯಮಗಳಿಗನುಸಾರವಾಗಿ ವೀಲಿಂಗ್ ಮತ್ತು ಬ್ಯಾಂಕಿಂಗ್ ಮಾಡಿಕೊಳ್ಳಲು ಅನುಮತಿಸಿದೆ ಹಾಗೂ ಯೋಜನೆಯನ್ನು ದಿನಾಂಕ 30-4-2012ರೊಳಗೆ ಅನುಷ್ಠಾನಗೊಳಿಸತಕ್ಕದ್ದು.

ಎಂದು ತಿದ್ದಿಕೊಂಡು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸುರೇಶ್. ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿ.ಆರ್. 849

ಇಂಧನ ಸಚಿವಾಲಯ

ವಿಷಯ : ಮೆ॥ ಜಿಎಂ ನವರ ವಿಂಡ್ ಎನರ್ಜಿ ಪ್ರೈವೇಟ್ ಲಿಮಿಟೆಡ್ ರವರ 55. ಮೆ.ವ್ಯಾ. ಪವನ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 100.30 ಮೆ.ವ್ಯಾಗೆ ಹೆಚ್ಚಿಸುವ ಕುರಿತು.-

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ: ಇಎನ್ 447 ಎನ್‌ಸಿಇ 2007, ದಿನಾಂಕ 25-06-2009

2) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: KRED/08/GMNWEPL (55 to 100.30 MW) Sankanur/2011/4096 ದಿನಾಂಕ 17/18-10-2011 ಮತ್ತು KRED/08/GMNWEPL-(20.40 to 100.30 MW) Savalsung/2011/4216, ದಿನಾಂಕ 28/29-10-2011.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮೆ॥ ಜಿ. ಎಂ. ನವರ ವಿಂಡ್ ಎನರ್ಜಿ ಪ್ರೈವೇಟ್ ಲಿಮಿಟೆಡ್ ರವರಿಗೆ ಬಿಜಾಪುರ, ಗುಲ್ಬರ್ಗಾ ಬೆಳಗಾವಿ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ 205.00 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತರವರು ಮೆ॥ ಜಿ. ಎಂ. ನವರ ವಿಂಡ್ ಎನರ್ಜಿ ಪ್ರೈವೇಟ್ ಲಿಮಿಟೆಡ್ ರವರಿಗೆ ಬಿಜಾಪುರ, ಗುಲ್ಬರ್ಗಾ ಬೆಳಗಾವಿ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಮಂಜೂರಾಗಿರುವ ಒಟ್ಟು 205.00 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಲ್ಲಿ ಗುಲ್ಬರ್ಗಾ ಜಿಲ್ಲೆಯ ಸಂಕನೂರು, ದಂಡಗುಂಡ ಹಿರೇಹಳ್ಳೂರು ಮತ್ತು ಬಲಗೇರ ಗ್ರಾಮಗಳಲ್ಲಿಯ ಅಂಶಿಕ ಸಾಮರ್ಥ್ಯವಾದ 55.00 ಮೆ.ವ್ಯಾ. ಸಾಮರ್ಥ್ಯವನ್ನು 100.30 ಮೆ.ವ್ಯಾ. ಸಾಮರ್ಥ್ಯಕ್ಕೆ ಹೆಚ್ಚಿಸಲು ಅಭಿವೃದ್ಧಿದಾರರು ಹೆಚ್ಚಿನ ಸಾಮರ್ಥ್ಯದ WTG ಗಳನ್ನು ಅಳವಡಿಸಿಕೊಂಡು ಯಾವುದೇ ಹೆಚ್ಚಿನ ಸ್ಥಳವನ್ನು ಕೋರದೇ ಇರುವುದರಿಂದ ಅನುಮೋದಿಸಬಹುದೆಂದು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಅದೇಶಿಸಲಾಗಿದೆ:-

ಸರ್ಕಾರದ ಆದೇಶ ಸಂಖ್ಯೆ: ಇಎನ್ 407 ಎನ್‌ಸಿಇ 2011, ಬೆಂಗಳೂರು, ದಿನಾಂಕ 01-03-2012

ಮೆ॥ ಜಿ. ಎಂ. ನವರ ವಿಂಡ್ ಎನರ್ಜಿ ಪ್ರೈವೇಟ್ ಲಿಮಿಟೆಡ್ ರವರಿಗೆ ಬಿಜಾಪುರ, ಗುಲ್ಬರ್ಗಾ, ಬೆಳಗಾವಿ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಮಂಜೂರಾಗಿರುವ ಒಟ್ಟು 205.00 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಲ್ಲಿ ಗುಲ್ಬರ್ಗಾ ಜಿಲ್ಲೆಯ ಸಂಕನೂರು, ದಂಡಗುಂಡ ಹಿರೇಹಳ್ಳೂರು ಮತ್ತು ಬಲಗೇರ ಗ್ರಾಮಗಳಲ್ಲಿಯ ಅಂಶಿಕ ಸಾಮರ್ಥ್ಯವಾದ 55.00 ಮೆ.ವ್ಯಾ. ಸಾಮರ್ಥ್ಯವನ್ನು 100.30 ಮೆ.ವ್ಯಾಗೆ ಈ ಕೆಳಗಿನ ಶೆಡ್ಯೂಲ್‌ನಲ್ಲಿ ವಿವರಿಸಿರುವಂತೆ ಅಭಿವೃದ್ಧಿದಾರರು ಹೆಚ್ಚಿನ ಸಾಮರ್ಥ್ಯದ WTG ಗಳನ್ನು ಅಳವಡಿಸಿಕೊಂಡು ಯಾವುದೇ ಹೆಚ್ಚಿನ ಸ್ಥಳವನ್ನು ಕೋರದಿರುವ ಹಿನ್ನೆಲೆಯಲ್ಲಿ ಹಾಗೂ ಕೆಳಕಂಡ ಷರತ್ತಿಗೊಳಪಟ್ಟು ಹೆಚ್ಚಿಸಲಾಗಿದೆ:-

Geographical Area Details of the project	Sanctioned capacity in MW	Enhancement Proposed in MW	No. of WTGs & rating in KW	Total Capacity including proposed enhancement in MW
The proposed area is a large Pateau mostly oriented in the East West direction and situated in Yadagiri RF. The area is spread around Sankanur, Dandagunda, Herehallur & Balagera. It appears that it is a mixture of dense scrub, open mix jungle and open scrub. The area has few peaks and is covered in the following geographical coordinates: **Latitude:** 16°55'-16°59'20"N **Longitude:** 77°3'2"-77°10'55"E **Ridge peaks:** 582, 59, 567, 579, 566, 575 & 577 m AMSL	55 MW	45.30 MW	118 Nosx850 KW	100.30 MW

1. ಈ ಯೋಜನೆಯನ್ನು 31-3-2013ರ ರೊಳಗೆ ಅನುಷ್ಠಾನಗೊಳಿಸತಕ್ಕದ್ದು
2. ಸದರಿ ಯೋಜನೆಯನ್ನು ಪ್ರಾರಂಭಿಸುವ ಮುನ್ನ ಕಂದಾಯ/ಅರಣ್ಯ ಇಲಾಖೆಗಳ ಅನುಮೋದನೆ ಪಡೆಯತಕ್ಕದ್ದು
3. ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಹಂಚಿಕೆ ಆದೇಶದ ಇತರೆ ನಿಬಂಧನೆಗಳು ಯಥಾವತ್ತಾಗಿ ಮುಂದುವರಿಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸುರೇಶ್. ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿ.ಆರ್. 850

ಇಂಧನ ಸಚಿವಾಲಯ

ವಿಷಯ : ಮೆ॥ ವಿಶ್ ವಿಂಡ್ ಇನ್‌ಫ್ರಾಸ್ಟ್ರಕ್ಚರ್ ಎಲ್‌ಎಲ್‌ಪಿ ಕಂಪನಿಗೆ ಹಂಚಿಕೆಯಾಗಿರುವ 69.63 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 200.00 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಹೆಚ್ಚಿಸುವ ಬಗ್ಗೆ.-

ಓದಲಾಗಿದೆ :
1) ಸರ್ಕಾರಿ ಆದೇಶ ಸಂಖ್ಯೆ: ಇಎನ್ 42 ಎನ್‌ಸಿಇ 2006, ದಿನಾಂಕ 20-04-2006
2) ಸರ್ಕಾರಿ ಆದೇಶ ಸಂಖ್ಯೆ: ಇಎನ್ 462 ಎನ್‌ಸಿಇ 2006, ದಿನಾಂಕ 19-12-2006
3) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್ ಇಡಿಎಲ್/08/VWILLP-(69.63 to 200 MW)/ 2011/2100, ದಿನಾಂಕ 18-07-2011.
4) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್ ಇಡಿಎಲ್/08/VWILLP-(69.63 to 200 MW)/ 2011/2217, ದಿನಾಂಕ 28-07-2011.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ M/s Logaer Machines (I) Ltd., ಕಂಪನಿಗೆ ಧಾರವಾಡ ಮತ್ತು ಹಾವೇರಿ ಜಿಲ್ಲೆಗಳಲ್ಲಿ 150.66 ಮೆ.ವ್ಯಾ ಸಾಮರ್ಥ್ಯದ ಪವನ ಬಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ M/s Logaer Machines (I) Ltd., ಕಂಪನಿಯ ಹೆಸರನ್ನು ಮೆ॥ ವಿಶ್ ವಿಂಡ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ ಎಂದು ಬದಲಾಯಿಸಲು ಹಾಗೂ M/s Logaer Machines (I) Ltd., ರವರಿಗೆ ಹಂಚಿಕೆಯಾಗಿರುವ ಎಲ್ಲಾ ಪವನ ವಿದ್ಯುತ್ ಯೋಜನೆಗಳನ್ನು ಮೆ॥ ವಿಶ್ ವಿಂಡ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ ಇವರಿಗೆ ವರ್ಗಾಯಿಸಲು ಅನುಮೋದನೆ ನೀಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ರವರು ಮೆ॥ ವಿಶ್ ವಿಂಡ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ ಕಂಪನಿಯ ಹೆಸರನ್ನು ಮೆ॥ ವಿಸ್ ವಿಂಡ್ ಇನ್‌ಫ್ರಾಸ್ಟ್ರಕ್ಚರ್ ಎಲ್‌ಎಲ್‌ಪಿ ಎಂದು ಬದಲಾಯಿಸಿಕೊಂಡಿದ್ದು ಇದಕ್ಕೆ ವರ್ಗಾವಣೆ / ಹೆಸರು ಬದಲಾವಣೆ ಶುಲ್ಕವನ್ನು ವಸೂಲಿಮಾಡಬೇಕೆ ಎಂಬ ಬಗ್ಗೆ ಸರ್ಕಾರದ ಸ್ಪಷ್ಟೀಕರಣವನ್ನು ಕೋರಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ರವರು ಮೆ॥ ವಿಶ್ ವಿಂಡ್ ಇನ್ಫ್ರಾಸ್ಟ್ರಕ್ಚರ್ ಎಲ್‌ಎಲ್‌ಪಿ ಕಂಪನಿಗೆ 2006ರಲ್ಲಿ ಮಂಜೂರಾಗಿರುವ 150.66 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಅಂಶಿಕ ಸಾಮರ್ಥ್ಯವಾದ 69.63 ಮೆ.ವ್ಯಾ. ಸಾಮರ್ಥ್ಯದ ಯೋಜನೆಯನ್ನು 200 ಮೆ.ವ್ಯಾಗೆ (ನಿವ್ವಳ ಹೆಚ್ಚಳ 130.37 ಮೆ.ವ್ಯಾ.) ಹೆಚ್ಚಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಅದೇಶಿಸಲಾಗಿದೆ:-

ಸರ್ಕಾರದ ಆದೇಶ ಸಂಖ್ಯೆ: ಇಎನ್ 322 ಎನ್‌ಸಿಇ 2011, ಬೆಂಗಳೂರು, ದಿನಾಂಕ 28-10-2011

ಮೆ॥ ವಿಶ್ ವಿಂಡ್ ಇನ್‌ಫ್ರಾಸ್ಟ್ರಕ್ಚರ್ ಎಲ್‌ಎಲ್‌ಪಿ ಕಂಪನಿಗೆ ಅನುಷ್ಠಾನ ಮಾಡಲು ಅನುಮತಿಸಲಾದ 69.63 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 200 ಮೆಗಾ ವ್ಯಾಟ್ ಸಾಮರ್ಥ್ಯಕ್ಕೆ ಈ ಕೆಳಕಂಡ ಶೆಡ್ಯೂಲ್‌ನಲ್ಲಿ ವಿವರಿಸಿರುವಂತೆ ಹಾಗೂ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಸೂಚಿಸುವ ವರ್ಗಾವಣೆ ಶುಲ್ಕವನ್ನು ಪಾವತಿಸತಕ್ಕದೆಂಬ ಷರತ್ತಿಗೊಳಪಟ್ಟು ಹೆಚ್ಚಿಸಲು ಅನುಮೋದನೆ ನೀಡಲಾಗಿದೆ:-

Sl. No.	Geographical Area Details of the project	Sanctioned capacity in MW	Enhancement Proposed in MW	No. of WTGs & rating in KW
1	A large plain area spread around the village of timmapura, Kabnur, Ingalagi, Ramapura in Haveri and Dharwad District and it also consists of plains with higher elevations and has two main peaks. The proposed area is held by the following Geographical co-ordinates:- **Latitude:** 15°1'55"-15°8'0"N **Longitude:** 75°08'56"-75°14'23"E **Ridge peaks:** 701, 714, 682, 717, 713, 698, 733, 722m AMSL	19.80 MW	59.40 MW	79.20 MW (99x800 KW)

2	A very vast area encompasses high plains and small ridges spread around the villages Kongapura Sisvinhal, Shanlipur, Huvinsigli, Sigli, Gudgeri and Ramgeri. A railway track runs into this area. This area has moderate elevations varying from 580 to 680 Mtrs. And also consists of several peaks. The main places of this areas are Halgur, Gudgeri, Lakshmeshwar, Sigli, Karadgi, Nelgudda etc and the area is covered in the following Geographical co-ordinates:- **Latitude:** 15°0'0"-15°10'30"N **Longitude:** 75°15'0"-75°28'19"E **Ridge peaks:** 681, 671, 676, 638, 624, 698, 664, 701, 720, 663, 682, 664, 708, 665, 664m AMSL	49.83 (part capacity of 67.65 MW)	70.97	120.80 MW (151 x 800 KW)

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಹಂಚಿಕೆ ಆದೇಶದ ಇತರೆ ನಿಬಂಧನೆಗಳು ಯಥಾವತ್ತಾಗಿ ಮುಂದುವರಿಯುತ್ತವೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸುರೇಶ್. ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿ.ಆರ್. 851

ಇಂಧನ ಸಚಿವಾಲಯ

ವಿಷಯ : M/s Mytrah Energy (India) Limited ಕಂಪನಿಗೆ 15 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆ ಹಂಚಿಕೆ ಮಾಡುವ ಬಗ್ಗೆ.-

ಓದಲಾಗಿದೆ :
1) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/CEIL-15 MW (gadag)/2011/571, ದಿನಾಂಕ 24-01/11-02-2011.
2) ದಿನಾಂಕ 27-05-2011 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು
3) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/08/ CEPL-15 MW/2011/4680, ದಿನಾಂಕ 17-12-2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು M/s Caparo Energy (India) Limited ಇವರಿಗೆ ಗದಗ್ ಜಿಲ್ಲೆಯ, ಹೊಸಹಳ್ಳಿ, ಇಟಗಿ ಮತ್ತು ಮುಗ್ಲಿ ಗ್ರಾಮಗಳಲ್ಲಿ 15.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ದಿನಾಂಕ 27-05-2011ರಂದು ನಡೆದ ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಹಂಚಿಕೆ ಸಮಿತಿ ಸಭೆಯ ಮುಂದೆ ಸದರಿ ಪ್ರಸ್ತಾವನೆಯನ್ನು ಮಂಡಿಸಲಾಗಿತ್ತು M/s Caparo Energy (India) Limited ಇವರಿಗೆ 15.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ತಾತ್ಕಾಲಿಕವಾಗಿಯಾದರೂ ಸರ್ವೆ ಸಂಖ್ಯೆಗಳನ್ನು ನೀಡುವ ಷರತ್ತಿಗೊಳಪಟ್ಟು ಹಂಚಿಕೆ ಮಾಡಲು ಹಂಚಿಕೆ ಸಮಿತಿಯು ಪರಿಗಣಿಸಿರುತ್ತದೆ.

ಅದರಂತೆ ಅಭಿವೃದ್ಧಿದಾರರಿಂದ ಯೋಜನಾ ಸ್ಥಳದ ಸರ್ವೆ ಸಂಖ್ಯೆಗಳನ್ನು ಪಡೆದು ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರದದೊಂದಿಗೆ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಸರ್ಕಾರಕ್ಕೆ ಕಳಿಹಿಸಿರುತ್ತಾರೆ. ಹಾಗೂ ಈ ಯೋಜನೆಗೆ ಯಾವುದೇ ಸರ್ಕಾರಿ ಅಥವಾ ಅರಣ್ಯ ಜಮೀನಿನ ಅವಶ್ಯಕತೆಯಿರುವುದಿಲ್ಲ ಮತ್ತು ಈ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್‌ನ್ನು ಎಸ್ಕಾಂಗೆ ಮಾರಾಟ ಮಾಡುವುದಾಗಿ ತಿಳಿಸಿರುತ್ತಾರೆ. ಅಲ್ಲದೇ, ಮೆ॥ ಕೆಪರೋ ಎನರ್ಜಿ ಇಂಡಿಯಾ ಲಿ., ಕಂಪೆನಿಯಿಂದ M/s Mytrah Energy (India) Limited ಕಂಪನಿಯ ಹೆಸರಿಗೆ ಬದಲಾವಣೆ ಮಾಡಿಕೊಂಡಿರುವುದಾಗಿ ದಿನಾಂಕ 27-9-2011ರ ಪತ್ರದಲ್ಲಿ ತಿಳಿಸಿದ್ದು, ಅಭಿವೃದ್ಧಿದಾರರ ಕೋರಿಕೆಯಂತೆ ಹಂಚಿಕೆ ಆದೇಶವನ್ನು M/s Mytrah Energy (India) Limited ಹೆಸರಿನಲ್ಲಿ ನೀಡಬಹುದಾಗಿದೆಯೆಂದು ತಿಳಿಸಿರುತ್ತಾರೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ:-

ಸರ್ಕಾರದ ಆದೇಶ ಸಂಖ್ಯೆ: ಇಎನ್ 116 ಎನ್‌ಸಿಇ 2011, ಬೆಂಗಳೂರು, ದಿನಾಂಕ 05-03-2012

M/s Mytrah Energy (India) Limited ಕಂಪನಿಗೆ ಗದಗ್ ಜಿಲ್ಲೆಯ, ಹೊಸಹಳ್ಳಿ ಇಟಗಿ ಮತ್ತು ಮುಗ್ಲಿ ಗ್ರಾಮಗಳಲ್ಲಿ 15.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಈ ಕೆಳಗಿನ ಶೆಡ್ಯೂಲ್‌ನಲ್ಲಿ ವಿವರಿಸಿರುವಂತೆ ಹಾಗೂ ಕೆಳಕಂಡ ನಿಬಂಧನೆಗೊಳಪಟ್ಟು ಹಂಚಿಕೆ ಮಾಡಿದೆ:-

Sl. No.	Topo Sheet No.	Proposed capacity in MW	Near by villages of the proposed area and district	Geographical area description of the project
1	48M/14	15 MW (30 Nos x 500 KW)	Hosahalli, Itgi and Mugli Villages of Gadag District	It is a ground level plain area as agricultural presence and a stream run across the area and is called as Muglihalla, the area as gentle elevation varying from 560 to 580 mt. The entire area is situated on the west and southwest of Itgi village The area is held in the following Geographical co-ordinates: **Latitude:** 15°41'3"-15°45'0"N **Longitude:** 75°45'0"-75°50'0"E **Ridge peaks:** 587, 572, 582 & 592 AMSL
		15.00 MW		

1. ಈ ಯೋಜನೆಯನ್ನು 3 ವರ್ಷದ ಅವಧಿಯೊಳಗಾಗಿ ಅನುಷ್ಠನಗೊಳಿಸತಕ್ಕದ್ದು
2. ಈ ಆದೇಶ ಹೊರಡಿಸಿದ ದಿನಾಂಕದಿಂದ 45 ದಿನಗಳ ಒಳಗಾಗಿ ಸರ್ಕಾರಿ ಆದೇಶ ಸಂಖ್ಯೆ ಇಎನ್ 435 ಎನ್‌ಸಿಇ 06-1-2012 ರನ್ವಯ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದೊಂದಿಗೆ ನಿಯಮಾನುಸಾರ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಈ ಹಂಚಿಕೆ ಆದೇಶ ತಂತಾನೆ ರದ್ದಾಗಿದೆ ಎಂದು ಭಾವಿಸುವುದು.
3. ಹಂಚಿಕೆದಾರರು ಪೂರ್ತಿ ಒಂದು ಪವನ ವರ್ಷಕ್ಕೆ ಕಡಿಮ ಇಲ್ಲದಂತೆ 10 ಮೀಟರ್ ಮತ್ತು ಹಬ್ ಹೈಟ್ ಮಟ್ಟದಲ್ಲಿ ಪವನ ವೇಗದ ಅಳತೆಯನ್ನು ಮಾಡಿಕೊಳ್ಳಬೇಕು. ಅಲ್ಲದೇ, ಕಾಲ ಕಾಲಕ್ಕೆ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದಿಂದ ಹೊರಡಿಸತಕ್ಕ ಮಾರ್ಗಸೂಚಿಗಳಿಗನುಗುಣವಾಗಿ ಮೈಕ್ರೋ ಸೈಟಿಂಗ್ ಮಾಡಿರುವ ಅಂಶಗಳನ್ನೊಳಗೊಂಡ ವಿವರವಾದ ಯೋಜನಾ ವರದಿಗಳ 3 ಪ್ರತಿಗಳನ್ನು ತಯಾರಿಸಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಮಂಡಿಸಬೇಕು. ತಾಂತ್ರಿಕ ಅವಶ್ಯಕತೆ ಮತ್ತು ಹೆಚ್ಚಿನ ವಿದ್ಯುತ್ ಉತ್ಪಾದನೆಯನ್ನು ಸೇಫ್ ನಕ್ಷೆ ಮತ್ತು ವಿಂಡ್ ಫಾರ್ಮನ ಲೇಔಟ್‌ನ ಬದಲಾವಣೆಗನುಗುಣವಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಶಿಫಾರಸ್ಸಿನಂತೆ ಇದೆ ಎಂಬುದನ್ನು ಖಾತರಿ ಪಡಿಸಬೇಕು.
4. ಗಾಳಿ ಚಕ್ರದ ಹಬ್ ಹೈಟಿನಲ್ಲಿ ಪವನ ವೇಗದ ಅಳತೆ ಖಾತರಿ ಪಡಿಸಲು ಕೆಳಗಿನ ಕೋಷ್ಟಕದಲಿ ವಿವರಿಸಿರುವಂತೆ ಪ್ರತಿ 5 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ ಒಂದರಂತೆ ಗಾಳಿ ಕಂಬವನ್ನು (ವಿಂಡ್ ಮಾಸ್ಟ್) ಅಳವಡಿಸಬೇಕು. ಅಳತೆ ವಿವರಗಳನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಸಲ್ಲಿಸುವುದು.

ಗಾಳಿ ಶಕ್ತಿ ವಿದ್ಯುತ್ತಿನ ದೂರ ಸಾಮರ್ಥ್ಯ	5 ಮೆಗಾವ್ಯಾಟ್ ಗಾಳಿ ಯೋಜನೆಯಲ್ಲಿ ಸಾಧಾರಣ ಗಾಳಿ ಶಕ್ತಿ ವಿದ್ಯುತ್ತಿನ ಸಂಖ್ಯೆ	ಹಾಕಬೇಕಾಗಿರುವ ಗಾಳಿ ಕಂಬ (ವಿಂಡ್‌ಮಾಸ್ಟ್ ಗಳ ಸಂಖ್ಯೆ)
➢ 200 ಕಿ.ವ್ಯಾ. ನಿಂದ 300 ಕಿ.ವ್ಯಾ.	18	1
➢ 300 ಕಿ.ವ್ಯಾ. ನಿಂದ 500 ಕಿ.ವ್ಯಾ.	15	1
➢ 500 ಕಿ.ವ್ಯಾ. ನಿಂದ 750 ಕಿ.ವ್ಯಾ.	12	1
➢ 750 ಕಿ.ವ್ಯಾ. ನಿಂದ 1000 ಕಿ.ವ್ಯಾ.	8 ರಿಂದ 10	1

5. ಯೋಜನೆಯ ವಿವಿಧ ಹಂತದ ಚಟುವಟಿಕೆಗಳು ಹಾಗೂ ಯೋಜನೆಗಳಿಂದ ಪ್ರಾರಂಭದ ಹಂತದ ತನಕ ವಿವಿಧ ಮೈ+ಲುಗಲ್ಲುಗಳನ್ನು ತೋರಿಸುವ ಪರ್ಟ್ ನಕ್ಷೆಯನ್ನು ತಯಾರಿಸಿ ಮೇಲುಸ್ತುವಾರಿಗಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಸಲ್ಲಿಸಬೇಕು.
6. ಎಲ್ಲೆಲ್ಲಿ ಶಾಸನಬದ್ಧ ಅನುಮೋದನೆ ಅವಶ್ಯಕತೆಯಿದೆಯೋ ಅಂದರೆ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ/ಕಂದಾಯ ಇಲಾಖೆಗಳ ಮತ್ತು ಇತರ ಸಂಬಂಧಿತ ಇಲಾಖೆಗಳಿಂದ ಅನುಮೋದನೆಯನ್ನು ಹಂಚಿಕೆದಾರರು ಪಡೆದುಕೊಳ್ಳತಕ್ಕದ್ದು. ಅಭಿವೃದ್ದಿದಾರರು ಈ ಯೋಜನೆಯನ್ನು ಖಾಸಗಿ ಜಮೀನಿನಲ್ಲಿ ಕೈಗೊಳ್ಳುತ್ತಿರುವುದರಿಂದ ಖಾಸಗಿ ಜಮೀನಿನ ಮಾಲೀಕರಿಂದ ಒಪ್ಪಿಗೆ ಪತ್ರವನ್ನು ಪಡೆಯತಕ್ಕದ್ದು
7. ಅಭಿವೃದ್ಧಿದಾರರು ಸಂಬಂಧಿಸಿದ ವಿದ್ಯುತ್ ಸರಬರಾಜು ಕಂಪನಿಯೊಂದಿಗೆ ನೀತಿ ನಿಯಮಾನುಸಾರ ವಿದ್ಯುತ್ ಖರೀದಿ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.
8. ಸರ್ಕಾರಿ,ಆದೇಶ ಸಂ/ಇಎನ್ 95 ಇಬಿಎಸ್ 2009 ದಿನಾಂಕ 29-12-2009ರನ್ವಯ ವಿನಾಯಿತಿ ಸೌಲಭ್ಯಗಳು ಅನ್ವಯಿಸುವುದು.
9. ಯೋಜನೆಯನ್ನು ತ್ವರಿತವಾಗಿ ಅನುಷ್ಠಾನ ಮಾಡಲು ಅನುವಾಗುವಂತೆ ರಾಜ್ಯ ಮತ್ತು ಜಿಲ್ಲಾ ಮಟ್ಟದ ಸರ್ಕಾರಿ ಅಧಿಕಾರಿಗಳು ಸಹಕರಿಸುವುದು.
10. ಸದರಿ ಪವನ ವಿದ್ಯುತ್ ಯೋಜನೆಗಾಗಿ ಇಂದನ ಇಲಾಖೆಯಿಂದ ಜಮೀನನ್ನು ಹಂಚಿಕೆ ಮಾಡಲಾಗುವುದಿಲ್ಲ ಹಾಗೂ ಈ ಹಂಚಿಕೆ ಆದೇಶವು ಪವನ ವಿದ್ಯುತ್ ಯೋಜನೆಯ ಸಾಮರ್ಥ್ಯದ ಹಂಚಿಕೆ ಮಾತ್ರ ಸೀಮಿತವಾಗಿದೆ ಹಾಗೂ ಅಭಿವೃದ್ಧಿದಾರರಿಗೆ ಯೋಜನೆಯ ಜಾಗದಲ್ಲಿಯ ಖನಿಜ ಸಂಪತ್ತು ಹಾಗೂ ಭೂಮಿಯ ಬಗ್ಗೆ ಯಾವುದೇ ಹಕ್ಕು ಇರುವುದಿಲ್ಲ ಎಂಬುದನ್ನು ಮನಗಾಣತಕ್ಕದ್ದು.
11. ಸದರಿ ಆದೇಶವನ್ನು ರದ್ದುಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಸುರೇಶ್. ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿ.ಆರ್. 852

ಇಂಧನ ಸಚಿವಾಲಯ

ವಿಷಯ : M/s Mytrah energy (India) Limited ಕಂಪನಿಗೆ 15.00 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆ ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ : 1) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ : ಕೆಆರ್‌ಇಡಿ/08/CEIL-15 MW (Belgaum)/2011/572 ದಿನಾಂಕ : 24-01/11-02-2011.

2) ದಿನಾಂಕ : 27-05-2011 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು.

3) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ : ಕೆಆರ್‌ಇಡಿ/08/ CEPL-15 MW/2011/4682 ದಿನಾಂಕ : 17-12-2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು M/s Caparo Energy (India) Limited ಇವರಿಗೆ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ, ಬಾಗೇವಾಡಿ, ಸರಮರ ಮತ್ತು

ಸಾದಪುರ ಗ್ರಾಮಗಳಲ್ಲಿ 15.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ದಿನಾಂಕ : 27–05–2011 ರಂದು ನಡೆದ ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಹಂಚಿಕೆ ಸಮಿತಿ ಸಭೆಯ ಮುಂದೆ ಸದರಿ ಪ್ರಸ್ತಾವನೆಯನ್ನು ಮಂಡಿಸಲಾಗಿತ್ತು. M/s Caparo Energy (India) Limited ಇವರಿಗೆ 15.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ತಾತ್ಕಾಲಿಕವಾಗಿಯಾದರೂ ಸರ್ವೆ ಸಂಖ್ಯೆಗಳನ್ನು ನೀಡುವ ಷರತ್ತಿಗೊಳಪಟ್ಟು ಹಂಚಿಕೆ ಮಾಡಲು ಹಂಚಿಕೆ ಸಮಿತಿಯು ಪರಿಗಣಿಸಿರುತ್ತದೆ.

ಅದರಂತೆ, ಅಭಿವೃದ್ಧಿದಾರರಿಂದ ಯೋಜನಾ ಸ್ಥಳದ ಸರ್ವೆ ಸಂಖ್ಯೆಗಳನ್ನು ಪಡೆದು ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರದೊಂದಿಗೆ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಸರ್ಕಾರಕ್ಕೆ ಕಳುಹಿಸಿರುತ್ತಾರೆ. ಹಾಗೂ ಈ ಯೋಜನೆಗೆ ಯಾವುದೇ ಸರ್ಕಾರಿ ಅಥವಾ ಅರಣ್ಯ ಜಮೀನಿನ ಅವಶ್ಯಕತೆಯಿರುವುದಿಲ್ಲ ಮತ್ತು ಈ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತನ್ನು ಎಸ್ಕಾಂಗೆ ಮಾರಾಟ ಮಾಡುವುದಾಗಿ ತಿಳಿಸಿರುತ್ತಾರೆ. ಅಲ್ಲದೇ, ಮೆ॥ ಕೆಪರೋ ಎನರ್ಜಿ ಇಂಡಿಯಾ ಲಿ. ಕಂಪೆನಿಯಿಂದ M/s Mytrah Energy (India) Limited ಕಂಪೆನಿಯ ಹೆಸರಿಗೆ ಬದಲಾವಣೆ ಮಾಡಿಕೊಂಡಿರುವುದಾಗಿ ದಿ : 27–9–2011ರ ಪತ್ರದಲ್ಲಿ ತಿಳಿಸಿದ್ದು, ಅಭಿವೃದ್ಧಿದಾರರ ಕೋರಿಕೆಯಂತೆ ಹಂಚಿಕೆ ಆದೇಶವನ್ನು M/s Mytrah Energy (India) Limited ಹೆಸರಿನಲ್ಲಿ ನೀಡಬಹುದಾಗಿದೆಯೆಂದು ತಿಳಿಸಿರುತ್ತಾರೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ :–

ಸರ್ಕಾರದ ಆದೇಶ ಸಂಖ್ಯೆ : ಇಎನ್ 117 ಎನ್‌ಸಿಇ 2011, ಬೆಂಗಳೂರು, ದಿನಾಂಕ: 5ನೇ ಮಾರ್ಚ್ 2012

M/s Mytrah Energy (India) Limited ಕಂಪನಿಗೆ ಬೆಳಗಾವಿ ಜಿಲ್ಲೆಯ ಬಾಗೇವಾಡಿ, ಸರಪುರ ಮತ್ತು ಸಾದಪುರ ಗ್ರಾಮಗಳಲ್ಲಿ 15.00 ಮೆಗಾವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಈ ಕೆಳಗಿನ ಶೆಡ್ಯೂಲ್‌ನಲ್ಲಿ ವಿವರಿಸಿರುವಂತೆ ಹಾಗೂ ಕೆಳಕಂಡ ನಿಬಂಧನೆಗೊಳಪಟ್ಟು ಹಂಚಿಕೆ ಮಾಡಿದೆ :–

Sl. No.	Topo Sheet No.	Proposed capacity in MW	Nearby villages of the proposed area and district	Geographical area description of the project
1	47 L/11	15 MW	Bagewadi, Sarapur and sadapur villages of Belgaum district	The proposed area is located on the SW of Bagawadi. It consists of slightly raised plateau. The area appears to be competely open type. The area has gentle elevation varying from 640 to 700 mtr. The area is held in the following Geographical co-ordinates : Latitude : 16^0 15'54" – $16^0$18'3"N Longitude : 74^0 38'53" – 74^{0} 42'46" E Ridge peaks : 636, 649, 697, 655 & 639 Amsl.
		15.00 MW		

1. ಈ ಯೋಜನೆಯನ್ನು 3 ವರ್ಷದ ಅವಧಿಯೊಳಗಾಗಿ ಅನುಷ್ಠಾನಗೊಳಿಸತಕ್ಕದ್ದು.
2. ಈ ಆದೇಶ ಹೊರಡಿಸಿದ ದಿನಾಂಕದಿಂದ 45 ದಿನಗಳ ಒಳಗಾಗಿ ಸರ್ಕಾರಿ ಆದೇಶ ಸಂಖ್ಯೆ ಇಎನ್ 435 ಎನ್‌ಸಿಇ 06–01–2012 ರನ್ವಯ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದೊಂದಿಗೆ ನಿಯಮಾನುಸಾರ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಈ ಹಂಚಿಕೆ ಆದೇಶ ತಂತಾನೆ ರದ್ದಾಗಿದೆ ಎಂದು ಭಾವಿಸುವುದು.
3. ಹಂಚಿಕೆದಾರರು ಪೂರ್ತಿ ಒಂದು ಪವನ ವರ್ಷಕ್ಕೆ ಕಡಿಮೆ ಇಲ್ಲದಂತೆ 10 ಮೀಟರ್ ಮತ್ತು ಹಬ್ ಹೈಟ್ ಮಟ್ಟದಲ್ಲಿ ಪವನ ವೇಗದ ಅಳತೆಯನ್ನು ಮಾಡಿಕೊಳ್ಳಬೇಕು. ಅಲ್ಲದೇ, ಕಾಲ ಕಾಲಕ್ಕೆ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದಿಂದ ಹೊರಡಿಸತಕ್ಕ ಮಾರ್ಗಸೂಚಿಗಳಿಗನುಗುಣವಾಗಿ ಮೈಕ್ರೊ ಸೈಟಿಂಗ್ ಮಾಡಿರುವ ಅಂಶಗಳನ್ನೊಳಗೊಂಡ ವಿವರವಾದ ಯೋಜನಾ ವರದಿಗಳ 3 ಪ್ರತಿಗಳನ್ನು ತಯಾರಿಸಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಮಂಡಿಸಬೇಕು. ತಾಂತ್ರಿಕ ಅವಶ್ಯಕತೆ ಮತ್ತು ಹೆಚ್ಚಿನ ವಿದ್ಯುತ್ ಉತ್ಪಾದನೆಯನ್ನು ಸೇಫ್ ನಕ್ಷೆ ಮತ್ತು ವಿಂಡ್ ಫಾರ್ಮನ ಲೇಔಟ್‌ನ ಬದಲಾವಣೆಗನುಗುಣವಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಶಿಫಾರಸ್ಸಿನಂತೆ ಇದೆ ಎಂಬುದನ್ನು ಖಾತರಿ ಪಡಿಸಬೇಕು.
4. ಗಾಳಿ ಚಕ್ರದ ಹಬ್ ಹೈಟಿನಲ್ಲಿ ಪವನ ವೇಗದ ಅಳತೆ ಖಾತರಿ ಪಡಿಸಲು ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವಂತೆ ಪ್ರತಿ 5 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ ಒಂದರಂತೆ ಗಾಳಿ ಕಂಬವನ್ನು (ವಿಂಡ್ ಮಾಸ್ಟ್) ಅಳವಡಿಸಬೇಕು. ಅಳತೆ ವಿವರಗಳನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಸಲ್ಲಿಸುವುದು.

ಗಾಳಿ ಶಕ್ತಿ ವಿದ್ಯುತ್ತಿನ ದೂರ ಸಾಮರ್ಥ್ಯ	5 ಮೆಗಾವ್ಯಾಟ್ ಗಾಳಿ ಯೋಜನೆಯಲ್ಲಿ ಸಾಧಾರಣ ಗಾಳಿ ಶಕ್ತಿ ವಿದ್ಯುತ್ತಿನ ಸಂಖ್ಯೆ	ಹಾಕಬೇಕಾಗಿರುವ ಗಾಳಿ ಕಂಬ (ವಿಂಡ್ ಮಾಸ್ಟ್) ಗಳ ಸಂಖ್ಯೆ
➢ 200 ಕಿ.ವ್ಯಾ. ನಿಂದ 300 ಕಿ.ವ್ಯಾ.	18	1
➢ 300 ಕಿ.ವ್ಯಾ. ನಿಂದ 500 ಕಿ.ವ್ಯಾ.	15	1
➢ 500 ಕಿ.ವ್ಯಾ. ನಿಂದ 750 ಕಿ.ವ್ಯಾ.	12	1
➢ 750 ಕಿ.ವ್ಯಾ. ನಿಂದ 1000 ಕಿ.ವ್ಯಾ.	8 ರಿಂದ 10	1

5. ಯೋಜನೆಯ ವಿವಿಧ ಹಂತದ ಚಟುವಟಿಕೆಗಳು ಹಾಗೂ ಯೋಜನೆಗಳಿಂದ ಪ್ರಾರಂಭದ ಹಂತದ ತನಕ ವಿವಿಧ ಮೈಲುಗಲ್ಲುಗಳನ್ನು ತೋರಿಸುವ ಪರ್ಟ್ ನಕ್ಷೆಯನ್ನು ತಯಾರಿಸಿ ಮೇಲುಸ್ತುವಾರಿಗಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಸಲ್ಲಿಸಬೇಕು.
6. ಎಲ್ಲೆಲ್ಲಿ ಶಾಸನಬದ್ಧ ಅನುಮೋದನೆ ಅವಶ್ಯಕತೆಯಿದೆಯೋ ಅಂದರೆ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ/ಕಂದಾಯ ಇಲಾಖೆಗಳ ಮತ್ತು ಇತರ ಸಂಬಂಧಿತ ಇಲಾಖೆಗಳಿಂದ ಅನುಮೋದನೆಯನ್ನು ಹಂಚಿಕೆದಾರರು ಪಡೆದುಕೊಳ್ಳತಕ್ಕದ್ದು. ಅಭಿವೃದ್ಧಿದಾರರು ಈ ಯೋಜನೆಯನ್ನು ಖಾಸಗಿ ಜಮೀನಿನಲ್ಲಿ ಕೈಗೊಳ್ಳುತ್ತಿರುವುದರಿಂದ, ಖಾಸಗಿ ಜಮೀನಿನ ಮಾಲೀಕರಿಂದ ಒಪ್ಪಿಗೆ ಪತ್ರವನ್ನು ಪಡೆಯತಕ್ಕದ್ದು.
7. ಅಭಿವೃದ್ಧಿದಾರರು ಸಂಬಂಧಿಸಿದ ವಿದ್ಯುತ್ ಸರಬರಾಜು ಕಂಪನಿಯೊಂದಿಗೆ ನೀತಿ ನಿಯಮಾನುಸಾರ ವಿದ್ಯುತ್ ಖರೀದಿ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.
8. ಸರ್ಕಾರಿ ಆದೇಶ ಸಂ : ಇಎನ್ 95 ಇಬಿಎಸ್ 2009 ದಿನಾಂಕ : 29-12-2009 ರನ್ವಯ ವಿನಾಯಿತಿ ಸೌಲಭ್ಯಗಳು ಅನ್ವಯಿಸುವುದು.
9. ಯೋಜನೆಯನ್ನು ತ್ವರಿತವಾಗಿ ಅನುಷ್ಠಾನ ಮಾಡಲು ಅನುವಾಗುವಂತೆ ರಾಜ್ಯ ಮತ್ತು ಜಿಲ್ಲಾ ಮಟ್ಟದ ಸರ್ಕಾರಿ ಅಧಿಕಾರಿಗಳು ಸಹಕರಿಸುವುದು.
10. ಸದರಿ ಪವನ ವಿದ್ಯುತ್ ಯೋಜನೆಗಾಗಿ ಇಂಧನ ಇಲಾಖೆಯಿಂದ ಜಮೀನನ್ನು ಹಂಚಿಕೆ ಮಾಡಲಾಗುವುದಿಲ್ಲ ಹಾಗೂ ಈ ಹಂಚಿಕೆ ಆದೇಶವು ಪವನ ವಿದ್ಯುತ್ ಯೋಜನೆಯ ಸಾಮರ್ಥ್ಯದ ಹಂಚಿಕೆಗೆ ಮಾತ್ರ ಸೀಮಿತವಾಗಿದೆ ಹಾಗೂ ಅಭಿವೃದ್ಧಿದಾರರಿಗೆ ಯೋಜನೆಯ ಜಾಗದಲ್ಲಿಯ ಖನಿಜ ಸಂಪತ್ತು ಹಾಗೂ ಭೂಮಿಯ ಬಗ್ಗೆ ಯಾವುದೇ ಹಕ್ಕು ಇರುವುದಿಲ್ಲ ಎಂಬುದನ್ನು ಮನಗಾಣತಕ್ಕದ್ದು.
11. ಸದರಿ ಆದೇಶವನ್ನು ರದ್ದುಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಸುರೇಶ್.ಬಿ.ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿ.ಆರ್.853

ಇಂಧನ ಸಚಿವಾಲಯ

ವಿಷಯ : M/s Mytrah energy (India) Limited ಕಂಪನಿಗೆ 10.00 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆ ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ : 1) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ : ಕೆಆರ್‌ಇಡಿ/08/CEIL-10 MW (Belgaum)/2011/570 ದಿನಾಂಕ : 24-01/11-02-2011.

2) ದಿನಾಂಕ : 27-05-2011 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು.

3) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ : ಕೆಆರ್‌ಇಡಿ/08/ CEPL-10 MW/2011/4679 ದಿನಾಂಕ : 17-12-2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು M/s Caparo Energy (India) Limited ಇವರಿಗೆ ಬೆಳಗಾವಿ ಜಿಲ್ಲೆಯ ತೋಟ್‌ಗಟ್ಟಿ ಮತ್ತು ಕೆಸರ್ ಗೊಪ್ ಗ್ರಾಮಗಳಲ್ಲಿ 10.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ದಿನಾಂಕ : 27-05-2011 ರಂದು ನಡೆದ ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಹಂಚಿಕೆ ಸಮಿತಿ ಸಭೆಯ ಮುಂದೆ ಸದರಿ ಪ್ರಸ್ತಾವನೆಯನ್ನು ಮಂಡಿಸಲಾಗಿತ್ತು. M/s Caparo Energy (India) Limited ಇವರಿಗೆ 10.00 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ತಾತ್ಕಾಲಿಕವಾಗಿಯಾದರೂ ಸರ್ವೆ ಸಂಖ್ಯೆಗಳನ್ನು ನೀಡುವ ಷರತ್ತಿಗೊಳಪಟ್ಟು ಹಂಚಿಕೆ ಮಾಡಲು ಹಂಚಿಕೆ ಸಮಿತಿಯು ಪರಿಗಣಿಸಿರುತ್ತದೆ.

ಅದರಂತೆ, ಅಭಿವೃದ್ಧಿದಾರರಿಂದ ಯೋಜನಾ ಸ್ಥಳದ ಸರ್ವೆ ಸಂಖ್ಯೆಗಳನ್ನು ಪಡೆದು ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರದೊಂದಿಗೆ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಸರ್ಕಾರಕ್ಕೆ ಕಳುಹಿಸಿರುತ್ತಾರೆ. ಹಾಗೂ ಈ ಯೋಜನೆಗೆ ಯಾವುದೇ ಸರ್ಕಾರಿ ಅಥವಾ ಅರಣ್ಯ ಜಮೀನಿನ ಅವಶ್ಯಕತೆಯಿರುವುದಿಲ್ಲ ಮತ್ತು ಈ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತನ್ನು ಎಸ್ಕಾಂಗೆ ಮಾರಾಟ ಮಾಡುವುದಾಗಿ ತಿಳಿಸಿರುತ್ತಾರೆ. ಅಲ್ಲದೇ, ಮೆ॥ ಕೆಪರೋ ಎನರ್ಜಿ ಇಂಡಿಯಾ ಲಿ. ಕಂಪನಿಯಿಂದ M/s Mytrah Energy (India) Limited ಕಂಪನಿಯ ಹೆಸರಿಗೆ ಬದಲಾವಣೆ ಮಾಡಿಕೊಂಡಿರುವುದಾಗಿ ದಿ : 27-9-2011ರ ಪತ್ರದಲ್ಲಿ ತಿಳಿಸಿದ್ದು, ಅಭಿವೃದ್ಧಿದಾರರ ಕೋರಿಕೆಯಂತೆ ಹಂಚಿಕೆ ಆದೇಶವನ್ನು M/s Mytrah Energy (India) Limited ಹೆಸರಿನಲ್ಲಿ ನೀಡಬಹುದಾಗಿದೆಯೆಂದು ತಿಳಿಸಿರುತ್ತಾರೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ :-

ಸರ್ಕಾರದ ಆದೇಶ ಸಂಖ್ಯೆ : ಇಎನ್ 119 ಎನ್‌ಸಿಇ 2011, ಬೆಂಗಳೂರು, ದಿನಾಂಕ: 5ನೇ ಮಾರ್ಚ್ 2012

M/s Mytrah Energy (India) Limited ಕಂಪನಿಗೆ ಬೆಳಗಾವಿ ಜಿಲ್ಲೆಯ ತೋಟಗಟ್ಟಿ ಮತ್ತು ಕೆಸರ್‌ಗೊಪ್ ಗ್ರಾಮಗಳಲ್ಲಿ 10.00 ಮೆಗಾವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಈ ಕೆಳಗಿನ ಶೆಡ್ಯೂಲ್‌ನಲ್ಲಿ ವಿವರಿಸಿರುವಂತೆ ಹಾಗೂ ಕೆಳಕಂಡ ನಿಬಂಧನೆಗೊಳಪಟ್ಟು ಹಂಚಿಕೆ ಮಾಡಿದೆ :-

Sl. No.	Topo Sheet No.	Proposed capacity in MW	Nearby villages of the proposed area and district	Geographical area description of the project
1	47 P/4	10 MW (20 Nos x 500 KW)	Totgatti and Kesargop villages of Belgaum District	The proposed area is located on the south of Kasaba Chandargi town and Kesargop village. It is a large plateau mostly as agricultural activities and gently elevation varies from 640 mt to 680 mt. The proposed area is covered in the following Geographical coordinates : Latitude : $16^0 0'0''$ – $16^0 13'4''$N Longitude : 75^0 5''46" – 75^0 10'0" E Ridge peaks : 673, 648, 634 Amsl.
		10.00 MW		

1. ಈ ಯೋಜನೆಯನ್ನು 3 ವರ್ಷದ ಅವಧಿಯೊಳಗಾಗಿ ಅನುಷ್ಠಾನಗೊಳಿಸತಕ್ಕದ್ದು.
2. ಈ ಆದೇಶ ಹೊರಡಿಸಿದ ದಿನಾಂಕದಿಂದ 45 ದಿನಗಳ ಒಳಗಾಗಿ ಸರ್ಕಾರಿ ಆದೇಶ ಸಂಖ್ಯೆ ಇಎನ್ 435 ಎನ್ ಸಿಇ 06-1-2012 ರನ್ವಯ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದೊಂದಿಗೆ ನಿಯಮಾನುಸಾರ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಈ ಹಂಚಿಕೆ ಆದೇಶ ತಂತಾನೆ ರದ್ದಾಗಿದೆ ಎಂದು ಭಾವಿಸುವುದು.
3. ಹಂಚಿಕೆದಾರರು ಪೂರ್ತಿ ಒಂದು ಪವನ ವರ್ಷಕ್ಕೆ ಕಡಿಮೆ ಇಲ್ಲದಂತೆ 10 ಮೀಟರ್ ಮತ್ತು ಹಬ್ ಹೈಟ್ ಮಟ್ಟದಲ್ಲಿ ಪವನ ವೇಗದ ಅಳತೆಯನ್ನು ಮಾಡಿಕೊಳ್ಳಬೇಕು. ಅಲ್ಲದೇ, ಕಾಲ ಕಾಲಕ್ಕೆ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದಿಂದ ಹೊರಡಿಸತಕ್ಕ ಮಾರ್ಗಸೂಚಿಗಳಿಗನುಗುಣವಾಗಿ ಮೈಕ್ರೊ ಸೈಟಿಂಗ್ ಮಾಡಿರುವ ಅಂಶಗಳನ್ನೊಳಗೊಂಡ ವಿವರವಾದ ಯೋಜನಾ ವರದಿಗಳ 3 ಪ್ರತಿಗಳನ್ನು ತಯಾರಿಸಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಮಂಡಿಸಬೇಕು. ತಾಂತ್ರಿಕ ಅವಶ್ಯಕತೆ ಮತ್ತು ಹೆಚ್ಚಿನ ವಿದ್ಯುತ್ ಉತ್ಪಾದನೆಯನ್ನು ಸೇಫ್‌ನಕ್ಷೆ ಮತ್ತು ವಿಂಡ್ ಫಾರ್ಮನ ಲೇಔಟ್‌ನ ಬದಲಾವಣೆಗನುಗುಣವಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಶಿಫಾರಸ್ಸಿನಂತೆ ಇದೆ ಎಂಬುದನ್ನು ಖಾತರಿ ಪಡಿಸಬೇಕು.
4. ಗಾಳಿ ಚಕ್ರದ ಹಬ್ ಹೈಟಿನಲ್ಲಿ ಪವನ ವೇಗದ ಅಳತೆ ಖಾತರಿ ಪಡಿಸಲು ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವಂತೆ ಪ್ರತಿ 5 ಮೆಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ ಒಂದರಂತೆ ಗಾಳಿ ಕಂಬವನ್ನು (ವಿಂಡ್ ಮಾಸ್ಟ್) ಅಳವಡಿಸಬೇಕು. ಅಳತೆ ವಿವರಗಳನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಸಲ್ಲಿಸುವುದು.

ಗಾಳಿ ಶಕ್ತಿ ವಿದ್ಯುತ್ತಿನ ದೂರ ಸಾಮರ್ಥ್ಯ	5 ಮೆಗಾವ್ಯಾಟ್ ಗಾಳಿ ಯೋಜನೆಯಲ್ಲಿ ಸಾಧಾರಣ ಗಾಳಿ ಶಕ್ತಿ ವಿದ್ಯುತ್ತಿನ ಸಂಖ್ಯೆ	ಹಾಕಬೇಕಾಗಿರುವ ಗಾಳಿ ಕಂಬ (ವಿಂಡ್ ಮಾಸ್ಟ್) ಗಳ ಸಂಖ್ಯೆ
➢ 200 ಕಿ.ವ್ಯಾ. ನಿಂದ 300 ಕಿ.ವ್ಯಾ.	18	1
➢ 300 ಕಿ.ವ್ಯಾ. ನಿಂದ 500 ಕಿ.ವ್ಯಾ.	15	1
➢ 500 ಕಿ.ವ್ಯಾ. ನಿಂದ 750 ಕಿ.ವ್ಯಾ.	12	1
➢ 750 ಕಿ.ವ್ಯಾ. ನಿಂದ 1000 ಕಿ.ವ್ಯಾ.	8 ರಿಂದ 10	1

5. ಯೋಜನೆಯ ವಿವಿಧ ಹಂತದ ಚಟುವಟಿಕೆಗಳು ಹಾಗೂ ಯೋಜನೆಗಳಿಂದ ಪ್ರಾರಂಭದ ಹಂತದ ತನಕ ವಿವಿಧ ಮೈಲುಗಲ್ಲುಗಳನ್ನು ತೋರಿಸುವ ಪರ್ಟ್ ನಕ್ಷೆಯನ್ನು ತಯಾರಿಸಿ ಮೇಲುಸ್ತುವಾರಿಗಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಸಲ್ಲಿಸಬೇಕು.
6. ಎಲ್ಲೆಲ್ಲಿ ಶಾಸನಬದ್ಧ ಅನುಮೋದನೆ ಅವಶ್ಯಕತೆಯಿದೆಯೋ ಅಂದರೆ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ/ಕಂದಾಯ ಇಲಾಖೆಗಳ ಮತ್ತು ಇತರ ಸಂಬಂಧಿತ ಇಲಾಖೆಗಳಿಂದ ಅನುಮೋದನೆಯನ್ನು ಹಂಚಿಕೆದಾರಗು ಪಡೆದುಕೊಳ್ಳತಕ್ಕದ್ದು. ಅಭಿವೃದ್ಧಿದಾರರು ಈ ಯೋಜನೆಯನ್ನು ಖಾಸಗಿ ಜಮೀನಿನಲ್ಲಿ ಕೈಗೊಳ್ಳುತ್ತಿರುವುದರಿಂದ, ಖಾಸಗಿ ಜಮೀನಿನ ಮಾಲೀಕರಿಂದ ಒಪ್ಪಿಗೆ ಪತ್ರವನ್ನು ಪಡೆಯತಕ್ಕದ್ದು.
7. ಅಭಿವೃದ್ಧಿದಾರರು ಸಂಬಂಧಿಸಿದ ವಿದ್ಯುತ್ ಸರಬರಾಜು ಕಂಪನಿಯೊಂದಿಗೆ ನೀತಿ ನಿಯಮಾನುಸಾರ ವಿದ್ಯುತ್ ಖರೀದಿ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.
8. ಸರ್ಕಾರಿ ಆದೇಶ ಸಂ:ಇಎನ್ 95 ಇಬಿಪಿಸ್ 2009 ದಿ: 29-12-2009ರನ್ವಯ ವಿನಾಯಿತಿ ಸೌಲಭ್ಯಗಳು ಅನ್ವಯಿಸುವುದು.

9. ಯೋಜನೆಯನ್ನು ತ್ವರಿತವಾಗಿ ಅನುಷ್ಠಾನ ಮಾಡಲು ಅನುವಾಗುವಂತೆ ರಾಜ್ಯ ಮತ್ತು ಜಿಲ್ಲಾ ಮಟ್ಟದ ಸರ್ಕಾರ ಅಧಿಕಾರಿಗಳು ಸಹಕರಿಸುವುದು.
10. ಸದರಿ ಪವನ ವಿದ್ಯುತ್ ಯೋಜನೆಗಾಗಿ ಇಂಧನ ಇಲಾಖೆಯಿಂದ ಜಮೀನನ್ನು ಹಂಚಿಕೆ ಮಾಡಲಾಗುವುದಿಲ್ಲ ಹಾಗೂ ಈ ಹಂಚಿಕೆ ಆದೇಶವು ಪವನ ವಿದ್ಯುತ್ ಯೋಜನೆಯ ಸಾಮರ್ಥ್ಯದ ಹಂಚಿಕೆಗೆ ಮಾತ್ರ ಸೀಮಿತವಾಗಿದೆ ಹಾಗೂ ಅಭಿವೃದ್ಧಿದಾರರಿಗೆ ಯೋಜನೆಯ ಜಾಗದಲ್ಲಿಯ ಖನಿಜ ಸಂಪತ್ತು ಹಾಗೂ ಭೂಮಿಯ ಬಗ್ಗೆ ಯಾವುದೇ ಹಕ್ಕು ಇರುವುದಿಲ್ಲ ಎಂಬುದನ್ನು ಮನಗಾಣತಕ್ಕದ್ದು.
11. ಸದರಿ ಆದೇಶವನ್ನು ರದ್ದುಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.854

ಸುರೇಶ್.ಬಿ.ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಒಳಾಡಳಿತ ಸಚಿವಾಲಯ

ವಿಷಯ : 2011-12ನೇ ಸಾಲಿನಲ್ಲಿ ಒಟ್ಟು 78,525 ಪೊಲೀಸ್ ಸಿಬ್ಬಂದಿಗಳಿಗೆ ವಿಶೇಷ ಗುಂಪು ವಿಮಾ ವಾರ್ಷಿಕ ಪ್ರೀಮಿಯಂ ಮೊತ್ತವನ್ನು ವಿಮಾ ಕಂಪನಿಗೆ ಪಾವತಿಸುವ ಕುರಿತು.

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ : ಹೆಚ್‌ಡಿ 218 ಪಿಓಪಿ 2011 ದಿನಾಂಕ : 30-09-2011.
2) ಪತ್ರದ ಸಂಖ್ಯೆ : ಹೆಚ್‌ಡಿ 103 ಪಿಓಪಿ 2011 ದಿನಾಂಕ : 02-01-2012.
3) ಸರ್ಕಾರಿ ಆದೇಶ ಸಂಖ್ಯೆ : ಹೆಚ್‌ಡಿ 53 ಪಿಓಪಿ 2012 ದಿನಾಂಕ : 21-02-2012.
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರುರವರ ಪತ್ರದ ಸಂಖ್ಯೆ : ವಿವೇಶಾ [4]/1/2011 ದಿನಾಂಕ : 31-01-2012 ಮತ್ತು 09-03-2012.

ಪ್ರಸ್ತಾವನೆ :

ಮೇಲೆ [1] ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸ್ ಕಾನ್ಸ್‌ಟೇಬಲ್, ಪೊಲೀಸ್ ಹೆಡ್ ಕಾನ್ಸ್‌ಟೇಬಲ್ ಮತ್ತು ಅನುಯಾಯಿಗಳು ಸೇರಿದಂತೆ ಒಟ್ಟು 78525 ಸಿಬ್ಬಂದಿಗಳಿಗೆ ವಿಶೇಷ ಗುಂಪುಯೋಜನೆ ವಾರ್ಷಿಕ ಮೊತ್ತ ಹಾಗೂ ಸೇವಾ ತೆರಿಗೆ ಸೇರಿ ಒಟ್ಟು ರೂ. 75,35,338/- ಗಳನ್ನು ಮೆ॥ ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್ ಕಂಪನಿ ನಿಯಮಿತ, ಬೆಂಗಳೂರು ಇವರಿಗೆ ಪಾವತಿಸಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿತ್ತು.

ಮೇಲೆ [2] ರಲ್ಲಿ ಓದಲಾದ ಸರ್ಕಾರಿ ಪತ್ರದಲ್ಲಿ ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸ್ ಕಾನ್ಸ್‌ಟೇಬಲ್, ಪೊಲೀಸ್ ಹೆಡ್ ಕಾನ್ಸ್‌ಟೇಬಲ್ ಮತ್ತು ಅನುಯಾಯಿಗಳು ಸೇರಿದಂತೆ ಒಟ್ಟು 78525 ಸಿಬ್ಬಂದಿಗಳಿಗೆ ವಿಶೇಷ ಗುಂಪು ವಿಮಾ ಹಣವನ್ನು ರೂ. 3.00 ಲಕ್ಷದಿಂದ ರೂ. 10.00 ಲಕ್ಷದವರೆಗೆ ಹೆಚ್ಚಿಸಲು ಸರ್ಕಾರದ ಒಪ್ಪಿಗೆ ನೀಡಿರುತ್ತದೆ.

ಮೇಲೆ [3]ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ವಿಶೇಷ ಗುಂಪು ವಿಮಾ ಮೊತ್ತವನ್ನು ರೂ. 3.00 ಲಕ್ಷಗಳಿಂದ ರೂ. 10.00 ಲಕ್ಷಗಳಿಗೆ ಹೆಚ್ಚಿಸುವ ಸಂಬಂಧ ತಗಲುವ ವೆಚ್ಚ ರೂ. 40.65 ಲಕ್ಷಗಳನ್ನು ಭರಿಸಲು ಮರು ಹೊಂದಾಣಿಕೆ ಮೂಲಕ ಧನ ಪುನರ್ ವಿನಿಯೋಗಿಸಿಕೊಳ್ಳಲು ಮಂಜೂರಾತಿ ನೀಡಿರುತ್ತದೆ.

ಮೇಲೆ ಓದಲಾದ [4] ಪತ್ರಗಳಲ್ಲಿ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ಈಗಾಗಲೇ ಅತಿ ಕಡಿಮೆ ದರ ನೀಡಿರುವ ಮೆ॥ ಯುನೈಟೆಡ್ ಇಂಡಿಯ ಇನ್ಸೂರೆನ್ಸ್ ಕಂಪನಿ, ಬೆಂಗಳೂರು ಇವರಲ್ಲಿ ರೂ 3.00 ಲಕ್ಷಗಳ ವಿಮಾ ಮೊತ್ತಕ್ಕೆ ವಿಮಾ ಪ್ರೀಮಿಯಂ ಪಾವತಿಸಿದ್ದು ಇದು ದಿನಾಂಕ : 07-01-2011 ರಿಂದ ದಿನಾಂಕ : 06-10-2012 ರವರೆಗೆ ಚಾಲ್ತಿಯಲ್ಲಿದ್ದು ಈ ಸಂಬಂಧವಾಗಿ ಸದರಿ ವಿಮಾ ಕಂಪನಿಯವರಿಂದ ವಿಮಾ ಕರಾರು ಒಪ್ಪಂದ ಮಾಡಲಾಗಿರುತ್ತದೆ. ಆದ್ದರಿಂದ ಅತಿ ಕಡಿಮೆ ದರ ನೀಡಿರುವ ಮೆ॥ ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್ ಕಂಪನಿ, ಬೆಂಗಳೂರು ರವರು ಈಗ ವಿಮಾ ಪ್ರೀಮಿಯಂ ಅನ್ನು ನೀಡಿ ದಿನಾಂಕ : 07-10-2011 ರಿಂದ 11-03-2012 ರವರೆಗೆ ಒಟ್ಟು 158 ದಿನಗಳು ಕಳೆದಿದ್ದು ಬಾಕಿ ಉಳಿದಿರುವ ಒಟ್ಟು 208 ದಿನಗಳಿಗೆ ಹೆಚ್ಚುವರಿಯಾಗಿ ರೂ. 7.00 ಲಕ್ಷಗಳಿಗೆ ವಿಮಾ ಪ್ರೀಮಿಯಂ ಅನ್ನು ಪಡೆಯಲು ತಗಲುವ ಮೊತ್ತದ ವಿವರ ನೀಡಿದ್ದು ಅದರಂತೆ ಈಗ ನೀಡುತ್ತಿರುವ ವಿಶೇಷ ಗುಂಪು ವಿಮಾ ಮೊತ್ತ ರೂ. 3.00 ಲಕ್ಷಗಳ ಜೊತೆಗೆ ಹೆಚ್ಚುವರಿಯಾಗಿ ರೂ. 7.00 ಲಕ್ಷಗಳನ್ನು ಬಾಕಿ ಉಳಿದಿರುವ ದಿನಗಳಿಗೆ ಹೆಚ್ಚಿಸಲು ವಿಶೇಷ ಗುಂಪು ವಿಮಾ ವಾರ್ಷಿಕ ಮೊತ್ತ ರೂ. 91,46,592/- ಮತ್ತು ಸೇವಾ ತೆರಿಗೆ ರೂ. 9,42,099/- ಸೇರಿ ಒಟ್ಟು ರೂ. 1,00,88,691/- ತಗಲುತ್ತದೆಯೆಂದು ತಿಳಿಸಿ ಈ ಮೊತ್ತವನ್ನು ಲೆಕ್ಕ ಶೀರ್ಷಿಕೆ "2055-00-800-0-01-059 ಇತರೆ ಖರ್ಚುಗಳ ಅಡಿ ಲಭ್ಯವಿರುವ ಅನುದಾನ ಮತ್ತು ಉಳಿಕೆ ಹಣವನ್ನು ಮರುಹೊಂದಾಣಿಕೆ ಮೂಲಕ ಭರಿಸಿ ಸದರಿ ವಿಮಾ ಕಂಪನಿಗೆ ಪಾವತಿಸಲು ಸರ್ಕಾರದ ಮಂಜೂರಾತಿಯನ್ನು ಕೋರಿರುತ್ತಾರೆ.

ಮೆ॥ ಯುನೈಟೆಡ್ ಇಂಡಿಯ ಇನ್ಸೂರೆನ್ಸ್ ಕಂಪನಿ, ಬೆಂಗಳೂರು ಇವರಿಂದ ಪೊಲೀಸ್ ಕಾನ್ಸ್‌ಟೇಬಲ್, ಪೊಲೀಸ್ ಹೆಡ್ ಕಾನ್ಸ್‌ಟೇಬಲ್ ಮತ್ತು ಅನುಯಾಯಿಗಳು ಸೇರಿದಂತೆ ಒಟ್ಟು 78525 ಸಿಬ್ಬಂದಿಗಳಿಗೆ ಹೆಚ್ಚುವರಿಯಾಗಿ ರೂ. 7.00 ಲಕ್ಷಗಳಿಗೆ ವಿಮಾ ಪ್ರೀಮಿಯಂ ಅನ್ನು ದಿನಾಂಕ : 12-03-2012 ರಿಂದ 06-10-2012 ವರೆಗೆ ಪಾವತಿಸುವ ಕುರಿತು ಪ್ರೀಮಿಯಂ ಇನ್‌ವಾಯ್ಸ್ ಪಡೆದಿದ್ದು ಅದರ ಪ್ರಕಾರ ವಿಶೇಷ ಗುಂಪು ವಿಮಾ ಮೊತ್ತ ರೂ. 91,46,592/- ಹಾಗೂ ಸೇವಾ ತೆರಿಗೆ ರೂ. 9,42,099/- ಸೇರಿ ಒಟ್ಟು ರೂ. 1,00,88,691/- ತಗಲುತ್ತದೆಯೆಂದು ತಿಳಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಹೆಚ್‌ಡಿ 103 ಪಿಓಪಿ 2011, ಬೆಂಗಳೂರು, ದಿನಾಂಕ: 12ನೇ ಮಾರ್ಚ್ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸ್ ಕಾನ್‌ಸ್ಟೇಬಲ್, ಪೊಲೀಸ್ ಹೆಡ್ ಕಾನ್‌ಸ್ಟೇಬಲ್ ಮತ್ತು ಅನುಯಾಯಿಗಳು ಸೇರಿದಂತೆ ಒಟ್ಟು 78525 ಸಿಬ್ಬಂದಿಗಳಿಗೆ ಕರ್ತವ್ಯದ ಮೇಲಿದ್ದಾಗ ಮೃತಪಟ್ಟಲ್ಲಿ ಮೃತರ ಕುಟುಂಬದವರಿಗೆ ವಿಮಾ ಪರಿಹಾರ ಮೊತ್ತ ರೂ. 3,00,000/- ಗಳ ಜೊತೆಗೆ ಹೆಚ್ಚುವರಿಯಾಗಿ ರೂ. 7.00 ಲಕ್ಷಗಳನ್ನು ಬಾಕಿ ಉಳಿದಿರುವ ದಿನಗಳಿಗೆ ಹೆಚ್ಚಿಸಲು ವಿಶೇಷ ಗುಂಪು ವಿಮಾ ವಾರ್ಷಿಕ ಮೊತ್ತ ಸೇವಾ ತೆರಿಗೆ ಸೇರಿ ರೂ. 1,00,88,691 ಗಳನ್ನು [ರೂಪಾಯಿಗಳು ಒಂದು ಕೋಟಿ ಎಂಬತ್ತೆಂಟು ಸಾವಿರದ ಆರು ನೂರ ತೊಂಬತ್ತೊಂದು ಮಾತ್ರ] ಮೆ॥ ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್ ಕಂಪನಿ, ನಿಯಮಿತ ಬೆಂಗಳೂರುರವರಿಗೆ ಟೆಂಡರ್‌ನ ಎಲ್ಲಾ ವಿಧಿ ವಿಧಾನಗಳನ್ನು ಚಾಚೂ ತಪ್ಪದೆ ಪಾಲಿಸುವ ಷರತ್ತಿಗೆ ಒಳಪಟ್ಟು ಪಾವತಿಸಲು ಸರ್ಕಾರದ ಮಂಜೂರಾತಿಯನ್ನು ನೀಡಿದೆ.

ಈ ವೆಚ್ಚವನ್ನು 2011-12ನೇ ಸಾಲಿನ ಲೆಕ್ಕ ಶೀರ್ಷಿಕೆ 2055-00-800-0-01-059 ಇತರೆ ಖರ್ಚುಗಳಡಿಯಲ್ಲಿ ಒದಗಿಸಿದ ಅನುದಾನದಿಂದ ಭರಿಸತಕ್ಕದು ಹಾಗೂ ಮೇಲೆ [3]ರಲ್ಲಿ ಓದಲಾದ ಸರ್ಕಾರದ ಆದೇಶದ ಪೊಲೀಸ್ ಕಾನ್‌ಸ್ಟೇಬಲ್, ಪೊಲೀಸ್ ಹೆಡ್ ಕಾನ್‌ಸ್ಟೇಬಲ್ ಮತ್ತು ಅನುಯಾಯಿಗಳು ಸೇರಿದಂತೆ ಒಟ್ಟು 78525 ಸಿಬ್ಬಂದಿಗಳಿಗೆ ಮರು ಹೊಂದಾಣಿಕೆ ಮೂಲಕ ಧನ ಪುನರ್ ವಿಯೋಗಿಸಿಕೊಳ್ಳಲು ಮಂಜೂರಾತಿ ನೀಡಿರುವ ಅನುದಾನದಿಂದ ಉಳಿಕೆ ಹಣವನ್ನು ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 51 ವೆಚ್ಚ 11/2012 ದಿನಾಂಕ : 07-03-2012 ರಲ್ಲಿ ನೀಡಿದ ಸಹಮತಿ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ರಾಜಮ್ಮ

ಪಿ.ಆರ್.855

ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ (ಪೊಲೀಸ್ ವೆಚ್ಚ)

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಡಿ. ನಾಗರಾಜಯ್ಯ, ನಿವೃತ್ತ ಪಿ.ಎಸ್.ಐ. ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಠಾಣೆ, ಬೆಂಗಳೂರು ನಗರ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ : 1) ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಆಯುಕ್ತರು, ಬೆಂಗಳೂರು ನಗರ, ಇವರ ಆದೇಶ ಸಂಖ್ಯೆ: 18/ಡಿಇ-1/ಆರ್. 6/2010 ದಿನಾಂಕ : 17-3-11.

2) ಮೇಲ್ಮನವಿ ಪ್ರಾಧಿಕಾರ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ., ಬೆಂಗಳೂರು, ಇವರ ಆದೇಶ ಸಂಖ್ಯೆ : ಅಪೀಲು (4)/04/2011-12 (ಓ.ಬಿ. ಸಂಖ್ಯೆ : 14/2011-12) ದಿನಾಂಕ : 18-8-2011.

3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ : 07-10-2011.

4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು ಇವರ ಪತ್ರದ ಸಂಖ್ಯೆ : ಅಪೀಲು (2)/48/2011-12 ದಿನಾಂಕ : 14-12-2011

ಪ್ರಸ್ತಾವನೆ :

ಶ್ರೀ ಡಿ. ನಾಗರಾಜಯ್ಯ ಇವರು ಬೆಂಗಳೂರಿನ ಸೆಂಟ್ರಲ್ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಸಬ್-ಇನ್‌ಸ್ಪೆಕ್ಟರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ತೀವ್ರ ನಿರ್ಲಕ್ಷತೆ, ಕರ್ತವ್ಯಲೋಪದ ಆರೋಪದ ಮೇಲೆ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು, 1965ರ ನಿಯಮ 6 ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ :

"ಶ್ರೀ ಡಿ. ನಾಗರಾಜಯ್ಯ, ಪಿ.ಎಸ್.ಐ. ಆದ ನೀವು ದಿನಾಂಕ : 24-08-2006 ರಂದು ಸೆಂಟ್ರಲ್ ಪೊಲೀಸ್ ಠಾಣೆಗೆ ವರ್ಗಾವಣೆ ಮೇರೆಗೆ ಪ್ರಭಾರ ವಹಿಸಿಕೊಂಡು, ದಿನಾಂಕ : 26-09-2006 ರಂದು ನೀವು ಶ್ರೀ ಶಿವಶಂಕರ್ ನಾಯಕ್ ಎಂಬುವರಿಂದ ಠಾಣೆಯ ಕಾನೂನು ಮತ್ತು ಸುವ್ಯವಸ್ಥೆ ವಿಭಾಗಕ್ಕೆ ಸಂಬಂಧಿಸಿದ ಪ್ರಕರಣಗಳ ಕಡತಗಳು ಹಾಗೂ ಮಾಲುಗಳನ್ನು ಪ್ರಭಾರದ ಮೂಲಕ ವಹಿಸಿಕೊಂಡಿರುತ್ತೀರಿ. ನೀವು ಪ್ರಭಾರ ವಹಿಸಿಕೊಂಡ ಪ್ರಕರಣಗಳ ಪೈಕಿ ಮೊಕದ್ದಮೆ ಸಂಖ್ಯೆ : 10/2005 ಕಲಂ 468, 471 420, ಐ.ಪಿ.ಸಿ. ಪ್ರಕರಣದಲ್ಲಿ ತನಿಖೆ ಬಾಕಿ ಇದ್ದು, ಈ ಪ್ರಕರಣದ ವಿವರವನ್ನು ಅಪರಾಧ ಪುಸ್ತಕದಲ್ಲಿ ನಮೂದಿಸಬೇಕಾಗಿದ್ದು, ನಮೂದಿಸಿರುವುದಿಲ್ಲ ಹಾಗೂ ಈ ಪ್ರಕರಣದ ಮಾಲುಗಳ ವಿವರಗಳನ್ನು ಮುದ್ದೇಮಾಲು ಪುಸ್ತಕದಲ್ಲಿ ನಮೂದಿಸಬೇಕಾಗಿದ್ದು ನಮೂದಿಸಿರುವುದಿಲ್ಲ. ಈ ಪ್ರಕರಣದ ಪ್ರಭಾರವನ್ನು ದಿನಾಂಕ : 26-09-2006 ರಂದು ವಹಿಸಿಕೊಂಡಿದ್ದರೂ ಸಹ ಇಲ್ಲಿಯವರೆಗೆ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿರುವುದಿಲ್ಲ ಹಾಗೂ ಪ್ರಕರಣದ ಕಡತ ಕಾಣೆಯಾಗಲು ಕಾರಣರಾಗಿ ನಿಮ್ಮ ಕರ್ತವ್ಯದಲ್ಲಿ ತೀವ್ರ ನಿರ್ಲಕ್ಷತೆ, ಕರ್ತವ್ಯಲೋಪ ಎಸಗಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಪೊಲೀಸ್ ಆಯುಕ್ತರು, ಬೆಂಗಳೂರು ನಗರ, ಇವರು ಮೇಲೆ ಕ್ರಮ ಸಂಖ್ಯೆ : (1) ರಲ್ಲಿ ಓದಲಾದ ದಿನಾಂಕ : 17-03-2011 ರ ಆದೇಶದಲ್ಲಿ ಅರ್ಜಿದಾರರನ್ನು ಸೇವೆಯಿಂದ ವಜಾಗೊಳಿಸಲಾಗಿದೆ ದಿನಾಂಕ : 19-05-10 ರಿಂದ 03-09-2010 ರವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ., ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ : (2) ರಲ್ಲಿ ಓದಲಾದ ದಿನಾಂಕ : 18-08-2011ರ ಆದೇಶದಲ್ಲಿ ಶಿಸ್ತು ಪ್ರಾಧಿಕಾರದ ದಂಡನಾದೇಶವನ್ನು

ಭಾಗಶಃ ಮಾರ್ಪಡಿಸಿ ಅರ್ಜಿದಾರರನ್ನು ಕಡ್ಡಾಯ ನಿವೃತ್ತಿಗೊಳಿಸಲಾಗಿದೆ. ದಿನಾಂಕ : 19-5-10 ರಿಂದ 03-09-10ರ ವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಲಾಗಿದೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನು ಇಲಾಖಾ ವಿಚಾರಣೆ ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಸದರಿ ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಹೊಸ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ತೀವ್ರ ನಿರ್ಲಕ್ಷತೆ, ಕರ್ತವ್ಯಲೋಪ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಒಇ 109 ಪೊಸಿಅ 2011, ಬೆಂಗಳೂರು, ದಿನಾಂಕ: 3ನೇ ಮಾರ್ಚ್ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಡಿ ನಾಗರಾಜಯ್ಯ, ನಿವೃತ್ತ ಪಿ.ಎಸ್.ಐ., ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಠಾಣೆ, ಬೆಂಗಳೂರು ನಗರ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ.ಎನ್. ರವಿಪ್ರಕಾಶ್
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್.856

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಪ್ರಭು ಉಪ್ಪಿನ, ಪಿ.ಎಸ್.ಐ., ಬೀದರ್ ಗ್ರಾಮೀಣ ಪೊಲೀಸ್ ಠಾಣೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ

ಓದಲಾಗಿದೆ :
1) ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಅಧೀಕ್ಷಕರು ಬೀದರ್, ಇವರ ಆದೇಶ ಸಂಖ್ಯೆ: ಲಶಿ/37/ಬೀ/2009 (ಓ.ಬಿ. ಸಂಖ್ಯೆ : 1041/2009) ದಿನಾಂಕ : 01-12-09.
2) ಮೇಲ್ಮನವಿ ಪ್ರಾಧಿಕಾರ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಈಶಾನ್ಯ ವಲಯ, ಗುಲ್ಬರ್ಗಾ, ಇವರ ಆದೇಶ ಸಂಖ್ಯೆ : ಅಪೀಲು/07/ಈವ/2010 (ಓ.ಬಿ. ಸಂಖ್ಯೆ : 135/ಈವ/2010/947 ದಿನಾಂಕ : 03-03-10.
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ : 25-3-2010.
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು ಇವರ ಪತ್ರದ ಸಂಖ್ಯೆ : ಅಪೀಲು (2)/6/2010-11 ದಿನಾಂಕ : 16-6-2010

ಪ್ರಸ್ತಾವನೆ :

ಶ್ರೀ ಪ್ರಭು ಉಪ್ಪಿನ, ಪಿ.ಎಸ್.ಐ., ಬೀದರ್ ಗ್ರಾಮೀಣ ಪೊಲೀಸ್ ಠಾಣೆ, ಇವರು (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯಲೋಪ ಎಸಗಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 7 ರಡಿ ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿತ್ತು.

ದೋಷಾರೋಪಣೆ :

"ನೀವು ಶಹಬಾದ ಗ್ರಾಮೀಣ ಪೊಲೀಸ್ ಠಾಣೆಯ ಗು.ನಂ. 53/2005 ಕಲಂ 328 ಐ.ಪಿ.ಸಿ. ಮತ್ತು 32, 34 ಅಬಕಾರಿ ಕಾಯ್ದೆ ಪ್ರಕರಣದಲ್ಲಿ ಕ್ರಮಬದ್ಧವಾದ ತನಿಖೆ ಪೂರೈಸಲು ವಿಫಲರಾಗಿ ನ್ಯಾಯಾಲಯದಿಂದ ಕಟು ಟೀಕೆ ಜಾರಿಯಾಗಲು ಹೊಣೆಗಾರರಾಗಿರುತ್ತೀರಿ"

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಪೊಲೀಸ್ ಅಧೀಕ್ಷಕರು ಬೀದರ್, ಇವರು ಮೇಲೆ ಕ್ರಮ ಸಂಖ್ಯೆ : (1) ರಲ್ಲಿ ಓದಲಾದ ದಿನಾಂಕ : 01-12-2009 ರ ಆದೇಶದಲ್ಲಿ ಅರ್ಜಿದಾರರ ಒಂದು ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರದಂತೆ ಒಂದು ವರ್ಷ ಮುಂದೂಡುವ ದಂಡನೆಯನ್ನು ವಿಧಿಸಿದ್ದಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಈಶಾನ್ಯ ವಲಯ, ಗುಲ್ಬರ್ಗಾ, ಇವರು ಮೇಲೆ ಕ್ರಮ ಸಂಖ್ಯೆ : (2) ರಲ್ಲಿ ಓದಲಾದ ದಿನಾಂಕ : 03-03-10ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನು, ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಸದರಿ ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಹೊಸ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಕರ್ತವ್ಯಲೋಪ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವಾದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಒಇ 52 ಪೊಸಿಅ 2010, ಬೆಂಗಳೂರು, ದಿನಾಂಕ: 3ನೇ ಮಾರ್ಚ್ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಪ್ರಭು ಉಪ್ಪಿನ ಪಿ.ಎಸ್.ಐ., ಬೀದರ್ ಗ್ರಾಮೀಣ ಪೊಲೀಸ್ ಠಾಣೆ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ.ಎನ್. ರವಿಪ್ರಕಾಶ್
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್.857

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಹೆಚ್.ಜೆ. ಸೋಮಶೇಖರಯ್ಯ, ನಿವೃತ್ತ ಪಿ.ಎಸ್.ಐ. ನೆಲಮಂಗಲ ಪೊಲೀಸ್ ಠಾಣೆ, ಬೆಂಗಳೂರು ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :
1) ಶಿಸ್ತು ಪ್ರಾಧಿಕಾರ ಹಾಗೂ ಅಪರ ಪೊಲೀಸ್ ಆಯುಕ್ತರು (ಆಡಳಿತ) ಬೆಂಗಳೂರು ಇವರ ಆದೇಶ ಸಂಖ್ಯೆ: 85/ಡಿಇ.1/ಆರ್.6/2006 ದಿನಾಂಕ : 20–09–2010.
2) ಮೇಲ್ಮನವಿ ಪ್ರಾಧಿಕಾರ ಹಾಗೂ ಪೊಲೀಸ್ ಆಯುಕ್ತರು, ಬೆಂಗಳೂರು ನಗರ, ಇವರ ಆದೇಶ ಸಂಖ್ಯೆ : 72/ಅಪೀಲು–1/2010 ದಿನಾಂಕ : 04–12–2010.
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ 05–01–2011 ಮತ್ತು 09–12–2011.
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು ಇವರ ಪತ್ರ ಸಂಖ್ಯೆ : ಅಪೀಲು (2)/82/2010–11 ದಿನಾಂಕ : 16–3–2011.

ಪ್ರಸ್ತಾವನೆ :

ಶ್ರೀ ಹೆಚ್.ಜೆ. ಸೋಮಶೇಖರಯ್ಯ ಇವರು ಬೆಂಗಳೂರಿನ ಫ್ರೇಜರ್ ಟೌನ್ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ನಡತೆ ನಿಯಮಗಳನ್ನು ಉಲ್ಲಂಘಿಸಿ ನ್ಯಾಯಾಂಗ ಬಂಧನದಲ್ಲಿ ಇದ್ದು, ಇಲಾಖೆಯ ಶಿಸ್ತು ಘನತೆಗೆ ಧಕ್ಕೆ ಉಂಟು ಮಾಡಿರುವುದರಿಂದ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 6 ರಡಿ ಇಲಾಖಾ ವಿಚಾರಣೆ ಆದೇಶಿಸಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ :

ಶ್ರೀ ಹೆಚ್.ಜೆ. ಸೋಮಶೇಖರಯ್ಯ ಪಿ.ಎಸ್.ಐ. ಆದ ನೀವು ಫ್ರೇಜರ್ ಟೌನ್ ಪೊಲೀಸ್ ಠಾಣೆ ಬೆಂಗಳೂರು ನಗರ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ತಿರುವೆಂಕಟಸ್ವಾಮಿ ಗಾರ್ಡನ್, ಕದರಪ್ಪ ರಸ್ತೆ, 9ನೇ ಅಡ್ಡ ರಸ್ತೆ, ಕಾಕ್ಸ್ ಟೌನ್, ಬೆಂಗಳೂರು, ಇಲ್ಲಿ ವಾಸವಾಗಿರುವ ಶ್ರೀಮತಿ ಸುಶೀಲಮ್ಮ ಮತ್ತು ಶಾಂತಿಯವರಿಗೆ ಮನೆ ವಿಷಯದಲ್ಲಿ ಅಕ್ಟೋಬರ್ ತಿಂಗಳಲ್ಲಿ ಜಗಳವಾಗಿದ್ದು, ಈ ಸಂಬಂಧ ಶ್ರೀಮತಿ ಸುಶೀಲಮ್ಮ ರವರು ಫ್ರೇಜರ್ ಟೌನ್ ಪೊಲೀಸ್ ಠಾಣೆಗೆ ದೂರನ್ನು ಕೊಟ್ಟಿರುತ್ತಾರೆ. ಈ ಸಂಬಂಧ ನೀವು ಮೇಲ್ಕಂಡ ಪ್ರಕರಣದಲ್ಲಿ ಶ್ರೀಮತಿ ಶಾಂತಿಯವರಿಂದ ನಿಮಗೆ ಸಹಾಯ ಮಾಡುತ್ತೇವೆಂದು ತಿಳಿಸಿ ಅವರಿಂದ ರೂ. 3,000/– ಗಳನ್ನು ಕೊಡಬೇಕೆಂದು ಒತ್ತಾಯ ಮಾಡಿ ಅವರಿಂದ ದಿನಾಂಕ : 28–11–2006 ರಂದು ರೂ. 3,000/– ಗಳ ಅಕ್ರಮ ಸಂಭಾವನೆ ಪಡೆಯುವಾಗ ಲೋಕಾಯುಕ್ತ ಪೊಲೀಸರಿಗೆ ನೇರವಾಗಿ ಸಿಕ್ಕಿ ಬಿದ್ದಿರುತ್ತೀರಿ. ಈ ಸಂಬಂಧ ನಿಮ್ಮ ವಿರುದ್ಧ ಮಾನ್ಯ ಲೋಕಾಯುಕ್ತರವರು ಲಂಚ ನಿರೋಧ ಕಾಯ್ದೆ–1988ರ ಕಲಂ 7, 13(1) (ಡಿ) ಸಹವಾಚನ ಕಲಂ 13(2)ರ ಪ್ರಕಾರ ದಿನಾಂಕ : 28–11–2006 ರಂದು ಬೆಂಗಳೂರು ನಗರ ಲೋಕಾಯುಕ್ತ ಪೊಲೀಸ್ ಠಾಣೆಯ ಮೊ.ಸಂ. 46/2006 ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡಿರುತ್ತಾರೆ. ಈ ರೀತಿಯಾಗಿ ನೀವು ಶಿಸ್ತಿನ ಇಲಾಖೆಯ ಒಬ್ಬ ಜವಾಬ್ದಾರಿಯುತ ಅಧಿಕಾರಿಯಾಗಿ ಸರ್ಕಾರಿ ಅಧಿಕಾರಿ/ನೌಕರರಿಗೆ ಅನ್ವಯವಾಗುವಂತಹ ನಡತೆ ನಿಯಮವನ್ನು ಉಲ್ಲಂಘಿಸಿ ಒಂದು ಅಪರಾಧ ಪ್ರಕರಣದಲ್ಲಿ ಆರೋಪಿಯಾಗಿ ದಸ್ತಗಿರಿಗೆ ಒಳಪಟ್ಟು ನ್ಯಾಯಾಂಗ ಬಂಧನದಲ್ಲಿ ಇದ್ದಿದ್ದು ಮೇಲ್ನೋಟಕ್ಕೆ ಖಚಿತವಾಗಿರುತ್ತದೆ. ಈ ರೀತಿ ನೀವು ನಿಮ್ಮ ಸರ್ಕಾರಿ ಕರ್ತವ್ಯದಲ್ಲಿ ಕರ್ತವ್ಯಲೋಪ ಎಸಗಿದ್ದು ಇಲಾಖೆಯ ಶಿಸ್ತು ಘನತೆ ಮತ್ತು ಗೌರವಕ್ಕೆ ಧಕ್ಕೆ ಉಂಟು ಮಾಡಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಅಪರ ಪೊಲೀಸ್ ಆಯುಕ್ತರು (ಆಡಳಿತ) ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ : (1) ರಲ್ಲಿ ಓದಲಾದ ದಿನಾಂಕ : 20–09–2010ರ ಆದೇಶದಲ್ಲಿ ಅರ್ಜಿದಾರರನ್ನು ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸಲಾಗಿದೆ ದಿನಾಂಕ : 05–12–2006 ರಿಂದ 16–07–2007 ರವರೆಗಿನ ಅಮಾನತ್ತಿನ ಅವಧಿಯನ್ನು ಇವರು ಅಮಾನತ್ತಿನ ಅವಧಿಯಲ್ಲಿ ಪಡೆದ ಜೀವನಾಧಾರ ಭತ್ಯೆಗೆ ಸೀಮಿತಗೊಳಿಸಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಆಯುಕ್ತರು, ಬೆಂಗಳೂರು ನಗರ, ಇವರು ಮೇಲೆ ಕ್ರಮ ಸಂಖ್ಯೆ : (2) ರಲ್ಲಿ ಓದಲಾದ ದಿನಾಂಕ : 04–12–2010ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನು, ಇಲಾಖಾ ವಿಚಾರಣೆ ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಸದರಿ ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಹೊಸ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ನಡತೆ ನಿಯಮಗಳನ್ನು ಉಲ್ಲಂಘಿಸಿ ನ್ಯಾಯಾಂಗ ಬಂಧನದಲ್ಲಿದ್ದು ಇಲಾಖೆಯ ಶಿಸ್ತು, ಘನತೆಗೆ ಧಕ್ಕೆ ಉಂಟು ಮಾಡಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವಾದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ

ಸರ್ಕಾರದ ಆದೇಶ ಸಂಖ್ಯೆ : ಒಇ 4 ಪೊಸಿಅ 2011 ಬೆಂಗಳೂರು, ದಿನಾಂಕ: 3ನೇ ಮಾರ್ಚ್ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಹೆಚ್.ಜೆ. ಸೋಮಶೇಖರಯ್ಯ, ನಿವೃತ್ತ ಪಿ.ಎಸ್.ಐ., ನೆಲಮಂಗಲ ಪೊಲೀಸ್ ಠಾಣೆ, ಬೆಂಗಳೂರು ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಎನ್. ರವಿಪ್ರಕಾಶ್

ಪಿ.ಆರ್.858

ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಪಿ.ಓ. ಶಿವಕುಮಾರ್, ಪಿ.ಐ., ಚಿಕ್ಕಪೇಟೆ ಪೊಲೀಸ್ ಠಾಣೆ, ಬೆಂಗಳೂರು ಇವರ ಪರಿಷ್ಕರಣ ಮೇಲ್ಮನವಿ ಬಗ್ಗೆ ಅಂತಿಮ ಆದೇಶ.

ಓದಲಾಗಿದೆ: 1) ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಆಯುಕ್ತರು, ಬೆಂಗಳೂರು ನಗರ, ಇವರ ಆದೇಶ ಸಂಖ್ಯೆ: ಡಿಇ(2)/108/ಸಿಓಪಿ/ಆರ್-7/2010 ದಿನಾಂಕ: 02-11-2010.

2) ಮೇಲ್ಮನವಿ ಪ್ರಾಧಿಕಾರ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ., ಬೆಂಗಳೂರು, ಇವರ ಆದೇಶ ಸಂಖ್ಯೆ: ಸಿಬಿ(8)97/2010-11 ದಿನಾಂಕ: 10-03-2011

3) ಅರ್ಜಿದಾರರುಗಳ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ: 19-07-2011.

4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಸಿಬಿ(8)97/2010-11 ದಿನಾಂಕ: 07-10-2011.

5) ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ: ಪಿಎಸ್‌ಸಿ 181 ಸಿಎನ್‌ಎಸ್ 11 ದಿನಾಂಕ: 06-02-2012.

ಪ್ರಸ್ತಾವನೆ :

ಶ್ರೀ ಪಿ.ಓ. ಶಿವಕುಮಾರ್, ಪಿ.ಐ. ಇವರು ಬೆಂಗಳೂರಿನ ಚಿಕ್ಕಪೇಟೆ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಕರ್ತವ್ಯದಲ್ಲಿ ತೀವ್ರ ನಿರ್ಲಕ್ಷ್ಯತೆ, ಬೇಜವಾಬ್ದಾರಿತನ ಹಾಗೂ ಕರ್ತವ್ಯ ಲೋಪವೆಸಗಿರುವ ಕಾರಣದ ಮೇಲೆ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು, 1965 ರ ನಿಯಮ 7 ರಡಿ ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ:

"ಶ್ರೀ ಪಿ.ಓ. ಶಿವಕುಮಾರ್, ಪಿ.ಐ., ಆದ ನೀವು ಚಿಕ್ಕಪೇಟೆ ಪೊಲೀಸ್ ಠಾಣೆ, ಬೆಂಗಳೂರು ನಗರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ದಿನಾಂಕ: 08-9-2010 ರಂದು ಸಿ.ಸಿ.ಬಿ. ಘಟಕದ ಮಹಿಳೆ ಮತ್ತು ಮಾದಕ ದ್ರವ್ಯ ದಳದ ಅಧಿಕಾರಿಗಳು ನಿಮ್ಮ ಠಾಣಾ ಸರಹದ್ದಿನ ಚಿಕ್ಕಪೇಟೆ ಪಿ.ಎಸ್.ಲೇನ್ ನಂ. 35 ರಲ್ಲಿರುವ ರಾಮ್ ಟ್ರೇಡಿಂಗ್ ವಾಚ್ ಮುಂಭಾಗ ಸುರೇಶ್ ಭವರ್‌ಲಾಲ್ ಮತ್ತು ಪಹಡ್‌ಸಿಂಗ್ ರವರು ಅಕ್ರಮವಾಗಿ ಸಾರ್ವಜನಿಕರಿಗೆ ಮಾರಾಟ ಮಾಡಲು 960 ಗ್ರಾಂ ತೂಕದ ಅಫೀಮು ಅನ್ನು ಇಟ್ಟುಕೊಂಡಿದ್ದುದ್ದನ್ನು ಪತ್ತೆ ಮಾಡಿ, ಆಸಾಮಿಗಳನ್ನು ವಶಕ್ಕೆ ತೆಗೆದುಕೊಂಡು ನಿಮ್ಮ ಠಾಣೆಗೆ ಬಂದು ನೀಡಿದ ದೂರಿನ ಮೇರೆಗೆ ನಿಮ್ಮ ಠಾಣಾ ಮೊ.ಸಂ. 170/10 ಕಲಂ 17(ಬಿ) ಆಫ್ ಎನ್.ಡಿ.ಪಿ.ಎಸ್. ಆಕ್ಟ್ ರೀತ್ಯಾ ಪ್ರಕರಣ ದಾಖಲಾಗಿರುತ್ತದೆ. ನಿಮಗೆ ಹಲವಾರು ಬಾರಿ ನಿಮ್ಮ ಠಾಣಾ ಸರಹದ್ದಿನಲ್ಲಿ ನಡೆಯುತ್ತಿರುವ ಅಕ್ರಮ ದಂಧೆಗಳ ಹಾಗೂ ಚಟುವಟಿಕೆಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಕಾನೂನು ಕ್ರಮ ಕೈಗೊಳ್ಳುವಂತೆ ನಿಮ್ಮ ಮೇಲಧಿಕಾರಿಗಳು ಅಪರಾಧ ವಿಮರ್ಶಾ ಸಭೆಯಲ್ಲಿ ಸೂಚನೆ ನೀಡಿದ್ದರೂ ಸಹ ನೀವು ಪಾಲನೆ ಮಾಡಲು ಯಾವುದೇ ಆಸಕ್ತಿ ವಹಿಸದೇ ಇದ್ದುದರಿಂದ ಸಿ.ಸಿ.ಬಿ. ಘಟಕದ ಅಧಿಕಾರಿಗಳು ನಿಮ್ಮ ಠಾಣಾ ಸರಹದ್ದಿನಲ್ಲಿ ಅಕ್ರಮ ದಂಧೆಯನ್ನು ಪತ್ತೆ ಮಾಡಿರುತ್ತಾರೆ. ಈ ರೀತಿ ಒಬ್ಬ ಜವಾಬ್ದಾರಿಯುತ ಠಾಣಾಧಿಕಾರಿಯಾದ ನೀವು ಮೇಲಧಿಕಾರಿಗಳ ಸೂಚನೆಗಳನ್ನು ಪಾಲನೆ ಮಾಡಿ, ಅಕ್ರಮ ದಂಧೆ ಹಾಗು ಚಟುವಟಿಕೆಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಕಾನೂನು ಕ್ರಮ ಕೈಗೊಳ್ಳದೆ ನಿಮ್ಮ ಕರ್ತವ್ಯದಲ್ಲಿ ತೀವ್ರ ನಿರ್ಲಕ್ಷತೆ, ಬೇಜವಾಬ್ದಾರಿತನ ಹಾಗೂ ಕರ್ತವ್ಯಲೋಪವೆಸಗಿರುತ್ತೀರಿ."

ಆ.ಪೊ.ಅ. ರವರು ನೀಡಿದ ಸಮಜಾಯಿಷಿಯನ್ನು ಒಪ್ಪದ ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಆಯುಕ್ತರು, ಬೆಂಗಳೂರು ನಗರ, ಇವರು ಮೇಲೆ ಕ್ರಮ ಸಂಖ್ಯೆ: (1) ರಲ್ಲಿ ಓದಲಾದ ದಿನಾಂಕ: 02-11-2010ರ ಆದೇಶದಲ್ಲಿ ಇವರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವೇತನ ಬಡ್ತಿಗಳಿಗೆ ಧಕ್ಕೆಯಾಗದಂತೆ ಆರು ತಿಂಗಳ ಕಾಲ ಮುಂದೂಡುವ ದಂಡನೆಯನ್ನು ವಿಧಿಸಿದ್ದಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ., ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: 10-03-2011ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿಯನ್ನು ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಅರ್ಜಿದಾರರು ಈ ಪ್ರಕರಣದಲ್ಲಿ ನೇರವಾಗಿ ಭಾಗಿಯಾಗಿರುವುದಿಲ್ಲವೆಂದು ಕಂಡು ಬಂದಿರುವುದರಿಂದ ಶಿಸ್ತು ಪ್ರಾಧಿಕಾರದ ದಂಡನಾದೇಶವನ್ನು ಮಾರ್ಪಡಿಸುವ ಕುರಿತು ಓದಲಾದ (5)ರ ಪತ್ರದಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಪಡೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 81 ಪೊಸಿಅ 2011, ಬೆಂಗಳೂರು, ದಿನಾಂಕ: 23-02-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಕಾಯ್ದೆ 1963ರ ಕಲಂ (25)ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಪಿ.ಓ. ಶಿವಕುಮಾರ್, ಪಿ.ಐ., ಚಿಕ್ಕಪೇಟೆ ಪೊಲೀಸ್ ಠಾಣೆ, ಬೆಂಗಳೂರು, ಇವರಿಗೆ ದಿನಾಂಕ: 02-11-2010 ರ ಆದೇಶದಲ್ಲಿ ಶಿಸ್ತು ಪ್ರಾಧಿಕಾರವು ವಿಧಿಸಿದ ದಂಡನೆಯನ್ನು ಮಾರ್ಪಡಿಸಿ "ವಾಗ್ದಂಡನೆ" ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್. 859

ಒಳಾಡಳಿತ ಸಚಿವಾಲಯ

ವಿಷಯ : 2011–12ನೇ ಸಾಲಿನ ಪೊಲೀಸ್ ಆಧುನೀಕರಣ ಕ್ರಿಯಾ ಯೋಜನೆಯಡಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: 1) ಕೇಂದ್ರ ಸರ್ಕಾರದ ಪತ್ರ ಸಂಖ್ಯೆ:VI–21011/10/2011-PM-I, ದಿನಾಂಕ: 02–01–2012.

2) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರ ಪತ್ರ ಸಂಖ್ಯೆ:ಎಡಿಜಿಪಿ/ಸಿಎಲ್ಅಂಡ್ಎಂ/ಎಂಡಿಎನ್–1/2012, ದಿನಾಂಕ: 23/01/2012.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಪತ್ರದಲ್ಲಿ ಕೇಂದ್ರ ಸರ್ಕಾರವು 2011–12ನೇ ಸಾಲಿನ ಪೊಲೀಸ್ ಆಧುನೀಕರಣ ಯೋಜನೆಯಡಿ ಕೇಂದ್ರ ಸರ್ಕಾರದಿಂದ ಅನುಮೋದನೆಗೊಂಡ ಕ್ರಿಯಾ ಯೋಜನೆಯನ್ವಯ ವಿವಿಧ ಕಾರ್ಯಚಟುವಟಿಕೆಗಳಿಗೆ ಉಪಯೋಗಿಸಿಕೊಳ್ಳಲು ರೂ. 31,64,83,000/–ಗಳನ್ನು ಮಂಜೂರು ಮಾಡಿದೆ.

ಮೇಲೆ ಓದಲಾದ (2)ರ ದಿನಾಂಕ: 23/01/2012ರ ಪತ್ರದಲ್ಲಿ ಮನಿ ಮತ್ತು ಅಮನಿಯವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ, 2011–12ನೇ ಸಾಲಿನ ಪೊಲೀಸ್ ಆಧುನೀಕರಣ ಯೋಜನೆಯಡಿ ಕೇಂದ್ರ ಸರ್ಕಾರದಿಂದ ಅನುಮೋದನೆಗೊಂಡ ಕ್ರಿಯಾ ಯೋಜನೆಯನ್ವಯ ವಿವಿಧ ಕಾರ್ಯಚಟುವಟಿಕೆಗಳಿಗಾಗಿ ಉಪಯೋಗಿಸಿಕೊಳ್ಳಲು ಕೇಂದ್ರ ಸರ್ಕಾರವು ಮಂಜೂರು ಮಾಡಿರುವ ರೂ. 31,64,83,000/–ಗಳನ್ನು ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು ಇವರಿಗೆ ಬಿಡುಗಡೆ ಮಾಡಲು ಕೋರಿರುತ್ತಾರೆ.

ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 01 ಪಿಎಫ್ಎಸ್ 2012, ಬೆಂಗಳೂರು, ದಿನಾಂಕ: 06–03–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2011–12ನೇ ಸಾಲಿನ ಪೊಲೀಸ್ ಆಧುನೀಕರಣ ಯೋಜನೆಯಡಿ ಕೇಂದ್ರ ಸರ್ಕಾರದಿಂದ ಅನುಮೋದನೆಗೊಂಡ ಕ್ರಿಯಾ ಯೋಜನೆಯನ್ವಯ ವಿವಿಧ ಕಾರ್ಯಚಟುವಟಿಕೆಗಳಿಗಾಗಿ ಉಪಯೋಗಿಸಿಕೊಳ್ಳಲು ರೂ. 31,64,83,000/– (ಮುವತ್ತೊಂದು ಕೋಟಿ ಅರವತ್ನಾಲ್ಕು ಲಕ್ಷದ ಎಂಬತ್ಮೂರು ಸಾವಿರ ರೂಪಾಯಿಗಳು ಮಾತ್ರ) 2011–12ನೇ ಸಾಲಿನ ಲೆಕ್ಕ ಶೀರ್ಷಿಕೆ 2055–00–115–0–00–125 ಯೋಜನೇತರ ಅಡಿಯಲ್ಲಿ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 64 ವೆಚ್ಚ–11/12, ದಿನಾಂಕ: 01/03/2012ರಲ್ಲಿ ನೀಡಿದ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ರಾಜಮ್ಮ

ಪಿ.ಆರ್. 860 ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಪೊಲೀಸ್ ವೆಚ್ಚ)

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಯಾದಗಿರಿ ಜಿಲ್ಲೆಯ ಜಿಲ್ಲಾ ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನೇಮಿಸುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: ಯೋಇ:309:ಪಿಟಿಪಿ/94, ದಿನಾಂಕ: 07–08–1995

2. ಭಾರತೀಯ ಜನತಾ ಪಾರ್ಟಿ ರಾಜ್ಯ ಉಪಾಧ್ಯಕ್ಷರು ಪತ್ರ ಸಂಖ್ಯೆ:ರಾಕಾ/ಸಾನಿ/202/2012 ದಿನಾಂಕ: 08/02/2012

ಪ್ರಸ್ತಾವನೆ :

ಮೇಲೆ ಓದಲಾದ (1)ರ ಆದೇಶದಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಮಟ್ಟದ/ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗಳನ್ನು ರಚಿಸಲಾಗಿರುತ್ತದೆ. ಮೇಲೆ ಓದಲಾದ(2)ರ ಭಾರತಿಯ ಜನತಾ ಪಾರ್ಟಿಯ ರಾಜ್ಯ ಉಪಾಧ್ಯಕ್ಷರು ಸೂಚಿಸಿರುವ ಸದಸ್ಯರುಗಳನ್ನು ಮಾನ್ಯ ಮುಖ್ಯಮಂತ್ರಿಯವರು ಅನುಮೋದಿಸಿರುವಂತೆ ಯಾದಗಿರಿ ಜಿಲ್ಲೆಯ ಜಿಲ್ಲಾ ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಲು ಸರ್ಕಾರ ತೀರ್ಮಾನಿಸಿ ಈ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಯೋಇ 89 ಯೋವಿವಿ 2011, ಬೆಂಗಳೂರು, ದಿನಾಂಕ: 07ನೇ ಮಾರ್ಚ್ 2012

ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಯಾದಗಿರಿ ಜಿಲ್ಲೆಯ ಜಿಲ್ಲಾ ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಈ ಹಿಂದೆ ಹೊರಡಿಸಲಾದ ಆದೇಶವನ್ನು ರದ್ದುಪಡಿಸಿ ಈ ಕೆಳಕಂಡ ಐದು ಅಧಿಕಾರೇತರ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಲಾಗಿದೆ.

ಯಾದಗಿರಿ ಜಿಲ್ಲೆ, ಜಿಲ್ಲಾ ಕೆ.ಡಿ.ಪಿ.ಗೆ

ಕ್ರ.ಸಂ.	ಹೆಸರು	ವರ್ಗ
1.	ಶ್ರೀಮತಿ ಇಂದಿರಾ ಕೋಂ, ಮಲ್ಲಿಕಾರ್ಜುನ, ಚೆಲ್ಲಾಳ, ಅಂಚೆ:ಸಾಳೇರ ಓಣಿ, ಶಹಪೂರ, ಯಾದಗಿರಿಜಿಲ್ಲೆ	ಮಹಿಳೆ
2.	ಶ್ರೀ ನಾಗರಾಜ ಬಿನ್ ಹುಸೇನಪ್ಪ, ಈಟೇಕರ, ಸ್ವಾಮಿ ವಿವೇಕಾನಂದನಗರ, ಯಾದಗಿರಿ, ಯಾದಗಿರಿ ಜಿಲ್ಲೆ	ಎಸ್.ಸಿ.

3	ಶ್ರೀ ಮಲ್ಲಿಕಾರ್ಜುನ ಗುಳ್ಳೇದ, ಅಂಚೆ:ಯರಗೋಳ ಯಾದಗಿರಿ ತಾಲ್ಲೂಕು, ಯಾದಗಿರಿ ಜಿಲ್ಲೆ	ಹಿಂ.ವರ್ಗ
4.	ಶ್ರೀ ವೆಂಕಟರೆಡ್ಡಿ ತುಮಕೂರ ಬಿನ್ ಬಸಣ್ಣ, ಮನೆ ನಂ. 5–1–239/19, ಪ್ಲಾಟ್ ನಂ. 27, 'ವಿಶ್ವರಾಧ್ಯ ನಿಲಯ', ಲಕ್ಷ್ಮೀನಗರ, ಯಾದಗಿರಿ ತಾಲ್ಲೂಕು, ಯಾದಗಿರಿ ಜಿಲ್ಲೆ	ಸಾಮಾನ್ಯ
5.	ಶ್ರೀ ಮಹಮ್ಮದ ಸಲೀಂ ಬಿನ್ ಬಡೇಸಾಬ ವರ್ತಿ, ಕಟಗರ ಗಲ್ಲಿ, ಸುರುಪುರ ಅಂಚೆ, ಯಾದಗಿರಿ ಜಿಲ್ಲೆ	ಅ.ಸಂ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಜಿ. ಮುಳಕೂರ

ಸರ್ಕಾರದ ಅಧೀನ ಕಾರ್ಯದರ್ಶಿ 1 & 2

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

ಪಿ.ಆರ್. 861

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಶಿವಮೊಗ್ಗ ಜಿಲ್ಲೆಯ ಜಿಲ್ಲಾ ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನೇಮಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಯೋಇ:309:ಪಿಟಿಪಿ/94, ದಿನಾಂಕ: 07–08–1995
2. ಅಧ್ಯಕ್ಷರು, ಭಾರತೀಯ ಜನತಾ ಪಾರ್ಟಿ, ಬೆಂಗಳೂರು ಇವರ ಪತ್ರ ಸಂಖ್ಯೆ/ ರಾಕಾ/ನಾನಿ/1021/2011, ದಿನಾಂಕ: 30/12/2011

ಪ್ರಸ್ತಾವನೆ :

ಮೇಲೆ ಓದಲಾದ (1)ರ ಆದೇಶದಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಮಟ್ಟದ/ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗಳನ್ನು ರಚಿಸಲಾಗಿರುತ್ತದೆ. ಮೇಲೆ ಓದಲಾದ(2)ರ ಪತ್ರದಲ್ಲಿ ಅಧ್ಯಕ್ಷರು, ಭಾರತೀಯ ಜನತಾ ಪಾರ್ಟಿ, ಬೆಂಗಳೂರು ಇವರು ಸೂಚಿಸಿರುವ ಸದಸ್ಯರುಗಳನ್ನು ಮಾನ್ಯ ಯೋಜನಾ ಸಚಿವರ ಶಿಫಾರಸ್ಸಿನಂತೆ ಮಾನ್ಯ ಮುಖ್ಯಮಂತ್ರಿಯವರು ಅನುಮೋದಿಸಿರುವ ಮೇರೆಗೆ ಶಿವಮೊಗ್ಗ ಜಿಲ್ಲೆಯ ಜಿಲ್ಲಾ ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಲು ಸರ್ಕಾರ ತೀರ್ಮಾನಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಯೋಇ 68 ಯೋವಿವಿ 2009(ಭಾ) ಬೆಂಗಳೂರು, ದಿನಾಂಕ: 05 ಮಾರ್ಚ್, 2012

ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಶಿವಮೊಗ್ಗ ಜಿಲ್ಲೆಯ ಜಿಲ್ಲಾ ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಈ ಹಿಂದೆ ನಾಮನಿರ್ದೇಶನ ಮಾಡಿ ಹೊರಡಿಸಲಾದ ಆದೇಶವನ್ನು ರದ್ದುಪಡಿಸಿ ಈ ಕೆಳಕಂಡ ಐವರನ್ನು ಅಧಿಕಾರೇತರ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಲಾಗಿದೆ.

ಶಿವಮೊಗ್ಗ ಜಿಲ್ಲೆ, ಜಿಲ್ಲಾ ಕೆ.ಡಿ.ಪಿ.ಗೆ

ಕ್ರ.ಸಂ.	ಹೆಸರು	ವರ್ಗ
1.	ಶ್ರೀಮತಿ ನಿರ್ಮಲ ಕೋಂ ಗಣೇಶ್, ಪೇಟೆ ಬೀದಿ, ಹೊಳೆಹೊನ್ನೂರು, ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ	ಮಹಿಳೆ
2.	ಶ್ರೀ ಹಾಲೇಶ್ ನಾಯ್ಕ್, ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಕಲ್ಲನಹಳ್ಳಿ ಕೂಡ್ಲಿಗೆರೆ ಅಂಚೆ, ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ	ಎಸ್.ಸಿ.
3	ಶ್ರೀ ಕೆ.ಎಸ್. ಗುರುಮೂರ್ತಿ, ಮಾಳೇರಕೇರಿ, ಶಿಕಾರಿಪುರ ಟೌನ್, ಶಿವಮೊಗ್ಗ ಜಿಲ್ಲೆ	ಸಾಮಾನ್ಯ
4.	ಶ್ರೀ ಅಶೋಕ್ ಬಿನ್ ನೇಮಣ್ಣ, ಬಿದರಮನೆ ಅರಗ ಅಂಚೆ, ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ	ಬಿ.ಸಿ.ಎಂ
5.	ಶ್ರೀ ಮಂಜಯ್ಯ ಜೈನ್ ಬಿನ್ ಚಂಡಯ್ಯ ಜೈನ್, ಸಂಸೆ, ಚದರವಳ್ಳಿ ಅಂಚೆ, ಸಾಗರ ತಾ: ಶಿವಮೊಗ್ಗ ಜಿಲ್ಲೆ	ಅ.ಸಂ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಜಿ. ಮುಳಕೂರ

ಸರ್ಕಾರದ ಅಧೀನ ಕಾರ್ಯದರ್ಶಿ 1 & 2

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

ಪಿ.ಆರ್. 862

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನ ಗೊಳಿಸಲು ಚಿಕ್ಕಮಗಳೂರು ಜಿಲ್ಲೆಯ ಜಿಲ್ಲಾ ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನೇಮಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಯೋಇ:309:ಪಿಟಿಪಿ/94, ದಿನಾಂಕ: 07-08-1995
2. ಅಧ್ಯಕ್ಷರು, ಭಾರತೀಯ ಜನತಾ ಪಾರ್ಟಿ, ಬೆಂಗಳೂರು ಇವರ ಪತ್ರ ಸಂಖ್ಯೆ/ ರಾಕಾ/ನಾನಿ/1009/2011, ದಿನಾಂಕ: 29/12/2011

ಪ್ರಸ್ತಾವನೆ :

ಮೇಲೆ ಓದಲಾದ (1)ರ ಆದೇಶದಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಮಟ್ಟದ/ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗಳನ್ನು ರಚಿಸಲಾಗಿರುತ್ತದೆ. ಮೇಲೆ ಓದಲಾದ(2)ರ ಪತ್ರದಲ್ಲಿ ಅಧ್ಯಕ್ಷರು, ಭಾರತೀಯ ಜನತಾ ಪಾರ್ಟಿ, ಬೆಂಗಳೂರು ಇವರು ಸೂಚಿಸಿರುವ ಸದಸ್ಯರುಗಳನ್ನು ಮಾನ್ಯ ಯೋಜನಾ ಸಚಿವರ ಶಿಫಾರಸ್ಸಿನಂತೆ ಮಾನ್ಯ ಮುಖ್ಯಮಂತ್ರಿಯವರು ಅನುಮೋದಿಸಿರುವ ಮೇರೆಗೆ ಚಿಕ್ಕಮಗಳೂರು ಜಿಲ್ಲೆಯ ಜಿಲ್ಲಾ ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಲು ಸರ್ಕಾರ ತೀರ್ಮಾನಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಯೋಇ 118 ಯೋಎವಿ 2012 ಬೆಂಗಳೂರು, ದಿನಾಂಕ: 06ನೇ ಮಾರ್ಚ್, 2012

ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಚಿಕ್ಕಮಗಳೂರು ಜಿಲ್ಲೆಯ ಜಿಲ್ಲಾ ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಹಿಂದೆ ಹೊರಡಿಸಲಾದ ಆದೇಶವನ್ನು ರದ್ದುಪಡಿಸಿ ಈ ಕೆಳಕಂಡ ಐದು ಅಧಿಕಾರೇತರ ಸದಸ್ಯರನ್ನು ನಾಮ ನಿರ್ದೇಶನ ಮಾಡಲಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಜಿಲ್ಲಾ ಮಟ್ಟದ

ಕ್ರ.ಸಂ.	ಹೆಸರು	ವರ್ಗ
1	ಶ್ರೀ ಧನಪಾಲ್, ರಂಗೇನಹಳ್ಳಿ ಅಂಚೆ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ	ಎಸ್.ಸಿ
2.	ಶ್ರೀ ಅಶೋಕ್ ಬಿನ್ ಗಂಗಾಧರಪ್ಪ ವಡೇರಹಳ್ಳಿ, ಚೌಳ ಹಿರಿಯೂರು ಅಂಚೆ, ಕಡೂರು ತಾ ಚಿಕ್ಕಮಗಳೂರು ಜಿಲ್ಲೆ	ಹಿಂ.ವ.
3	ಶ್ರೀ ಗೌತಮ್ ಚಂದ್, ಜವಳಿ ವ್ಯಾಪಾರಿಗಳು ಎಂ.ಜಿ. ರಸ್ತೆ, ಚಿಕ್ಕಮಗಳೂರು	ಅ.ಸಂ.
4.	ಶ್ರೀಮತಿ ಸೌಮ್ಯ ಕಾರಂತ್ ಯರಂಜಾಳು, ಹೊನ್ನವಳ್ಳಿ ಅಂಚೆ, ಶೃಂಗೇರಿ ತಾ: ಚಿಕ್ಕಮಗಳೂರು ಜಿಲ್ಲೆ	ಮಹಿಳೆ
5.	ಶ್ರೀ ಪ್ರಮೋದ್ ದುಂಡುಗ, ದುಂಡುಗ ಅಂಚೆ ಮೂಡಿಗೆರೆ ತಾ: ಚಿಕ್ಕಮಗಳೂರು ಜಿಲ್ಲೆ	ಸಾಮಾನ್ಯ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಜಿ. ಮುಳಕೂರ

ಸರ್ಕಾರದ ಅಧೀನ ಕಾರ್ಯದರ್ಶಿ 1 & 2

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

ಪಿ.ಆರ್. 863

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನ ಗೊಳಿಸಲು ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನೇಮಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ಯೋಇ:309:ಪಿಟಿಪಿ/94, ದಿನಾಂಕ: 07-08-1995
2. ಅಧ್ಯಕ್ಷರು, ಭಾರತೀಯ ಜನತಾ ಪಾರ್ಟಿ, ಬೆಂಗಳೂರು ಇವರ ಪತ್ರ ಸಂಖ್ಯೆ/ ರಾಕಾ/ನಾನಿ/1033/2012, ದಿನಾಂಕ: 03/1/2012

ಪ್ರಸ್ತಾವನೆ :

ಮೇಲೆ ಓದಲಾದ (1)ರ ಆದೇಶದಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಮಟ್ಟದ/ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗಳನ್ನು ರಚಿಸಲಾಗಿರುತ್ತದೆ. ಮೇಲೆ ಓದಲಾದ(2)ರ ಪತ್ರದಲ್ಲಿ ಅಧ್ಯಕ್ಷರು, ಭಾರತೀಯ ಜನತಾ ಪಾರ್ಟಿ, ಬೆಂಗಳೂರು ಇವರು ಸೂಚಿಸಿರುವ ಸದಸ್ಯರುಗಳನ್ನು ಮಾನ್ಯ ಯೋಜನಾ ಸಚಿವರ ಶಿಫಾರಸ್ಸಿನಂತೆ ಮಾನ್ಯ ಮುಖ್ಯಮಂತ್ರಿಯವರು ಅನುಮೋದಿಸಿರುವ ಮೇರೆಗೆ ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕು ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಅಧಿಕಾರೇತರ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಲು ಸರ್ಕಾರ ತೀರ್ಮಾನಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಯೋಇ 19 ಯೋವಿವಿ 2012 ಬೆಂಗಳೂರು, ದಿನಾಂಕ: 05ನೇ ಮಾರ್ಚ್, 2012

ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗೆ ಈ ಹಿಂದೆ ಹೊರಡಿಸಲಾದ ಆದೇಶವನ್ನು ರದ್ದುಪಡಿಸಿ ಈ ಕೆಳಕಂಡ ಆರು ಜನರನ್ನು ಅಧಿಕಾರೇತರ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಲಾಗಿದೆ.

ತುಮಕೂರು ಜಿಲ್ಲೆ, ಮಧುಗಿರಿ ತಾಲ್ಲೂಕು

ಕ್ರ.ಸಂ.	ಹೆಸರು	ವರ್ಗ
1	ಶ್ರೀ ಪದ್ಮಣ್ಣ ಬಿನ್ ಲೇ:ವೀರನಾಗಪ್ಪ, ಅಂಗಡಿ ಮಲ್ಲನಹಳ್ಳಿ, ಹನುಮನಹಳ್ಳಿ ಅಂಚೆ, ದೊಡ್ಡೇರಿ ಹೋಬಳಿ, ಮಧುಗಿರಿ ತಾ: ತುಮಕೂರು ಜಿಲ್ಲೆ	ಸಾಮಾನ್ಯ
2.	ಶ್ರೀ ಎಂ.ಆರ್. ಲಕ್ಷ್ಮೀನರಸಪ್ಪ ಬಿನ್ ದಾಸರಂಗಪ್ಪ, ಮಾರುತಿ ನಗರ ಬಡಾವಣೆ, ಮಿಡಿಗೇಶಿ, ಮಧುಗಿರಿ ತಾ: ತುಮಕೂರು ಜಿಲ್ಲೆ	ಸಾಮಾನ್ಯ
3	ಶ್ರೀ ರಾಮಣ್ಣ ಬಿನ್ ಗೋವಿಂದಪ್ಪ, ಕಮ್ಮನಕೋಟೆ, ಚಿನಕವಜ್ರ ಅಂಚೆ, ಕಸಬಾ ಹೋಬಳಿ, ಮಧುಗಿರಿ ತಾ: ತುಮಕೂರು ಜಿಲ್ಲೆ	ಬಿ.ಸಿ.ಎಂ
4.	ಶ್ರೀಮತಿ ಭಾಗಮ್ಮ ಕೋಂ ಎನ್ ನರಸಿಂಹಯ್ಯ (ಕಾಕಿನಾಡ) 4ನೇ ಬ್ಲಾಕ್, ಕೊಡಿಗೇನಗಳ್ಳಿ, ಮಧುಗಿರಿ ತಾ: ತುಮಕೂರು ಜಿಲ್ಲೆ	ಮಹಿಳೆ
5.	ಶ್ರೀ ಬಾಲರಾಜು, ಕೋಡ್ಲಾಪುರ ಮತ್ತು ಅಂಚೆ, ಪುರವರ ಹೋಬಳಿ, ಮಧುಗಿರಿ ತಾ: ತುಮಕೂರು ಜಿಲ್ಲೆ.	ಪ.ಪಂ
6.	ಶ್ರೀ ಸೈಯದ್ ಹುಸೇನ್ ಶರೀಫ್ ಬಿನ್ ಫಕ್ರದ್ದೀನ್ ಸಾಬ್, ಶಂಬೋನಹಳ್ಳಿ, ಗಂಜನಗುಂಟೆ ಅಂಚೆ, ಕಸಬಾ ಹೋಬಳಿ, ಮಧುಗಿರಿ ತಾ: ತುಮಕೂರು ಜಿಲ್ಲೆ	ಅ.ಸಂ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಜಿ. ಮುಳಕೂರ್

ಪಿ.ಆರ್. 864

ಸರ್ಕಾರದ ಅಧೀನ ಕಾರ್ಯದರ್ಶಿ 1 & 2

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಕರ್ನಾಟಕ ನಾಗರೀಕ ಸೇವೆಗಳ ಖಾತರಿ ಅಧಿನಿಯಮ 2011ನ್ನು ಅನುಷ್ಠಾನಗೊಳಿಸಲು ಮಿಷನ್ ಮೋಡ್‌ನಲ್ಲಿ **ಸಕಾಲ ಮಂಡಳಿ** ರಚಿಸುವ ಕುರಿತು.

ಓದಲಾಗಿದೆ:
1) ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 39 ಶಾಸನ 2011, ದಿನಾಂಕ: 02/01/2012.
2) ಅಧಿಸೂಚನೆ ಸಂಖ್ಯೆ: ಸಿಆಸುಇ 04 ಇಕಾಅ 2012, ದಿನಾಂಕ: 14/02/2012.
3) ಅಧಿಸೂಚನೆ ಸಂಖ್ಯೆ: ಸಿಆಸುಇ 28 ಇಕಾಅ 2012, ದಿನಾಂಕ: 27/02/2012.
4) ಅಧಿಸೂಚನೆ ಸಂಖ್ಯೆ: ಸಿಆಸುಇ 04 ಇಕಾಅ 2012, ದಿನಾಂಕ: 01/03/2012
5) ಕಡತ ಸಂಖ್ಯೆ: ಸಿಆಸುಇ 20 ಇಕಾಅ 2012.

ಪ್ರಸ್ತಾವನೆ :

11 ಇಲಾಖೆಗಳ ಮುಖಾಂತರ 151 ಕಾಲಮಿತಿ ಸೇವೆಯನ್ನು ನಾಗರೀಕರಿಗೆ ಒದಗಿಸಲು ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ಅಧಿನಿಯಮ, 2011 ವನ್ನು ರಾಜ್ಯ ಶಾಸನ ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು. ಸಾರ್ವಜನಿಕರಿಗೆ ಸರ್ಕಾರಿ ಅಧಿಕಾರಿಗಳ ಹೊಣೆಗಾರಿಕೆಯನ್ನು ಖಾತರಿಪಡಿಸುವ ಮೂಲಕ ಸುಧಾರಿತ ಸೇವೆಯನ್ನು ನೀಡುವುದು ಈ ಅಧಿನಿಯಮದ ಗುರಿಯಾಗಿದೆ. ಇದು ಆಡಳಿತದಲ್ಲಿ ಹೆಚ್ಚಿನ ಪಾರದರ್ಶಕತೆ ಹಾಗೂ ದಕ್ಷತೆಯನ್ನು ತರುವುದಲ್ಲದೇ ದೊಡ್ಡ ಪ್ರಮಾಣದಲ್ಲಿ ಸಾರ್ವಜನಿಕ ಕುಂದುಕೊರತೆ ಹಾಗೂ ಭ್ರಷ್ಟ ಪದ್ಧತಿಗಳನ್ನು ಕಡಿಮೆ ಮಾಡುತ್ತದೆ.

ಮೇಲೆ ಓದಲಾದ ಉಲ್ಲೇಖ (1)ರ ದಿನಾಂಕ: 02/01/2012ರ ಅಧಿಸೂಚನೆಯಲ್ಲಿ ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ಅಧಿನಿಯಮದ ಮಸೂದೆಯನ್ನು ಕರ್ನಾಟಕ ರಾಜ್ಯ ವಿಶೇಷ ಪತ್ರಿಕೆಯಲ್ಲಿ ಭಾಗ-4ಎ ಯಲ್ಲಿ ಪ್ರಕಟಿಸಲಾಗಿದೆ.

ಮೇಲೆ ಓದಲಾದ ಉಲ್ಲೇಖ (2)ರ ದಿನಾಂಕ: 14/02/2012ರ ಅಧಿಸೂಚನೆಯಲ್ಲಿ ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ಕರಡು ನಿಯಮಗಳ ಬಗ್ಗೆ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಿ 15 ದಿನಗಳ ಕಾಲಾವಕಾಶ ನೀಡಿ ಕರ್ನಾಟಕ ರಾಜ್ಯ ವಿಶೇಷ ಪತ್ರಿಕೆಯಲ್ಲಿ ಪ್ರಕಟಿಸಲಾಗಿತ್ತು.

ಮೇಲೆ ಓದಲಾದ ಉಲ್ಲೇಖ (4)ರ ಅಧಿಸೂಚನೆಯಲ್ಲಿ ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ನಿಯಮಗಳು 2012ನ್ನು ಕರ್ನಾಟಕ ರಾಜ್ಯ ವಿಶೇಷ ಪತ್ರಿಕೆಯ ಭಾಗ-4ಎ ನಲ್ಲಿ ದಿನಾಂಕ: 01/03/2012 ರಂದು ಪ್ರಕಟಿಸಿ ಜಾರಿಗೊಳಿಸಲಾಗಿದೆ.

ಮೇಲೆ ಓದಲಾದ ಉಲ್ಲೇಖ (3)ರ ಅಧಿಸೂಚನೆಯಲ್ಲಿ ರಾಜ್ಯ ಸರ್ಕಾರವು ಪೈಲೆಟ್ ಲಾಂಚ್ ಮಾಡಿದ ಧಾರವಾಡ ಜಿಲ್ಲೆಯ ಧಾರವಾಡ ತಾಲ್ಲೂಕು, ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕು, ಚಿತ್ರದುರ್ಗ ಜಿಲ್ಲೆಯ ಚಿತ್ರದುರ್ಗ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಹಾಯಕ ಕಂದಾಯ ಅಧಿಕಾರಿಗಳ ಕಛೇರಿ, ಬೆಂಗಳೂರು ಇವುಗಳಿಗೆ ಸಂಬಂಧಿಸಿದಂತೆ ಕರ್ನಾಟಕ ನಾಗರೀಕ ಸೇವೆಗಳ ಖಾತರಿ ಅಧಿನಿಯಮ 2011ನ್ನು ದಿನಾಂಕ: 01/03/2012 ರಿಂದ ಜಾರಿಗೆ ತರಲಾಗಿದೆ.

ನಾಗರೀಕರಿಗೆ ಕಾಲಮಿತಿಯೊಳಗೆ ಸೇವೆಯನ್ನು ನೀಡುವುದು ಕಾರ್ಯಕ್ರಮದಲ್ಲಿ ಸೇರಿಸಿಕೊಳ್ಳಲಾಗಿರುವಂತೆ, ಒಂದು ಕೇಂದ್ರೀಕೃತ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯು ಅತ್ಯಂತ ಅವಶ್ಯಕವಾಗಿದ್ದು ಈ ಕಾರ್ಯವನ್ನು ರಾಷ್ಟ್ರೀಯ ಮಾಹಿತಿ ಕೇಂದ್ರ, ನವದೆಹಲಿ ಇವರಿಗೆ ವಹಿಸಲಾಗಿದೆ. ಈಗಾಗಲೇ ಬಹುತೇಕ ಇಲಾಖೆಗಳು ಮಾಹಿತಿ ತಂತ್ರಜ್ಞಾನದ ಮೂಲಭೂತ ಸೌಲಭ್ಯ ಹಾಗೂ ತಂತ್ರಾಂಶಗಳನ್ನು ಹೊಂದಿರುತ್ತದೆ. ಉಳಿದ ಇಲಾಖೆಗಳಿಗೆ ಗಣಕಯಂತ್ರಗಳು ಹಾಗೂ ತರಬೇತಿಯನ್ನು ನೀಡಬೇಕಾಗಿದೆ. ಉದಾ: ಆಯುಷ್ ಇಲಾಖೆ, ಕಾರ್ಮಿಕ ಇಲಾಖೆ ಇತ್ಯಾದಿ. (www.kgsc.nic.in)

ಈ ಅಧಿಸೂಚನೆಯಡಿ ವಿವಿಧ ಸೇವೆಗಳಿಗೆ ನಾಗರೀಕರು ಅರ್ಜಿಯನ್ನು ಸಲ್ಲಿಸುವ ಬಗ್ಗೆ ಪ್ರಶ್ನೆಗಳನ್ನು ಹಾಗೂ ಅವರ ಅರ್ಜಿಗಳ ಸ್ಥಿತಿಗತಿಗಳ ಬಗ್ಗೆ ವಿಚಾರಣೆಗೆ ಸಂಬಂಧಿಸಿದಂತೆ ಕಾರ್ಯ ನಿರ್ವಹಿಸಲು ಒಂದು ಕರೆ ಕೇಂದ್ರವನ್ನು ಯು.ಐ.ಡಿ. ಕರೆ ಕೇಂದ್ರಗಳ ಮಾದರಿಯಲ್ಲಿ ಇ-ಆಡಳಿತ ಇಲಾಖೆಯಿಂದ ಸ್ಥಾಪಿಸಲಾಗಿದೆ. ದೂರವಾಣಿ ಸಂಖ್ಯೆ: 44554455 ಮತ್ತು ವೆಬ್ ವಿಳಾಸ: kgsc@nic.in

ರಾಜ್ಯದ ಜನತೆಗೆ ಈ ಕಾಯ್ದೆಯ ನಿಬಂಧನೆಗಳ ಬಗ್ಗೆ ಸೂಕ್ತ ಮಾಹಿತಿಯನ್ನು ಒದಗಿಸುವ ಸಂಬಂಧ ವಿವಿಧ ಮಾಧ್ಯಮಗಳ ಮೂಲಕ ನಾಗರೀಕರಲ್ಲಿ ಜಾಗೃತಿ ಹೆಚ್ಚಿಸುವ ಸಲುವಾಗಿ ಸೂಕ್ತ ಕ್ರಮ ತೆಗೆದುಕೊಳ್ಳುವ ಜವಾಬ್ದಾರಿಯನ್ನು ವಾರ್ತಾ ಮತ್ತು ಪ್ರಚಾರ ಇಲಾಖೆಗೆ ವಹಿಸಲಾಗಿದೆ.

ಅದೇ ರೀತಿ ಎಲ್ಲಾ 11 ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಪೈಲಟ್ ಲಾಂಚಿನ ಸಂಬಂಧ ಬೆಂಗಳೂರಿನಲ್ಲಿ ದಿನಾಂಕ 13 ರಿಂದ 16ನೇ ಫೆಬ್ರವರಿ 2012ರಂದು ತರಬೇತಿ ನೀಡಲಾಗಿದೆ. ಪೈಲಟ್ ಲಾಂಚಿಗೆ ಆಯ್ಕೆಯಾಗಿರುವ ನಾಲ್ಕು ಜಿಲ್ಲೆಗಳಾದ ಧಾರವಾಡ, ಚಿತ್ರದುರ್ಗ, ಬೀದರ್ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಮೈಸೂರಿನ ಆಡಳಿತ ತರಬೇತಿ ಸಂಸ್ಥೆ ಮತ್ತು ಜಿಲ್ಲಾ ತರಬೇತಿ ಸಂಸ್ಥೆಗಳ ಮುಖಾಂತರ ದಿನಾಂಕ 16-02-2012ರಿಂದ 25-02-2012ರವರೆಗೆ ತರಬೇತಿಯನ್ನು ಆಯೋಜಿಸಲಾಗಿತ್ತು. ಸದ್ಯದಲ್ಲೆ ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ಅಧಿನಿಯಮ, 2011ವನ್ನು ರಾಜ್ಯಾದ್ಯಂತ ಜಾರಿಮಾಡಲಿದ್ದು, ಈ ಸಂಬಂಧ ಎಲ್ಲಾ ಜಿಲ್ಲೆಗಳ 11 ಇಲಾಖೆಗಳ ಅಧಿಕಾರಿ/ಸಿಬ್ಬಂದಿಗಳಿಗೆ ತರಬೇತಿಯನ್ನು ಮೈಸೂರಿನ ಆಡಳಿತ ತರಬೇತಿ ಸಂಸ್ಥೆ ಮತ್ತು ಜಿಲ್ಲಾ ತರಬೇತಿ ಸಂಸ್ಥೆಗಳ ಮುಖಾಂತರ ನೀಡಬೇಕಾಗುವುದು.

ಮೇಲೆ ಓದಲಾದ ಉಲ್ಲೇಖ (5)ರಲ್ಲಿ ಕರ್ನಾಟಕ ನಾಗರೀಕ ಸೇವಾ ಖಾತರಿ ಅಧಿನಿಯಮ 2011 (mission mode) ಮಾದರಿಯಲ್ಲಿ ಕೆಳಕಂಡಂತೆ ಸಕಾಲ ಮಂಡಳಿಯನ್ನು ರಚಿಸಲು ಉದ್ದೇಶಿಸಿದೆ

1.	ಮಿಷನ್ ನಿರ್ದೇಶಕರು (ಪ್ರಧಾನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ)	1
2.	ಮಿಷನ್ ಅಪರ ನಿರ್ದೇಶಕರುಗಳು (ಜಂಟಿ ಕಾರ್ಯದರ್ಶಿ ಅಪರ ಕಾರ್ಯದರ್ಶಿ)	2
3.	ಆಡಳಿತಾಧಿಕಾರಿ	1
4.	ಐ.ಟಿ. ಮ್ಯಾನೇಜರ್	1
5.	ಸಮಾಲೋಚಕರು (ನಿರ್ವಹಣೆ ಮತ್ತು ಆಡಳಿತ)	2
6.	ಡಾಟಾ ಎಂಟ್ರಿ ಆಪರೇಟರ್/ಸಹಾಯಕರು	4
		ಒಟ್ಟು - 11

ಮಿಷನ್ ನಿರ್ದೇಶಕರು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ (ಆಡಳಿತ ಸುಧಾರಣೆ)ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಾಗಿದ್ದು, ಸರ್ಕಾರದ ಇಬ್ಬರು ಹೆಚ್ಚುವರಿ/ಜಂಟಿ ಕಾರ್ಯದರ್ಶಿಯವರನ್ನು ಮಂಡಳಿಯ ಅಪರ ನಿರ್ದೇಶಕರುಗಳಾಗಿ ಹಾಗೂ ಇತರೆ ಸಿಬ್ಬಂದಿ ವರ್ಗಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲು ಉದ್ದೇಶಿಸಲಾಗಿದೆ. ಅಲ್ಲದೇ ಈ ಮಿಷನ್ ಮೂಲಕ ಈ ಕಾರ್ಯಕ್ರಮದ ಮೇಲ್ವಿಚಾರಣೆ, ತರಬೇತಿ, ಉಪಕರಣಗಳ ಪೂರೈಕೆ, ಸಿಬ್ಬಂದಿಗಳ ಪೂರೈಕೆ ಹಾಗೂ ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು. ಆದುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 20 ಇಕಾಅ 2012, ಬೆಂಗಳೂರು, ದಿನಾಂಕ: 06-03-2012

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ಅಧಿನಿಯಮದ ಪರಿಣಾಮಕಾರಿ ಅನುಷ್ಠಾನಗೊಳಿಸಲು ರೂ. 5.00 ಕೋಟಿಗಳ ವೆಚ್ಚದಲ್ಲಿ ಸಕಾಲ ಮಂಡಳಿಯನ್ನು (mission mode) ಕೆಳಕಂಡ ಅಧಿಕಾರಿ/ಸಿಬ್ಬಂದಿಯೊಂದಿಗೆ ರಚಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

1.	ಮಿಷನ್ ನಿರ್ದೇಶಕರು (ಪ್ರಧಾನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ)	1
2.	ಮಿಷನ್ ಅಪರ ನಿರ್ದೇಶಕರುಗಳು (ಜಂಟಿ ಕಾರ್ಯದರ್ಶಿ ಅಪರ ಕಾರ್ಯದರ್ಶಿ)	2
3.	ಆಡಳಿತಾಧಿಕಾರಿ	1
4.	ಐ.ಟಿ. ಮ್ಯಾನೇಜರ್	1
5.	ಸಮಾಲೋಚಕರು (ನಿರ್ವಹಣೆ ಮತ್ತು ಆಡಳಿತ)	2
6.	ಡಾಟಾ ಎಂಟ್ರಿ ಆಪರೇಟರ್/ಸಹಾಯಕರು	4
		ಒಟ್ಟು - 11

ಮಿಷನ್ ನಿರ್ದೇಶಕರು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ (ಆಡಳಿತ ಸುಧಾರಣೆ)ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಾಗಿದ್ದು, ಸರ್ಕಾರದ ಇಬ್ಬರು ಹೆಚ್ಚುವರಿ/ಜಂಟಿ ಕಾರ್ಯದರ್ಶಿಯವರನ್ನು ಮಂಡಳಿಯ ಅಪರ ನಿರ್ದೇಶಕರುಗಳಾಗಿ ಹಾಗೂ ಇತರೆ ಸಿಬ್ಬಂದಿ ವರ್ಗಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲು ಮಂಜೂರಾತಿ ನೀಡಲಾಗಿದೆ.

ಈ ಮಿಷನ್ ಮೂಲಕ ಮೇಲಿನ ಕಾರ್ಯಕ್ರಮದ ಮೇಲ್ವಿಚಾರಣೆ, ತರಬೇತಿ, ಉಪಕರಣಗಳ ಪೂರೈಕೆ, ಸಿಬ್ಬಂದಿಗಳ ಪೂರೈಕೆ ಹಾಗೂ ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು.

ಈ ಮೇಲಿನ ವೆಚ್ಚವನ್ನು 2012-13ನೇ ಸಾಲಿನ ಲೆಕ್ಕ ಶೀರ್ಷಿಕೆ ಸಂಖ್ಯೆ "2052-00-090-0-26-051 ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ಅಧಿನಿಯಮದ ಅನುಷ್ಠಾನ" ನಲ್ಲಿ ಭರಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 236 ವೆಚ್ಚ-12/2012 ದಿನಾಂಕ: 01/03/2012ರಲ್ಲಿ ಸಹಮತಿಯನ್ನು ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ.ಜಿ. ಶಶಿಕಲಾ
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ,
(ಆಸು-ನಾಗರೀಕ ಸೇವೆಗಳು)

ಪಿ.ಆರ್. 865

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಗೌರವಧನದ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ Law Clerks-cum-Research Assistants ಹುದ್ದೆಗಳನ್ನು ದಿನಾಂಕ: 01-02-2012 ರಿಂದ ಮುಂದಿನ ಎರಡು ವರ್ಷಗಳವರೆಗೆ ಮುಂದುವರೆಸಲು ಮಂಜೂರಾತಿ ಕುರಿತು.

ಓದಲಾಗಿದೆ:
1) ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 29 ಸೇಉನ್ಯಾ 2006 ದಿನಾಂಕ: 12-4-2006.
2) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 84 ಸೇಉನ್ಯಾ, 2006 ದಿನಾಂಕ: 25-1-2007,
3) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 9 ಸೇಉನ್ಯಾ 2008 ದಿನಾಂಕ: 5-2-2008.
4) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 2 ಸೇಉನ್ಯಾ 2009 ದಿನಾಂಕ: 9-2-2009.
5) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 3 ಸೇಉನ್ಯಾ 2011 ದಿನಾಂಕ: 25-03-2011.
6) ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ ಅವರ ಪತ್ರ ಸಂಖ್ಯೆ: HCE 623/2006 dated 03-12-2011

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ದಿನಾಂಕ: 12-4-2006ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ಕಾನೂನು ಪದವೀಧರರನ್ನು ರೂ. 6000-00 ಗಳ ಮಾಸಿಕ ಗೌರವಧನದ ಆಧಾರದ ಮೇಲೆ Law Clerks-cum-Research Assistants ಗಳಾಗಿ 1 ವರ್ಷದ ಅವಧಿಗೆ ನೇಮಿಸಿಕೊಳ್ಳಲು ಸರ್ಕಾರದ ಮಂಜೂರಾತಿ ನೀಡಲಾಗಿತ್ತು. ಆನಂತರ ಮೇಲೆ (2) ರಲ್ಲಿ ಓದಲಾದ ದಿನಾಂಕ: 25-1-2007ರ ಸರ್ಕಾರಿ ಆದೇಶದಲ್ಲಿ ಸದರಿ ಗೌರವಧನವನ್ನು ರೂ. 10,000-00 ಗಳಿಗೆ ಹೆಚ್ಚಿಸಲಾಗಿತ್ತು ಸದರಿ ಹುದ್ದೆಗಳನ್ನು ಮೇಲೆ (3) ರಲ್ಲಿ ಓದಲಾದ ದಿನಾಂಕ: 5-2-2008ರ ಸರ್ಕಾರಿ ಆದೇಶದಲ್ಲಿ ದಿನಾಂಕ: 1-2-2008 ರಿಂದ 1 ವರ್ಷದ ಅವಧಿಗೆ ಮುಂದುವರೆಸಲಾಗಿತ್ತು. ತದನಂತರ ಸದರಿ ಹುದ್ದೆಗಳನ್ನು ಮೇಲೆ (4) ರಲ್ಲಿ ಓದಲಾದ ದಿನಾಂಕ: 9-2-2009ರ ಸರ್ಕಾರಿ ಆದೇಶದಲ್ಲಿ ದಿನಾಂಕ: 1-2-2009 ರಿಂದ 31-1-2010ರ ವರೆಗೆ ಮುಂದುವರೆಸಲಾಗಿತ್ತು. ಮೇಲೆ (5) ರಲ್ಲಿ ಓದಲಾದ ಆದೇಶದಂತೆ ಒಂದು ವರ್ಷದ ಅವಧಿಗೆ ಮುಂದುವರೆಸಲಾಗಿತ್ತು. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ರವರು ಮೇಲೆ (6) ರಲ್ಲಿ ಓದಲಾದ ದಿನಾಂಕ: 03-12-2011ರ ಪತ್ರದಲ್ಲಿ ಸದರಿ ಹುದ್ದೆಗಳನ್ನು ದಿನಾಂಕ: 01-12-2012 ರಿಂದ ಮುಂದಿನ ಎರಡು ವರ್ಷಗಳವರೆಗೆ ಮುಂದುವರೆಸಲು ಹಾಗೂ ಅಗತ್ಯ ಅನುದಾನ ಮಂಜೂರಾತಿ ನೀಡುವಂತೆ ಕೋರಿರುತ್ತಾರೆ. ಇದನ್ನು ಪರಿಶೀಲಿಸಿದ ಸರ್ಕಾರವು ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 80 ಸೇಉನ್ಯಾ 2011, ಬೆಂಗಳೂರು, ದಿನಾಂಕ: 3ನೇ ಮಾರ್ಚ್ 2012

ಕರ್ನಾಟಕ ಉಚ್ಚ ನ್ಯಾಯಾಲಯದ Law Clerks-cum-Research Assistants 41 ಹುದ್ದೆಗಳನ್ನು ದಿನಾಂಕ: 01-02-2012 ರಿಂದ ಮತ್ತೆ ಎರಡು ವರ್ಷಗಳ ಕಾಲ ವಿಸ್ತರಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 1140 ವೆಚ್ಚ-12/2011 ದಿನಾಂಕ: 10-01-2012 ಮತ್ತು ಟಿಪ್ಪಣಿ ಸಂಖ್ಯೆ: ಆಇ 116 ವೆಚ್ಚ-12 ದಿನಾಂಕ: 21-02-2012 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎ.ಆರ್. ವಿಜಯಾನಂದ ಶರ್ಮ
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು-3)

ಪಿ.ಆರ್. 866

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಕರ್ನಾಟಕ ಸರ್ಕಾರ ಸಚಿವಾಲಯದ ಗ್ರಂಥಾಲಯದ ವಿಕಾಸ ಸೌಧ ಶಾಖೆಯಲ್ಲಿನ ಮುಖ್ಯ ಗ್ರಂಥಾಧಿಕಾರಿ ಹುದ್ದೆಯ ಅವಧಿಯನ್ನು ಮುಂದುವರೆಸುವ ಬಗ್ಗೆ.

ಓದಲಾಗಿದೆ:
1) ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 530 ಸಅಸೇ 2010; ದಿನಾಂಕ: 15.12.2010.
2) ಸಚಿವಾಲಯ ಗ್ರಂಥಾಲಯ (ವಿಕಾಸ ಸೌಧ ಶಾಖೆ)ಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಸಿಆಸುಇ 56 ಸಗ್ರಿ 2011, ದಿನಾಂಕ: 12.10.2011.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಆದೇಶದಲ್ಲಿ ಕರ್ನಾಟಕ ಸರ್ಕಾರ ಸಚಿವಾಲಯ ಗ್ರಂಥಾಲಯದ ವಿಕಾಸ ಸೌಧ ಶಾಖೆಯ ಉಪ ಗ್ರಂಥಾಧಿಕಾರಿ ಹುದ್ದೆಯನ್ನು ಮುಖ್ಯ ಗ್ರಂಥಾಧಿಕಾರಿ ಹುದ್ದೆಗೆ ತಾತ್ಕಾಲಿಕವಾಗಿ ಒಂದು ವರ್ಷದ ಅವಧಿಗೆ ಉನ್ನತೀಕರಿಸಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಸಚಿವಾಲಯ ಗ್ರಂಥಾಲಯ (ವಿಕಾಸ ಸೌಧ ಶಾಖೆ)ಯ ಅನಧಿಕೃತ ಟಿಪ್ಪಣಿಯಲ್ಲಿ ಸಚಿವಾಲಯ ಗ್ರಂಥಾಲಯ (ವಿಕಾಸ ಸೌಧ ಶಾಖೆ)ಯ ಮುಖ್ಯ ಗ್ರಂಥಾಧಿಕಾರಿಯ ಹುದ್ದೆಯನ್ನು ದಿನಾಂಕ: 15-12-2011ರಿಂದ ಎರಡು ವರ್ಷಗಳ ಅವಧಿಯವರೆಗೆ ಮುಂದುವರೆಸುವಂತೆ ಕೋರಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 568 ಸಅಸೇ 2011, ಬೆಂಗಳೂರು, ದಿನಾಂಕ: 2ನೇ ಮಾರ್ಚ್ 2012

ಕರ್ನಾಟಕ ಸರ್ಕಾರದ ಸಚಿವಾಲಯ ಗ್ರಂಥಾಲಯದ (ವಿಕಾಸ ಸೌಧ ಶಾಖೆ)ಯ ಮುಖ್ಯ ಗ್ರಂಥಾಧಿಕಾರಿಯ ಹುದ್ದೆಯನ್ನು ದಿನಾಂಕ: 15-12-2011 ರಿಂದ ಎರಡು ವರ್ಷಗಳ ಅವಧಿಗೆ ಮುಂದುವರೆಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 35 ಸೇ-3/12, ದಿನಾಂಕ: 02-02-2012 ರಲ್ಲಿ ನೀಡಿರುವ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎ.ಆರ್. ವಿಜಯಾನಂದ ಶರ್ಮ
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
(ಸೇವೆಗಳು-3)

ಪಿ.ಆರ್. 867

DEPARTMENT OF PERSONNEL AND ADMINISTRATIVE REFORMS SECRETARIAT

Sub:- Deputation of Officers to Berlin, Germany – Issue of orders-Reg.

Read : File No.FEE 4 ENG 2012, from the Forest, Ecology and Environment Department.

PREAMBLE :

The Forest, Ecology and Environment Department vide its file read above has sent a proposal for the deputation of Sri. Kaushik Mukherjee, IAS, Additional Chief Secretary to Government, Forest, Ecology and Environment Department, Bangalore and Sri. Kanwerpal, IFS, Secretary to Government (Ecology & Environment), Forest, Ecology and Environment Department, and Sri. Sadashivaiah, Chairman, Karnataka State Pollution Control Board, Bangalore to Visit to Berlin and other Cities of Germany to attend the programme on "Co-finance cooperation between the Government of Karnataka and GIZ and for holding high level meeting with German partners on innovative environmental policies" from 16-04-2012 to 23-04-2012.

It is reported that this delegation will take the opportunity to meet the exports from GIZ and representative of various environmental agencies in Germany in order to exchange experiences on latest development on environmental policies and regulations.

The State Government has examined the proposal and has decided to depute Sri. Kaushik Mukherjee, IAS, and Sri Kanwerpal, IFS, Accordingly the following orders are issued.

GOVERNMENT ORDER No.DPAR 66 SME 2012, BANGALORE, DATED:06-03-2012

Sanction is accorded for the deputation of Sri. Kaushik Mukherjee, IAS, Additional Chief Secretary to Government, Forest, Ecology and Environment Department, Bangalore and Sri. Kanwerpal, IFS, Secretary to Government (Ecology & Environment), Forest, Ecology and Environment Department, Bangalore to Berlin and other Cities of Germany to attend the programme on "Co-finance cooperation between the Government of Karnataka and GIZ and for holding high level meeting with German partners on innovative environmental policies" from 16-04-2012 to 23-04-2012.

The deputation will be subject to the following conditions.

1. The period of deputation including the time reasonably required for the to and fro journey shall be treated as on duty for all purposes.
2. Karnataka State Pollution Control Board will meet the entire expenditure in this connection.
3. The officers shall not accept any foreign hospitality during their visit to Berlin, Germany.
4. The officers are entitled to draw Airfare DA, Hotel rentals, Local transport in Berlin, Germany, Airport tax, Visa charges and costs involved in obtaining Medical certificates, if any, as per G.O.FD 03 SRA 2011, dated 17-12-2011.
5. The officers shall send a report within 15 days from the date of his return from abroad.

BY ORDER AND IN THE NAME OF THE GOVERNOR OF KARNATAKA
U.H. Narayanaswamy
Under Secretary to Government
DPAR (Services-1)

P.R.868

ಜಲಸಂಪನ್ಮೂಲ ಸಚಿವಾಲಯ

ವಿಷಯ : ದಕ್ಷಿಣ ಕನ್ನಡ ಜಿಲ್ಲೆ, ಬೆಳ್ತಂಗಡಿ ತಾಲ್ಲೂಕು, ಹೊಸಂಗಡಿ ಗ್ರಾಮದ ಬಲ್ಲಂಗೇರಿ ಎಂಬಲ್ಲಿ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದನೆ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರುರವರ ಪತ್ರದ ಸಂಖ್ಯೆ:ಮುಸದ/ತಾಂಸ-5-ಸ.ಇಂ.-11/ದ.ಕ.ಜಿ./ಬೆ.ತಾ./ಬಲ್ಲಂಗೇರಿ/ಇಪ್ರೊಕ್ಯೂರ್‌ಮೆಂಟ್/ಟೆಂಡರ್ ಅನುಮೋದನೆ/2011/775, ದಿನಾಂಕ:24-02-2012.

ಪ್ರಸ್ತಾವನೆ :

ದಕ್ಷಿಣ ಕನ್ನಡ ಜಿಲ್ಲೆ, ಬೆಳ್ತಂಗಡಿ ತಾಲ್ಲೂಕು, ಹೊಸಂಗಡಿ ಗ್ರಾಮದ ಬಲ್ಲಂಗೇರಿ ಎಂಬಲ್ಲಿ, ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯ ರೂ.26.00 ಲಕ್ಷಗಳ ಅಂದಾಜು ಪಟ್ಟಿಗೆ ಅಧೀಕ್ಷಕ ಇಂಜಿನಿಯರ್, ಸಣ್ಣ ನೀರಾವರಿ ವೃತ್ತ, ಮೈಸೂರು ಇವರು ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಮಂಗಳೂರು ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ದಕಿಣ ಜಿಲ್ಲಾ ಟೆಂಡರ್ ಬುಲೇಟಿನ್	09-01-2012
ಹೊಸ ದಿಗಂತ ಮತ್ತು ಕರಾವಳಿ ಅಲೆ ದಿನ ಪತ್ರಿಕೆ	15-01-2012

ದಿನಾಂಕ 27-01-2012ರಂದು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅನ್ನು ತೆರೆಯಲಾಗಿದ್ದು, ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು ಇವರ ಟೆಂಡರ್ ಅರ್ಹತೆ ಹೊಂದಿದ್ದು, ವಿವರಗಳು ಕೆಳಕಂಡಂತಿವೆ.

ಮಂಜೂರಾತಿ ಅಂದಾಜಿನ ದರಗಳಂತೆ ಹಾಗೂ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ			ರೂ.24,86,021/-
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಹಾಗೂ ಪ್ರಸಕ್ತ ಸಾಲಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1.	ಇಕ್ಬಾಲ್ ಮಳಿಗಾ ಒಂದನೇ ದರ್ಜೆ ಗುತ್ತಿಗೆದಾರರು	29,08,353/-	16.988 ಹೆಚ್ಚು

ಮೇಲ್ಕಂಡಂತೆ ಶ್ರೀ ಇಕ್ಬಾಲ್ ಮಳಿಗಾ, ಒಂದನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿದ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 16.988 ರಷ್ಟು ಹೆಚ್ಚಾಗಿರುತ್ತದೆ. ಸದರಿ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪರಿಷ್ಕೃತ ದರಗಳ ಮೇಲೆ ಶೇ.14.00% ಹೆಚ್ಚಿನ ದರಗಳಿಗೆ ಅಂದರೆ ರೂ.28,34,064/-ಗಳಿಗೆ ಟೆಂಡರನ್ನು ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 28 ಅಪಿಬಂ 2012 (ತಾಂತ್ರಿಕ) ಬೆಂಗಳೂರು, ದಿನಾಂಕ: 7ನೇ ಮಾರ್ಚ್ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆ, ಬೆಳ್ತಂಗಡಿ ತಾಲ್ಲೂಕು, ಹೊಸಂಗಡಿ ಗ್ರಾಮದ ಬಲ್ಲಂಗೇರಿ ಎಂಬಲ್ಲಿ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ.24,86,021/-ಗಳ ಮೇಲೆ ಶೇ.14.00 ರಷ್ಟು ಹೆಚ್ಚಿನ ದರವಲ್ಲಿ ಅಂದರೆ ರೂ.28,34,064/-ಗಳಿಗೆ (ರೂ. ಇಪ್ಪತ್ತೆಂಟು ಲಕ್ಷ ಮೂವತ್ತ ನಾಲ್ಕು ಸಾವಿರದ ಅರವತ್ತ ನಾಲ್ಕು ರೂಪಾಯಿಗಳು ಮಾತ್ರ) ಶ್ರೀ ಇಕ್ಬಾಲ್ ಮಳಿಗಾ, 1ನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ:20-01-2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ರುದ್ರಮೂರ್ತಿ

ಪಿ.ಆರ್.869

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಜಲಸಂಪನ್ಮೂಲ ಸಚಿವಾಲಯ

ವಿಷಯ : ದಕ್ಷಿಣ ಕನ್ನಡ ಜಿಲ್ಲೆ, ಸುಳ್ಯ ತಾಲ್ಲೂಕು, ಕಲ್ಮಡ್ಕ ಗ್ರಾಮದ ಓಟೆಚಾರು ಎಂಬಲ್ಲಿ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದನೆ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರುರವರ ಪತ್ರದ ಸಂಖ್ಯೆ:ಮುಸದ/ತಾಂಸ-5-ಸ.ಇಂ.-11/ದ.ಕ.ಜಿ/.ಸೂ.ತಾ/ಓಟೆಚಾರು/ಇಪ್ರೊಕ್ಯೂರ್‌ಮೆಂಟ್/ಟೆಂಡರ್ ಅನುಮೋದನೆ/2011/773, ದಿನಾಂಕ:24-02-2012.

ಪ್ರಸ್ತಾವನೆ :

ದಕ್ಷಿಣ ಕನ್ನಡ ಜಿಲ್ಲೆ, ಸುಳ್ಯ ತಾಲ್ಲೂಕು, ಕಲ್ಮಡ್ಕ ಗ್ರಾಮದ ಓಟೆಚಾರು ಎಂಬಲ್ಲಿ, ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯ ರೂ.30.00 ಲಕ್ಷಗಳ ಅಂದಾಜು ಪಟ್ಟಿಗೆ ಅಧೀಕ್ಷಕ ಇಂಜಿನಿಯರ್, ಸಣ್ಣ ನೀರಾವರಿ ವೃತ್ತ, ಮೈಸೂರು ಇವರು ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಮಂಗಳೂರು ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲಾ ಟೆಂಡರ್ ಬುಲೇಟಿನ್	09-01-2012
ವಿಜಯ ಕರ್ನಾಟಕ ಮತ್ತು ವಾರ್ತಾ ಭಾರತಿ ದಿನ ಪತ್ರಿಕೆ	21-01-2012

ದಿನಾಂಕ 04-02-2012ರಂದು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅನ್ನು ತೆರೆಯಲಾಗಿದ್ದು, ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು ಇವರ ಟೆಂಡರ್ ಅರ್ಹತೆ ಹೊಂದಿದ್ದು, ವಿವರಗಳು ಕೆಳಕಂಡಂತಿವೆ.

ಮಂಜೂರಾತಿ ಅಂದಾಜಿನ ದರಗಳಂತೆ ಹಾಗೂ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ	ರೂ.28,52,255/-

ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಹಾಗೂ ಪ್ರಸಕ್ತ ಸಾಲಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1.	ಇಕ್ಬಾಲ್ ಮಳಿಗಾ ಒಂದನೇ ದರ್ಜೆ ಗುತ್ತಿಗೆದಾರರು	33,41,637/-	17.1577 ಹೆಚ್ಚು

ಮೇಲ್ಕಂಡಂತೆ ಶ್ರೀ ಇಕ್ಬಾಲ್ ಮಳಿಗಾ, ಒಂದನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿದ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 17.1577 ರಷ್ಟು ಹೆಚ್ಚಾಗಿರುತ್ತದೆ. ಸದರಿ ಟೆಂಡರ್‌ನ್ನು ಸರ್ಕಾರದಲ್ಲಿ ಪರಿಶೀಲಿಸಿ ಪರಿಷ್ಕೃತ ದರಗಳ ಮೇಲೆ ಶೇ.13.50% ಹೆಚ್ಚಿನ ದರಗಳಿಗೆ ಅಂದರೆ ರೂ.32,37,309/-ಗಳಿಗೆ ಟೆಂಡರ್‌ನ್ನು ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 27 ಅಪಿಬಂ 2012 (ತಾಂತ್ರಿಕ) ಬೆಂಗಳೂರು, ದಿನಾಂಕ: 7ನೇ ಮಾರ್ಚ್ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆ, ಸುಳ್ಯ ತಾಲ್ಲೂಕು, ಕಲ್ಮಕ್ಕ ಗ್ರಾಮದ ಓಟೆಚಾರು ಎಂಬಲ್ಲಿ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ.28,52,255/-ಗಳ ಮೇಲೆ ಶೇ.13.50 ರಷ್ಟು ಹೆಚ್ಚಿನ ದರದಲ್ಲಿ ಅಂದರೆ

ರೂ.32,37,309/-ಗಳಿಗೆ (ರೂ. ಮೂವತ್ತೆರಡು ಲಕ್ಷ ಮೂವತ್ತೇಳು ಸಾವಿರದ ಮೂರು ನೂರ ಒಂಬತ್ತು ರೂಪಾಯಿಗಳು ಮಾತ್ರ) ಶ್ರೀ ಇಕ್ಬಾಲ್ ಮಳಿಗಾ, 1ನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ:20-01-2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ರುದ್ರಮೂರ್ತಿ

ಪಿ.ಆರ್.870

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಜಲಸಂಪನ್ಮೂಲ ಸಚಿವಾಲಯ

ವಿಷಯ : ದಕ್ಷಿಣ ಕನ್ನಡ ಜಿಲ್ಲೆ, ಪುತ್ತೂರು ತಾಲ್ಲೂಕು, ಕೌಕ್ರಾಡಿ ಗ್ರಾಮದ ಕಟ್ಟೆಮಜಲು ಎಂಬಲ್ಲಿ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದನೆ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರುರವರ ಪತ್ರದ ಸಂಖ್ಯೆ:ಮುಸದ/ತಾಂಸ-5-ಸ.ಇಂ.-11/ದ.ಕ.ಜಿ/ಪು.ತಾ/ಕಟ್ಟೆಮಜಲು/ಇಪ್ರೊಕ್ಯೂರ್‌ಮೆಂಟ್/ಟೆಂಡರ್ ಅನುಮೋದನೆ/2011/698, ದಿನಾಂಕ:18-02-2012.

ಪ್ರಸ್ತಾವನೆ :

ದಕ್ಷಿಣ ಕನ್ನಡ ಜಿಲ್ಲೆ, ಪುತ್ತೂರು ತಾಲ್ಲೂಕು, ಕೌಕ್ರಾಡಿ ಗ್ರಾಮದ ಕಟ್ಟೆಮಜಲು ಎಂಬಲ್ಲಿ, ಕಿಂಡಿ ಆಣೆಕಟ್ಟು ನಿರ್ಮಾಣ ಕಾಮಗಾರಿಯ ರೂ.80.00 ಲಕ್ಷಗಳ ಅಂದಾಜು ಪಟ್ಟಿಗೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ಇವರು ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಮಂಗಳೂರು ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

	ಮೂಲ ಪ್ರಕಟಣೆ	ಮುಂದೂಡಿಕೆ ಪ್ರಕಟಣೆ
ದಕ್ಷಿಣ ಜಿಲ್ಲಾ ಟೆಂಡರ್ ಬುಲೇಟಿನ್	08-11-2011	
ಟೈಮ್ಸ್ ಆಫ್ ಇಂಡಿಯಾ ಮತ್ತು ಉದಯವಾಣಿ ದಿನಪತ್ರಿಕೆ	27-11-2011	
ಹೊಸದಿಗಂತ ಮತ್ತು ಉದಯವಾಣಿ ದಿನಪತ್ರಿಕೆ		08-01-2012

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು ಇವರ ಟೆಂಡರ್ ಅರ್ಹತೆ ಹೊಂದಿದ್ದು, ಇವರ ಆರ್ಥಿಕ ಬಿಡ್ ಅನ್ನು ದಿನಾಂಕ 28-01-2012ರಂದು ತೆರೆಯಲಾಗಿದ್ದು ವಿವರಗಳು ಕೆಳಕಂಡಂತಿವೆ

ಮಂಜೂರಾತಿ ಅಂದಾಜಿನ ದರಗಳಂತೆ ಹಾಗೂ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ			ರೂ.79,21,603/-
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಹಾಗೂ ಪ್ರಸಕ್ತ ಸಾಲಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1.	ಕೆ.ಎಂ.ಮೂಸ, ಒಂದನೇ ದರ್ಜೆ ಗುತ್ತಿಗೆದಾರರು	91,05,.257/-	14.942 ಹೆಚ್ಚು

ಮೇಲ್ಕಂಡಂತೆ ಶ್ರೀ ಕೆ.ಎಂ.ಮೂಸ, ಒಂದನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿದ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 14.942 ರಷ್ಟು ಹೆಚ್ಚಾಗಿರುತ್ತದೆ. ಸದರಿ ಟೆಂಡರ್‌ನ್ನು ಸರ್ಕಾರದಲ್ಲಿ ಪರಿಶೀಲಿಸಿ ಪರಿಷ್ಕೃತ ದರಗಳ ಮೇಲೆ ಶೇ.14.00% ಹೆಚ್ಚಿನ ದರಗಳಿಗೆ ಅಂದರೆ ರೂ.90,30,627/-ಗಳಿಗೆ ಟೆಂಡರ್‌ನ್ನು ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 22 ಅಪಿಬಂ 2012 (ತಾಂತ್ರಿಕ) ಬೆಂಗಳೂರು, ದಿನಾಂಕ: 7ನೇ ಮಾರ್ಚ್ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆ, ಪುತ್ತೂರು ತಾಲ್ಲೂಕು, ಕೌಕ್ರಾಡಿ ಗ್ರಾಮದ ಕಟ್ಟೆಮಜಲು ಎಂಬಲ್ಲಿ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ.79,21,603/-ಗಳ ಮೇಲೆ ಶೇ.14.00 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ.90,30,627/-ಗಳಿಗೆ (ರೂ. ತೊಂಬತ್ತು ಲಕ್ಷ ಮೂವತ್ತು ಸಾವಿರದ ಆರು ನೂರ ಇಪ್ಪತ್ತೇಳು ರೂಪಾಯಿಗಳು ಮಾತ್ರ) ಶ್ರೀ ಕೆ.ಎಂ.ಮೂಸ 1ನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ:20-01-2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ರುದ್ರಮೂರ್ತಿ

ಪಿ.ಆರ್.871

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಜಲಸಂಪನ್ಮೂಲ ಸಚಿವಾಲಯ

ವಿಷಯ : ದಕ್ಷಿಣ ಕನ್ನಡ ಜಿಲ್ಲೆ, ಬಂಟ್ವಾಳ ತಾಲ್ಲೂಕು, ಮಣಿನಾಲ್ಕೂರು ಗ್ರಾಮದ ಕೂಟೇಲು ಎಂಬಲ್ಲಿ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದನೆ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರುರವರ ಪತ್ರದ ಸಂಖ್ಯೆ:ಮುಸದ/ತಾಂಸ-5-ಸ.ಇಂ.-11/ದ.ಕ.ಜಿ/ಬ.ತಾ/ಕುಟೇಲು/ಇಪ್ರೊಕ್ಯೂರ್‌ಮೆಂಟ್/ಟೆಂಡರ್ ಅನುಮೋದನೆ/2011/785, ದಿನಾಂಕ:25-02-2012.

ಪ್ರಸ್ತಾವನೆ :

ದಕ್ಷಿಣ ಕನ್ನಡ ಜಿಲ್ಲೆ, ಬಂಟ್ವಾಳ ತಾಲ್ಲೂಕು, ಮಣಿನಾಲ್ಕೂರು ಗ್ರಾಮದ ಕೂಟೇಲು ಎಂಬಲ್ಲಿ, ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯ ರೂ.100.00 ಲಕ್ಷಗಳ ಅಂದಾಜು ಪಟ್ಟಿಗೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ಇವರು ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಮಂಗಳೂರು ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲಾ ಟೆಂಡರ್ ಬುಲೇಟಿನ್	09-01-2012	
ಉದಯವಾಣಿ ದಿನಪತ್ರಿಕೆ ಮತ್ತು ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್	15-01-2012	

ಆಪಾದಿತರಾದ ಶ್ರೀಮತಿ ಜಿ. ಮಹದೇವಮ್ಮ ಕ್ಷೇತ್ರ ಶಿಕ್ಷಣಾಧಿಕಾರಿ, ಟಿ. ನರಸೀಪುರ ತಾ. ಇವರು ಫಿರ್ಯಾದಿದಾರ ಶ್ರೀ ಎನ್. ಹನುಮಯ್ಯ ಬಿನ್ ನಂಜಯ್ಯ, 51 ವರ್ಷ ಉಪ ಪ್ರಾಂಶುಪಾಲರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಪ್ರೌಢ ಶಾಲಾ ವಿಭಾಗ ಟಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ. ಇವರಿಂದ 2010-11ನೇ ಸಾಲಿನ ಕಛೇರಿ ನಿರ್ವಹಣಾ ಸಾದಿಲ್ವಾರು ವೆಚ್ಚಕ್ಕಾಗಿ ರೂ. 11,000/- ಗಳನ್ನು ಉಪ ನಿರ್ದೇಶಕರ ಮುಖಾಂತರ ಸರ್ಕಾರದಿಂದ ಮಂಜೂರಾಗಿ ಹಣ ಬಿಡುಗಡೆಯಾಗಿರುತ್ತದೆ. ಆ ಹಣದಲ್ಲಿ ರೂ. 2,000/-ಗಳನ್ನು ಲಂಚವಾಗಿ ಕೊಡಬೇಕೆಂದು ಒತ್ತಾಯ ಮಾಡಿರುತ್ತಾರೆ. ತಮ್ಮ ಸ್ವಂತಕ್ಕೆ ರೂ. 1,000/-ಗಳನ್ನು ಲಂಚದ ಹಣ ನೀಡುವಂತೆ ಕೇಳಿ ಅಂದೇ ದಿನಾಂಕ: 07-05-2011 ರಂದು ಸಂಜೆ 6-05 ಗಂಟೆಯ ಸುಮಾರಿಗೆ ಟಿ. ನರಸೀಪುರ ತಾಲ್ಲೂಕು ಬಿ.ಇ.ಓ. ಕಛೇರಿಯಲಿ, ಆಪಾದಿತ ಅಧಿಕಾರಿಯು ನೆರಳು ಸಾಕ್ಷಿ ಪಂಚ ನಂ. ಶ್ರೀ ಎಂ.ಎನ್. ರಾಜಶೇಖರ್ ಮೂರ್ತಿ ಇವರು ನೋಡುತ್ತಿದ್ದಂತೆ ಫಿರ್ಯಾದಿದಾರ ಶ್ರೀ ಹನುಮಯ್ಯ ಇವರಿಂದ ಲಂಚದ ಹಣ ರೂ. 1,000/- ಗಳನ್ನು ಕೇಳಿ ಪಡೆಯುತ್ತಿದ್ದಾಗ ಸಿಕ್ಕಿಹಾಕಿಕೊಂಡಿರುತ್ತಾರೆ. ನೆರಳು ಸಾಕ್ಷಿಯು ಅಕ್ರಮ ಸಂಭಾವನೆಯ ಬೇಡಿಕೆ ಮತ್ತು ಪಡೆಯುವಿಕೆಗೆ ಸಂಬಂಧಿಸಿದಂತೆ ಫಿರ್ಯಾದಿ ಹಾಗೂ ಆಪಾದಿತ ಸರ್ಕಾರಿ ನೌಕರರ ನಡುವಿನ ವ್ಯವಹಾರವನ್ನು ಗಮನಿಸಿರುತ್ತಾರೆ. ಮತ್ತು ಸಂಭಾಷಣೆಯನ್ನು ಆಲಿಸಿರುತ್ತಾರೆ. ಅಕ್ರಮ ಸಂಭಾವನೆಯಾದ ರೂ. 1,000/-ಗಳನ್ನು ಫಿರ್ಯಾದುದಾರರಿಂದ ಒತ್ತಾಯಿಸಿ ಶ್ರೀಮತಿ ಜಿ. ಮಹದೇವಮ್ಮ, ಕ್ಷೇತ್ರ ಶಿಕ್ಷಣಾಧಿಕಾರಿ, ಟಿ. ನರಸೀಪುರ ತಾ. ಇವರು ತಮ್ಮ ಕಛೇರಿಯಲ್ಲಿ ಲಂಚದ ಹಣವನ್ನು ಬಲಗೈಯಲ್ಲಿ ಪಡೆದುಕೊಂಡು ಅವರ ಟೇಬಲ್ ಮೇಲಿಟ್ಟಿದ್ದ ವ್ಯಾನಿಟಿ ಬ್ಯಾಗ್‌ನಲ್ಲಿ ಇಟ್ಟುಕೊಂಡಿದ್ದ ಹಣವನ್ನು ವಶಪಡಿಸಿಕೊಳ್ಳಲಾಗಿದೆ.

ಈ ಎಲ್ಲಾ ಕಾರಣಗಳಿಂದ ಆಪಾದಿತರು ಲಂಚ ನಿರೋಧಕ ಕಾಯ್ದೆ 1988 ರ ಕಲಂ-7 13(1)(ಡಿ) ಜೊತೆಗೆ ಓದಲಾದ 13(2) ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುವುದು ಮೇಲ್ನೋಟಕ್ಕೆ ಮನವರಿಕೆಯಾಗಿದೆ. ಆದ್ದರಿಂದ ಇವರನ್ನು ಲಂಚ ನಿರೋಧಕ ಕಾಯ್ದೆ 1988ರ ಅನ್ವಯ ಕಲಂ-7, 13(1)(ಡಿ) ಜೊತೆಯಲ್ಲಿ ಓದಲಾದ 13(2)ರ ಅಡಿಯಲ್ಲಿ ಅಭಿಯೋಜನೆಗೆ ಒಳಪಡಿಸುವುದು ಅವಶ್ಯ ಎಂದು ಸರ್ಕಾರ ಮನಗಂಡಿದೆ.

ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಆಪಾದಿತರನ್ನು ಕೆಲಸದಿಂದ ವಜಾ ಮಾಡುವ ಅಧಿಕಾರವನ್ನು ಹೊಂದಿದ್ದು, ಲಂಚ ನಿರೋಧಕ ಕಾಯ್ದೆ 1988ರ ಕಲಂ-19(1)(ಬಿ)ರ ಅಡಿ ಆಪಾದಿತ ನೌಕರರಾದ ಶ್ರೀಮತಿ ಜಿ. ಮಹದೇವಮ್ಮ, ಕ್ಷೇತ್ರ ಶಿಕ್ಷಣಾಧಿಕಾರಿ, ಟಿ. ನರಸೀಪುರ ತಾ. ಇವರನ್ನು ಕಲಂ-7, 13(1)ಡಿ ಜೊತೆಯಲ್ಲಿ ಓದಲಾದ 13(2)ರ ಅಡಿಯಲ್ಲಿ ದಂಡಾರ್ಹ ಅಪರಾಧ ಎಸಗಿರುವುದರಿಂದ ಸದರಿಯವರನ್ನು ಕಲಂ-19(1)(ಬಿ) ರ ಅಡಿಯಲ್ಲಿ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಸರ್ಕಾರದ ಮಂಜೂರಾತಿ ನೀಡಲು ತೀರ್ಮಾನಿಸಿದೆ. ಆದುದರಿಂದ ಈ ಕೆಳಕಂಡಂತೆ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಇಡಿ 19 ಡಿಜಿಓ 2011, ಬೆಂಗಳೂರು, ದಿನಾಂಕ 07ನೇ ಮಾರ್ಚ್-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು ಆರೋಪಿಯಾದ ಶ್ರೀಮತಿ ಜಿ. ಮಹದೇವಮ್ಮ, ಕ್ಷೇತ್ರ ಶಿಕ್ಷಣಾಧಿಕಾರಿ, ಟಿ. ನರಸೀಪುರ ತಾ. ಇವರನ್ನು ಲಂಚ ನಿರೋಧಕ ಕಾಯ್ದೆ 1988ರ ಕಲಂ-7, 13(1)(ಡಿ) ಜೊತೆಗೆ 13(2)ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುವುದು ದೃಢಪಟ್ಟಿರುವುದರಿಂದ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಗಗೊಳಿಸಲು ಸರ್ಕಾರ ಮಂಜೂರಾತಿಯನ್ನು ನೀಡಿ ಆದೇಶಿಸಿದೆ.

ಮುಂದುವರೆದು, ಕರ್ನಾಟಕ ಸರ್ಕಾರದ (ವ್ಯವಹಾರ) ನಿಯಮಾವಳಿ 1977ರ ನಿಯಮ 18ರ ಪ್ರಕಾರ ಸರ್ಕಾರದ ಪರವಾಗಿ ಅಥವಾ ಸರ್ಕಾರದಿಂದ ಹೊರಡಿಸಲಾಗುವ ಎಲ್ಲಾ ಆದೇಶಗಳನ್ನು ಅಥವಾ ಅಧಿಸೂಚನೆಗಳನ್ನು ಕರ್ನಾಟಕ ಸರ್ಕಾರದ ರಾಜ್ಯಪಾಲರ ಹೆಸರಿನಲ್ಲಿ ಹೊರಡಿಸಬೇಕಿರುತ್ತದೆ.

ಸದರಿ ನಿಯಮಾವಳಿಯ ನಿಯಮ-19(1)(ಬಿ)ರ ಪ್ರಕಾರ ಕರ್ನಾಟಕ ಸರ್ಕಾರದ ರಾಜ್ಯಪಾಲರ ಹೆಸರಿನಲ್ಲಿ ಹೊರಡಿಸಿರುವ ಆದೇಶಗಳು ಮತ್ತು ಅಧಿಸೂಚನೆಗಳು ಒಬ್ಬ ಅಧೀನ ಕಾರ್ಯದರ್ಶಿಯ ಸಹಿಯಿಂದ ಅಧಿಕೃತಗೊಳ್ಳಬೇಕು ಹಾಗೂ ಅಂತಹ ಸಹಿಯು ಅಂತಹ ಆದೇಶ ಅಥವಾ ಲೇಖನವನ್ನು ಸರಿಯಾಗಿ ಅಧಿಕೃತಗೊಳಿಸುತ್ತದೆ.

ಆದ್ದರಿಂದ ಕರ್ನಾಟಕ ಸರ್ಕಾರದ (ವ್ಯವಹಾರ) ನಿಯಮಾವಳಿಗಳು 1977ರ ಈ ಮೇಲ್ಕಂಡ ಆದೇಶವನ್ನು ಸರ್ಕಾರದ ಪರವಾಗಿ ಕಚೇರಿಯ ಮೊಹರು ಮತ್ತು ಸರ್ಕಾರದ ಅಧೀನ ಕಾರ್ಯದರ್ಶಿಯ ಸಹಿಯ ಅಡಿಯಲ್ಲಿ ದಿನಾಂಕ:07-03-2012 ರಂದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್.ಬಿ. ಸಸಾಲಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ

ಶಿಕ್ಷಣ ಇಲಾಖೆ (ಆಡಳಿತ ಮತ್ತು ಸಮಿತಿಗಳು)

ಪಿ.ಆರ್. 886

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ವಿಷಯ : ಅತೀ ಕಡಿಮೆ ತೂಕವುಳ್ಳ ಮಕ್ಕಳಿಗೆ ಹಾಲು ಮತ್ತು ಮೊಟ್ಟೆಯನ್ನು ವಿತರಿಸಲು ಮಂಜೂರಾತಿ ನೀಡುವ ಕುರಿತು.

ಉಲ್ಲೇಖ : ದಿನಾಂಕ: 23-01-2012 ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರ ಏಕ ಕಡತ ಪ್ರಸ್ತಾವನೆ ಸಂಖ್ಯೆ: ಮಮಇ: ಸಶಿಯೋ: ಆಕಇವಿ: 19-11-2012.

ಪ್ರಸ್ತಾವನೆ :

ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯು ಪ್ರತಿದಿನ 1 ರಿಂದ 3 ವರ್ಷದ ಮಕ್ಕಳಿಗೆ ಸಾಮಾನ್ಯವಾಗಿ 1220 ಕ್ಯಾಲೊರಿ, 22 ಗ್ರಾಂ ಪ್ರೊಟೀನ್, 4 ರಿಂದ 6 ವರ್ಷದ ಮಕ್ಕಳಿಗೆ 1720 ಕ್ಯಾಲೊರಿ, 29 ಗ್ರಾಂ ಪ್ರೊಟೀನ್ ಹಾಗೂ ಗರ್ಭಿಣಿ-ಬಾಣಂತಿಯರಿಗೆ 2366 ಕ್ಯಾಲೊರಿ 45 ಗ್ರಾಂ ಪ್ರೊಟೀನ್‌ನ್ನು ಸೇವಿಸಲು ಶಿಫಾರಸ್ಸು ಮಾಡಿರುತ್ತದೆ. ಪ್ರಸ್ತುತ 6 ತಿಂಗಳಿಂದ 3 ವರ್ಷದ 20,33,000 ಮಕ್ಕಳು, 3 ರಿಂದ 6 ವರ್ಷದ 17,37,000 ಮಕ್ಕಳು, 4,84,000 ಗರ್ಭಿಣಿಯರು 4,65,000 ಬಾಣಂತಿಯರು. ಅಂಗನವಾಡಿ ಕಾರ್ಯಕರ್ತೆಯರು/ಸಹಾಯಕಿಯರು 1,23,000 ಪ್ರಾಯಪೂರ್ವ ಬಾಲಕಿಯರು 92,000 ಹೀಗೆ ಒಟ್ಟು 49,37,000 ಫಲಾನುಭವಿಗಳು ಅಂಗನವಾಡಿ ಕೇಂದ್ರಗಳ ಮೂಲಕ ಪೂರಕ ಪೌಷ್ಠಿಕ ಆಹಾರವನ್ನು ಪಡೆಯುತ್ತಿರುತ್ತಾರೆ. ಅಂಗನವಾಡಿ ಕೇಂದ್ರಗಳಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಪ್ರತಿ ತಿಂಗಳು 5 ವರ್ಷದೊಳಗಿನ ಮಕ್ಕಳ ತೂಕವನ್ನು ಮಾಡಿ ಬೆಳವಣಿಗೆ ಪುಸ್ತಕದಲ್ಲಿ ತೂಕ ನಮೂದಿಸುತ್ತಾರೆ. ಮಕ್ಕಳ ವಯಸ್ಸಿಗೆ ಅನುಗುಣವಾಗಿ ಕಂಡುಹಿಡಿದ ತೂಕದ ಆಧಾರದ ಮೇಲೆ ಮಕ್ಕಳ ಪೌಷ್ಠಿಕ ಮಟ್ಟವನ್ನು ಗುರುತಿಸಲಾಗುತ್ತಿದೆ. ಏಪ್ರಿಲ್ 2011 ರಿಂದ ಹೊಸ WHO ಬೆಳವಣಿಗೆ ಮಾನದಂಡದ ಪ್ರಕಾರ ಪೌಷ್ಠಿಕತೆಯ ಮಟ್ಟವನ್ನು ಗುರುತಿಸಲಾಗುತ್ತಿದೆ. ಅದರಂತೆ ರಾಜ್ಯದಲ್ಲಿ ಒಟ್ಟು 61,564 ಮಕ್ಕಳು ಅತೀ ಕಡಿಮೆ ತೂಕವುಳ್ಳವರಾಗಿರುತ್ತಾರೆ.

ಮಕ್ಕಳಲ್ಲಿ ಆರೋಗ್ಯ ಹಾಗೂ ಪೌಷ್ಠಿಕತಾ ಮಟ್ಟವನ್ನು ಹೆಚ್ಚಿಸಲು ಮತ್ತು ಮಕ್ಕಳಲ್ಲಿ ಅಪೌಷ್ಠಿಕತೆ ಮತ್ತು ಶಿಶು ಮರಣದರ ಕಡಿಮೆಗೊಳಿಸಲು ರೂಪುರೇಷೆ ತಯಾರಿಸಲು, ವಿವಿಧ ಇಲಾಖಾ ಅಧಿಕಾರಿಗಳು ವಿಷಯ ತಜ್ಞರು, ಪ್ರತಿಷ್ಠಿತ ಸಂಘ ಸಂಸ್ಥೆಗಳ ಪ್ರತಿನಿಧಿಗಳು, ಇತ್ಯಾದಿಯವರನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿರುತ್ತದೆ. ಸಮಿತಿಯು ನೀಡಿರುವ ಶಿಫಾರಸ್ಸುಗಳನ್ವಯ, ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನಲ್ಲಿ ಅತೀ ಕಡಿಮೆ ತೂಕ ಹೊಂದಿದ ಮಕ್ಕಳಿಗೆ ಈಗ ನೀಡುತ್ತಿರುವ ಅಹಾರದ ಜೊತೆಗೆ ದಿನಾಂಕ: 07-11-2011 ರಿಂದ 30-12-2011 ರವರೆಗೆ ಉಚಿತವಾಗಿ ಪ್ರತಿದಿನ ಬೇಯಿಸಿದ ಮೊಟ್ಟೆ ಹಾಗೂ 200 ಎಂ.ಎಲ್ ಹಾಲನು KMF ಹಾಗೂ NECC ಸಂಸ್ಥೆಗಳ ಸಹಕಾರದೊಂದಿಗೆ ನೀಡಲಾಗಿದೆ. ಇದರಿಂದಾಗಿ ಮಕ್ಕಳ ತೂಕದಲ್ಲಿ 100 ರಿಂದ 500 ಗ್ರಾಂ ಹೆಚ್ಚಳವಾಗಿರುತ್ತದೆ.

ಪ್ರಸ್ತುತ, ರಾಜ್ಯದಲ್ಲಿರುವ 61.564 ಅತೀ ಕಡಿಮೆ ತೂಕವುಳ್ಳ ಮಕ್ಕಳಿಗೆ ಈಗಾಗಲೇ ಅಂಗನವಾಡಿ ಕೇಂದ್ರಗಳ ಮೂಲಕ ನೀಡುತ್ತಿರುವ ಪೂರಕ ಪೌಷ್ಠಿಕ ಅಹಾರದ ಜೊತೆಗೆ ವಾರದಲ್ಲಿ 4 ದಿನ ಮೊಟ್ಟೆ ಹಾಗೂ ಎರಡು ದಿನ 200ml ಹಾಲನ್ನು ವಿತರಿಸಲು ಉದ್ದೇಶಿಸಿದ್ದು, ಇದಕ್ಕೆ 2012-2013 ನೇ ಸಾಲಿನಲ್ಲಿ ರೂ. 9,23,46,000/ಗಳ ಅನುದಾನ ಬೇಕಾಗಿದ್ದು, ಸದರಿ ಅನುದಾನವನ್ನು ಬಿಡುಗಡೆ ಮಾಡುವಂತೆ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಬಿವೃದ್ಧಿ ಇಲಾಖೆ ಕೋರಿರುತ್ತಾರೆ. ಈ ವೆಚ್ಚವನ್ನು ಬಾಲಸಂಜೀವಿನಿ ಯೋಜನೆಯಡಿ ಭರಿಸಲಾಗುವುದು ಎಂದು ತಿಳಿಸಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ: ಮಮಇ 32 ಐಸಿಡಿ 2012, ಬೆಂಗಳೂರು, ದಿನಾಂಕ 28-02-2012

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮಾರ್ಚ್ 2012ನೇ ಮಾಹೆಯಿಂದ ರಾಜ್ಯದಲ್ಲಿ ಅತೀ ಕಡಿಮೆ ತೂಕವುಳ್ಳ 61564 ಮಕ್ಕಳಿಗೆ ಈಗಾಗಲೇ ಅಂಗನವಾಡಿ ಕೇಂದ್ರಗಳ ಮೂಲಕ ನೀಡುತ್ತಿರುವ ಪೂರಕ ಪೌಷ್ಠಿಕ ಆಹಾರದ ಜೊತೆಗೆ ವಾರದಲ್ಲಿ 4 ದಿನ ಮೊಟ್ಟೆಯನ್ನು ಮತ್ತು ಎರಡು ದಿನ 200ml ಹಾಲನ್ನು ಹಾಗೂ ಮೊಟ್ಟೆ ಉಪಯೋಗಿಸದ ಮಕ್ಕಳಿಗೆ ವಾರದಲ್ಲಿ 6 ದಿನ 200ml ಹಾಲನ್ನು ನೀಡಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರಿಗೆ ಮಂಜೂರಾತಿ ನೀಡಲಾಗಿದೆ.

ಇದಕ್ಕೆ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ- 2235-02-102-0-30 (ಯೋಜನೆ) ರಡಿ (ಬಾಲಸಂಜೀವಿನಿ ಯೋಜನೆಯಡಿ) ಭರಿಸತಕ್ಕದ್ದು.

ಜಿಲ್ಲಾ ಮಟ್ಟದಲ್ಲಿ ಉಪನಿರ್ದೇಶಕರುಗಳು ಸದರಿ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕಟ್ಟುನಿಟ್ಟಾದ ಸೂಚನೆ/ನಿರ್ದೇಶನವನ್ನು ನೀಡಲು ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರಿಗೆ ಸೂಚಿಸಿದೆ.

ಈ ಅದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 216 ವೆಚ್ಚ - 3:12, ದಿನಾಂಕ: 28-02-2012 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ವಿಜಯಲಕ್ಷ್ಮಿ

ಸರ್ಕಾರದ ಅಧೀನ ಕಾರ್ಯದರ್ಶಿ-1

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಪಿ.ಆರ್. 887

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ತಿದ್ದುಪಡಿ

ಸಂಖ್ಯೆ:ಮಮಇ 85 ಪಿಹೆಚ್‌ಪಿ 2012, ಬೆಂಗಳೂರು, ದಿನಾಂಕ:01-03-2012

ದಿನಾಂಕ 25-07-2006ರ ಸರ್ಕಾರಿ ಆದೇಶ ಸಂಖ್ಯೆ: ಮಮಇ : 242:ಎಸ್‌ಜೆಡಿ:2006ರ ಆದೇಶ ಭಾಗದಲ್ಲಿ "ಹಿರಿಯ ನಾಗರಿಕರಿಗಾಗಿ ಗುರುತಿನ ಚೀಟಿಯನ್ನು ಸಂಬಂಧಪಟ್ಟ ಜಿಲ್ಲೆಯ ಸಹಾಯಕ/ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ಅಧಿಕೃತ ಸಹಿ ಮಾಡಿ ವಿತರಿಸಲು ಸರ್ಕಾರವು ಮಂಜೂರಾತಿ ನೀಡಿ ಆದೇಶಿಸಿದೆ." ಎನ್ನುವ ಪದಗಳ ಬದಲಾಗಿ ಈ ಕೆಳಕಾಣಿಸಿರುವ ಪದಗಳನ್ನು ಸೇರಿಸಿ ತಿದ್ದಿ ಓದಿಕೊಳ್ಳತಕ್ಕದ್ದು.

"ಹಿರಿಯ ನಾಗರಿಕರಿಗಾಗಿ ಗುರುತಿನ ಚೀಟಿಯನ್ನು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿಗಳು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಇವರು ಅಧಿಕೃತ ಸಹಿ ಮಾಡಿ ವಿತರಿಸಲು ಸರ್ಕಾರವು ಮಂಜೂರಾತಿ ನೀಡಿ ಆದೇಶಿಸಿದೆ.."

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ಕಮಲಮ್ಮ

ಸರ್ಕಾರದ ಅಧೀನ ಕಾರ್ಯದರ್ಶಿ-2

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.

ಪಿ.ಆರ್.888

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ತಿದ್ದೋಲೆ

ಸಂಖ್ಯೆ:ಸಿಆಸುಇ 116 ಸೇಲೋಯು 2011, ಬೆಂಗಳೂರು, ದಿನಾಂಕ:06-03-2012

ದಿನಾಂಕ 25-02-2012ರ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ :116:ಸೇಲೋಯು:2011ರ ಆದೇಶದ 2ನೇ ಸಾಲಿನಲ್ಲಿ ಮತ್ತು ಕ್ರಮ ಸಂಖ್ಯೆ 1ರ ಮೊದಲ ಸಾಲಿನಲ್ಲಿರುವ ದಿನಾಂಕ: 11-08-2011 ಎಂಬುದನ್ನು 18-08-2011 ಎಂದು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಡಿ.ನಾಗೇಶ್ ಪಾಟಕ್

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ.

(ಸೇವಾ ನಿಯಮಗಳು-2)

ಪಿ.ಆರ್.889

HORTICULTURE SECRETARIATE

Sub:- "Scheme for Integrated Farming in Coconut for Productivity/Improvement with Coconut Development Board Assistance (100% CDB)"-Release of funds-reg.

Read : 1) Government Order No.HCD 100 HPP 2011 Dt:28-07-2011.
2) CDB letter No.505/2006-DEV(Karnataka) Dt:08-12-2011.
3) CDB letter No.597/2009-Dev(Kar) Dt:14-12-2011. ,
4) CDB letter No.597/2009-Dev(Kar) Dt:29-12-2011.
3) Letter of Director of Horticulture No. ತೋಇ/ತೋಬೆ/ಸತೋಅ-2/03/2011-12, Dt:21-02-2012.

PREAMBLE :

Sanction had been accorded to release Coconut Development Board funds to the Director of Horticulture vide Government Order read at (1) above where in it was informed to obtain revalidation from Coconut Development Board for utilizing the unspent balance of Rs.1,24,872/-(2010-11). Coconut Development Board has agreed to utilize this fund during 2011-12 as per its letter read at (3) above.

2. Coconut Development Board has released an amount of Rs.31,250/- towards "Production & Distribution of hybrids/other local tall seedlings" for the year 2011-12 vide its letter read at (2) above and matching State share has been requested by the Director of Horticulture.

3. Cocnut Development Board has released an amount of Rs.3,50,000/- towards "Integrated farming in coconut holdings for productivity improvement-Laying out of demonstration plots" for the year 2011-12 vide its letter read at (4) above.

4. The Director of Horticulture has requested to release the funds released by Coconut Development Board together with matching State share as per his letter read at (5) above.

5. This has been examined and hence this Order.

GOVERNMENT ORDER No.HCD 100 HPP 2011, BANGALORE, DATED:13-03-2012

Government sanction is hereby accorded to release an amount of Rs.5,37,372/- (Rupees Five Lakh Thirty Seven Thousand Three Hundred and Seventy Two only) to the Director of Horticulture under the "Scheme for Integrated Farming in Cocnut for Productivity/Improvement in the State" during 2011-12 under the Head of Account 2401-00-108-2-35-100 (Financial Assistance/Relief) towards Coconut Development Board share and State share as detailed below;

Sl. No.	Particulars	Amount Released (Rs.in lakhs)		
		CDB Share	State Share	Total
1.	Integrated farming in coconut holdings for productivity improvement-laying out of demonstration plots	3,50,000	-	3,50,000
2.	2010-11 Revalidated amount	1,24,872	-	1,24,872
3	Production & Distribution of hybrids/other local tall seedlings	1,31,250	31,250	62,500
	TOTAL	5,06,122	31,250	5,37,372

2. This order is issued with the concurrence by the Internal Financial Advisor, Agriculture and Horticulture Department vide Note: ತೋಇ 11 ಆಂಅಸ 2011 Dated:07-03-2012

BY ORDER AND IN THE NAME OF THE GOVERNOR OF KARNATAKA

B.C.PRAKASH

Under Secretary to Government

Horticulture Department

P.R.890

ಇಂಧನ ಸಚಿವಾಲಯ

ವಿಷಯ : ಮೆ:ವೆಂಕಟೇಶ್ವರ ಪವರ್ ಪ್ರಾಜೆಕ್ಟ್ ಲಿ., ರವರ ಕಬ್ಬಿನ ಸಿಪ್ಪೆಯಾಧಾರಿತ ಸಹ ವಿದ್ಯುತ್ ಘಟಕದ ಸಾಮರ್ಥ್ಯವನ್ನು ಹೆಚ್ಚಿಸುವ ಕುರಿತು.

ಓದಲಾಗಿದೆ : 1) ಸರ್ಕಾರಿ ಪತ್ರ ಸಂಖ್ಯೆ:ಡಿಇ 26 ಎನ್‌ಸಿಇ 2002 ದಿನಾಂಕ:27-03-2002.

2) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ:ಕೆಆರ್‌ಇಡಿ/04/ಎಫ್–31/ಐಎಸ್‌ಎಂಸಿಎಲ್ 2011-12/4165, ದಿನಾಂಕ:22-10-2011.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ ಮೆ: ವೆಂಕಟೇಶ್ವರ ಪವರ್ ಪ್ರಾಜೆಕ್ಟ್ ಲಿಮಿಟೆಡ್., ಇವರಿಗೆ 15 ಮೆಗಾ ವ್ಯಾಟ್ (ಗ್ರಾಸ್) ಮತ್ತು 10 ಮೆಗಾ ವ್ಯಾಟ್ (ಎಕ್ಸಪೋರ್ಟಬಲ್) ಸಾಮರ್ಥ್ಯದ ಕಬ್ಬಿನ ಸಿಪ್ಪೆ ಆಧಾರಿತ ಸಹ–ವಿದ್ಯುತ್ ಘಟಕವನ್ನು ಬೆಳಗಾವಿ ಜಿಲ್ಲೆಯ, ಚಿಕ್ಕೊಡಿ ತಾಲ್ಲೂಕಿನ, ಬೆಡಕಿಹಾಳ್ ಗ್ರಾಮದಲ್ಲಿ ಸ್ಥಾಪಿಸಲು ನಿರಾಕ್ಷೇಪಣೆಯನ್ನು ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂದನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ: ವೆಂಕಟೇಶ್ವರ ಪವರ್ ಪ್ರಾಜೆಕ್ಟ್ ಲಿಮಿಟೆಡ್., ರವರಿಗೆ ನಿರಾಕ್ಷೇಪಣೆ ನೀಡಿರುವ ಮೇಲಿನ ಕಬ್ಬಿನ ಸಿಪ್ಪೆ ಆಧಾರಿತ ಸಹ–ವಿದ್ಯುತ್ ಘಟಕವು ದಿನಾಂಕ:03-11-2004ರಂದು ಕಾರ್ಯಾರಂಭಗೊಂಡಿರುತ್ತದೆ ಎಂದು ತಿಳಿಸಿರುತ್ತಾರೆ. ಹಾಗೂ ಈ ಘಟಕದ 15 ಮೆಗಾ ವ್ಯಾಟ್ (ಗ್ರಾಸ್) ಮತ್ತು 10 ಮೆಗಾ ವ್ಯಾಟ್ (ಎಕ್ಸ್‌ಪೋರ್ಟಬಲ್) ಸಾಮರ್ಥ್ಯವನ್ನು 30 ಮೆ.ವ್ಯಾ. (ಗ್ರಾಸ್) ಮತ್ತು 20 ಮೆಗಾ ವ್ಯಾಟ್ (ಎಕ್ಸಪೋರ್ಟಬಲ್) ಸಾಮರ್ಥ್ಯಕ್ಕೆ ಹೆಚ್ಚಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಈ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಇಎನ್ 414 ಎನ್‌ಸಿಇ 2011, ಬೆಂಗಳೂರು, ದಿನಾಂಕ: 29ನೇ ಫೆಬ್ರವರಿ 2012

ಮೆ: ವೆಂಕಟೇಶ್ವರ ಪವರ್ ಪ್ರಾಜೆಕ್ಟ್ ಲಿಮಿಟೆಡ್.,ರವರಿಗೆ ಬೆಳಗಾವಿ ಜಿಲ್ಲೆಯ, ಚಿಕ್ಕೊಡಿ ತಾಲ್ಲೂಕಿನ, ಬೆಡಕಿಹಾಳ್ ಗ್ರಾಮದಲ್ಲಿ ಸ್ಥಾಪಿಸಲು ನಿರಾಕ್ಷೇಪಣೆ ನೀಡಿರುವ ಕಬ್ಬಿನ ಸಿಪ್ಪೆ ಆಧಾರಿತ ಸಹ–ವಿದ್ಯುತ್ ಘಟಕದ ಸಾಮರ್ಥ್ಯವನ್ನು 15 ಮೆಗಾ ವ್ಯಾಟ್ (ಗ್ರಾಸ್) ಮತ್ತು 10 ಮೆಗಾ ವ್ಯಾಟ್ (ಎಕ್ಸಪೋರ್ಟಬಲ್) ಸಾಮರ್ಥ್ಯದಿಂದ 30 ಮೆ.ವ್ಯಾ. (ಗ್ರಾಸ್) ಮತ್ತು 20 ಮೆಗಾ ವ್ಯಾಟ್ (ಎಕ್ಸಪೋರ್ಟಬಲ್) ಸಾಮರ್ಥ್ಯಕ್ಕೆ ಹೆಚ್ಚಿಸಿ ಆದೇಶಿಸಿದೆ.

ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಟು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಪತ್ರದ ಇತರೆ ನಿಬಂಧನೆಗಳು ಯಥಾವತ್ತಾಗಿ ಮುಂದುವರಿಯುತ್ತವೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.891

ಸುರೇಶ್. ಬಿ. ಕೃಷ್ಣಪ್ಪನವರ್

ಸರ್ಕಾರದ ಅಧೀನ ಕಾರ್ಯದರ್ಶಿ

ಇಂಧನ ಇಲಾಖೆ

COMMERCE AND INDUSTRIES SECRETARIATE

Sub:- Approval to the Project Proposal of M/s Kalawati Ispat & Power Pvt. Ltd., to establish a "300 MW Gas Power Plant, 270 MW Thermal Power Plant, 2.5 Million MTPA Iron Ore Beneficiation, 1.80 Million MTPA Pelletisation, 0.5 Million MTPA Mn Beneficiation, 0.21 Million MTPA DRI, Rolling Mill & Induction Furnace with 40 MW Captive Power Plant" at Janthli and Shiroor Villages, Mundargi Taluk, Gadag District.

Read : 1) Government Order No.CI 196 SPI 2010, Dated:02-06-2010.

2) Proceedings of the 22nd State High Level Clearance Committee (SHLCC) Meeting held on 24-05-2010.

PREAMBLE :

The project proposal of M/s Kalawati Ispat & Power Pvt., Ltd., to establish a "300 MW Gas Power Plant, 270 MW Thermal Power Plant, 2.5 Million MTPA Iron Ore Beneficiation, 1.80 Million MTPA Pelletisation, 0.5 Million MTPA Manganese Beneficiation, 0.21 MTPA DRI, Rolling Mill & Induction Furnace with 40 MW Captive Power Plant" with an investment of Rs.2883.28 crores in 580 acres of land in Janthli and Shiroor Villages, Mundargi Taluk, Gadag District, was approved by the SHLCC at its 22nd meeting held on 24-05-2010. KIADB to acquire and allot land as SUC. Accordingly Government Order vide No.: CI/196/SPI/2010, dated:02-06-2010, has been issued.

The company in its letter dated: 26-04-2011 had informed that the project site identified earlier in Mundargi Taluk, Gadag District is not suitable due to problem in taking railway siding to the project site by crossing NH-63. Now they have identified alternative land to an extent of 580 acres in the village limits of Hanlapur of Gadag Taluk & District at various Sy.Nos as per the Annexure enclosed. Further, the company has sought sanction of 20 MW Power from 110 KV line till their Captive/Power Plant is commissioned. There is no change in the project cost and requirement of water.

The SLAO, KIADB, Dharwad, vide letter dated: 10-06-2011 had reported that the lands now identified by the Company are abutting National Highway-63 & Bellary-Hubli Railway line and suitable for the project. Further it is reported that the said lands are not having any irrigation facilities and only dry crops are being grown.

KSPCB vide letter dated:13-06-2011 had opined that the above said project at the above loction can come up subject to obtaining Environmental Clearance from MOEF, GOI, and the Consent for establishment from KSPCB. They shall leave buffer zone of minimum 500 mtrs from the boundary of the unit to National Highway & Railway line.

The subject was discussed in the 25th SHLCC meeting held on 14-07-2011. The Committee noted about over lapping of land identified by M/s Kalawati Ispat & Power Pvt. Ltd., with other projects, the Committee felt that the proposal to be re-examined in detail by the Screening Committee and hence, the subject was deferred to Screening Committee.

Now, the company vide their letter dated 04-10-2011 have informed that proposed railway siding from Haralapura Railway Station through Sy.Nos.188 to 193 of Harlapura Village are overlapping with the land proposed by M/s Adhunik Metaliks Ltd., identified for their project. The matter has been sorted out between the two companies by entering into MOU on 3-10-2011. In Clause No.6, it is agreed that land from Harlapura Railway Station and up to Plot No.193 to be purchased by KIPPL and Plot No.195 onwards and upto Halligudi Station will be purchased by AML. In Clause No.6 both have permitted the Right of Way of taking off railway siding subject to approval of concerned Railway Authority. The MOU entered by them is valid for a period of 3 years or till the construction of railway sidings by both parties or whichever is earlier. To this effect, M/s Adhunik Metaliks Ltd., has also given a similar letter and the representatives of both companies have affixed their signatures in the combined map.

The subject was placed in the 26th SHLCC and change of location subject to MoU between M/s Adhunik Metaliks Ltd., and M/s Kalawati Ispat & Power Pvt. Ltd., is arrived at.

Now M/s Kalawati ispat & Power Pvt. Ltd., and M/s. Adhunik Metaliks Ltd., have submitted a registered MoU between them for the long term usage of the land for Railway Siding. The registered document is submitted to this office.

Hence the following order.

GOVERNMENT ORDER No.CI 290 SPI 2011, BANGALORE, DATED:07-03-2012

Government is pleased to approve the change of location for the proposal of M/s Kalawati Ispat & Power Pvt. Ltd., from Janthli and Shiroor Villages, Mundargi Taluk, Gadag District to Harlapura Village, Gadag Taluk & District with the conditions that the Company shall adhere to the norms of KSPCB and to obtain and furnish consents of the land owners (70%) to KIADB of the total extent of 580 acres of land to be acquired by KIADB for the project. The Committee also approved for sanction of 20 MW of initial power instead of 1 MW by ESCOM till their CPP starts.

The Committee directed project proponents to commission railway siding as per their MOU dated 03-10-2011 and to enter into a long term agreement for Right of Way to use railway siding.

BY Order and in the name of the Governor of Karnataka

JYOTHI R.J.

P.R.892

Desk Officer (Technical Cell)

Commerce & Industries Department

COMMERCE AND INDUSTRIES SECRETARIATE

Sub:- Approval to the Project Proposal of M/s Adhunik Metaliks Ltd., to establish a "2.2 MTPA Integrated Steel Plant" at Halligudi Village, Mundargi Taluk and Haralapura Village, Gadag Taluk & District.

Read : 1) Proceedings of the 21st State High Level Clearance Committee (SHLCC) Meeting held on 29-03-2010.

2) Government Order No.CI 177 SPI 2010, Dated:17-02-2010.

3) Proceedings of the 26th State High Level Clearance Committee (SHLCC) Meeting held on 09-11-2011.

PREAMBLE :

The project proposal of M/s Adhunik Metaliks Ltd., to establish a "2.2 MTPA Integrated Steel Plant and 220 MW Captive Power Plant" at Deosugur Village, Raichur Taluk and District, with an investment of Rs.5568.40 cr., generating employment to about 2187 persons, was approved by the SHLCC at its 21st meeting held on 29-03-2010. Land identified by the company at Deosugur Village, out of the land Bank identified by KIADB. Accordingly Government Order vide No:CI 177 SPI 2010, dated:17-05-2010, has been issued.

The company in its letter dated:26-07-2011 had stated that the project site are conomically un viable to establish the proposed integrated Steel Plant as these sites are away from mineral resources. Further, the company has sought approval for change of location to Halligudi and Haralapur Villages, Gadag District in 750 acres of land already identified by KIADB.

The SLAO, KIADB, Dharwad, vide letter dated: 10-06-2011 had reported that the lands now identified by the Company are abutting National Highway – 63 & Bellary-Hubli Railway line and suitable for the project. Further it is reported that the said lands are not having any irrigation facilities and only dry crops are being grown.

KSPCB vide letter dated: 13-06-2011 had opined that the above said project at the above location can come up subject to obtaining Environmental Clearance from MOEF, GOI, and Consent for establishment from KSPCB. They shall leave buffer zone of minimum 500 mtrs from the boundary of the unit to National Highway & Railway line.

The subject was discussed in the 21st SHLCC meeting held on 29-03-2010. The Committee noted about over lapping of land identified by M/s Adhunik Metaliks Ltd., with other projects, the Committee felt that the proposal to be re-examined in detail by the Screening Committee and hence, the subject was deferred to Screening Committee.

Now, M/s Kalawati Ispat Power & Pvt. Ltd., have informed vide their letter dated 04-10-2011 that proposed railway siding from Haralapura Railway Station through Sy.Nos. 188 to 193 of Hralapura Village are overlapping with the land proposed by M/s Adhunik Metaliks Ltd., identified for their project. The matter has been sorted out between the two companies by entering into MOU on 3-10-2011. In Clause No.6, it is agreed that land from Harlapura Railway Station and up to Plot No.193 to be purchased by

KIPPL and Plot No.195 onwards and upto Halligudi Station will be purchased by AML. In Clause No.6 both have permitted the Right of Way for taking off railway siding subject to approval of concerned Railway Authority. The MOU entered by them is valid for a period of 3 years or till the construction of railway sidings by both parties or whichever is earlier. To this effect, M/s. Adhunik Metaliks Ltd., has also given a similar letter and the representatives of both companies have affixed their signatures in the combined map.

The subject was placed in the 26th SHLCC for change of location and was approved subject to MoU between M/s.Adhunik Metaliks Ltd., and M/s Kalawati Ispat & Power Pvt. Ltd., is arrived at.

Now M/s. Kalawati Ispat & Power Pvt. Ltd., and M/s. Adhunik Metaliks Ltd., have submitted a registered MoU between them for the long term usage of the land for Railway Siding. The registerd document is submitted to this office.

Hence the following order.

GOVERNMENT ORDER No.CI 177 SPI 2010, BANGALORE, DATED:07-03-2012

Government is pleased to approve the change of location from Deosugur Village, Raichur Taluk & District to 750 acres at a various survey numbers in Halligudi & Haralapur villages, Gadag District; as per annexure enclosed to this Government Order; with the conditions that the Company shall bring at least 70% consents from the land owners to KIADB for acquisition and adhere to the norms of KSPCB. The Committee also approved for deletion of 220 MW Captive Power Plant from the project.

The Committee directed project proponents to commission railway siding as per their MOU dated 3-10-2011 and to enter into a long term agreement for Right of Way to use railway siding.

BY Order and in the name of the Governor of Karnataka

JYOTHI R.J.

P.R.893

Desk Officer (Technical Cell)

Commerce & Industries Department

ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ವಿಷಯ : 2011-12ನೇ ಸಾಲಿಗೆ ಕರ್ನಾಟಕ ಕಾನೂನು ಮತ್ತು ಸಂದೀಯ ಸುಧಾರಣಾ ಸಂಸ್ಥೆಗೆ ಸಹಾಯಾನುಧಾನ ಬಿಡುಗಡೆ ಮಾಡುವ ಬಗ್ಗೆ

ಓದಲಾಗಿದೆ : 1) ಸರ್ಕಾರದ ಆದೇಶ ಸಂಖ್ಯೆ: ಲಾ 57 ಎಲ್ಎಎಂ 2011, ದಿನಾಂಕ:07-04-2011.

2) ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 209 ಬಿಆರ್‌ಎಸ್ 2011, ದಿನಾಂಕ:04-02-2012 ಆರ್ಥಿಕ ಇಲಾಖೆಯಿಂದ.

3) ಸರ್ಕಾರದ ಆದೇಶ ಸಂಖ್ಯೆ: ಲಾ 12 ಎಲ್ಎಡಿ 2011, ದಿನಾಂಕ:02-05-2011, 06-07-2011, 29-10-2011 ಮತ್ತು 16-02-2012.

4) ಪತ್ರ ಸಂಖ್ಯೆ:12/ಕಾಸಂಸು/ಬಿ-1/2011-12/82 ದಿನಾಂಕ:06-02-2012 ನಿರ್ದೇಶಕರು, ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆರವರಿಂದ.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ದಿನಾಂಕ 07-04-2011ರ ಆದೇಶದಲ್ಲಿ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯ ಕ್ರಿಯಾ ಯೋಜನೆಗಳನ್ನು 2011-12 ಸಾಲಿನಲ್ಲಿ ಮುಂದುವರಿಸಲು ಮಂಜೂರಾತಿ ನೀಡಲಾಗಿದೆ. 2011-12ನೇ ಸಾಲಿನಲ್ಲಿ ಕರ್ನಾಟಕ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಂಸ್ಥೆಗೆ 2014-00-800-5-03-059ರ (ಯೋಜನೆ) ಲೆಕ್ಕ ಶೀರ್ಷಿಕೆಯಡಿಯಲ್ಲಿ ರೂ.45.00 ಲಕ್ಷಗಳ ಆಯವ್ಯಯ ಅವಕಾಶವನ್ನು ಕಲ್ಪಿಸಲಾಗಿದೆ, ಮತ್ತು ಮೇಲೆ (2)ರಲ್ಲಿ ಓದಲಾದ ದಿನಾಂಕ:04-02-2012ರ ಸರ್ಕಾರದ ಆದೇಶದಲ್ಲಿ ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆಗೆ ಸ್ಥಳಾವಕಾಶಕ್ಕೆ ಒದಗಿಸಿಕೊಳ್ಳುವ ವೆಚ್ಚಗಳಿಗೆ (To meet the expenditure towards infrastructure of the office of Karnataka Institute of Law and Parliamentary Reforms) ಹೆಚ್ಚುವರಿ ಅನುದಾನವಾಗಿ ರೂ.31.00 ಲಕ್ಷಗಳನ್ನು ಒದಗಿಸಲಾಗಿದೆ. ಉಲ್ಲೇಖಿತ (3)ರಲ್ಲಿ ಓದಲಾದ ದಿನಾಂಕ 02-05-2011, 06-07-2011 ಮತ್ತು 29-10-2011ರ ಆದೇಶಗಳಲ್ಲಿ ಕ್ರಮವಾಗಿ ಒಂದು ಎರಡು ಮತ್ತು ಮೂರನೇ ಕಂತಾಗಿ ತಲಾ ರೂ.11.25 ಲಕ್ಷಗಳಂತೆ ಒಟ್ಟು ರೂ.33.75 ಲಕ್ಷಗಳನ್ನು ಬಿಡುಗಡೆ ಮಾಡಲಾಗಿತ್ತು ಮತ್ತು ದಿನಾಂಕ 16-02-2012 ಆದೇಶದಲ್ಲಿ ನಾಲ್ಕನೇ ಕಂತಾಗಿ ರೂ.31.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಪ್ರಸ್ತುತ ನಿರ್ದೇಶಕರು ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ ಇವರು ಮೇಲೆ (4)ರಲ್ಲಿ ಓದಲಾದ ದಿನಾಂಕ 06-02-2012ರ ಪತ್ರದಲ್ಲಿ ಸಂಸ್ಥೆಯ ಸಿಬ್ಬಂದಿ ವೇತನ ಮತ್ತು ಆಡಳಿತಾತ್ಮಕ ವೆಚ್ಚಗಳಿಗಾಗಿ ತುರ್ತಾಗಿ ರೂ.11.25 ಲಕ್ಷಗಳ ಐದನೇ ಕಮತಿನಲ್ಲಿ ಹಣ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸಂ.ಲಾ. 12 ಎಲ್ಎಡಿ 2011, ಬೆಂಗಳೂರು, ದಿನಾಂಕ: 06ನೇ ಮಾರ್ಚ್ 2012

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, 2011-12ನೇ ಸಾಲಿಗೆ ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆಯ ಸಿಬ್ಬಂದಿ ವೇತನ ಮತ್ತು ಆಡಳಿತಾತ್ಮಕ ವೆಚ್ಚಗಳಿಗಾಗಿ ಮತ್ತು ಇತರೆ ವೆಚ್ಚಗಳ ನಿರ್ವಹಣೆಗಳಿಗೆ ಐದನೇ ಕಂತಾಗಿ ರೂ.11.25 ಲಕ್ಷಗಳು (ರೂಪಾಯಿ ಹನ್ನೊಂದು ಲಕ್ಷದ ಇಪ್ಪತ್ತೈದು ಸಾವಿರ ಮಾತ್ರ) ಸಹಾಯಾನುದಾನವನ್ನು ಈ ಕೆಳಕಂಡ ಷರತ್ತಿನೊಂದಿಗೆ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

1. ಸಂಸ್ಥೆಗೆ ನಿಗದಿಗೊಳಿಸಿರುವ ಕ್ರಿಯಾ ಯೋಜನೆ ಕಾರ್ಯಕ್ರಮಗಳಿಗೆ ಮಾತ್ರ ಬಳಸತಕ್ಕದ್ದು.
2. ಆರ್ಥಿಕ ಇಲಾಖೆ ಆಗಿಂದಾಗ್ಗೆ ಹೊರಡಿಸಿರುವ ಮಿತವ್ಯಯ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
3. ಬಿಡುಗಡೆ ಮಾಡಿರುವ ಹಣಕ್ಕೆ ನಿಗದಿತ ನಮೂನೆಯಲ್ಲಿ ಬಳಕೆ ಪ್ರಮಾಣ ಪತ್ರ ಒದಗಿಸುವುದು.

ಆ ರೀತಿ ಬಿಡುಗಡೆ ಮಾಡುವ ಮೊತ್ತವನ್ನು ಲೆಕ್ಕ ಶೀರ್ಷಿಕೆ "2014-00-800-5-03 ನ್ಯಾಯಾಂಗ" ಇತರೆ ಪೂರ್ವಭಾವಿ ಸೌಕರ್ಯಗಳು - 059 ಸಹಾಯನುಧಾನ (ಯೋಜನೆ)" ಇದರಡಿಯಲ್ಲಿ ಭರಿಸುವುದು. ಇದನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಿದೆಯೋ ಅದೇ ಉದ್ದೇಶಕ್ಕಾಗಿ ನಿಯಮಾನುಸಾರ ಬಳಸತಕ್ಕದ್ದು.

ಇದಕ್ಕೆ ಆರ್ಥಿಕ ಇಲಾಖೆಯವರ ಟಿಪ್ಪಣಿ ಸಂಖ್ಯೆ: ಆಇ 83 ವೆಚ್ಚ 10/2012 ದಿನಾಂಕ 02-03-2012ರ **ಸಹಮತಿ ಮೇರೆಗೆ ಹೊರಡಿಸಲಾಗಿದೆ.**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ರುಕ್ಮಿಣಿ ದಿವಾಕರ್
ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ-2)
ಕಾನೂನು ನ್ಯಾಯ ಮತ್ತು ಮಾನವ
ಹಕ್ಕುಗಳ ಇಲಾಖೆ

ಪಿ.ಆರ್.894

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಬಿ. ಹನುಮಂತರಾಯ, ಮಾಜಿ ಪೊಲೀಸ್ ಇನ್‌ಸ್ಪೆಕ್ಟರ್, ಗುಲ್ಬರ್ಗಾ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :
1. ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಈಶಾನ್ಯ ವಲಯ, ಗುಲ್ಬರ್ಗಾ, ಇವರ ಆದೇಶ ಸಂಖ್ಯೆ : ಇವಿ/1/ಈವ/2010 (ಆ.ಪು.ಸಂ. 660/ಈವ/2010 ದಿನಾಂಕ : 03-11-2010.
2. ಮೇಲ್ಮನವಿ ಪ್ರಾಧಿಕಾರ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಆದೇಶ ಸಂಖ್ಯೆ : ಸಿಬಿ(8)117/2008-09 ದಿನಾಂಕ : 16-08-2011.
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ : 08-09-2011.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ : ಸಿಬಿ(8)117/2008-09 ದಿನಾಂಕ : 20-01-2012.

ಪ್ರಸ್ತಾವನೆ :

ಶ್ರೀ ಬಿ.ಹನುಮಂತರಾಯ, ಇವರು ಲಿಂಗಸುಗೂರು ಪೊಲೀಸ್ ಠಾಣೆಯಲ್ಲಿ ಪೊಲೀಸ್ ಸಬ್ ಇನ್‌ಸ್ಪೆಕ್ಟರ್, ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಅಕ್ರಮ ಸಂಭಾವನೆಗೆ ಒತ್ತಾಯಿಸಿ, ಸಿಬ್ಬಂದಿಯನ್ನು ಕಳುಹಿಸಿ ಹಣ ಪಡೆದು ಕರ್ತವ್ಯದಲ್ಲಿ ಅತೀವ ನಿರ್ಲಕ್ಷತನ ದುರ್ನಡತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿದ ಕಾರಣದ ಮೇಲೆ ಇನ್ನೋರ್ವ ಸಿಬ್ಬಂದಿಯೊಂದಿಗೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು, 1965ರ ನಿಯಮ 6 ರೊಂದಿಗೆ 8 ರಡಿಯಲ್ಲಿ ಜಂಟಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ :

"ಶ್ರೀ ಅನಂತರಾಜು ಬಿನ್ ಗುರಪ್ಪ ಚೌಲ್, ಶಿಕ್ಷಕರು, ಕರ್ನಾಟಕ ಪ್ರೌಢ ಶಾಲೆ, ಗುಲ್ಬರ್ಗಾ ಇವರು ಲಿಂಗಸುಗೂರಿನಲ್ಲಿ ಒಂದು ವೃದ್ಧಾಪ್ಯ ಶಾಲೆಯನ್ನು ನಡೆಸುತ್ತಿದ್ದು ಸರ್ಕಾರದಿಂದ ಈ ಸಂಬಂಧದಲ್ಲಿ ಹಣ ಮಂಜೂರು ಆಗುತ್ತಿದ್ದು, ಸರ್ಕಾರದಿಂದ ಮಂಜೂರಾದ ಹಣದ ದುರ್ಬಳಕೆಯಾದ ಬಗ್ಗೆ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರ ಸಂಬಂಧ ಶ್ರೀ ಅನಂತರಾಜು ಬಿನ್ ಗುರಪ್ಪ ಚೌಲ್ ಇವರು ಮಾನ್ಯ ಉಚ್ಚ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನ ಪಡೆದಿದ್ದರು ನೀವು ಸದರಿಯವರನ್ನು ನಿರೀಕ್ಷಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಲು ರೂ. 52,000-00 ಅಕ್ರಮ ಸಂಭಾವನೆ ಕೊಡುವಂತೆ ಹೇಳಿ ಅದರಲ್ಲಿಯ ಮೊದಲನೇ ಕಂತಾಗಿ ರೂ. 25,000/- ಕೊಡುವಂತೆ ಒತ್ತಾಯಿಸಿ ಸದರಿ ಹಣವನ್ನು ಪಡೆಯಲು ಶ್ರೀ ವೀರಭದ್ರಪ್ಪ, ಸಿಪಿಸಿ-24, ಲಿಂಗಸುಗೂರು ಪೊಲೀಸ್ ಠಾಣೆ, ಇವರನ್ನು ಕಳುಹಿಸುವುದಾಗಿ ಹೇಳಿ ಸದರಿಯವರ ಕೈಯಲ್ಲಿ ಹಣಕೊಡುವಂತೆ ತಿಳಿಸಿ ಕರ್ತವ್ಯದಲ್ಲಿ ಅತೀವ ನಿರ್ಲಕ್ಷತನ ಹಾಗೂ ದುರ್ನಡತೆಯನ್ನು ಪ್ರದರ್ಶಿಸಿದ ಆರೋಪ.

ನೀವು ಲಿಂಗಸುಗೂರು ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದಾಗ ದಿನಾಂಕ : 19-07-2007 ರಂದು ಲಿಂಗಸುಗೂರು ಸಹಾಯಕ ಆಯುಕ್ತರು ಶ್ರೀ ಅನಂತರಾಜು ತಂದೆ ಗುರಪ್ಪ ಚೌಲ್, ಇವರು ನಡೆಸುತ್ತಿದ್ದ ವೃದ್ಧಾಶ್ರಮಕ್ಕೆ ಬೇಟಿ ನೀಡಿ ಆಶ್ರಮದ ಹಣ ದುರುಪಯೋಗವಾದ ಬಗ್ಗೆ ಲಿಂಗಸುಗೂರು ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿದ್ದು, ಇದನ್ನು ಅರಿತ ಶ್ರೀ ಅನಂತರಾಜು ತಂದೆ ಗುರಪ್ಪ ಚೌಲ್ ಇವರು ಉಚ್ಚ ನ್ಯಾಯಾಲಯದಿಂದ ಜಾಮೀನನ್ನು ಪಡೆದು ಲಿಂಗಸುಗೂರು ಠಾಣೆಗೆ ಹಾಜರಾಗಿ ತಾನು ಪಡೆದ ಜಾಮೀನಿನ ಅನ್ವಯ ತನ್ನನ್ನು ಜಾಮೀನಿನ ಮೇಲೆ ಬಿಡಬೇಕೆಂದು ಕೋರಲಾಗಿ ಎ ಮಗನೆ ನೀನು ಸರ್ಕಾರದಿಂದ ಒಟ್ಟು ರೂ. 3,64,133/- ಗಳನ್ನು ಪಡೆದಿರುವಿ ಇದಕ್ಕೆ ನೀನು 15% ರಷ್ಟು ಅಂದಾಜು ರೂ. 52,000/-ವನ್ನು ನನಗೆ ನೀಡಿದರೆ ಜಾಮೀನಿನ ಮೇಲೆ ಬಿಡುತ್ತೇನೆ. ಇಲ್ಲದಿದ್ದರೆ ನಿನ್ನ ಬಟ್ಟೆ ಬಿಚ್ಚಿ ಅರೆಸ್ಟು ಮಾಡುತ್ತೇನೆ ಎಂದು ಹೇಳಿ ಅಸಭ್ಯತನದಿಂದ ವರ್ತಿಸಿ ಸದರಿ ಮೊತ್ತದಲ್ಲಿಯ ಒಂದು ಕಂತು ರೂ. 25,000/-ನ್ನು ಶ್ರೀ ವೀರಭದ್ರಪ್ಪ ಸಿಪಿಸಿಯವರ ಕೈಯಲ್ಲಿ ನೀಡುವಂತೆ ಒತ್ತಾಯಿಸಿ ಕರ್ತವ್ಯದಲ್ಲಿ ಅತೀವ ನಿರ್ಲಕ್ಷತನ ಹಾಗೂ ಬೇಜವಾಬ್ದಾರಿತನದಿಂದ ವರ್ತಿಸಿ ಅಮಾಯಕರಿಗೆ ಅಕ್ರಮ ಸಂಭಾವನೆ ನೀಡುವಂತೆ ತೊಂದರೆ ನೀಡಿರುವಿರಿ".

ಮೇಲ್ಕಂಡ ಆರೋಪದ ಮೇಲೆ ಜಂಟಿ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಈಶಾನ್ಯ ವಲಯ, ಗುಲ್ಬರ್ಗಾ, ಇವರು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ : 03-11-10ರ ಆದೇಶದಲ್ಲಿ ಅರ್ಜಿದಾರರನ್ನು ಸೇವೆಯಿಂದ ವಜಾಗೊಳಿಸಲಾಗಿದೆ. ದಿನಾಂಕ : 19-10-2007 ರಿಂದ 12-02-2008ರವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ : (2)ರಲ್ಲಿ ಓದಲಾದ ದಿನಾಂಕ : 16-08-2011ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನು, ಇಲಾಖಾ ವಿಚಾರಣೆ ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಸದರಿ ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಹೊಸ ಅಂಶಗಳು ಇರುವುದಿಲ್ಲ,. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಅತೀವ ನಿರ್ಲಕ್ಷತನ ದುರ್ನಡತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವಾದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಒಇ 99 ಪೊಸಿಅ 2011 ಬೆಂಗಳೂರು, ದಿನಾಂಕ : 03.03.2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಬಿ. ಹನುಮಂತರಾಯ, ಮಾಜಿ ಪೊಲೀಸ್ ಇನ್‌ಸ್ಪೆಕ್ಟರ್, ಗುಲ್ಬರ್ಗಾ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 895

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಗೋಪಾಲ್ ಎಸ್. ಸಿ.ಪಿ.ಸಿ-1467, ದೊಡ್ಡಪೇಟೆ ಪೊಲೀಸ್ ಠಾಣೆ, ಶಿವಮೊಗ್ಗ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :

1. ಶಿಸ್ತು ಪ್ರಾಧಿಕಾರ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಶಿವಮೊಗ್ಗ ಜಿಲ್ಲೆ, ಇವರ ಆದೇಶ ಸಂಖ್ಯೆ : ಸಿಬ್ಬಂದಿ(5)/ಶಿಕ್ಷೆ/118/2009 (ಓ.ಬಿ. ಸಂಖ್ಯೆ : 52/2010-11) ದಿನಾಂಕ : 02-02-2011.
2. ಮೇಲ್ಮನವಿ ಪ್ರಾಧಿಕಾರ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಪೂರ್ವವಲಯ, ದಾವಣಗೆರೆ, ಇವರ ಆದೇಶ ಸಂಖ್ಯೆ : 14/ಅಪೀಲು/ಸಿಬ್ಬಂದಿ-2/2011-12 (ಓ.ಬಿ. ಸಂಖ್ಯೆ : 46/2011-12) ದಿನಾಂಕ : 15-06-2011.
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ : 06-10-2011.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ : ಅಪೀಲು(2)/47/2011-12, ದಿನಾಂಕ : 04-01-2012.

ಪ್ರಸ್ತಾವನೆ :

ಶ್ರೀ ಎಸ್. ಗೋಪಾಲ, ಇವರು ಭದ್ರಾವತಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ಅತೀವ ನಿರ್ಲಕ್ಷತೆ, ಮತ್ತು ಬೇಜವಾಬ್ದಾರಿತನ ಪ್ರದರ್ಶಿಸಿದ ಕಾರಣದ ಮೇಲೆ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು, 1965ರ ನಿಯಮ 7 ರಡಿಯಲ್ಲಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ :

"ಸಿಪಿಸಿ 1467, ಶ್ರೀ ಗೋಪಾಲ್ ಎಸ್. ಭದ್ರಾವತಿ ಗ್ರಾಮಾಂತರ ಠಾಣೆ ಆದ ನೀವು ಭದ್ರಾವತಿ ಗ್ರಾಮಾಂತರ ವೃತ್ತ ವ್ಯಾಪ್ತಿಯಲ್ಲಿ ಕಲ್ಲು ಗಣಿಗಾರಿಕೆ ನಡೆಯಲು ಅವಕಾಶ ಮಾಡಿಕೊಟ್ಟು ಗುನ್ನೆ ನಂ : 165/09 ಕಲಂ : 304(ಎ) ಐ.ಪಿ.ಸಿ. ಸಹಿತ 3,4 ಎಕ್ಸ್‌ಪ್ಲೋಸಿವ್ ಸಬ್‌ಸ್ಟ್ಯಾನ್ಸ್ ಆಕ್ಟ್ 1908 ಪ್ರಕರಣ ದಾಖಲಾಗಲು ಕಾರಣರಾಗಿ ತೀವ್ರ ನಿರ್ಲಕ್ಷತೆ ಮತ್ತು ಬೇಜವಾಬ್ದಾರಿತನ ಪ್ರದರ್ಶಿಸಿ ಕರ್ತವ್ಯಲೋಪ ಎಸಗಿದ ಬಗ್ಗೆ".

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಶಿವಮೊಗ್ಗ ಜಿಲ್ಲೆ, ಇವರು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ : 02-02-2011ರ ಆದೇಶದಲ್ಲಿ ಅರ್ಜಿದಾರರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ತದನಂತರದ ವಾರ್ಷಿಕ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರದಂತೆ 6 ತಿಂಗಳ ಕಾಲ ಮುಂದೂಡಲಾಗಿದೆ. ದಿನಾಂಕ : 15-08-2009 ರಿಂದ 04-09-2009ರ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಪೂರ್ವ ವಲಯ, ದಾವಣಗೆರೆ, ಇವರು ಮೇಲೆ ಕ್ರಮ ಸಂಖ್ಯೆ : (2)ರಲ್ಲಿ ಓದಲಾದ ದಿನಾಂಕ : 15-06-2011ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನು ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಸದರಿ ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಹೊಸ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ತೀವ್ರ ನಿರ್ಲಕ್ಷತೆ ಮತ್ತು ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವಾದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಒಇ 107 ಪೊಸಿಅ 2011 ಬೆಂಗಳೂರು, ದಿನಾಂಕ : 03.03.2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಗೋಪಾಲ್ ಎಸ್. ಸಿ.ಪಿ.ಸಿ-1467, ದೊಡ್ಡಪೇಟೆ ಪೊಲೀಸ್ ಠಾಣೆ, ಶಿವಮೊಗ್ಗ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 896

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಎಂ.ಎಸ್. ಈಶ್ವರಯ್ಯ, ಪಿ.ಸಿ.-513, 7ನೇ ಪಡೆ, ಕೆ.ಎಸ್.ಆರ್.ಪಿ., ಮಂಗಳೂರು, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :
1. ಶಿಸ್ತು ಪ್ರಾಧಿಕಾರ ಹಾಗೂ ಜಿಲ್ಲಾ ಕಮಾಂಡೆಂಟ್, 4ನೇ ಪಡೆ, ಕೆ.ಎಸ್.ಆರ್.ಪಿ.ಬೆಂಗಳೂರು ನಗರ, ಇವರ ಆದೇಶ ಸಂಖ್ಯೆ : ಡಿಇ-31/2008-09 (ಓ.ಬಿ. ಸಂಖ್ಯೆ : 8/2010-11) ದಿನಾಂಕ : 06-05-2010.
2. ಮೇಲ್ಮನವಿ ಪ್ರಾಧಿಕಾರ ಹಾಗೂ ಡೆಪ್ಯೂಟಿ ಇನ್‌ಸ್ಪೆಕ್ಟರ್ ಜನರಲ್ ಆಫ್ ಪೊಲೀಸ್, ಕೆ.ಎಸ್.ಆರ್.ಪಿ. ಬೆಂಗಳೂರು, ಇವರ ಆದೇಶ ಸಂಖ್ಯೆ : ಅಪೀಲು/03/2010-11 ದಿನಾಂಕ : 6-10-2010.
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ : 03-10-2011.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ : ಅಪೀಲು(2)/46/2011-12, ದಿನಾಂಕ : 29-12-2011.

ಪ್ರಸ್ತಾವನೆ :

ಶ್ರೀ ಎಸ್. ಎಂ. ಈಶ್ವರಯ್ಯ, ಪೊಲೀಸ್ ಕಾನ್ಸ್‌ಟೇಬಲ್, 4ನೇ ಪಡೆ, ಕೆ.ಎಸ್.ಆರ್.ಪಿ., ಇವರು (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಘೋರ ದುರ್ನಡತೆ ಎಸಗಿದ ಕಾರಣದ ಮೇಲೆ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು, 1965ರ ನಿಯಮ 6 ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷಾರೋಪಣೆ :

1. ಪೇದೆ 99 ಎಂ.ಎಸ್. ಈಶ್ವರಯ್ಯ, 'ಸಿ' ದಳ, 4ನೇ ಪಡೆ, ಕೆ.ಎಸ್.ಆರ್.ಪಿ, ಆದ ನೀವು ಹಲಸೂರು ಗೇಟ್ ಮಹಿಳಾ ಪೊಲೀಸ್ ಠಾಣೆ, ಗುನ್ನೆ ಸಂಖ್ಯೆ : 08/2009 ಕಲಂ 498(ಎ) ಭಾ.ದ.ಸಂ. ಸೆಕ್ಷನ್ 3 ಮತ್ತು 4 ಡಿ.ಪಿ. ಆಕ್ಟ್ ಪ್ರಕರಣದಲ್ಲಿ ಭಾಗಿಯಾಗಿ ದಸ್ತಗಿರಿ ಕ್ರಮಕ್ಕೊಳಗಾಗಿ ಶಿಸ್ತು ಇಲಾಖೆಗೆ ಸಲ್ಲದ ಘೋರ ದುರ್ನಡತೆಯ ಕೃತ್ಯವನ್ನೆಸಗಿರುತ್ತೀರೆಂಬ ಆರೋಪವನ್ನು ನಿಮ್ಮ ಮೇಲೆ ಹೊರಿಸಲಾಗಿದೆ.
2. ನೀವು ನಿಮ್ಮ ಸಹೋದರ (ತಮ್ಮ) ಮಾಹಾಲಿಂಗಯ್ಯರವರ ಪತ್ನಿ ಶ್ರೀಮತಿ ಮಮತಾರವರಿಗೆ ವರದಕ್ಷಿಣೆಗೆ ಸಂಬಂಧಿಸಿದಂತೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿದ ಕೃತ್ಯದಲ್ಲಿ ಭಾಗೀದಾರರಾಗಿ ಶಿಸ್ತು ಇಲಾಖೆಯಲ್ಲಿನ ನಿಬಂಧನಾತ್ಮಕ ನಿಯಮಗಳನ್ನು ಗಾಳಿಗೆ ತೂರಿ, ಕೆ.ಸಿ.ಎಸ್. (ನಡತೆ) ನಿಯಮಗಳು 1966ರ ನಿಯಮ 3 ಮತ್ತು 4 ರಲ್ಲಿನ ನಿಬಂಧನೆಗಳನ್ನು ಉಲ್ಲಂಘಿಸಿ ಸರಕಾರಿ ನೌಕರನಿಗೆ ಸಲ್ಲದ ದುರ್ವರ್ತನೆಯ ಆರೋಪವನ್ನು ಎಸಗಿರುತ್ತೀರಿ".

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಜಿಲ್ಲಾ ಕಮಾಂಡೆಂಟ್, 4ನೇ ಪಡೆ, ಕೆ.ಎಸ್.ಆರ್.ಪಿ., ಬೆಂಗಳೂರು ನಗರ, ಇವರು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ : 06-05-2010ರ ಆದೇಶದಲ್ಲಿ ಅರ್ಜಿದಾರರನ್ನು ಸೇವೆಯಿಂದ ವಜಾಗೊಳಿಸಲಾಗಿದೆ, ದಿನಾಂಕ : 24-02-2009 ರಿಂದ 04-03-2010ರವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಿ, ಈ ಅವಧಿಯಲ್ಲಿ ಪಡೆದ ವೇತನ ಭತ್ಯೆಗಳನ್ನು ಜೀವನಾಂಶ ಭತ್ಯೆಗೆ ಸೀಮಿತಗೊಳಿಸಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಡೆಪ್ಯೂಟಿ ಇನ್‌ಸ್ಪೆಕ್ಟರ್ ಜನರಲ್ ಆಫ್ ಪೊಲೀಸ್, ಇವರು ಮೇಲೆ ಕ್ರಮ ಸಂಖ್ಯೆ : (2)ರಲ್ಲಿ ಓದಲಾದ ದಿನಾಂಕ : 06-10-2010ರ ಆದೇಶದಲ್ಲಿ ಶಿಸ್ತು ಪ್ರಾಧಿಕಾರದ ದಂಡನಾದೇಶವನ್ನು ಮಾರ್ಪಡಿಸಿ ಅರ್ಜಿದಾರರನ್ನು ಸೇವೆಗೆ ಪುನರ್ ನೇಮಕ ಮಾಡಿ, ಇವರ ವೇತನವನ್ನು ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಯ ಕನಿಷ್ಠ ಮೂಲ ವೇತನಕ್ಕೆ 5 ವರ್ಷಗಳ ಕಾಲ ಇಳಿಸಲಾಗಿದೆ. ತದನಂತರ ಸೇವೆಯಿಂದ ವಜಾಗೊಳಿಸಿದ ಆದೇಶದ ದಿನಾಂಕದಂದು ಪಡೆಯುತ್ತಿದ್ದ ವೇತನಕ್ಕೆ ನಿಗಧಿಪಡಿಸುವಂತೆ ಹಾಗೂ ಸೇವೆಯಿಂದ ಹೊರಗುಳಿದ ಅವಧಿಯನ್ನು dies-non ಎಂದು ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಲಾಗಿದೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ ಇಲಾಖಾ ವಿಚಾರಣೆ ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಸದರಿ ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಹೊಸ ಅಂಶಗಳು ಇರುವುದಿಲ್ಲ, ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಘೋರ ದುರ್ನಡತೆ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಒಇ 108 ಪೊಸಿಅ 2011 ಬೆಂಗಳೂರು, ದಿನಾಂಕ : 03.03.2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎಂ.ಎಸ್. ಈಶ್ವರಯ್ಯ, ಪಿ.ಸಿ.–513, 7ನೇ ಪಡೆ, ಕೆ.ಎಸ್.ಆರ್.ಪಿ., ಮಂಗಳೂರು, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 897

ಟಿ.ಎನ್. ರವಿಪ್ರಕಾಶ್
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಗ್ರಂಥಾಲಯ ಸಚಿವಾಲಯ

ವಿಷಯ : ಕರ್ನಾಟಕ ಸರ್ಕಾರದ ಸಚಿವಾಲಯದ ಗ್ರಂಥಾಲಯಕ್ಕೆ 2012–13ನೇ ಸಾಲಿಗೆ ನಿಯತಕಾಲಿಕೆ/ದಿನಪತ್ರಿಕೆಗಳನ್ನು ತರಸಿಕೊಳ್ಳುವ ಬಗ್ಗೆ.

ಓದಲಾಗಿದೆ : ಟೆಂಡರ್ ಪ್ರಕಟಣೆ ಸಂಖ್ಯೆ : ಸಿಆಸುಇ 01 ಸಗ್ರನಿ 2012, ದಿನಾಂಕ : 24–01–2012.

ಪ್ರಸ್ತಾವನೆ :

ಓದಲಾಗಿರುವ ಟೆಂಡರ್ ಪ್ರಕಟಣೆಯನ್ನು ದಿನಾಂಕ : 31–01–2012ರ ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ಪ್ರಕಟಿಸಿ, ಅನುಭವಸ್ಥ ಸರಬರಾಜುದಾರರಿಂದ ಸಚಿವಾಲಯ ಗ್ರಂಥಾಲಯಕ್ಕೆ 2012–2013ನೇ ಸಾಲಿಗೆ ನಿಯತಕಾಲಿಕೆ/ದಿನಪತ್ರಿಕೆಗಳನ್ನು ಸರಬರಾಜು ಮಾಡಲು ದರ ಪಟ್ಟಿಗಳನ್ನು ಆಹ್ವಾನಿಸಲಾಗಿತ್ತು. ಈ ಟೆಂಡರ್ ಪ್ರಕಟಣೆಗೆ ನಾಲ್ಕು ಗುತ್ತಿಗೆದಾರರಾದ 1) ಮೆ: ಲೋಹಿತ್ ಎಂಟರ್‌ಪ್ರೈಸಸ್, ರಾಜರಾಜೇಶ್ವರಿನಗರ, ಬೆಂಗಳೂರು 2) ಮೆ: ಲತಾ ಎಂಟರ್‌ಪ್ರೈಸಸ್, ಅಬ್ಬಾಯಪ್ಪ ಲೇಔಟ್, ಬೆಂಗಳೂರು 3) ಮೆ: ಶಶಾಂಕ ನ್ಯೂಸ್ ಏಜೆನ್ಸಿ, ಮುನೇಶ್ವರ ಬ್ಲಾಕ್, ಬೆಂಗಳೂರು ಮತ್ತು 4) ಮೆ: ಲಿಖಿತಾ ಎಂಟರ್‌ಪ್ರೈಸಸ್, ಶಾಂತಿನಗರ, ಬೆಂಗಳೂರು, ಇವರುಗಳು ಸರ್ಕಾರಕ್ಕೆ ಟೆಂಡರನ್ನು ಸಲ್ಲಿಸಿರುತ್ತಾರೆ. ಈ ನಾಲ್ಕು ಗುತ್ತಿಗೆದಾರರ ಪೈಕಿ M/s Lohit Enterprises, No. 40A, BEML 3rd Stage Extn, Gattigere Layout, Rajarajeshwari Nagar, Bangalore-98, ಇವರು ಸರ್ಕಾರಕ್ಕೆ ಅತಿ ಹೆಚ್ಚಿನ ರಿಯಾಯಿತಿ ದರವನ್ನು (1.55%) ನೀಡುವಂತೆಯೂ ಮತ್ತು ರೂಪಾಯಿಗಳು ಐವತ್ತು ಸಾವಿರ ಮೊತ್ತದ ಹಣವನ್ನು ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ ನೀಡಲು ಒಪ್ಪಿರುತ್ತಾರೆ. ಆದ್ದರಿಂದ ಇವರನ್ನು ಯಶಸ್ವಿ ಟೆಂಡರ್‌ದಾರರೆಂದು ಸರ್ಕಾರ ಪರಿಗಣಿಸಿದೆ ಮತ್ತು ದಿನಾಂಕ : 01–04–2012 ರಿಂದ 31–03–2013ರ ಅವಧಿಗೆ ಸಚಿವಾಲಯ ಗ್ರಂಥಾಲಯಕ್ಕೆ ಈ ಆದೇಶಕ್ಕೆ ಲಗತ್ತಿಸಲಾದ ತಃಖ್ತೆಯಲ್ಲಿ ನಮೂದಿಸಲಾದ ನಿಯತಕಾಲಿಕೆ/ದಿನಪತ್ರಿಕೆಗಳನ್ನು ಸರಬರಾಜು ಮಾಡಲು ಅನುಮತಿಯನ್ನು ನೀಡಲು ನಿರ್ಧರಿಸಿ, ಈ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 01 ಸಗ್ರನಿ 2012, ಬೆಂಗಳೂರು ದಿನಾಂಕ : 06.03.2012.

ಸಚಿವಾಲಯ ಗ್ರಂಥಾಲಯಕ್ಕೆ ದಿನಾಂಕ : 01–04–2012 ರಿಂದ 31–03–2013ರ ಅವಧಿಗೆ ನಿಯತಕಾಲಿಕೆ/ದಿನಪತ್ರಿಕೆಗಳ ಸರಬರಾಜುದಾರರಾದ M/s Lohit Enterprises, No. 40A, BEML 3rd Stage Extn, Gattigere Layout, Rajarajeshwari Nagar, Bangalore-98, ಇವರಿಗೆ ಈ ಕೆಳಕಂಡ ಷರತ್ತುಗಳೊಂದಿಗೆ ಮುಂಗಡವಾಗಿ ಹಣ ಪಾವತಿ ಮಾಡಿ ಇದಕ್ಕೆ ಲಗತ್ತಿಸಿರುವ ತಃಖ್ತೆಯಲ್ಲಿ ನಮೂದಿಸಿದಂತೆ ನಿಯತಕಾಲಿಕೆ/ದಿನಪತ್ರಿಕೆಗಳನ್ನು ತರಸಿಕೊಳ್ಳಲು ಸರ್ಕಾರದ ಮಂಜೂರಾತಿ ನೀಡಲಾಗಿದೆ. ನಿಯತಕಾಲಿಕೆ/ದಿನಪತ್ರಿಕೆಗಳ ಖರೀದಿಗಾಗಿ ತಗಲುವ ವೆಚ್ಚವನ್ನು ಸಚಿವಾಲಯದ ಲೆಕ್ಕ ಶೀರ್ಷಿಕೆ "2052–00–090–0–01–051 ಸಾಮಾನ್ಯ ವೆಚ್ಚಗಳು" ರ ಅಡಿಯಲ್ಲಿ ಭರಿಸತಕ್ಕದ್ದು.

ಷರತ್ತುಗಳು :

1. ಸರಬರಾಜುದಾರರ ಪ್ರತಿ ಮೂರು ತಿಂಗಳಿಗೊಮ್ಮೆ ಮುಂಗಡ ಹಣವನ್ನು ಕ್ಲೈಮ್ ಮಾಡುವುದು.
2. ಸರಬರಾಜುದಾರರು ನಿಯತಕಾಲಿಕೆ/ದಿನಪತ್ರಿಕೆಗಳ ಮುಖ ಬೆಲೆಯ ಶೇಖಡ 1.55% ರಿಯಾಯಿತಿಯನ್ನು ಸರ್ಕಾರಕ್ಕೆ ಬಿಟ್ಟುಕೊಡುವುದು.
3. ಈ ಆದೇಶ ಹೊರಡಿಸಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ರೂ. 50,000/– (ರೂಪಾಯಿಗಳು ಐವತ್ತು ಸಾವಿರ ಮಾತ್ರ)ಗಳ ಮೊತ್ತದ ಬ್ಯಾಂಕ್ ಗ್ಯಾರಂಟಿಯನ್ನು ಸರ್ಕಾರಕ್ಕೆ ನೀಡುವುದು.
4. ನಿಯತಕಾಲಿಕೆಗಳನ್ನು ಮಾರುಕಟ್ಟೆಯಲ್ಲಿ ಬಿಡುಗಡೆಯಾದ ದಿನವೇ ಸರಬರಾಜು ಮಾಡತಕ್ಕದ್ದು. ಇಲ್ಲವಾದಲ್ಲಿ ಗ್ರಂಥಾಲಯದಿಂದಲೇ ಅವುಗಳನ್ನು ಮಾರುಕಟ್ಟೆಯಿಂದ ಖರೀದಿಸಲಾಗುವುದು ಹಾಗೂ ಅದಕ್ಕೆ ತಗಲುವ ವೆಚ್ಚವನ್ನು ಗುತ್ತಿಗೆದಾರರು ನೀಡಬೇಕಾಗಿರುತ್ತದೆ.
5. ನಿಯತಕಾಲಿಕೆ/ದಿನಪತ್ರಿಕೆಗಳನ್ನು ಸಕಾಲದಲ್ಲಿ ಸರಬರಾಜು ಮಾಡಲು ವಿಫಲವಾದಲ್ಲಿ, ಒಂದು ನೋಟೀಸನ್ನು ನೀಡಿದ ನಂತರ ಗುತ್ತಿಗೆಯನ್ನು ರದ್ದು ಮಾಡಲಾಗುವುದು ಹಾಗೂ ನಷ್ಟವಾದ ಮೊತ್ತವನ್ನು ಬ್ಯಾಂಕ್ ಗ್ಯಾರಂಟಿಯಿಂದ ವಸೂಲು ಮಾಡಲಾಗುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 96 ದಿನಾಂಕ : 10–07–1996 ರಲ್ಲಿ ಪ್ರದತ್ತವಾದ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಅನಂತ್ ಎನ್ ಕಾಸ್ಕರ್
ಮುಖ್ಯ ಗ್ರಂಥಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಸಚಿವಾಲಯ ಗ್ರಂಥಾಲಯ

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 01 ಸಗ್ರನಿ 2012, ದಿನಾಂಕ : 06-03-2012ಕ್ಕೆ ಸಂಬಂಧಿಸಿದ

ತಖ್ತೆ:-1

ಸಚಿವಾಲಯ ಗ್ರಂಥಾಲಯಕ್ಕೆ ದಿನಾಂಕ : 01-04-2012 ರಿಂದ 31-03-2013 ರವರೆಗೆ ಸರಬರಾಜು ಮಾಡಬೇಕಾಗಿರುವ ನಿಯತಕಾಲಿಕೆ ಹಾಗೂ ದಿನಪತ್ರಿಕೆಗಳ ವಿವರ

ಕ್ರ.ಸಂ.	ನಿಯತಕಾಲಿಕೆಗಳ ಹೆಸರು	ಪ್ರತಿಗಳ ಸಂಖ್ಯೆ
1.	AdMag	2
2.	Alive	4
3.	ಬಾಲಮಂಗಳ	4
4.	ಬಾಲಮಿತ್ರ	4
5.	ಭಾನುವಾರ	4
6.	Business India	2
7.	Business World	2
8.	CHIP Intelligent Computing	2
9.	Career	2
10.	Capital Market	2
11.	ಚಂಪಕ	2
12.	Champak (Eng)	4
13.	ಚಂದಮಾಮ	4
14.	Chandamama (Eng)	4
15.	Cine Blitz	4
16.	Civil Services Chronicle	4
17.	Competitions Success Review	4
18.	Digit	4
19.	Employment News	4
20.	Femina	4
21.	Filmfare	4
22.	Frontline	6
23.	General Knowledge Today	4
24.	ಗೃಹಶೋಭ	8
25.	Health & Nutrition	4
26.	ಹಾಯ್ ಬೆಂಗಳೂರು	6
27.	Indian Management	2
28.	India Today	6
29.	Inside Outside	2
30.	ಕರ್ಮವೀರ	8
31.	ಕಸ್ತೂರಿ	6
32.	ಲಂಕೇಶ್ ಪತ್ರಿಕೆ	8
33.	ಲಂಕೇಶ್ (ಗೌರಿ)	4
34.	ಮಂಗಳ	4
35.	ಮಯೂರ	8
36.	Outlook	6
37.	ಪ್ರಿಯಾಂಕ	4
38.	Readers Digest	4
39.	ರೂಪತಾರ	6

40.	Savvy	4
41.	Screen	4
42.	Society	4
43.	Sports Star	6
44.	Star Dust	4
45.	Star Teller	2
46.	ಸುಧಾ	8
47.	ಸ್ಪರ್ಧಾ ಚೈತ್ರ	4
48.	ಸ್ಪರ್ಧಾ ಸ್ಫೂರ್ತಿ	4
49.	ಸ್ಪರ್ಧಾ ವಿಜೇತ	4
50.	ಸ್ಪರ್ಧಾ ಜಗತ್ತು	4
51.	ಸಂಜೀವಿನಿ	4
52.	ತರಂಗ	8
53.	ತುಂತುರು	2
54.	The Week	6
55.	Tinkle	4
56.	ತುಷಾರ	6
57.	Wisdom	4
58.	Woman's Era	6
59.	Ananda Vikatan (Tamil)	1
60.	Swaathi (Telugu)	1

ತಖ್ತೆ:-2

ದಿನಪತ್ರಿಕೆಗಳ ವಿವರ

ಕ್ರಸಂ.	ದಿನಪತ್ರಿಕೆ ಹೆಸರು	ಪ್ರತಿಗಳ ಸಂಖ್ಯೆ
1.	ಉದಯವಾಣಿ	8
2.	ಕನ್ನಡ ಪ್ರಭ	10
3.	ಪ್ರಜಾವಾಣಿ	8
4.	ವಿಜಯ ಕರ್ನಾಟಕ	8
5.	ಸಂಜೆ ವಾಣಿ	6
6.	ಸಂಯುಕ್ತ ಕರ್ನಾಟಕ	8
7.	ಹೊಸ ದಿಗಂತ	4
8.	Bangalore Mirror	4
9.	Business Line	4
10.	Business Standard	4
11.	Deccan Chronicle	4
12.	Deccan Herald	9
13.	DNA	4
14.	Economic Times	4
15.	Financial Express	4
16.	Mint	4
17.	New Indian Express	8
18.	Times of India	8
19.	The Hindu	6

ಸಹಕಾರ ಸಚಿವಾಲಯ

ವಿಷಯ : ಸಿರಗುಪ್ಪ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ ನಡೆದಿರುವ ಅವ್ಯವಹಾರಗಳಿಗೆ ಕಾರಣರಾದ ಅಧಿಕಾರಿ ಮತ್ತು ನೌಕರರ ವಿರುದ್ಧ ಶಿಸ್ತು ಕ್ರಮ ಕುರಿತು ಅಂತಿಮ ಆದೇಶ.

ಓದಲಾಗಿದೆ :
1. ನಿರ್ದೇಶಕರು, ಕೃಷಿ ಮಾರಾಟ ಇಲಾಖೆ ರವರ ಪತ್ರ ಸಂಖ್ಯೆ : ಕೃಮಾಇ/271/ಸಿಬ್ಬಂದಿ-1(ಬಿ)/2007 ದಿನಾಂಕ : 20-10-2011.
2. ಸರ್ಕಾರದ ಆದೇಶ ಸಂಖ್ಯೆ : ಸಇ 140 ಮಾಇಸೇ 2008 ದಿನಾಂಕ : 14-07-2008.
3. ಇಲಾಖಾ ವಿಚಾರಣಾಧಿಕಾರಿಗಳ ವರದಿ ದಿನಾಂಕ : 14-12-2009.
4. ಸರ್ಕಾರದ 2ನೇ ಕಾರಣ ಕೇಳುವ ನೋಟೀಸು ಸಂಖ್ಯೆ : ಸಇ 140 ಮಾಇಸೇ (1 ರಿಂದ 10) 2008 ದಿನಾಂಕ : 09-02-2010 ಮತ್ತು ಅಧಿಕಾರಿ ನೌಕರರ ಲಿಖಿತ ಸಮಜಾಯಿಷಿ ಹೇಳಿಕೆಗಳು.
5. ಸರ್ಕಾರದ ಆದೇಶ ಸಂಖ್ಯೆ : ಸಇ 140 ಮಾಇಸೇ 2008 (ಭಾಗ) ದಿನಾಂಕ : 28-01-2011.
6. ನಿರ್ದೇಶಕರು, ಕೃಷಿ ಮಾರಾಟ ಇಲಾಖೆ ಇವರ ಪತ್ರ ಸಂಖ್ಯೆ : ಕೃಮಾಇ/271/ಸಿಬ್ಬಂದಿ-1(ಬಿ) 2007 ದಿನಾಂಕ : 20-10-2001.
7. ಸರ್ಕಾರದ ಆದೇಶ ಸಂಖ್ಯೆ : ಸಇ 140 ಮಾಇಸೇ(2) 2008, ದಿನಾಂಕ : -02-2012.

ಪ್ರಸ್ತಾವನೆ :

ಸಿರಗುಪ್ಪ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ವ್ಯಾಪ್ತಿಯಲ್ಲಿ ಭತ್ತ ಮತ್ತು ಅಕ್ಕಿ ಅಧಿಸೂಚಿತ ಕೃಷಿ ಉತ್ಪನ್ನಗಳ ವ್ಯಾಪಾರ ವ್ಯವಹಾರದಲ್ಲಿ ಸಾಗಾಣಿಕೆ, ಪರ್ಮಿಟ್ ಪುಸ್ತಕಗಳ ದುರ್ಬಳಕೆ, ಮಾರುಕಟ್ಟೆ ಶುಲ್ಕ ವಸೂಲಿ ಮಾಡಲು ಕ್ರಮ ಕೈಗೊಳ್ಳದೇ ಇರುವುದು, ಪರ್ಮಿಟ್ ಲೆಕ್ಕ ಪುಸ್ತಕಗಳನ್ನು ಆಡಿಟ್ ತಪಾಸಣೆಗೆ ಒದಗಿಸದೇ ಇರುವುದು ಮುಂತಾದ ಅವ್ಯವಹಾರಗಳಿಂದಾಗಿ 2003-04 ರಿಂದ 2006-07ನೇ ಸಾಲಿನವರೆಗೆ ಸಮಿತಿಗೆ ಆರ್ಥಿಕ ನಷ್ಟ ಉಂಟು ಮಾಡಿರುವುದಾಗಿ ವಿಶೇಷ ಲೆಕ್ಕಪರಿಶೋಧಕರು, ಕೃಷಿ ಮಾರಾಟ ಇಲಾಖೆ, ಗುಲ್ಬರ್ಗಾ ವಿಭಾಗ, ಗುಲ್ಬರ್ಗಾ. ಇವರು ಸಲ್ಲಿಸಿದ ಲೆಕ್ಕಪರಿಶೋಧನಾ ವರದಿಯಲ್ಲಿ ಸಿರಗುಪ್ಪ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ ಕಾರ್ಯನಿರ್ವಹಿಸಿದ ಈ ಕೆಳಕಂಡ ಅಧಿಕಾರಿ ಮತ್ತು ನೌಕರರು ಕಾರಣರಾಗಿರುವುದರಿಂದ ಸದರಿ ಅಧಿಕಾರಿ/ನೌಕರರ ವಿರುದ್ಧ ಜಂಟಿ ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿಗಳನ್ನು ನೇಮಿಸುವಂತೆ ಕೋರಿ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ರವರು ಮೇಲೆ (1)ರಲ್ಲಿ ಓದಲಾದ ತಮ್ಮ ಪತ್ರದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು.

ಕ್ರ.ಸಂ.	ಅಧಿಕಾರಿ/ನೌಕರರ ಹೆಸರು ಶ್ರೀಯುತರು	ಶಿರಗುಪ್ಪ ಸಮಿತಿಯಲ್ಲಿ ಕಾರ್ಯನಿರ್ವಹಿಸಿದ ಹುದ್ದೆ
1	ಆರ್. ತಿಪ್ಪೆಸ್ವಾಮಿ	ಕಾರ್ಯದರ್ಶಿ
2	ಎಲ್. ಅಮರೇಶ್	ಸಹಾಯಕ ಕಾರ್ಯದರ್ಶಿ ಮತ್ತು ಕಾರ್ಯದರ್ಶಿ
3	ಪಿ.ಟಿ. ವಿರೂಪಾಕ್ಷಪ್ಪ	ಕಾರ್ಯದರ್ಶಿ
4	ಎಸ್. ಮಲ್ಲಿಕಾರ್ಜುನ	ಪ್ರಥಮ ದರ್ಜೆ ಸಹಾಯಕ ಮತ್ತು ಸಹಾಯಕ ಕಾರ್ಯದರ್ಶಿ
5	ಮುತ್ತಣ್ಣ	ಲೆಕ್ಕಿಗರು
6	ಮುರ್ತುಜಾಸಾಬ್	ಲೆಕ್ಕಿಗರು ದರ್ಜೆ-2
7	ಬಿ. ಲಕ್ಷ್ಮೀನಾರಾಯಣ	ಆಂತರಿಕ ಲೆಕ್ಕ ಪರಿಶೋಧಕರು
8	ಕೆ. ಮನೋಹರ	ಆಂತರಿಕ ಲೆಕ್ಕ ಪರಿಶೋಧಕರು
9	ಶಾಮಣ್ಣ	ಮಾರಾಟ ಸಹಾಯಕರು
10	ಶ್ರೀಮಂತ ಏಡ್ಡಿ	ಮಾರಾಟ ಸಹಾಯಕರು
11	ವಲೀಭಾಷಾ	ಮಾರಾಟ ಸಹಾಯಕರು
12	ಹೆಚ್. ಪ್ರತಾಪ್ ಗೌಡ	ದ್ವಿತೀಯ ದರ್ಜೆ ಸಹಾಯಕರು

ಮೇಲೆ (2)ರಲ್ಲಿ ಓದಲಾದ ಆದೇಶದಲ್ಲಿ ಸಿರಗುಪ್ಪ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ 2003-04 ರಿಂದ 2006-07ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ಸಮಿತಿಗೆ ಆರ್ಥಿಕ ನಷ್ಟ ಉಂಟಾಗಲು ಕಾರಣರಾದ ಮೇಲಿನ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ನಾಗರೀಕ ಸೇವಾ (ಸಿ.ಸಿ.ಎ.) ನಿಯಮಾವಳಿಗಳು ನಿಯಮ 1957ರ ನಿಯಮ 13ರ ಅನ್ವಯ ವಿಚಾರಣಾಧಿಕಾರಿಯಾಗಿ ಶ್ರೀ ಕೆ.ಎನ್. ನಾಗೇಂದ್ರ ಕುಮಾರ್ ನಿವೃತ್ತ ಜಿಲ್ಲಾ ಸೆಷನ್ ನ್ಯಾಯಾಧೀಶರು, ಬೆಂಗಳೂರು ಇವರನ್ನು ನೇಮಿಸಲಾಗಿತ್ತು.

ಮೇಲೆ (3)ರಲ್ಲಿ ಓದಲಾದ ಪತ್ರದಲ್ಲಿ ವಿಚಾರಣಾಧಿಕಾರಿಗಳು ಪ್ರಕರಣದ ವಿಚಾರಣೆಯನ್ನು ಪೂರ್ಣಗೊಳಿಸಿ ವಿಚಾರಣಾ ವರದಿಯನ್ನು ದಿನಾಂಕ : 14-12-2009 ರಂದು ಸರ್ಕಾರಕ್ಕೆ ಸಲ್ಲಿಸಿದ್ದು ವಿಚಾರಣಾ ವರದಿಯಲ್ಲಿ ಮೇಲ್ಕಂಡ ಆರೋಪಿತ ಅಧಿಕಾರಿ/ನೌಕರರ ಪೈಕಿ ಕ್ರಮ ಸಂಖ್ಯೆ : 2 ಮತ್ತು 3 ರಲ್ಲಿರುವ ಶ್ರೀ ಎಲ್. ಅಮರೇಶ್ ಮತ್ತು ಶ್ರೀ ಪಿ.ಟಿ. ವಿರೂಪಾಕ್ಷಪ್ಪ ಇವರುಗಳ ವಿರುದ್ಧ ಮಾಡಲಾದ ಆರೋಪಗಳು ಸಾಬೀತಾಗಿರುವುದಿಲ್ಲವೆಂದು ಮತ್ತು ಉಳಿದಂತೆ ಕ್ರಮ ಸಂಖ್ಯೆ 1, 4 ರಿಂದ 12 ವರೆಗಿನ ಅಧಿಕಾರಿ/ನೌಕರರ ವಿರುದ್ಧ ಆರೋಪಗಳು ರುಜುವಾತಾಗಿರುವುದಾಗಿ ವಿಚಾರಣಾ ವರದಿಯಲ್ಲಿ ವರದಿ ಮಾಡಿರುತ್ತಾರೆ.

ವಿಚಾರಣಾ ವರದಿಯಲ್ಲಿ ಆರೋಪಗಳು ರುಜುವಾತಾಗಿರುವ ಅಧಿಕಾರಿ/ನೌಕರರಿಗೆ 2ನೇ ಕಾರಣ ಕೇಳುವ ನೋಟೀಸಿನೊಂದಿಗೆ ಇಲಾಖಾ ವಿಚಾರಣೆಯ ಅಂತಿಮ ವರದಿಯ ಯಥಾ ಪ್ರತಿಯನ್ನು ಕಳುಹಿಸಿ ಅವರ ಲಿಖಿತ ಪ್ರತಿಪಾದನಾ ಹೇಳಿಕೆಯನ್ನು ನೀಡುವಂತೆ ಮೇಲೆ (4)ರಲ್ಲಿ ಓದಲಾದ ನೋಟೀಸಿನಲ್ಲಿ ಸೂಚಿಸಲಾಗಿತ್ತು. ಅದರಂತೆ ಎಲ್ಲಾ ಆರೋಪಿತ ಅಧಿಕಾರಿ/ನೌಕರರು ತಮ್ಮ ಲಿಖಿತ ಪ್ರತಿಪಾದನಾ ಹೇಳಿಕೆಯನ್ನು ಸಲ್ಲಿಸಿ, ವಿಚಾರಣಾ ಪ್ರಾಧಿಕಾರವು ನೀಡಿರುವ ವರದಿಯನ್ನು

ಸಿರಗುಪ್ಪ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ ಅವ್ಯವಹಾರಗಳಿಗೆ ಕಾರಣರಾದ ಮತ್ತು ಜಂಟಿ ವಿಚಾರಣೆಗೆ ಒಳಪಡಿಸಲಾಗಿದ್ದ ಒಟ್ಟು 12 ಅಧಿಕಾರಿಗಳ ಪೈಕಿ, 12ನೇ ಆರೋಪಿಯಾಗಿದ್ದ ಶ್ರೀ ಹೆಚ್. ಪ್ರತಾಪ್ ಗೌಡ ದ್ವಿತೀಯ ದರ್ಜೆ ಸಹಾಯಕ ಇವರು ದಿನಾಂಕ : 25-08-2010 ರಂದು ನಿಧನ ಹೊಂದಿರುವುದಾಗಿ ಇಲಾಖೆಯ ಪತ್ರ ಸಂಖ್ಯೆ : ಕೃಮಾಇ 271 ಸಿಬ್ಬಂದಿ-1(ಬಿ) 2007 ದಿನಾಂಕ : 04-12-2010ರ ವರದಿಯ ಆಧಾರದ ಮೇಲೆ (5)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಈ ಪ್ರಕರಣದ 12ನೇ ಆರೋಪಿಯಾದ ಶ್ರೀ ಹೆಚ್. ಪ್ರತಾಪ್ ಗೌಡ ದ್ವಿತೀಯ ದರ್ಜೆ ಸಹಾಯಕರು ಇವರ ವಿರುದ್ಧದ ಆರೋಪಗಳು ವಿಚಾರಣೆ ಹಾಗೂ ಶಿಸ್ತು ಕ್ರಮ ತೆಗೆದುಕೊಳ್ಳುವ ಅಗತ್ಯತೆ ಇಲ್ಲದೇ ಇರುವುದರಿಂದ ಇವರ ವಿರುದ್ಧದ ವಿಚಾರಣೆಯನ್ನು ಕೈಬಿಡಲಾಗಿದೆ.

ಮೇಲೆ (6)ರಲ್ಲಿ ಓದಲಾದ ಪತ್ರದಲ್ಲಿ ಶಿರಗುಪ್ಪ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ 2003-04 ರಿಂದ 2006-07ನೇ ಸಾಲಿನ ಪರ್ಮಿಟ್ ಪುಸ್ತಕಗಳು ದುರುಪಯೋಗವಾಗಿರುವುದು ದೃಢಪಟ್ಟಿರುವುದರಿಂದ ಇಲಾಖಾ ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯಲ್ಲಿ ಅವರುಗಳ ವಿರುದ್ಧದ ಆರೋಪಗಳು ಸಾಬೀತಾಗಿದ್ದು ಆ ಅಧಿಕಾರಿ/ನೌಕರರ ವಿರುದ್ಧ ಪುನರ್ ವಿಚಾರಣೆ ಅವಶ್ಯಕತೆ ಇರುವುದಿಲ್ಲವೆಂದು ಅವರುಗಳಿಗೆ ದಂಡನೆ ನಿಗದಿಪಡಿಸಬಹುದೆಂದು ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ಇವರು ಸರ್ಕಾರಕ್ಕೆ ವರದಿ ಮಾಡಿರುತ್ತಾರೆ.

ಮೇಲೆ (7)ರಲ್ಲಿ ಓದಲಾದ ದಿನಾಂಕ : 28-02-2012ರ ಆದೇಶದಲ್ಲಿ ಕ್ರಮ ಸಂಖ್ಯೆ : 2 ಮತ್ತು 3 ರಲ್ಲಿನ ಶ್ರೀ ಎಲ್. ಅಮರೇಶ್ ಮತ್ತು ಶ್ರೀ ಪಿ.ಟಿ. ವಿರೂಪಾಕ್ಷಪ್ಪ ಇವರುಗಳನ್ನು ಆರೋಪ ಮುಕ್ತಗೊಳಿಸಿ ಆದೇಶ ಹೊರಡಿಸಿದೆ.

ಪ್ರಸ್ತಾವನೆಯಲ್ಲಿನ ಅಂಶಗಳನ್ನು ನಿಯಮಾನುಸಾರ ಕೂಲಂಕಷವಾಗಿ ಪರಿಶೀಲಿಸಿದ ನಂತರ ಶಿರಗುಪ್ಪ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ 2003-04 ರಿಂದ 2006-07ನೇ ಸಾಲಿನವರೆಗೆ ಪರ್ಮಿಟ್ ಪುಸ್ತಕಗಳ ಅವ್ಯವಹಾರಗಳಿಂದಾಗಿ ಸಿರುಗುಪ್ಪ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಆರ್ಥಿಕ ನಷ್ಟ ಉಂಟಾಗಲು ಕಾರಣರಾದ ಕ್ರಮ ಸಂಖ್ಯೆ 1, 4 ರಿಂದ 11ವರೆಗಿನ ಅಧಿಕಾರಿ/ನೌಕರರ ವಿರುದ್ಧ ಆರೋಪಗಳು ರುಜುವಾತಾಗಿರುವುದರಿಂದ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957ರ ನಿಯಮ 8 ರನ್ವಯ ದಂಡನೆ ವಿಧಿಸಲು ಸರ್ಕಾರವು ತೀರ್ಮಾನಿಸಿದೆ ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಸಇ 140 ಮಾಇಸೇ (1) 2008 ಬೆಂಗಳೂರು, ದಿನಾಂಕ : 28.02.2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸಿರಗುಪ್ಪ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ 2003-04 ರಿಂದ 2006-07ನೇ ಸಾಲಿನಲ್ಲಿ ಆರ್ಥಿಕ ನಷ್ಟಕ್ಕೆ ಕಾರಣರಾದವರ ಈ ಕೆಳಕಂಡ ಅಧಿಕಾರಿ ಮತ್ತು ನೌಕರರುಗಳಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957ರ ನಿಯಮ 8 ರನ್ವಯ ಅವರುಗಳ ಹೆಸರಿನ ಮುಂದೆ ನಮೂದಿಸಿರುವ ದಂಡನೆಯನ್ನು ವಿಧಿಸಲು ಆದೇಶಿಸಿದೆ.

ಕ್ರಸಂ.	ಹೆಸರು ಪದನಾಮ ಮತ್ತು ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಸ್ಥಳ ಶ್ರೀಯುತರು	ವಿಧಿಸಿರುವ ದಂಡನೆ
1	ಆರ್. ತಿಪ್ಪೇಸ್ವಾಮಿ ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಶಿರಾ	ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 8(iii) ರನ್ವಯ 1. ಸಂಚಿತ ಪರಿಣಾಮ ಸಹಿತ ಮುಂದಿನ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ತಡೆಹಿಡಿಯುವುದು. 2. ಆರ್ಥಿಕ ನಷ್ಟ ಮೊತ್ತು ರೂ. 10.44,982-00ನ್ನು ವಸೂಲಾತಿ ಮಾಡುವುದು.
2	ಎಸ್. ಮಲ್ಲಿಕಾರ್ಜುನ ಹಿರಿಯ ಮಾರುಕಟ್ಟೆ ಮೇಲ್ವಿಚಾರಕ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ತಿಪಟೂರು	ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 8(ii) ರನ್ವಯ ವಾಗ್ದಂಡನೆ ವಿಧಿಸಿದೆ.
3	ಮುತ್ತಣ್ಣ ಲೆಕ್ಕಿಗರು ದರ್ಜೆ-2 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಶಿರಗುಪ್ಪ	ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 8(iv-ಕ) ರನ್ವಯ 1. ಪ್ರಸ್ತುತ ಇರುವ ಕಾಲಿಕ ವೇತನದ ಒಂದು ಹಂತದಿಂದ ಕೆಳಗೆ ಇಳಿಸುವುದು. 2. ಆರ್ಥಿಕ ನಷ್ಟ ಮೊತ್ತ ರೂ. 10,27,651-00ನ್ನು ವಸೂಲಾತಿ ಮಾಡುವುದು.
4	ಮುರ್ತುಜಾಸಾಬ್ ಪ್ರಥಮ ದರ್ಜೆ ಸಹಾಯಕರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೆಂಗಳೂರು	ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 8(iv-ಕ) ರನ್ವಯ 1. ಪ್ರಸ್ತುತ ಇರುವ ಕಾಲಿಕ ವೇತನದ ಒಂದು ಹಂತದಿಂದ ಕೆಳಗೆ ಇಳಿಸುವುದು. 2. ಆರ್ಥಿಕ ನಷ್ಟ ಮೊತ್ತ ರೂ. 25,25,382-00ನ್ನು ವಸೂಲಾತಿ ಮಾಡುವುದು.
5	ಟಿ. ಲಕ್ಷ್ಮೀನಾರಾಯಣ ಪ್ರಥಮ ದರ್ಜೆ ಸಹಾಯಕರು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಳ್ಳಾರಿ	ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 8(iv-ಕ) ರನ್ವಯ 1. ಪ್ರಸ್ತುತ ಇರುವ ಕಾಲಿಕ ವೇತನದ ಒಂದು ಹಂತದಿಂದ ಕೆಳಗೆ ಇಳಿಸುವುದು. 2. ಆರ್ಥಿಕ ನಷ್ಟ ಮೊತ್ತ ರೂ. 25,25,382-00ನ್ನು ವಸೂಲಾತಿ ಮಾಡುವುದು.
6	ಕೆ. ಮನೋಹರ ಆಂತರಿಕ ಲೆಕ್ಕ ಪರಿಶೋಧಕರು, ದರ್ಜೆ-2, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಶಿರಗುಪ್ಪ	ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 8(iii) ರನ್ವಯ 1. ಸಂಚಿತ ಪರಿಣಾಮ ಸಹಿತ ಮುಂದಿನ ಎರಡು ವಾರ್ಷಿಕ ವೇತನ ಬಡ್ತಿಯನ್ನು ತಡೆಹಿಡಿಯುವುದು. 2. ಆರ್ಥಿಕ ನಷ್ಟ ಮೊತ್ತ ರೂ. 10.27,651-00ನ್ನು ವಸೂಲಾತಿ ಮಾಡುವುದು.

7	ಶಾಮಣ್ಣ ಮಾರಾಟ ಸಹಾಯಕರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಗಂಗಾವತಿ	ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 8(iii) ರನ್ವಯ 1. ಸಂಚಿತ ಪರಿಣಾಮ ಸಹಿತ ಮುಂದಿನ ಮೂರು ವಾರ್ಷಿಕ ವೇತನ ಬಡ್ತಿಯನ್ನು ತಡೆಹಿಡಿಯುವುದು. 2. ಆರ್ಥಿಕ ನಷ್ಟ ಮೊತ್ತ ರೂ. 24,53,739–00ನ್ನು ವಸೂಲಾತಿ ಮಾಡುವುದು.
8	ಶ್ರೀಮಂತ ಏಡ್ಡಿ ಮಾರಾಟ ಸಹಾಯಕರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಶಿರಗುಪ್ಪ	ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 8(iii) ರನ್ವಯ 1. ಸಂಚಿತ ಪರಿಣಾಮ ಸಹಿತ ಮುಂದಿನ ಎರಡು ವಾರ್ಷಿಕ ವೇತನ ಬಡ್ತಿಯನ್ನು ತಡೆಹಿಡಿಯುವುದು. 2. ಆರ್ಥಿಕ ನಷ್ಟ ಮೊತ್ತ ರೂ. 35,56,033–00ನ್ನು ವಸೂಲಾತಿ ಮಾಡುವುದು.
9	ವಲೀಭಾಷಾ ಮಾರಾಟ ಸಹಾಯಕರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಶಿರಗುಪ್ಪ	ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 8(iii) ರನ್ವಯ 1. ಸಂಚಿತ ಪರಿಣಾಮ ಸಹಿತ ಮುಂದಿನ ಮೂರು ವಾರ್ಷಿಕ ವೇತನ ಬಡ್ತಿಯನ್ನು ತಡೆಹಿಡಿಯುವುದು. 2. ಆರ್ಥಿಕ ನಷ್ಟ ಮೊತ್ತ ರೂ. 35,56,033–00ನ್ನು ವಸೂಲಾತಿ ಮಾಡುವುದು.

ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ಇವರು ಸದರಿ ಆದೇಶವನ್ನು ಅನುಷ್ಠಾನಗೊಳಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 899

ಸಿ.ಕೆ. ವಾಸುದೇವ ಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಸಹಕಾರ ಇಲಾಖೆ

ಸಹಕಾರ ಸಚಿವಾಲಯ

ವಿಷಯ : ಸಿರಗುಪ್ಪ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ ನಡೆದಿರುವ ಅವ್ಯವಹಾರಗಳಿಗೆ ಕಾರಣರಾದ ಅಧಿಕಾರಿ ಮತ್ತು ನೌಕರರ ವಿರುದ್ಧ ಶಿಸ್ತು ಕ್ರಮ ಕುರಿತು ಅಂತಿಮ ಆದೇಶ.

ಓದಲಾಗಿದೆ : 1. ನಿರ್ದೇಶಕರು, ಕೃಷಿ ಮಾರಾಟ ಇಲಾಖೆ ರವರ ಪತ್ರ ಸಂಖ್ಯೆ : ಕೃಮಾಇ/271/ಸಿಬ್ಬಂದಿ–1(ಬಿ)/2007 ದಿನಾಂಕ : 20–10–2011.

2. ಸರ್ಕಾರದ ಆದೇಶ ಸಂಖ್ಯೆ : ಸಇ 140 ಮಾಇಸೇ 2008 ದಿನಾಂಕ : 14–07–2008.
3. ಇಲಾಖಾ ವಿಚಾರಣಾಧಿಕಾರಿಗಳ ವರದಿ ದಿನಾಂಕ : 14–12–2009.
4. ಸರ್ಕಾರದ 2ನೇ ಕಾರಣ ಕೇಳುವ ನೋಟೀಸು ಸಂಖ್ಯೆ : ಸಇ 140 ಮಾಇಸೇ (1 ರಿಂದ 10) 2008 ದಿನಾಂಕ : 09–02–2010 ಮತ್ತು ಅಧಿಕಾರಿ ನೌಕರರ ಲಿಖಿತ ಸಮಜಾಯಿಷಿ ಹೇಳಿಕೆಗಳು.

ಪ್ರಸ್ತಾವನೆ :

Sl. No.	Name of the Kethedaras/ Anubhavadars Smts./ Sriyuths	Sy. No.	Hissa	Whether/Dry/Wet/Garden	Total Extent		Kharab Land		Remaining Extent		Assess-ment Rs. Ps.	Etent Proposed for Acquisition		Bounded by			
					A	G	A	G	A	G		A	G	East	West	North	South
1	2	3	4	5	6		7		8		9	10		11	12	13	14
1	C. Chandra Mohana Reddy S/o Venkata ramana reddy	21	2	Dry	2-00		-		02-00		3.36	0-07 0-03		21/1 Remaing Part of 21/2	Road Road	21/1 Road	Rema-ing Part of 21/2 21/3
											TOTAL	0.10					

BHARAT LAL MEENA,
Commissioner,
B. D. A. Bangalore-20

P.D. 36

KARNATAKA STATE BAR COUNCIL, OLD K.G.I.D. BLDG., BANGALORE

NOTIFICATION

No. 2/2012, Dated : 05-04-2012

It is hereby notified for the information of the general public and the concerned that **SHRI. M. V. GANESH GOWDA, B.A., LL.B., (M.B.A),** has taken charge as **SECRETARY** of Karnataka State Bar Council, Bangalore. All communications meant for the Council may be addressed to him by designation.

ANANDKUMAR APPU MAGADUM
CHAIRMAN

P.D. 48

ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕರ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಉಪ ವಿಭಾಗ-2, ವಿಜಾಪುರ ಜಿಲ್ಲೆ, ವಿಜಾಪುರ

ಪ್ರಕಟಣೆ

ಪ್ರಕರಣ ಸಂಖ್ಯೆ. ಡಬ್ಲ್ಯೂ.ಸಿ.ಎ./ಎಸ್‌ಆರ್-17/2012, ದಿನಾಂಕ 01ನೇ ಮಾರ್ಚ್ 2012

ಅರ್ಜಿದಾರರು :-

1. ಅಶ್ವಿನಿ ದಶರಥ ಲೋಖಂಡೆ
2. ತೇಜಸ ದಶರಥ ಲೋಖಂಡೆ
3. ತೃಪ್ತಿ ದಶರಥ ಲೋಖಂಡೆ

ಎಲ್ಲರು ಇರುವುದು ಡೋಬಳೆಗಲ್ಲಿ, ವಿಜಾಪುರ

ಪ್ರತಿವಾದಿಗಳು :-

1. ರಾಮಚಂದ್ರ, ನಿವೃತ್ತಿ ಪವಾರ
   ಉ : ಲಾರಿ ಮಾಲೀಕರು ನಂ. M.H./13/G/2067
   ಸಾ : ಜೆವುರ, ತಾ: ಕರಮಳ, ಜಿ : ಸೋಲಾಪುರ.
2. ಐ.ಸಿ.ಐ.ಸಿ.ಐ. ಜನರಲ್ ಇನ್ಸು ಕಂ. ಕೊಠಾರಿ ಕಾಂಪ್ಲೆಕ್ಸ್, ಕೋರ್ಟ್ ರೋಡ್, ಗುಲ್ಬರ್ಗ.

ಮೇಲ್ಕಾಣಿಸಿದ ಅರ್ಜಿದಾರರು ಈ ನ್ಯಾಯಾಲಯದಲ್ಲಿ ಅರ್ಜಿಯೊಂದನ್ನು ಸಲ್ಲಿಸಿ ಶ್ರೀ ದಶರಥ ಭಗವಾನ ಲೋಖಂಡೆ ಇವರು ಪ್ರತಿವಾದಿಗಳ ಬಳಿ ಕೆಲಸ ನಿರ್ವಹಿಸುವಾಗ ಮತ್ತು ಕೆಲಸದ ಪರಿಣಾಮದಿಂದಾಗಿ ದಿನಾಂಕ 21-5-2010 ರಂದು ಅಪಘಾತಕ್ಕೀಡಾಗಿ ಮೃತನಾಗಿರುತ್ತಾನೆಂದು, ಅಲ್ಲದೇ ತಾವು ಮೃತರ ಅವಲಂಬಿತರಾಗಿರುವುದರಿಂದ ಕಾಯ್ದೆಯನ್ವಯ ತಮಗೆ ಬರಬೇಕಾದ ಪರಿಹಾರದ ಹಣವನ್ನು ಪ್ರತಿವಾದಿಗಳಿಂದ ಕೊಡಿಸಿಕೊಡಬೇಕೆಂದು ವಿನಂತಿಸಿರುತ್ತಾರೆ.

ಆದ್ದರಿಂದ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ, ಹಾಗೂ ಅರ್ಜಿದಾರರಲ್ಲದೇ ತಾವೇನಾದರೂ ಮೃತರ ನಿಜವಾದ ಅವಲಂಬಿತರು ಎಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೇ, ಅಂಥವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನಗಳೊಳಗಾಗಿ ತಮ್ಮ ಪರ ಆಕ್ಷೇಪಣೆಯಾಗಲೀ ಅಥವಾ ಅರ್ಜಿಯಾಗಲೀ ಈ ನ್ಯಾಯಾಲಯದಲ್ಲಿ ಸಲ್ಲಿಸಬೇಕು. ಹಾಗೂ ನಿಗದಿಪಡಿಸಿದ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆ ಮತ್ತು ಅರ್ಜಿಗಳನ್ನು ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಕ್ಲೇಮ ಅರ್ಜಿಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು. ತದನಂತರ ಬಂದ ಅರ್ಜಿಗಳನ್ನು ಮತ್ತು ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದಿಲ್ಲ.

ಜಿ. ಸಿದ್ದಲಿಂಗಪ್ಪ ಆಲೂರು

ಕಾರ್ಮಿಕ ಅಧಿಕಾರಿ ಮತ್ತು
ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು,
ಉಪ ವಿಭಾಗ-2, ವಿಜಾಪೂರ.

ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕರ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಉಪ ವಿಭಾಗ-2, ವಿಜಾಪುರ ಜಿಲ್ಲೆ, ವಿಜಾಪುರ

ಪ್ರಕಟಣೆ

ಪ್ರಕರಣ ಸಂಖ್ಯೆ. ಡಬ್ಲ್ಯೂಸಿಎ./ಎಸ್‌ಆರ್-18/2012, ದಿನಾಂಕ 01ನೇ ಮಾರ್ಚ್ 2012

ಅರ್ಜಿದಾರರು :-

1. ರಾಮ ಸಂತಾಜಿ ಹರನಾವಳ
2. ಲತಾ ರಾಮ ಹರನಾವಳ
   ಇಬ್ಬರು ಇರುವುದು ಡೋಬಳೆಗಲ್ಲಿ, ವಿಜಾಪುರ

ಪ್ರತಿವಾದಿಗಳು :-

1. ರಾಮಚಂದ್ರ, ನಿವೃತ್ತಿ ಪವಾರ
   ಉ : ಲಾರಿ ಮಾಲೀಕರು ನಂ. M.H./13/G/2067
   ಸಾ : ಜೆವುರ, ತಾ: ಕರಮಳ, ಜಿ : ಸೋಲಾಪುರ.
2. ಐ.ಸಿ.ಐ.ಸಿ.ಐ. ಜನರಲ್ ಇನ್ಸು ಕಂ. ಕೊಠಾರಿ ಕಾಂಪ್ಲೆಕ್ಸ್,
   ಕೋರ್ಟ್ ರೋಡ, ಗುಲ್ಬರ್ಗ.

ಮೇಲ್ಕಾಣಿಸಿದ ಅರ್ಜಿದಾರರು ಈ ನ್ಯಾಯಾಲಯದಲ್ಲಿ ಅರ್ಜಿಯೊಂದನ್ನು ಸಲ್ಲಿಸಿ ಶ್ರೀ ಅಮೋಲ ರಾಮ ಹರನಾವಳ ಇವರು ಪ್ರತಿವಾದಿಗಳ ಬಳಿ ಕೆಲಸ ನಿರ್ವಹಿಸುವಾಗ ಮತ್ತು ಕೆಲಸದ ಪರಿಣಾಮದಿಂದಾಗಿ ದಿನಾಂಕ 21-5-2010 ರಂದು ಅಪಘಾತಕ್ಕೀಡಾಗಿ ಮೃತನಾಗಿರುತ್ತಾನೆಂದು, ಅಲ್ಲದೇ ತಾವು ಮೃತರ ಅವಲಂಬಿತರಾಗಿರುವುದರಿಂದ ಕಾಯ್ದೆಯನ್ವಯ ತಮಗೆ ಬರಬೇಕಾದ ಪರಿಹಾರದ ಹಣವನ್ನು ಪ್ರತಿವಾದಿಗಳಿಂದ ಕೊಡಿಸಿಕೊಡಬೇಕೆಂದು ವಿನಂತಿಸಿರುತ್ತಾರೆ.

ಆದ್ದರಿಂದ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ, ಹಾಗೂ ಅರ್ಜಿದಾರರಲ್ಲದೇ ತಾವೇನಾದರೂ ಮೃತರ ನಿಜವಾದ ಅವಲಂಬಿತರು ಎಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೇ, ಅಂಥವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನಗಳೊಳಗಾಗಿ ತಮ್ಮ ಪರ ಆಕ್ಷೇಪಣೆಯಾಗಲೀ ಅಥವಾ ಅರ್ಜಿಯಾಗಲೀ ಈ ನ್ಯಾಯಾಲಯದಲ್ಲಿ ಸಲ್ಲಿಸಬೇಕು. ಹಾಗೂ ನಿಗದಿಪಡಿಸಿದ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆ ಮತ್ತು ಅರ್ಜಿಗಳನ್ನು ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಕ್ಲೇಮ ಅರ್ಜಿಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು. ತದನಂತರ ಬಂದ ಅರ್ಜಿಗಳನ್ನು ಮತ್ತು ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದಿಲ್ಲ.

ಜಿ. ಸಿದ್ದಲಿಂಗಪ್ಪ ಆಲೂರು

ಕಾರ್ಮಿಕ ಅಧಿಕಾರಿ ಮತ್ತು
ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು, ಉಪ ವಿಭಾಗ-2, ವಿಜಾಪುರ.

ಪಿ.ಆರ್. 473

ಜಿಲ್ಲಾಧಿಕಾರಿಗಳವರ ಕಾರ್ಯಾಲಯ, ಕೋಲಾರ ಜಿಲ್ಲೆ, ಕೋಲಾರ

ಅಧಿಸೂಚನೆ

ನಂ. ಎಲ್ ಎನ್ ಡಿ.ಸಿಆರ್. 47/09-10, ದಿನಾಂಕ : 31-03-2012

ವಿಷಯ : ಶ್ರೀನಿವಾಸಪುರ ತಾಲ್ಲೂಕು, ರೋಣೂರು ಹೋಬಳಿ ರೋಣೂರು ಗ್ರಾಮದ ಸಂ. ನಂ. 46 ರಲ್ಲಿ 1-00 ಹಾಗೂ ಸ.ನಂ. 48ರ ಪೈಕಿ 0-34 ಗುಂಟೆ ಒಟ್ಟು 1-34 ಎಕರೆ ಸರ್ಕಾರಿ ತೋಪು ಜಮೀನನ್ನು ಸಾರ್ವಜನಿಕ ಆಸ್ಪತ್ರೆ ಕಟ್ಟಡಕ್ಕಾಗಿ ಮಂಜೂರು

ಉಲ್ಲೇಖ : ಸರ್ಕಾರದ ಪತ್ರ ಸಂಖ್ಯೆ ಆರ್‌ಡಿ 150 ಎಲ್‌ಜಿಕೆ 2011, ದಿನಾಂಕ : 07-01-2012.

2. ಪ್ರಾದೇಶಿಕ ಆಯುಕ್ತರು, ಬೆಂಗಳೂರು ರವರ ಪತ್ರ ನಂ. ಎಲ್‌ಎನ್‌ಡಿ. ಸಿಆರ್. 118/11-12, ದಿನಾಂಕ : 18-02-2012

68ನೇ ಪ್ರಕರಣದ (5)ನೇ ಉಪ-ಪ್ರಕರಣದ ಮೇರೆಗಿನ ಘೋಷಣೆ-ನಿಯಮ 96

ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ 78ನೇ ಪ್ರಕರಣದ (5)ನೇ ಉಪ-ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಸದರಿ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಹೊರಡಿಸಿದ 13/04/2011 ದಿನಾಂಕದ ಎಲ್‌ಎನ್‌ಡಿ ಸಿಆರ್/4709-10 ಕ್ರಮ ಸಂಖ್ಯೆಯ ಅಧಿಸೂಚನೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಮತ್ತು ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಸಾರ್ವಜನಿಕ ರಸ್ತೆಯ/ಬೀದಿಯ/ಗಲ್ಲಿಯ/ದಾರಿಯ ಭಾಗವು ಸಾರ್ವಜನಿಕರ ಉಪಯೋಗಕ್ಕೆ ಅಗತ್ಯವಿಲ್ಲವೆಂದು ವ್ಯವಹರಣೆಗಳ ದಾಖಲೆಗಳನ್ನು ಮತ್ತು ಕೋಲಾರ ಜಿಲ್ಲೆಯ ಡೆಪ್ಯೂಟಿ ಕಮೀಷನರ್ ವರದಿಯನ್ನು ರಾಜ್ಯ ಸರ್ಕಾರವು ಪರಿಶೀಲಿಸಿದ ತರುವಾಯ, ಸಾರ್ವಜನಿಕ ರಸ್ತೆಯ/ಬೀದಿಯ/ಗಲ್ಲಿಯ/ದಾರಿಯ ಅಂಥ ಭಾಗದಲ್ಲಿನ ಅಥವಾ ಅದರ ಮೇಲಣ ಸಾರ್ವಜನಿಕರ ಹಾಗೂ ವ್ಯಕ್ತಿಗಳ ಎಲ್ಲ ಹಕ್ಕುಗಳ ಕೊನೆಗೊಳ್ಳತಕ್ಕುದೆಂದು ಈ ಮೂಲಕ ಘೋಷಿಸಿದೆ.

ಅನುಸೂಚಿ

ರಸ್ತೆಯ/ಬೀದಿಯ/ಗಲ್ಲಿಯ/ದಾರಿಯ ಭಾಗವು ಇರುವ ಗ್ರಾಮ	ರೋಣೂರು
ತಾಲ್ಲೂಕು	ಶ್ರೀನಿವಾಸಪುರ
ಜಿಲ್ಲೆ	ಕೋಲಾರ
ರಸ್ತೆಯ/ಬೀದಿಯ/ಗಲ್ಲಿಯ/ದಾರಿಯ ಭಾಗದ ವರ್ಣನೆ	ಸರ್ವೆ ನಂ. 46 ಸರ್ವೆ ನಂ. 48
ರಸ್ತೆಯ/ಬೀದಿಯ/ಗಲ್ಲಿಯ/ದಾರಿಯ ಭಾಗದ ಸರಿಸುಮಾರು ವಿಸ್ತೀರ್ಣ	1-00 0-34

ಚೆಕ್ಕುಬಂದಿ

	ಸ. ನಂ. 46	ಸ. ನಂ. 46
ಪೂರ್ವಕ್ಕೆ :	ಸ.ನಂ. 47ರ ಜಮೀನು :	ಸರ್ಕಾರಿ ಕೆರೆ
ಪಶ್ಚಿಮಕ್ಕೆ :	ಸ.ನಂ. 45ರ ಜಮೀನು :	ಸ.ನಂ. 47ರ ಜಮೀನು
ಉತ್ತರಕ್ಕೆ :	ಸ.ನಂ. 49ರ ಜಮೀನು :	ಸ.ನಂ. 49ರ ಜಮೀನು
ದಕ್ಷಿಣಕ್ಕೆ :	ಗ್ರಾಮಠಾಣಾ :	ಸ.ನಂ. 83ರ ಸರ್ಕಾರಿ ಜಮೀನು

ಜಿಲ್ಲಾಧಿಕಾರಿಗಳು,

ಪಿ.ಆರ್. 474 **ಕೋಲಾರ ಜಿಲ್ಲೆ, ಕೋಲಾರ.**

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು, ದ.ಕ. ಉಪವಿಭಾಗ-2

ಬೆಂದೂರ್‌ವೆಲ್ ವೃತ್ತ, ಕಂಕನಾಡಿ, ಮಂಗಳೂರು ಇವರ ನ್ಯಾಯಾಲಯ

ಅಧಿಸೂಚನೆ

ಸಂಖ್ಯೆ : ಡಬ್ಲ್ಯೂಸಿಎ/ಎಸ್.ಆರ್-06/2012(ಎಫ್) ದಿನಾಂಕ : 26-03-2012

ಅರ್ಜಿದಾರರು

1. ಶ್ರೀಮತಿ ಮೀನ ನೊರೊನ್ಹಾ, ಪ್ರಾಯ 37 ವರ್ಷ
   ಕೋಂ : ಲೇಟ್ ವಿನ್ಸೆಂಟ್ ನೊರೊನ್ಹಾ
2. ನಿಲೇಶ್ ನೊರೊನ್ಹಾ, ಪ್ರಾಯ 12 ವರ್ಷ
   ಬಿನ್ : ಲೇಟ್ ವಿನ್ಸೆಂಟ್ ನೊರೊನ್ಹಾ
3. ರಿತೇಶ್ ನೊರೊನ್ಹಾ, ಪ್ರಾಯ 10 ವರ್ಷ
   ಬಿನ್ : ಲೇಟ್ ವಿನ್ಸೆಂಟ್ ನೊರೊನ್ಹಾ
4. ಸೆಲಿನ್ ನೊರೊನ್ಹಾ, ಪ್ರಾಯ : 72 ವರ್ಷ
   ಕೋಂ : ಲೇಟ್ ಹಿಲರಿ ನೊರೊನ್ಹಾ
   ವಾಸ : ರೊಟ್ಟಿಗುಡ್ಡೆ ಮನೆ, ತುಂಬೆಹಳ್ಳಿ, ಜನತಾ ಕಾಲೋನಿ,

ಪ್ರತಿವಾದಿಗಳು

1) ಡಿವಿಜನಲ್ ಕಂಟ್ರೋಲರ್,
ಕೆ.ಎಸ್.ಆರ್.ಟಿ.ಸಿ., ಬಿಜೈ
ಮಂಗಳೂರು.

ಅರ್ಜಿದಾರರಾದ ಶ್ರೀಮತಿ ಮೀನ ನೊರೊನ್ಹಾ, ಇವರು ತನ್ನ ಗಂಡನಾದ ವಿನ್ಸೆಂಟ್ ನೊರೊನ್ಹಾ, ಪ್ರತಿವಾದಿಗಳಲ್ಲಿ ಕೆಲಸಗಾರನಾಗಿದ್ದು, ಕೆಲಸದಲ್ಲಿ ನಿರತನಾಗಿದ್ದಾಗ, ದಿನಾಂಕ : 23–09–2011ರಂದು ಅಪಘಾತಕ್ಕೀಡಾಗಿ ಮೃತರಾದರೆಂದು ತಿಳಿಸಿ, ಅವಲಂಬಿತರಾದ ತಮಗೆ ಪ್ರತಿವಾದಿಯವರಿಂದ ಪರಿಹಾರವನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದುದರಿಂದ, ಈ ವಿಷಯದಲ್ಲಿ ಅರ್ಜಿದಾರರಲ್ಲದೆ ಬೇರೆ ಯಾರಾದರೂ ಅರ್ಜಿದಾರರಾಗಿದ್ದು ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದಲ್ಲಿ ಮತ್ತು ಈ ಅರ್ಜಿಗೆ ಸಂಬಂಧಿಸಿ, ಇನ್ನಿತರ ಯಾವುದೇ ರೀತಿಯ ತಕರಾರು ಇದ್ದರೆ ಈ ಅಧಿಸೂಚನೆಯು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದ (ಮೂವತ್ತು) 30 ದಿನಗಳೊಳಗಾಗಿ ಈ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ನಿಗಧಿತ ಸಮಯದಲ್ಲಿ ಈ ನ್ಯಾಯಾಲಯವು ಯಾವುದೇ ಕ್ಲೈಮ್ ಅರ್ಜಿ ; ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮವನ್ನು ಜರುಗಿಸಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ಎಂ. ಆನಂದ ಮೂರ್ತಿ,
ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು,
ದ.ಕ. ಉಪವಿಭಾಗ–2, ಮಂಗಳೂರು.

ಪಿ.ಆರ್. 437

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು, ದ.ಕ. ಉಪವಿಭಾಗ–2

ಬೆಂದೂರ್‌ವೆಲ್ ವೃತ್ತ, ಕಂಕನಾಡಿ, ಮಂಗಳೂರು ಇವರ ನ್ಯಾಯಾಲಯ

ಅಧಿಸೂಚನೆ

ಸಂಖ್ಯೆ : ಡಬ್ಲ್ಯೂಸಿಎ/ಎಸ್.ಆರ್–07/2012(ಎಫ್) ದಿನಾಂಕ : 26–03–2012

ಅರ್ಜಿದಾರರು

1. ಶ್ರೀಮತಿ ಮಾಲತಿ ಬಿರುಲಿ, ಪ್ರಾಯ 32 ವರ್ಷ,
   ಕೋಂ : ಲೇಟ್ ರವಿ ಬಿರುಲಿ.
2. ಬೇಬಿ ಜಾಂಗ ಬಿರುಲಿ, ಪ್ರಾಯ 2 ವರ್ಷ,
   ಬಿನ್ : ಲೇಟ್ ರವಿ ಬಿರುಲಿ.
3. ಶ್ರೀಮತಿ ನಂದಿಕುಲ್, ಪ್ರಾಯ 57 ವರ್ಷ
   ಕೋಂ : ಲೇಟ್ ಕನ್ನು ಬಿರುಲಿ.
   ವಾಸ : ಸಂಖ್ಯೆ 146, ಸೋನಾಪೋಸಿ, ಥಾನಾ
   ನಂಬ್ರ : 571, ಅಸುರ ಅಂಚೆ, ವೆಸ್ಟ್‌ಸಿಂಘ್‌ಭೂಂ,
   ಜಾರ್ಖಂಡ್ ಸ್ಟೇಟ್.

ಪ್ರತಿವಾದಿಗಳು

1) ಶ್ರೀ ಕೆ. ಎಂ. ದಿಲೀಪ್‌ನಾಥ್, ಪ್ರಾಯ 52 ವರ್ಷ
ತಂದೆ : ಕೆ.ಎಂ. ಬಾಲಗೋಪಾಲನ್,
ವ್ಯವಸ್ಥಾಪಕ ಪಾಲುದಾರರು, ಗ್ರೇಟ್ ಬಾಂಬೆ ಸರ್ಕಸ್ ಕಂಪನಿ.,
ಕಲ್ಯಾಣಿ ನಿವಾಸ್, ಕೋರ್ಟು ರಸ್ತೆ, ತಲಶೇರಿ, ಕೇರಳ ರಾಜ್ಯ.

ಅರ್ಜಿದಾರರಾದ ಶ್ರೀಮತಿ ಮಾಲತಿ ಬಿರುಲಿ, ಇವರು ತನ್ನ ಗಂಡನಾದ ರವಿ ಬಿರುಲಿ ಪ್ರತಿವಾದಿಗಳಲ್ಲಿ ಕೆಲಸಗಾರನಾಗಿದ್ದು, ಕೆಲಸದಲ್ಲಿ ನಿರತನಾಗಿದ್ದಾಗ, ದಿನಾಂಕ : 18–03–2011ರಂದು ಅಪಘಾತಕ್ಕೀಡಾಗಿ ಮೃತರಾದರೆಂದು ತಿಳಿಸಿ, ಅವಲಂಬಿತರಾದ ತಮಗೆ ಪ್ರತಿವಾದಿಯವರಿಂದ ಪರಿಹಾರವನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದುದರಿಂದ, ಈ ವಿಷಯದಲ್ಲಿ ಅರ್ಜಿದಾರರಲ್ಲದೆ ಬೇರೆ ಯಾರಾದರೂ ಅರ್ಜಿದಾರರಾಗಿದ್ದು ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದಲ್ಲಿ ಮತ್ತು ಈ ಅರ್ಜಿಗೆ ಸಂಬಂಧಿಸಿ, ಇನ್ನಿತರ ಯಾವುದೇ ರೀತಿಯ ತಕರಾರು ಇದ್ದರೆ ಈ ಅಧಿಸೂಚನೆಯು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದ (ಮೂವತ್ತು) 30 ದಿನಗಳೊಳಗಾಗಿ ಈ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ನಿಗಧಿತ ಸಮಯದಲ್ಲಿ ಈ ನ್ಯಾಯಾಲಯವು ಯಾವುದೇ ಕ್ಲೈಮ್ ಅರ್ಜಿ : ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮವನ್ನು ಜರುಗಿಸಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ಎಂ. ಆನಂದ ಮೂರ್ತಿ,
ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು,
ದ.ಕ. ಉಪವಿಭಾಗ–2, ಮಂಗಳೂರು.

ಪಿ.ಆರ್. 438

COMMERCIAL TAXES DEPARTMENT

PROCEEDINGS OF THE COMMISSIONER OF COMMERCIAL TAXES, (KARNATAKA), BANGALORE-CLARIFICATION UNDER SECTION 59 (4) OF THE KARNATAKA VALUE ADDED TAX ACT-2003.

Sub: KVAT Act, 2003-Clarification under Section 59(4) regarding the rate of tax applicable on `items made of brass like idols of gods, pooja items, plates etc.-regarding.

Ref: Application dated. 02-01-2012 of M/s. P & S Precious Metals Private Limited, Bangalore. TIN No. 29510631250.

In the application cited above M/s. P & S Precious Metals Private Limited, No. 64, Ground floor, Railway Parallel Road, Kumara Park West, Bangalore-560 020 has sought clarification regarding the rate of tax applicable on `items made of brass like idols of gods, pooja items, plates, agarbathi stand etc.

2. Section 59(4) of the Karnataka Value Added, Tax Act, 2003 empowers the Commissioner of Commercial Taxes to clarify the rate of tax payable under the Act, if he considers it necessary or expedient so to do, for the purpose of maintaining uniformity in the work of assessments and collection of revenue. It is examined and found that the clarification requested by the petitioner is within the scope of the aforesaid provision and it is necessary that the clarification be issued for the purpose of maintaining uniformity in the work of assessments and collection of revenue.

3. Hence the following clarification is issued.

CLARIFICATION NO. CLR. CR. 189/11-12, DATED 21-03-2012.

It is clarified that `items made of brass like idols of gods, pooja items, plates, agarbathi stand etc., are liable to tax at 14% under Section 4 (1) (b) of the Karnataka Value Added Tax Act, 2003.

PRADEEP SINGH KHAROLA
Commissioner of Commercial Taxes,
(Karnataka), Bangalore.

P.R. 441

ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು, ಇವರ ನಡವಳಿಗಳು

ವಿಷಯ : ಶ್ರೀಮತಿ ಕವಿತ. ಜಿ, ಶುಶ್ರೂಷಕಿ, ಇವರ ಅನಧಿಕೃತ ಗೈರುಹಾಜರಿ ಆರೋಪದ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಕುರಿತಂತೆ-ಅಂತಿಮ ಆದೇಶ.

ಓದಲಾಗಿದೆ : 1. ಮುಖ್ಯ ವೈದ್ಯಾಧಿಕಾರಿಗಳು, ತಾಲ್ಲೂಕು ಆಸ್ಪತ್ರೆ, ನಾಗಮಂಗಲ ಇವರ ಪತ್ರ ಸಂಖ್ಯೆ, ತಾ.ಸಾ.ಆ.ನಾ/125/2011-12 ದಿನಾಂಕ 10-01-2012.

ಪ್ರಸ್ತಾವನೆ :-

ಶ್ರೀಮತಿ ಕವಿತ. ಜಿ., ಶುಶ್ರೂಷಕಿ, ಆದ ಇವರು ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ನಾಗಮಂಗಲ, ಮಂಡ್ಯ ಜಿಲ್ಲೆ ಇವರು ದಿನಾಂಕ : 05-08-2011 ರಂದು ಪೂರ್ವಹ್ನ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ನಂತರ ದಿನಾಂಕ : 06-08-2011 ರಿಂದ ಇಲ್ಲಿಯವರೆಗೂ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿದ್ದು, ಕರ್ತವ್ಯಕ್ಕೆ ಮರುಹಾಜರಾಗುವಂತೆ 3 ಪತ್ರ ಬರೆದಿದ್ದರೂ ಇದುವರೆಗೂ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾದ ಆರೋಪದ ಬಗ್ಗೆ ಯಾವ ಕ್ರಮ ಕೈಗೊಳ್ಳಬೇಕೆಂದು ನಿರ್ದೇಶನಾಲಯದ ಮಾರ್ಗದರ್ಶನ ಕೋರಿರುತ್ತಾರೆ. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಗ್ರೂಪ್ 'ಸಿ' ವೃಂದದ ನೇಮಕಾತಿ ಪ್ರಾಧಿಕಾರವಾಗಿರುವುದರಿಂದ ಕೆ.ಸಿ.ಎಸ್.(ಸಿಸಿಎ) ನಿಯಮಾವಳಿಗಳು 1957ರ ನಿಯಮ 8(ii) ರಿಂದ 8(viii) ವರೆಗಿನ ದಂಡನೆಯನ್ನು ವಿಧಿಸುವ ಸಕ್ಷಮ ಶಿಸ್ತು ಪ್ರಾಧಿಕಾರವಾಗಿರುವುದರಿಂದ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಆದೇಶ ಸಂಖ್ಯೆ : ಡಿಪಿಎನ್ (6) ಸಿಆರ್-39/2011-12 ದಿನಾಂಕ : 20-03-2012.

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳಿಗಾಗಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಡಾ॥ ಟಿ. ಎಸ್. ಚಲುವರಾಜ್, ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಆದ ನಾನು ಶ್ರೀಮತಿ ಕವಿತ. ಜಿ., ಶುಶ್ರೂಷಕಿ, ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ನಾಗಮಂಗಲ, ಮಂಡ್ಯ ಜಿಲ್ಲೆ ಇವರ ಅನಧಿಕೃತ

ಗೈರುಹಾಜರಿ ಆರೋಪವನ್ನು ಗಂಭೀರವಾಗಿ ಪರಿಗಣಿಸಿ ಈ ತಕ್ಷಣದಿಂದ ಜಾರಿಗೆ ಬರುವಂತೆ ಕರ್ನಾಟಕ ನಾಗರೀಕ ಸೇವಾ (ಪ್ರೋಬೇಷನ್) ನಿಯಮಗಳು 1977 ರ ನಿಯಮ 6(1) 'ಬಿ'ರ ಪ್ರಕಾರ ಸರ್ಕಾರಿ ಸೇವೆಯಿಂದ ವಿಮೋಚನೆಗೊಳಿಸಿದ್ದೇನೆ.

ನಿರ್ದೇಶಕರು.

ಪಿ.ಆರ್. 442 ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.

ಕಂದಾಯ ಸಚಿವಾಲಯ

ತಿದ್ದುಪಡಿ

ಸಂಖ್ಯೆ : ಕಂಇ 131 ಮುಸೇವಿ 2012, ಬೆಂಗಳೂರು, ದಿನಾಂಕ : 13ನೇ ಮಾರ್ಚ್, 2012.

ಬೆಂಗಳೂರು ಗ್ರಾಮಾಂತರ ಜಿಲ್ಲಾ ಧಾರ್ಮಿಕ ಪರಿಷತ್ತಿಗೆ ಸಂಬಂಧಿಸಿದ ಸರ್ಕಾರಿ ಅಧಿಸೂಚನೆ ಸಂಖ್ಯೆ : ಕಂಇ 131 ಮುಸೇವಿ 2011(1) ದಿನಾಂಕ : 24-11-2011ರಲ್ಲಿ ಈ ಕೆಳಗಿನಂತೆ ಬದಲಾಯಿಸಿಕೊಂಡು ಓದಿಕೊಳ್ಳತಕ್ಕದ್ದು.

ಕ್ರಮ ಸಂಖ್ಯೆ	ಹಾಲಿ ಇರುವುದು	ತಿದ್ದುಪಡಿ ಪ್ರಕಾರ ಇರುವುದು
2	ಶ್ರೀ ಎನ್. ಶ್ರೀವತ್ಸ ಖೇದಿಲಾಯ, ನಂ. 1495 "ವಿಜಯ ವಿಠಲ" ರೈಲ್ವೆ ಸಮಾನಾಂತರ ರಸ್ತೆ, 4ನೇ ಅಡ್ಡ ರಸ್ತೆ, ಜಿಕೆವಿಕೆ ಅಂಚೆ, ನ್ಯಾಯಾಂಗ ಬಡಾವಣೆ, ಬೆಂಗಳೂರು-65.	ಶ್ರೀ ಎನ್. ಶ್ರೀವತ್ಸ ಕೆದಿಲಾಯ, ನಂ. 1495 "ವಿಜಯ ವಿಠ್ಠಲ" ರೈಲ್ವೆ ಸಮಾನಾಂತರ ರಸ್ತೆ, 4ನೇ ಅಡ್ಡ ರಸ್ತೆ, ಜಿಕೆವಿಕೆ ಅಂಚೆ, ನ್ಯಾಯಾಂಗ ಬಡಾವಣೆ, ಬೆಂಗಳೂರು-65.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ. ಉಮಾಪತಿ,

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. ನಂ. 443 ಕಂದಾಯ ಇಲಾಖೆ (ಮುಜರಾಯಿ).

ಪ್ರವಾಸೋದ್ಯಮ ಇಲಾಖೆ

ಪ್ರವಾಸೋದ್ಯಮ ನಿರ್ದೇಶಕರ ಕಛೇರಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-1

ಅಧಿಕೃತ ಜ್ಞಾಪನಾ ಪತ್ರ

ಸಂಖ್ಯೆ : ಪ್ರಇ/ಆಸಿ/ಬಡ್ತಿ/1/99-2000(ಭಾಗ-2)-5009 ಬೆಂಗಳೂರು, ದಿನಾಂಕ : 22ನೇ ಮಾರ್ಚ್, 2012.

ವಿಷಯ : ಪ್ರವಾಸಿ ಅಧಿಕಾರಿಗಳು/ಅಧೀಕ್ಷಕರು (ಆಡಳಿತ) ರವರುಗಳಿಗೆ ಸಹಾಯಕ ನಿರ್ದೇಶಕರಾಗಿ ಸ್ಥಾನಪನ್ನ ಬಡ್ತಿ ನೀಡುವ ಬಗ್ಗೆ.

ಉಲ್ಲೇಖ :
1. ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ/75/ಸೆ.ನೆ.ನಿ./2010, ದಿನಾಂಕ : 19-05-2010.
2. ಸರ್ಕಾರದ ಪತ್ರ ಸಂಖ್ಯೆ : ಕಸಂವಾಪ್ರ/17/ಪ್ರವಾಸಿ/2011, ದಿನಾಂಕ : 03-10-2011.
3. ಇಲಾಖಾ ಮುಂಬಡ್ತಿ ಸಭೆಯ ನಡುವಳಿ ದಿನಾಂಕ : 22-03-2012.

ಉಲ್ಲೇಖಿತ (1) ಮತ್ತು (2) ರ ಸರ್ಕಾರದ ಆದೇಶಗಳನ್ವಯ ಹಾಗೂ ಉಲ್ಲೇಖಿತ (3)ರ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ತೀರ್ಮಾನದಂತೆ ಪ್ರವಾಸೋದ್ಯಮ ಇಲಾಖೆಯ ಈ ಕೆಳಕಂಡ ಪ್ರವಾಸಿ ಅಧಿಕಾರಿಗಳು/ಅಧೀಕ್ಷಕರು (ಆಡಳಿತ) ರವರುಗಳಿಗೆ ವೇತನ ಶ್ರೇಣಿ ರೂ. 10800-20025ರ ಸಮೂಹ "ಬಿ" ಸಹಾಯಕ ನಿರ್ದೇಶಕರ ಹುದ್ದೆಗೆ ಸ್ಥಾನಪನ್ನ ಮುಂಬಡ್ತಿ ನೀಡಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಅವರ ಹೆಸರಿನ ಮುಂದೆ ನಮೂದಿಸಿರುವ ಸ್ಥಳಗಳಿಗೆ ನೇಮಿಸಿದೆ.

ಕ್ರಮ ಸಂಖ್ಯೆ	ಅಧಿಕಾರಿಗಳ ಹೆಸರು, ಪದನಾಮ ಮತ್ತು ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಕಛೇರಿ ವಿವರ	ಸಹಾಯಕ ನಿರ್ದೇಶಕರ ಹುದ್ದೆಗೆ ಬಡ್ತಿ ನೀಡಿ ನಿಯೋಜಿಸಿರುವ ಕಛೇರಿ
1	ಶ್ರೀಮತಿ ಎಸ್. ಜಯಮ್ಮ, ಪ್ರವಾಸಿ ಅಧಿಕಾರಿ, ಪ್ರವಾಸೋದ್ಯಮ ಇಲಾಖೆ, ಕೇಂದ್ರ ಕಛೇರಿ, ಬೆಂಗಳೂರು	ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಚಿಕ್ಕಬಳ್ಳಾಪುರ.

ಕ್ರಮ ಸಂಖ್ಯೆ	ಅಧಿಕಾರಿಗಳ ಹೆಸರು, ಪದನಾಮ ಮತ್ತು ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಕಛೇರಿ ವಿವರ	ಸಹಾಯಕ ನಿರ್ದೇಶಕರ ಹುದ್ದೆಗೆ ಬಡ್ತಿ ನೀಡಿ ನಿಯೋಜಿಸಿರುವ ಕಛೇರಿ
2	ಶ್ರೀ ಸಿ. ಎಸ್. ನಾಗರಾಜ್, ಪ್ರವಾಸಿ ಅಧಿಕಾರಿ, ಪ್ರವಾಸೋದ್ಯಮ ಇಲಾಖೆ, ಉಪ ನಿರ್ದೇಶಕರ ಕಛೇರಿ, ಮೈಸೂರು	ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಚಿತ್ರದುರ್ಗ.
3	ಶ್ರೀ ಭಾಸ್ಕರ್, ಪ್ರವಾಸಿ ಅಧಿಕಾರಿ, ಪ್ರವಾಸೋದ್ಯಮ ಇಲಾಖೆ, ಉಪ ನಿರ್ದೇಶಕರ ಕಛೇರಿ, ಬೆಂಗಳೂರು (ನಗರ).	ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಹಾಸನ.
4	ಶ್ರೀ ವಿ. ಶ್ರೀನಿವಾಸ ಮೂರ್ತಿ, ಪ್ರವಾಸಿ ಅಧಿಕಾರಿ, ಪ್ರವಾಸೋದ್ಯಮ ಇಲಾಖೆ, ಪ್ರವಾಸಿ ಅಧಿಕಾರಿಗಳ ಕಛೇರಿ, ಕೋಲಾರ.	ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ರಾಮನಗರ.
5	ಶ್ರೀಮತಿ ಮಂಗಳಗೌರಿ ವಿ. ಭಟ್ಟ, ಪ್ರವಾಸಿ ಅಧಿಕಾರಿ, ಪ್ರವಾಸೋದ್ಯಮ ಇಲಾಖೆ, ಕೇಂದ್ರ ಕಛೇರಿ, ಬೆಂಗಳೂರು.	ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಕೇಂದ್ರ ಕಛೇರಿ, ಬೆಂಗಳೂರು.
6	ಶ್ರೀ ಎಂ. ಆರ್. ಪ್ರಕಾಶ್, ಅಧೀಕ್ಷಕರು (ಆಡಳಿತ), ಪ್ರವಾಸೋದ್ಯಮ ಇಲಾಖೆ, ಕೇಂದ್ರ ಕಛೇರಿ, ಬೆಂಗಳೂರು.	ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಉಡುಪಿ.

1. ಮೇಲ್ಕಂಡ ಪ್ರವಾಸಿ ಅಧಿಕಾರಿಗಳು/ಅಧೀಕ್ಷಕರು (ಆಡಳಿತ) ರವರುಗಳಿಗೆ ಸಹಾಯಕ ನಿರ್ದೇಶಕರ ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಿರುವುದು ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಾವಳಿ 1977ರ ನಿಯಮಗಳ ನಿಬಂಧನೆಗಳಿಗೊಳಪಟ್ಟಿರುತ್ತದೆ.
2. ಬಡ್ತಿಯನ್ನು ಹೊಂದಿರುವ ಮೇಲ್ಕಂಡ ಪ್ರವಾಸಿ ಅಧಿಕಾರಿಗಳು/ಅಧೀಕ್ಷಕರು (ಆಡಳಿತ) ಪ್ರಸ್ತತ ಕಛೇರಿಯ ಹುದ್ದೆಯಿಂದ ಕರ್ತವ್ಯ ಮುಕ್ತಗೊಂಡ ಹಾಗೂ ಬಡ್ತಿ ಮೇಲೆ ಸಹಾಯಕ ನಿರ್ದೇಶಕರಾಗಿ ಕರ್ತವ್ಯಕ್ಕೆ ಹಾಜರಾದ ದಿನಾಂಕವನ್ನು ತಪ್ಪದೇ ಈ ಕಛೇರಿಗೆ ವರದಿ ಮಾಡುವುದು.
3. ಇಲಾಖೆಯ ಪರೀಕ್ಷೆಯಲ್ಲಿ ಉತ್ತೀರ್ಣರಾದ ಬಗ್ಗೆ ದಾಖಲೆಯನ್ನು ಒದಗಿಸದ ಕಾರಣ ಬಡ್ತಿಗೆ ಪರಿಗಣಿಸಿಲ್ಲದ ಪ್ರವಾಸಿ ಅಧಿಕಾರಿಗಳು ಇಲಾಖೆ ಪರೀಕ್ಷೆ ಉತ್ತೀರ್ಣರಾದ ಬಗ್ಗೆ ದಾಖಲೆಗಳನ್ನು ಒದಗಿಸಿದಲ್ಲಿ ಅವರ ಬಡ್ತಿಯನ್ನು ಪುನರ್ ಪರಿಶೀಲಿಸಲಾಗುವುದೆಂಬ ಷರತ್ತಿಗೊಳಪಟ್ಟು ಈ ಬಡ್ತಿ ಆದೇಶವನ್ನು ಹೊರಡಿಸಲಾಗಿದೆ.
4. ಬಡ್ತಿ ಹೊಂದಿದ ನೌಕರರು ಕರ್ತವ್ಯದಿಂದ ಮುಕ್ತಗೊಂಡ ಕೂಡಲೇ ನಿಯಮಾನುಸಾರ ನಿಯೋಜಿತ ಕಛೇರಿಯಲ್ಲಿ ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ ಬಡ್ತಿಯನ್ನು ನಿರಾಕರಿಸಿರುವರೆಂದು ಪರಿಗಣಿಸಲಾಗುವುದು.

ನಿರ್ದೇಶಕರು,
ಪ್ರವಾಸೋದ್ಯಮ ಇಲಾಖೆ.

ಪಿ.ಆರ್. ನಂ. 444

ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರ ಕಛೇರಿ ರಾಯಚೂರು-584101

ಅಂತಿಮ ನೋಟೀಸ್

ಸಂಖ್ಯೆ : ಆವಿ1/ದೂರು/ಅ.ಗೈ.ಹಾ/26/2009-10, ದಿನಾಂಕ : 30-1-2012

ವಿಷಯ: ಶ್ರೀಮತಿ ಅರ್ಚನಾ ಸಹ ಶಿಕ್ಷಕರು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ನಾಗಲಾಪೂರ ತಾ:ಜಿ:ರಾಯಚೂರು ಇವರು ದೀರ್ಘ ಕಾಲ ಶಾಲಾ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾದ ಕುರಿತು.

ಉಲ್ಲೇಖ:

1. ಮುಖ್ಯೋಪಾಧ್ಯಾಯರು ಹಾಗೂ ಹಿಂದಿನ ವಲಯ ಸಹಾಯಕ ಶಿಕ್ಷಣಾಧಿಕಾರಿ ದೇವಸ್ಗೂರು ಇವರ ಪತ್ರ ದಿನಾಂಕ : 4-6-2009.
2. ಈ ಕಛೇರಿಯ ನೋಟಿಸ್ ಸಮ ಸಂಖ್ಯೆ : ದಿನಾಂಕ : 9-6-2009.
3. ಮುಖ್ಯೋಪಾಧ್ಯಾಯರು ಹಾಗೂ ಹಿಂದಿನ ವಲಯ ಸಹಾಯಕ ಶಿಕ್ಷಣಾಧಿಕಾರಿ ದೇವಸ್ಗೂರು ಇವರ

4. ಈ ಕಛೇರಿಯ ಪತ್ರ ಸಮ ಸಂಖ್ಯೆ ದಿನಾಂಕ : 27-7-2009.
5. ಈ ಕಛೇರಿಯ ಪತ್ರ ಸಮ ಸಂಖ್ಯೆ : ದಿನಾಂಕ : 1-9-2009.
6. ಶ್ರೀಮತಿ ಅರ್ಚನಾ ಸಹ ಶಿಕ್ಷಕರು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ನಾಗಲಾಪೂರ ಇವರ ಮನವಿ ಅರ್ಜಿ ದಿನಾಂಕ :. . . . . . ಸ್ವೀಕರಿಸಿದ ದಿನಾಂಕ : 12-11-2009.
7. ಈ ಕಛೇರಿಯ ಪತ್ರ ಸಮ ಸಂಖ್ಯೆ : ದಿನಾಂಕ : 31-12-2009.
8. ಕ್ಷೇತ್ರ ಶಿಕ್ಷಣಾಧಿಕಾರಿಗಳು, ರಾಯಚೂರು ಇವರ ವರದಿ ದಿನಾಂಕ : 19-3-2010.
9. ಈ ಕಛೇರಿಯ ಅಂತಿಮ ನೋಟಿಸ್ ಸಮ ಸಂಖ್ಯೆ : ದಿನಾಂಕ : 3-5-2010.
10. ಶ್ರೀಮತಿ ಅರ್ಚನಾ ಸಹ ಶಿಕ್ಷಕರು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ನಾಗಲಾಪೂರ ಇವರ ಮನವಿ ಅರ್ಜಿ ದಿನಾಂಕ : 8-6-2010.
11. ಈ ಕಛೇರಿಯ ಜ್ಞಾಪನ ಪತ್ರ ಸಮ ಸಂಖ್ಯೆ : ದಿನಾಂಕ : 31-7-2010.
12. ಈ ಕಛೇರಿಯ ನೆನಪೋಲೆ-1 ರ ಸಮ ಸಂಖ್ಯೆ ದಿನಾಂಕ : 13-1-2011.
13. ಕ್ಷೇತ್ರ ಶಿಕ್ಷಣಾಧಿಕಾರಿಗಳು, ರಾಯಚೂರು ಇವರ ವರದಿ ದಿನಾಂಕ : 27-1-2011.

ಪ್ರಸ್ತುತ ವಿಷಯಕ್ಕೆ ಸಂಬಂಧಿಸಿ, ಉಲ್ಲೇಖ-1ರನ್ವಯ ಮುಖ್ಯೋಪಾಧ್ಯಾಯರು ಹಾಗೂ ಹಿಂದಿನ ವಲಯ ಸಹಾಯಕ ಶಿಕ್ಷಣಾಧಿಕಾರಿ ದೇವಸ್ಗೂರು ಇವರು ಶ್ರೀಮತಿ ಅರ್ಚನಾ ಸಹ ಶಿಕ್ಷಕಿ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ನಾಗಲಾಪೂರ ತಾ:ಜಿ: ರಾಯಚೂರು ಇವರು ದಿನಾಂಕ : 29-5-2009 ರಿಂದ ಶಾಲಾ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿರುತ್ತಾರೆಂದು ವರದಿ ಮಾಡಿರುತ್ತಾರೆ. ಉಲ್ಲೇಖ (2) ರನ್ವಯ ಸದರಿ ಶಿಕ್ಷಕಿಯವರಿಗೆ ನೋಟಿಸ್ ಜಾರಿ ಮಾಡಲಾಗಿದ್ದು, ಉಲ್ಲೇಖ (3) ರನ್ವಯ ಮುಖ್ಯೋಪಾಧ್ಯಾಯರು ಹಾಗೂ ಹಿಂದಿನ ವಲಯ ಸಹಾಯಕ ಶಿಕ್ಷಣಾಧಿಕಾರಿ ದೇವಸ್ಗೂರು ಇವರು ಸದರಿ ಶಿಕ್ಷಕಿಯವರಿಗೆ (ಉಪ ನಿರ್ದೇಶಕರು ಜಾರಿ ಮಾಡಿದ ನೋಟಿಸ್) ನೋಟಿಸ್‌ನ್ನು ಅಂಚೆ ನೋಂದಾಯಿತ ಅಂಚೆ (ರಿ.ಪೋ) ಮೂಲಕ ಶಿಕ್ಷಕಿಯರ ಖಾಯಂ ವಿಳಾಸಕ್ಕೆ ಕೊಟ್ಟು ಕಳುಹಿಸಿರುತ್ತಾರೆ. ಆದರೆ ವಿಳಾಸಿಗರು ಸದರಿ ನೋಟಿಸನ್ನು ಸ್ವೀಕರಿಸದೇ ಇರುವುದರಿಂದ ನೋಟಿಸ್ ಮರಳಿ ಬಂದಿರುತ್ತದೆ ಎಂದು ವರದಿ ಸಲ್ಲಿಸಲಾಗಿತ್ತದೆ. ಉಲ್ಲೇಖ 4 ರನ್ವಯ ಈ ಕಛೇರಿಯ ಜ್ಞಾಪನೆಯ ಮೂಲಕ ಸದರಿ ಶಿಕ್ಷಕರ ಖಾಯಂ ವಿಳಾಸಕ್ಕೆ ಪುನಃ ನೋಟಿಸ್‌ನ್ನು ಕೊಟ್ಟು ಕಳುಹಿಸಲು ಮುಖ್ಯ ಗುರುಗಳಿಗೆ ಸೂಚನೆ ನೀಡಲಾಗಿದ್ದು ಉಲ್ಲೇಖ 5 ರನ್ವಯ ಸದರಿಯವರ ಅನಧಿಕೃತ ಗೈರು ಹಾಜರಿ ಕುರಿತು ಮಾನ್ಯ ಹಿರಿಯ ಸಹಾಯಕ ನಿರ್ದೇಶಕರು, ಜಿಲ್ಲಾ ವಾರ್ತಾ ಮತ್ತು ಪ್ರಚಾರ ಇಲಾಖೆ ರಾಯಚೂರು ಇವರಿಗೆ ಪತ್ರ ಬರೆದು ಸದರಿ ಶಿಕ್ಷಕಿಯರ ಅನಧಿಕೃತ ಗೈರು ಹಾಜರಿ ಹಾಗೂ ಕೂಡಲೇ ಸೇವೆಗೆ ಮರಳಲು ತಿಳಿಸುವ ಬಗ್ಗೆ ನೋಟಿಸ್‌ನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸುವಂತೆ ಕೋರಲಾಗಿರುತ್ತದೆ. ಉಲ್ಲೇಖ 6 ರನ್ವಯ ಶ್ರೀಮತಿ ಅರ್ಚನಾ ಸ.ಶಿ. ಇವರು ಈ ಕಛೇರಿಗೆ ಮನವಿ ಸಲ್ಲಿಸಿ, ತಾನು ಗರ್ಭಿಣಿಯಾದ ನಿಮಿತ್ಯ ವೈದ್ಯರ ಸಲಹೆಯಂತೆ ದಿನಾಂಕ : 29-5-2009 ರಿಂದ 135 ದಿನಗಳ ಹೆರಿಗೆ ರಜೆ ಮಂಜೂರು ಮಾಡಲು ಕ್ಷೇತ್ರ ಶಿಕ್ಷಣಾಧಿಕಾರಿಗಳು, ರಾಯಚೂರು ಹಾಗೂ ಮುಖ್ಯ ಗುರುಗಳು ಹಾಗು ವಲಯ ಸಹಾಯಕ ಶಿಕ್ಷಣಾಧಿಕಾರಿಗಳೂ, ದೇವಸ್ಗೂರು ಇವರಿಗೆ ಅರ್ಜಿಯನ್ನು ಅಂಚೆ ನೋಂದಾಯಿತ ಮೂಲಕ ಸಲ್ಲಿಸಿರುತ್ತೇನೆ. ಆದರೆ ಸದರಿ ಅರ್ಜಿಯು ಸ್ವೀಕೃತವಾಗದೇ ಮರಳಿ ಬಂದಿದ್ದು, ಅಷ್ಟರಲ್ಲಿ ನನಗೆ ಹೆರಿಗೆಯಾಗಿ ಶಸ್ತ್ರಚಿಕಿತ್ಸೆಯಿಂದ ದೈಹಿಕವಾಗಿ ತೊಂದರೆಯಾಗಿದ್ದು ಶಾಲೆಗೆ ಬಂದು ಹಾಜರಾಗಲಿಕ್ಕೆ ಆಗಿರುವುದಿಲ್ಲ ಎಂದು ಮನವಿ ಸಲ್ಲಿಸಿರುತ್ತಾರೆ. ಈ ಕುರಿತು ಉಲ್ಲೇಖ 7 ರನ್ವಯ ಕ್ಷೇತ್ರ ಶಿಕ್ಷಣಾಧಿಕಾರಿಗಳು, ರಾಯಚೂರು ಇವರಿಗೆ ಸದರಿ ಶಿಕ್ಷಕರಿಗೆ ಹೆರಿಗೆ ರಜೆ ಮಂಜೂರು ಆಗಿದೆಯೇ? ಶಿಕ್ಷಕಿಯರು ಕರ್ತವ್ಯಕ್ಕೆ ಮರಳಿ ಹಾಜರಾಗಿರುವರೇ? ಎಂಬ ಬಗ್ಗೆ ವರದಿಸುವಂತೆ ತಿಳಿಸಲು ಉಲ್ಲೇಖ 8 ರನ್ವಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ರಾಯಚೂರು ಇವರು ದಿನಾಂಕ : 19-3-2010 ರಂದು ವರದಿ ಸಲ್ಲಿಸಿ ಸದರಿಯವರ ಹೆರಿಗೆ ರಜೆ ಈ ಕಛೇರಿಗೆ ಸಲ್ಲಿಸಿರುವುದಿಲ್ಲ. ಅಂಚೆ ಮೂಲಕ ಸಹ ಸ್ವೀಕರಿಸಿರುವುದಿಲ್ಲ ಎಂದು ಈ ಕಛೇರಿಗೆ ತಿಳಿಸಿರುತ್ತಾರೆ. ಉಲ್ಲೇಖ 9 ರನ್ವಯ ಸದರಿಯವರ ಗೈರು ಹಾಜರಿ ಕುರಿತು ದಿನಾಂಕ : 3-5-2010 ರಂದು ಅಂತಿಮ ನೋಟಿಸ್ ಜಾರಿ ಮಾಡಲಾಗಿರುತ್ತದೆ. ಉಲ್ಲೇಖ 10 ರನ್ವಯ ಶ್ರೀಮತಿ ಅರ್ಚನಾ ಸ.ಶಿ. ಇವರು ಮನವಿ ಸಲ್ಲಿಸಿ ನನ್ನ ಹೆರಿಗೆ ನಿಮಿತ್ಯ ಶಸ್ತ್ರಚಿಕಿತ್ಸೆಗೆ ಒಳಪಟ್ಟು ಆರೋಗ್ಯ ಸರಿ ಇಲ್ಲದ ಕಾರಣ ರಜಾ ಮಂಜೂರು ಮಾಡಲಿಕ್ಕೆ ಮುಖ್ಯ ಗುರುಗಳು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ರಾಯಚೂರು ಇವರಿಗೆ ಮನವಿ ಮಾಡಿಕೊಂಡಿದ್ದು, ವೈದ್ಯರ ಸಲಹೆಯಂತೆ ವೈದ್ಯಕೀಯ ರಜೆ ಮೇಲಿದ್ದು, ನಂತರ ಗುಣಮುಖವಾಗಿದ್ದು, ಶಾಲಾ ಕರ್ತವ್ಯಕ್ಕೆ ಹಾಜರಾಗಲು ಅನುಮತಿ ನೀಡಲು ಕೋರಿಕೊಂಡಿರುತ್ತಾರೆ. ಸದರಿ ಶಿಕ್ಷಕಿಯರ ಮನವಿಯನ್ನು ಪರಿಶೀಲಿಸಿ. ಕೋರಿಕೆ ಅಸಂಬದ್ಧವಾಗಿರುವುದರಿಂದ ಸದರಿಯವರ ಅನಧಿಕೃತ ಗೈರು ಹಾಜರಿ ಅವಧಿಯನ್ನು ಸಂಬಳರಹಿತ ರಜೆಯಾಗಿ ಪರಿಗಣಿಸಿ ದಿನಾಂಕ : 31-7-2010 ರಂದು ಶಾಲಾ ಕರ್ತವ್ಯಕ್ಕೆ ಹಾಜರಾಗಲು ಅನುಮತಿ ನೀಡಲಾಗಿರುತ್ತದೆ. ಉಲ್ಲೇಖ 12 ರನ್ವಯ ಈ ಕಛೇರಿಯ ನೆನಪೋಲೆ-1 ರ ಮೂಲಕ ಸದರಿ ಶಿಕ್ಷಕರಿಗೆ ಶಾಲಾ ಕರ್ತವ್ಯಕ್ಕೆ ಈಗಾಗಲೇ ಅನುಮತಿ ನೀಡಲಾಗಿದ್ದು, ಕರ್ತವ್ಯಕ್ಕೆ ಹಾಜರಾಗಿದ್ದಾರೆ ಅಥವಾ ಇಲ್ಲ ಎಂಬ ಬಗ್ಗೆ ವರದಿ ಸಲ್ಲಿಸಲು ಕೇಳಲಾಗಿ ಉಲ್ಲೇಖ 13 ರನ್ವಯ ದಿನಾಂಕ : 27-1-2011ರಂದು ಕ್ಷೇತ್ರ ಶಿಕ್ಷಣಾಧಿಕಾರಿಗಳೂ ರಾಯಚೂರು ಇವರು ವರದಿ ಸಲ್ಲಿಸಿ ಸದರಿ ಶಿಕ್ಷಕರು ಇಂದಿನವರೆಗೆ ಶಾಲಾ ಕರ್ತವ್ಯಕ್ಕೆ ಹಾಜರಾಗದೇ ಅನಧಿಕೃತವಾಗಿ ಗೈರು ಹಾಜರಿ ಮುಂದುವರಿಸಿರುತ್ತಾರೆ ಎಂದು ವರದಿ ಸಲ್ಲಿಸಿರುತ್ತಾರೆ.

ಈ ಎಲ್ಲ ಉಲ್ಲೇಖಗಳ ಹಿನ್ನೆಲೆಯಲ್ಲಿ ನಿಮಗೆ ಕರ್ತವ್ಯಕ್ಕೆ ಹಾಜರಾಗಲು ಸೂಚನೆ/ಹಲವು ಬಾರಿ ನೋಟಿಸ್ ಹಾಗೂ ಸ್ಥಳೀಯ ದಿನಪತ್ರಿಕೆಗಳಲ್ಲಿ ನೋಟಿಸ್‌ನ್ನು ಪ್ರಕಟಿಸಿದ್ದರೂ ಸಹ ನೀವು ಶಾಲಾ ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ. ಕಾರಣ ಈ ಕುರಿತು ಅಂತಿಮ ನೋಟಿಸನ್ನು ಕರ್ನಾಟಕ ರಾಜ್ಯ ಪತ್ರಿಕೆಯಲ್ಲಿ ಪ್ರಕಟಿಸಿದ್ದು, ಪ್ರಕಟವಾದ 15 ದಿವಸದೊಳಗಾಗಿ ನೀವು ಕರ್ತವ್ಯಕ್ಕೆ ಗೈರು ಹಾಜರಾಗಿರುವುದಕ್ಕೆ ಸಮರ್ಥನೀಯವಾದ ದಾಖಲೆ ಹಾಗೂ

ಸಕಾರಣಗಳೊಂದಿಗೆ ಈ ಕಛೇರಿಗೆ ಸಲ್ಲಿಸಿ (ಹಾಜರಾಗಲು) ಅನುಮತಿ ಪಡೆದು ಹಾಜರಾಗಲು ಅಂತಿಮವಾಗಿ ಸೂಚಿಸಿದೆ. ಇದ್ದು ತಪ್ಪಿದಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮ 1957ರ ನಿಯಮ 108ರ ಪ್ರಕಾರ ನಿಮ್ಮನ್ನು ಸೇವೆಯಿಂದ ವಜಾಗೊಳಿಸಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ಉಪನಿರ್ದೇಶಕರು (ಆ)
ಸಾರ್ವಜನಿಕ ಶಿಕ್ಷಣ ಇಲಾಖೆ ರಾಯಚೂರು

ಪಿ.ಆರ್. 180

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ಬಿಜಾಪುರ ಜಿಲ್ಲೆ, ಬಿಜಾಪುರ ರವರ ಪ್ರಾಧಿಕಾರದ ನಡುವಳಿಗಳು

ಸಂಖ್ಯೆ: ಇಎಕ್ಸಇ/ಬಿಜೆಪಿ/ಡಿಟಿಸಿಆರ್/164/2007-08, ದಿನಾಂಕ : 5-12-2011.

<u>ಉಪಸ್ಥಿತರು:</u> ಬಿ.ಎ. ಹಡಲಗೆ,
ಪ್ರಾಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್
ಬಿಜಾಪೂರ ಜಿಲ್ಲೆ, ಬಿಜಾಪೂರ.

ಫಿರ್ಯಾಧಿದಾರರು ವಿರುದ್ಧ **ಆರೋಪಿತರು**

ಅಬಕಾರಿ ಉಪ ನಿರೀಕ್ಷಕರು,
ವಿಜಾಪೂರ ವಲಯ

1. ರಾಜು ತಂದೆ ರಾಮು ಪವಾರ ಸಾ|
ರಿಮಾಂಡ್ ಹೋಮ್ ಹತ್ತಿರ ಹರಣಶಿಕಾರಿ
ಕಾಲೋನಿ ವಿಜಾಪೂರ.
2. ಹಣಮಂತ ವಿಠಲ ಮಸೂತಿ ಸಾ|
ಸ್ಟೇಷನ್ ರಸ್ತೆ, ಜುಲ್ಲಯ ಗಲ್ಲಿ ವಿಜಾಪೂರ.
(ವಾಹನ ಮಾಲೀಕ).

ಪ್ರಕರಣದ ಮುಖ್ಯಾಂಶಗಳು :-

ದಿನಾಂಕ : 19-4-2008 ರಂದು ಸಮಯ ಮಧ್ಯಾಹ್ನ 2-00 ಗಂಟೆಗೆ ಅಬಕಾರಿ ಉಪ ನಿರೀಕ್ಷಕರು ವಿಜಾಪೂರ ಇವರು ಪಂಚರನ್ನು ತಮ್ಮ ಕಛೇರಿಗೆ ಕರೆಯಿಸಿ, ರಾಜ್ಯ ವಿಧಾನಸಭೆ ಚುನಾವಣೆ ಪ್ರಯುಕ್ತ ಅಕ್ರಮ ನಕಲಿ ಮದ್ಯ : ಕಳ್ಳಭಟ್ಟಿ ಸಾರಾಯಿ ಸಾಗಾಣಿಕೆ ಮತ್ತು ಮಾರಾಟ ತಡೆಗಟ್ಟುವ ಉದ್ದೇಶದಿಂದ ಗಸ್ತು ಹೊರಟಿದ್ದು, ಒಂದು ವೇಳೆ ಆ ಸಮಯದಲ್ಲಿ ಅಪರಾಧ ಪತ್ತೆ ಆದಲ್ಲಿ ತಾವುಗಳು ಪಂಚರಾಗಿ ಪಂಚನಾಮೆ ನಡೆಯಿಸಿ ಕೊಡಬೇಕೆಂದು ಕೇಳಿಕೊಂಡೆರು, ಅದಕ್ಕೊಪ್ಪಿದ ಅವರು ಅಬಕಾರಿ ಅಧಿಕಾರಿಗಳೊಂದಿಗೆ ಹೊರಡಲು ಸಿದ್ದರಾದರು. ನಂತರ ಗಸ್ತು ತಿರುಗುತ್ತಾ, ಕನಮಡಿ ಹತ್ತಿರ ವಿಧಾನಸಭೆಯ ಚುನಾವಣೆ ಪ್ರಯುಕ್ತ ತಾತ್ಕಾಲಿಕವಾಗಿ ತೆರೆದಿರುವ ಅಬಕಾರಿ ತನಿಖಾ ಠಾಣೆಯಲ್ಲಿ ರಸ್ತೆ ಕಾವಲು ನಡೆಸುತ್ತಿದ್ದಾಗ, ಆರೋಪಿತ ಇವನು ಅಕ್ರಮವಾಗಿ ಆಟೋ ನಂ. ಕೆಎ-28-ಎ-910 ವಾಹನದಲ್ಲಿ 20 ಲೀಟರ ಸಾಮರ್ಥ್ಯದ ಪ್ಲಾಸ್ಟೀಕ ಕ್ಯಾನ-1 ಮತ್ತು 02 ಲೀಟರ ಸಾಮರ್ಥ್ಯದ 01 ಪ್ಲಾಸ್ಟೀಕ ಬಾಟಲಿಯಲ್ಲಿ ಒಟ್ಟು 22 ಲೀಟರ ಕಳ್ಳಭಟ್ಟಿ ಸಾರಾಯಿಯನ್ನು ಸಾಗಾಣಿಕೆ ಮಾಡುತ್ತಿದ್ದನ್ನು ಪತ್ತೆ ಹಚ್ಚಿ, ಸದರಿ ಕ್ಯಾನು ಮತ್ತು ಬಾಟಲಿಗಳಿಂದ 180 ಎಂಎಲ್‌ದ ಒಂದು ಬಾಟಲಿಯಲ್ಲಿ ಕಳ್ಳಭಟ್ಟಿ ಸಾರಾಯಿಯನ್ನು ರಸಾಯಾನಿಕ ಪರೀಕ್ಷೆಗೋಸ್ಕರ ಶ್ಯಾಂಪಲ್ ತೆಗೆದು, 22 ಲೀಟರ ಕಳ್ಳಭಟ್ಟಿ ಸಾರಾಯಿ ಮತ್ತು ಆಟೋ ನಂ. ಕೆಎ-28-ಎ-910 ನ್ನು ಪಂಚನಾಮೆಡಿಯಲ್ಲಿ ಜಪ್ತು ಪಡಿಸಿಕೊಂಡು, ಈ ಸಂಬಂಧ ಆಟೋ ಚಾಲಕನಾದ ರಾಜು ತಂದೆ ರಾಮು ಪವಾರ ಸಾ| ವಿಜಾಪೂರ ಇವನನ್ನು ಸ್ಥಳದಲ್ಲಿ ಬಂಧಿಸಿ, ಅಬಕಾರಿ ಕಾಯ್ದೆ 32,34 & 38(ಎ) ರಡಿಯಲ್ಲಿ ಗುನ್ನೆ ನಂ. 24/2007-08 ರಂತೆ ಪ್ರಕರಣವನ್ನು ದಾಖಲಿಸಿಕೊಂಡು ನ್ಯಾಯಾಲಯಕ್ಕೆ ಫಿರ್ಯಾದಿಯನ್ನು ಸಲ್ಲಿಸಿರುತ್ತಾರೆ. ಜಪ್ತಾದ ಮುದ್ದೇಮಾಲನ್ನು ತಮ್ಮ ತಾಬಾದಲ್ಲಿಟ್ಟುಕೊಳ್ಳಲು ಅನುಮತಿ ಕೋರಿ, ಪ್ರಕರಣದ ಪ್ರಥಮ ವರ್ತಮಾನ ವರದಿ ಹಾಗೂ ಸಂಬಂಧಿಸಿದ ದಾಖಲಾತಿಗಳನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ದಿನಾಂಕ : 4-9-2008 ರಂದು ಶ್ರೀ ಬಿ.ಆರ್. ಗೋಕಾವಿ ನ್ಯಾಯವಾದಿಗಳು ವಿಜಾಪೂರ ಇವರು ವಾಹನ ಮಾಲೀಕರ ಪರವಾಗಿ ಈ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿ, ಜಪ್ತಾದ ವಾಹನ ಆಟೋ ನಂ. ಕೆಎ-28-ಎ910 ವು ಶ್ರೀ ಹಣಮಂತ ವಿಠಲ ಮಸೂತಿ ಸಾ| ಜುಲ್ಯೆಗಲ್ಲಿ ವಿಜಾಪೂರ ಇವರಿದ್ದು, ಸದರಿ ವಾಹನವನ್ನು ಸೂಕ್ತ ಭದ್ರತೆಯ ಮೇಲೆ ವಾಹನ ಮಾಲೀಕರಿಗೆ ವಾಹನವನ್ನು ತಾತ್ಕಾಲಿಕವಾಗಿ ಬಿಡುಗಡೆ ಮಾಡಲು ಕೋರಿರುತ್ತಾರೆ.

ದಿನಾಂಕ : 3-11-2008 ರಂದು ಸಹಾಯಕ ಅಭಿಯೋಗ ನಿರ್ದೇಶಕರು ವಿಜಾಪೂರ ಇವರು ಅರ್ಜಿದಾರರ ಅರ್ಜಿಯ ಕುರಿತು ಈ ಪ್ರಾಧಿಕಾರಕ್ಕೆ ತಮ್ಮ ಅಭಿಪ್ರಾಯ ಸಲ್ಲಿಸಿರುತ್ತಾರೆ. ಅದರಂತೆ ವಾಹನವನ್ನು ದಿನಾಂಕ : 23-1-2009 ರಂದು ರೂ. 25,000/- ಬ್ಯಾಂಕ್ ಭದ್ರತೆಯ ತಾತ್ಕಾಲಿಕವಾಗಿ ವಾಹನ ಮಾಲೀಕರಿಗೆ ಬಿಡುಗಡೆ ಮಾಡಲು ಮಧ್ಯಂತರ ಆದೇಶ ಮಾಡಲಾಗಿರುತ್ತದೆ.

ತನಿಖಾಧಿಕಾರಿಗಳಾದ ಅಬಕಾರಿ ಉಪ ನಿರೀಕ್ಷಕರು ವಿಜಾಪೂರ ಇವರು ಈ ಪ್ರಾಧಿಕಾರಕ್ಕೆ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯನ್ನು ಪರಿಶೀಲಿಸಲಾಗಿ. ರಾಸಾಯನಿಕ ತಜ್ಞರ ವರದಿಯ ಪ್ರತಿ ಹಾಗೂ ಉಳಿದ ದಾಖಲಾತಿಗಳನ್ನು ಸಲ್ಲಿಸಿದ್ದು, ಶ್ಯಾಂಪಲ್‌ದಲ್ಲಿ ಈಥೈಲ್ ಅಲ್ಕೋಹಾಲ್ ಕಂಡು ಬಂದಿದ್ದು, ಅವುಗಳು ಮಾನವನ ಸೇವನೆಗೆ ಯೋಗ್ಯವಾಗಿರುವುದಿಲ್ಲವೆಂದು ರಸಾಯನಿಕ ತಜ್ಞರ ವರದಿ ಸಂ. ಸಿಸಿಎಲ್-2533/2008 ದಿನಾಂಕ :

17-6-2008 ರಲ್ಲಿ ಅಭಿಪ್ರಾಯಪಟ್ಟಿರುತ್ತಾರೆ ಮತ್ತು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ವಿಜಾಪೂರ ಇವರು ಜಪ್ತಾದ ಆಟೋ ನಂ. ಕೆಎ-28-ಎ-910 ವು ಶ್ರೀ ಹಣಮಂತ ವಿಠಲ ಮಸೂತಿ ಸಾ|ಜುಲ್ಯೆಗಲ್ಲಿ ವಿಜಾಪೂರ ಇವರು ನೋಂದಾಯಿತ ವಾಹನ ಮಾಲೀಕರು ಇರುವುದಾಗಿ ತಿಳಿಸಿರುತ್ತಾರೆ. ಹಾಗೂ ಪ್ರಕರಣದಲ್ಲಿ ಜಪ್ತಾದ ಕಳ್ಳಭಟ್ಟಿ ಸಾರಾಯಿ ಈಥೈಲ್ ಆಲ್ಕೋಹಾಲ್ ಕಂಡು ಬಂದಿದ್ದು, ಅವುಗಳು ಮಾನವ ಸೇವನೆಗೆ ಯೋಗ್ಯವಾಗಿರುವುದಿಲ್ಲವೆಂದು ರಸಾಯನಿಕ ತಜ್ಞರು ತಿಳಿಸಿರುತ್ತಾರೆ. ಆದ್ದರಿಂದ ಸದರಿ ಪ್ರಕರಣದಲ್ಲಿ ಮೇಲ್ಕಾಣಿಸಿದ ಜಪ್ತಾದ ಮುದ್ದೇಮಾಲನ್ನು 43 ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವ ವಸ್ತುಗಳಾಗಿದ್ದು, ಸದರಿ ಜಪ್ತಾದ ಮುದ್ದೇಮಾಲನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ವಿಲೇವಾರಿ ಮಾಡಲು ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ ಕೋರಿರುತ್ತಾರೆ.

ಈ ಪ್ರಾಧಿಕಾರವು ಕರ್ನಾಟಕ ಅಬಕಾರಿ ಕಾಯ್ದೆ 1965 ರ 43(ಬಿ) ಯಲ್ಲಿ ವಿಧಿವಿಧಾನಗಳನ್ನು ಅನುಸರಿಸಿ ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಎ) ರ ಅನ್ವಯ ವಿಚಾರಣೆ ನಡೆಸಲು ದಿನಾಂಕಗಳನ್ನು ನಿಗಧಿ ಪಡಿಸಿ, ಸಂಬಂಧಪಟ್ಟ ಎಲ್ಲಾ ಸಾಕ್ಷಿದಾರರಿಗೆ ನೋಟಿಸನ್ನು ಹೊರಡಿಸಲಾಯಿತು.

ದಿನಾಂಕ : 18-3-2011 & 1-12-2011 ರಂದು ವಿಚಾರಣೆಯನ್ನು ನಡೆಸಲಾಯಿತು. ಸರ್ಕಾರದ ಪರವಾಗಿ ಎ.ಡಿ.ಪಿ. ಯವರು ಹಾಗೂ ವಾಹನ ಮಾಲೀಕರಾದ ಶ್ರೀ ಹಣಮಂತ ವಿಠಲ ಮಸೂತಿ ಸಾ|ಜುಲ್ಯೆಗಲ್ಲಿ ವಿಜಾಪೂರ ಇವರ ಹಾಜರ ಇದ್ದರು. ಅಭಿಯೋಗದ ಪರವಾಗಿ ಸಾಕ್ಷಿದಾರರಾದ ಪ್ರ.ಸಾ-1 ವಿಚಾರಣೆ ಮಾಡಿ ಐದು(05) ದಾಖಲಾತಿಗಳನ್ನು ಮತ್ತು ಎರಡು ಮುದ್ದೇಮಾಲುಗಳನ್ನು ಗುರುತಿಸಿದ್ದು ಇರುತ್ತದೆ.

ಪ್ರಾ.ಸಾ-1 ಇವರು ಫಿರ್ಯಾಧಿದಾರರಾಗಿ ಸಾಕ್ಷಿ ನುಡಿಯುತ್ತಾ, ದಿನಾಂಕ : 19-4-2008 ರಂದು ಜಿಲ್ಲಾದ್ಯಾಂತ ವಿಧಾನಸಭಾ ಚುನಾವಣೆ ನಡೆಯುತ್ತಿರುವ ಪ್ರಯುಕ್ತ ಮಾನ್ಯ ಜಿಲ್ಲಾ ದಂಡಾಧಿಕಾರಿಗಳು ವಿಜಾಪೂರ ಜಿಲ್ಲೆ ಇವರು ಆದೇಶದ ಮೇರೆಗೆ ಹೊರ ರಾಜ್ಯ ಮಹಾರಾಷ್ಟ್ರ ರಾಜ್ಯದಿಂದ ಅಕ್ರಮವಾಗಿ ಮದ್ಯ ಸಾಗಾಣಿಕೆ ಆಗುತ್ತಿರುವುದನ್ನು ತಡೆಗಟ್ಟಲು ಸೂಕ್ತ ಕ್ರಮ ಜರುಗಿಸಲು ಆದೇಶ ಮಾಡಿದ್ದು, ಅದರಂತೆ ಅಬಕಾರಿ ಉಪ ಆಯುಕ್ತರು ವಿಜಾಪೂರ ಇವರು ಅಬಕಾರಿ ಅಧಿಕಾರಿಗಳ ಮತ್ತು ಸಿಬ್ಬಂದಿರವರನ್ನು ಬೇರೆಬೇರೆ ತಂಡಗಳಾಗಿ ವಿಭಾಗಿಸಿ ರಸ್ತೆ ಕಾವಲು ಮಾಡಲು ನಿಯೋಜಿಸಲಾಗಿರುತ್ತದೆ. ದಿನಾಂಕ : 19-4-2008ರಂದು ತಮ್ಮ ಸಿಬ್ಬಂದಿ ಮತ್ತು ಪಂಚ ಜನರನ್ನು ಕರೆದುಕೊಂಡು ಸರ್ಕಾರಿ ವಾಹನ ನಂ. ಕೆಎ-28-ಬಿ-314 ನೇದ್ದರಲ್ಲಿ ರಸ್ತೆ ಕಾವಲು ಮಾಡಲು ಹೊರಟಾಗ ಅಕ್ರಮ ಮದ್ಯ ದೊರೆತಲ್ಲಿ ಪಂಚನಾಮಗೋಸ್ಕರ ಇಬ್ಬರು ಪಂಚರನ್ನು ಕೂಡಾ ಕರೆದುಕೊಂಡು ರಸ್ತೆ ಕಾವಲು ಮಾಡುತ್ತಿದ್ದಾಗ ಸಾಯಂಕಾಲ ಸುಮಾರು 5-30 ಗಂಟೆಗೆ ಕನಮಡಿ ಚೆಕ್‌ಪೋಸ್ಟ್ ಹತ್ತಿರ ರಸ್ತೆ ಕಾವಲು ಮಾಡುತ್ತಿದ್ದಾಗ ಜತ್ತ ಕಡೆಯಿಂದ ಆಟೋ ರಿಕ್ಷಾ ಬರುವುದನ್ನು ಕಂಡು ಅದನ್ನು ತಡೆಹಿಡಿದು ರಸ್ತೆ ಪಕ್ಕದಲ್ಲಿ ನಿಲ್ಲಿಸಿ, ಸದರಿ ವಾಹನವನ್ನು ತಪಾಸಣೆಗೆ ಒಳಪಡಿಸಿದಾಗ, ವಾಹನದ ಹಿಂದಿನ ಶೀಟದ ಕೆಳಗಡೆ 20 ಲೀಟರ ಒಂದು ಪ್ಲಾಸ್ಟೀಕ ಕ್ಯಾನದಲ್ಲಿ 20 ಲೀಟರ ಕಳ್ಳಭಟ್ಟಿ ಸಾರಾಯಿ ಮತ್ತು 02 ಲೀಟರ್ ಸಾಮರ್ಥ್ಯದ 01 ಲೀಟರ್ ಒಂದು ಪ್ಲಾಸ್ಟೀಕ ಬಾಟಲಿಯಲ್ಲಿ 02 ಲೀಟರ ಕಳ್ಳಭಟ್ಟಿ ಸಾರಾಯಿ ಕಂಡು ಬಂದಿದ್ದು, ಸದರಿ ವಾಹನ ಚಾಲಕನನ್ನು ವಿಚಾರಿಸಲಾಗಿ ಆತ ತಮ್ಮ ಹೆಸರು ರಾಜು ರಾಮು ಪವಾರ ಸಾ| ಹರಣಶಿಕಾರಿ ಕಾಲೋನಿ ವಿಜಾಪೂರ ಎಂದು ತಿಳಿಸಿದ, ನಂತರ ಪಂಚರ ಸಮಕ್ಷಮ ಶೀಲು ಮಾಡಿ, ಅವುಗಳ ಮೇಲೆ ಪಂಚರ ಸಹಿಗಳ್ಳುಳ ಚೀಟಿಗಳನ್ನು ಅಂಟಿಸಿ, ಪಂಚರ ಸಮಕ್ಷಮದಲ್ಲಿ ಸವಿಸ್ತಾರವಾಗಿ ಪಂಚನಾಮೆಯನ್ನು ಬರೆದು ಕ್ಯಾನ ಮತ್ತು ಬಾಟಲಿಗಳಲ್ಲಿನ 22 ಲೀಟರ ಕಳ್ಳಭಟ್ಟಿ ಸಾರಾಯಿ ಮತ್ತು ಆಟೋ ವಾಹನ ನಂ. ಕೆಎ-28-ಎ 910ನ್ನು ಜಪ್ತು ಪಡಿಸಿಕೊಳ್ಳಲಾಯಿತು. ಆರೋಪಿತ ರಾಜು ಇತನನ್ನು ಸ್ಥಳದಲ್ಲಿಯೇ ದಸ್ತಗಿರಿ ಮಾಡಿಕೊಂಡು, ದೊರೆತ ಎಲ್ಲಾ ಮುದ್ದೇಮಾಲು ವಸ್ತುಗಳೊಂದಿಗೆ ಕಛೇರಿಗೆ ಹಿಂದುರುಗಿ ಸದರಿ ಆರೋಪಿತನ ವಿರುದ್ಧ ಅಬಕಾರಿ ಗುನ್ಹಾ ನಂ. 24/2007-08 ರಡಿಯಲ್ಲಿ ಪ್ರಥಮ ವರ್ತಮಾನ ವರದಿಯನ್ನು ನೋಂದಣಿ ಮಾಡಿಕೊಂಡು, ಪ್ರ.ಥ.ವ. ನ್ನು ಮಾನ್ಯ ನ್ಯಾಯಾಲಯಕ್ಕೆ ಪ್ರತಿಗಳನ್ನು ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟು, ಆರೋಪಿತನ್ನು ನ್ಯಾಯಾಂಗ ಬಂಧನ ಕೋರಿ ನ್ಯಾಯಾಲಯಕ್ಕೆ ಮುಂದೆ ಹಾಜರಪಡಿಸಿದೆನೆಂದು ಸಾಕ್ಷಿ ನುಡಿದರು. ಪಂಚನಾಮೆಯ ಪ್ರತಿಯನ್ನು ನೋಡುತ್ತಿದ್ದು, ನಿ.ಪಿ.-1 ಅಂತಾ ಸಾಕ್ಷಿದಾರರ ಸಹಿಯನ್ನು ನಿ.ಪಿ.-2(ಎ) ಅಂತಾ ಗುರುತಿಸಲಾಯಿತು. ಪ್ರ.ಥ.ವ ವರಕಿಯ ಪ್ರತಿಯನ್ನು ನಿ.ಪಿ-2. ಅಂತಾ ಸಾಕ್ಷಿದಾರರ ಸಹಿಯನ್ನು ನಿ.ಪಿ.-2(ಎ) ಅಂತಾ ಗುರುತಿಸಲಾಯಿತು. ಜಪ್ತಿ ಪಡಿಸಕೊಂಡ ಎಲ್ಲಾ ವಸ್ತುಗಳನ್ನು ಆಟೋರಿಕ್ಷಾವನ್ನು ತೋರಿಸಿದಲ್ಲಿ ಗುರುತಿಸಬಲ್ಲವೆಂದು ಸಾಕ್ಷಿ ನುಡಿದರು. ಈ ಪ್ರಕರಣದ ಮುಂದಿನ ತನಿಖೆಯನ್ನು ತೆಗೆದುಕೊಂಡು ದಿನಾಂಕ : 16-6-2008 ರಂದು ಅಬಕಾರಿ ರಕ್ಷಕರಾದ ಎಸ್.ಎಂ. ಹುದ್ದಾರ, ಈ ಪ್ರಕರಣದಲ್ಲಿಯ ರಸಾಯನಿಕ ಮಾದರಿಗಾಗಿ ತೆಗೆದ 180 ಎಂಎಲ್‌ದ ಎರಡು ಶೀಲು ಮಾಡಿದ ಬಾಟಲಿಗಳನ್ನು ರಸಾಯನಿಕ ಪರೀಕ್ಷೆಗಾಗಿ ಬೆಂಗಳೂರಿಗೆ ಕಳುಹಿಸಿ ಕೊಟ್ಟು, ಸದರಿ ದಿನ ಕಳುಹಿಸಿದ ಮುಖ ಪತ್ರದ ಪ್ರತಿಯನ್ನು ನೋಡುತ್ತಿದ್ದು, ಅದನ್ನು ನಿ.ಪಿ.-3 ಅಂತಾ ಸಾಕ್ಷಿದಾರರ ಸಹಿಯನ್ನು ನಿ.ಪಿ-3(ಎ) ಅಂತಾ ಗುರುತಿಸಲಾಯಿತು. ದಿನಾಂಕ : 18-6-2008 ರಂದು ಎಸ್.ಎಂ. ಹುದ್ದಾರ ರವರು ಎಸ್.ಎಂ. ಹುದ್ದಾರ ರವರು ರಸಾಯನಿಕ ವಿಶ್ಲೇಷಣಾ ವರದಿಯನ್ನು ಬೆಂಗಳೂರಿನಿಂದ ತಂದು ಹಾಜರ ಪಡಿಸಿದ್ದು, ಅದರ ಪ್ರತಿಯನ್ನು ನೋಡುತ್ತಿದ್ದು ಅದನ್ನು ನಿ.ಪಿ.-4 ಅಂತಾ ಗುರುತಿಸಲಾಯಿತು. ತನಿಖೆಯನ್ನು ಪೂರ್ಣಗೊಳಿಸಿ ದಿನಾಂಕ : 19-4-2008 ರಂದು ಎಸ್.ಎಂ. ಪೀರಜಾಧೆ ಮತ್ತು ಎಸ್.ಸಿ. ರಾಯಚೂರ ರವರ ಹೇಳಿಕೆಗಳನ್ನು ಪಡೆದುಕೊಂಡು ದೋಷಾರೋಪಣಾ ಪತ್ರವನ್ನು ಆರೋಪಿತನ ವಿರುದ್ಧ ಸಲ್ಲಿಸಿದನೆಂದು ಸಾಕ್ಷಿ ನುಡಿದರು.

ವಾಹನದ ಮಾಲೀಕರು ವಾಹನವನ್ನು ಈ ದಿನ ವಾಹನನ್ನು ಹಾಜರಪಡಿಸಿದ್ದು, ವಾಹನ ನಂ. ಕೆಎ-28-ಎ-910 ನೇದ್ದನ್ನು ನೋಡುತ್ತಿದ್ದು ಅದನ್ನು ಮುದ್ದೇಮಾಲು-1 ಅಂತಾ ಗುರುತಿಸಲಾಯಿತು. ಜಪ್ತಿ ಪಡಿಸಿಕೊಂಡ ವಾಹನ ಇದೇ ಎಂದು ಸಾಕ್ಷಿ ನುಡಿದರು.

ಪಾಟೀ ಸವಾಲು-ವಾಹನದ ಮಾಲೀಕರ ಪರವಾಗಿ ಶ್ರೀ ಆರ್.ಪಿ. ಗೋಕಾವಿ ವಕೀಲರು ಹಾಜರ ಇರುವುದಿಲ್ಲಾ. ಆದರೆ ವಕೀಲರ ಪರವಾಗಿ ವಾಹನದ ಮಾಲೀಕರಾದ ಹಣಮಂತ ವಿಠಲ ಮಸೂತಿ ರವರು ಹಾಜರಿದ್ದು, ಅವರಿಗೆ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು. ಆದರೆ ಅವರು ಪಾಟೀ ಸವಾಲು ಮಾಡಲು ಮುಂದೆ ಬಂದಿರುವುದಿಲ್ಲಾ. ಮತ್ತು ಅವರು ಪ್ರಕರಣವನ್ನು ಒಪ್ಪಿಕೊಳ್ಳುವುದಾಗಿ ತಮ್ಮ ಒಪ್ಪಿಗೆ ಪತ್ರವನ್ನು ಹಾಜರಪಡಿಸಿರುತ್ತಾರೆ, ಅದನ್ನು ನಿ.ಪಿ.-5 ಎಂದು ಗುರುತಿಸಲಾಯಿತು.

ಸಹಾಯಕ ಅಭಿಯೋಗ ನಿರ್ದೇಶಕರು ತಮ್ಮ ವಿಚಾರಣೆಯನ್ನು ಮುಕ್ತಾಯಗೊಳಿಸಿದರು ದಿನಾಂಕ : 1-12-2011 ರಂದು ಸಹಾಯಕ ಅಭಿಯೋಗ ನಿರ್ದೇಶಕರು ಹಾಗು ವಾಹನ ಮಾಲೀಕರ ಹೇಳಿಕೆಗಳನ್ನು ಆಲಿಸಲಾಯಿತು.

ಪ್ರಾಸುಕೂಶನ ಪರ ಸಾಕ್ಷಿ ಹಾಗೂ ಎ.ಡಿ.ಪಿ. ರವರ ವಾದ ಮತ್ತು ವಾಹನ ಮಾಲೀಕರ ಒಪ್ಪಿಗೆಯ ಆಧಾರದ ಮೇಲೆ ಮುಂದಿನ ಆದೇಶ ಹೊರಡಿಸುವ ಮುನ್ನ ಈ ಕೆಳಕಂಡ ವಿವಾದಾಂಶಗಳಿಗೆ ಉತ್ತರವನ್ನು ಪಡೆಯಬೇಕಾಗಿರುತ್ತದೆ.

ಮೊದಲನೆಯ ವಿವಾದಾಂಶ :-

ದಿನಾಂಕ : 24-4-2008 ರಂದು ಸದರಿ ವಾಹನದಲ್ಲಿ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ತುಂಬಿದ ಕ್ಯಾನು ಮತ್ತು ಬಾಟಲಿ ಸಾಗಾಣಿಕೆ ಯಾಗಿದೆಯೇ ? ಇದು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 32, 34 ರೀತ್ಯಾ ಅಪರಾಧವಾಗಿದೆಯೇ ? ಅಥವಾ ಇಲ್ಲಾ ?

ಎರಡನೆಯ ವಿವಾದಾಂಶ :-

ಸದರಿ ವಾಹನದಲ್ಲಿ ಅಕ್ರಮ ಕಳ್ಳಭಟ್ಟಿ ಸಾರಾಯಿ ತುಂಬಿದ ಕ್ಯಾನು, ಬಾಟಲಿಗಳು ಸಾಗಾಣಿಕೆಯಾಗಿರುವ ಬಗ್ಗೆ ತಮ್ಮ ತಿಳುವಳಿಕೆಗೆ ಬಾರದೇ ಅಥವಾ ತಾನು ಶಾಮೀಲಾಗದೇ ನಡೆದಿದೆ ಎಂಬುದರ ಬಗ್ಗೆ ಅರ್ಜಿದಾರನಾಗಲೀ ಅಥವಾ ವಾಹನ ಚಾಲಕರಾಗಲೀ ತೃಪ್ತಿಕರವಾಗಿ ನಿರೂಪಿಸಿರುತ್ತಾರೆಯೇ? ಅಥವಾ ಇಲ್ಲಾ ?

ಮೂರನೇಯ ವಿವಾದಾಂಶ :-

ವಾಹನವು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಿಕ್ಕೆ ಯೋಗ್ಯವಾಗಿದಯೇ ? ಅಥವಾ ಇಲ್ಲಾ ?

ಮೊದಲನೆಯ ವಿವಾದಾಂಶಕ್ಕೆ ಉತ್ತರ-ಸಕಾರಾತ್ಮಕ (ಹೌದು):-

ಪ್ರಾಸಿಕೂಶನ ಸಾಕ್ಷಿ ನುಡಿದ ಪಿರ್ಯಾಧಿದಾರರು ನೀಡಿರುವ ಹೇಳಿಕೆಯನ್ನು ಗಮನಿಸಿದಾಗ ಮಹಜರದಲ್ಲಿ ಇರುವ ಅಂಶಗಳನ್ನು ಪ್ರಭಲವಾಗಿ ಸಮರ್ಥಿಸುತ್ತಾರೆ. ಪ್ರಕರಣದಲ್ಲಿ ಆರೋಪಿಸಿರುವ ಅಂಶವಾದ ಸದರಿ ವಾಹನದಲ್ಲಿ ಸಾಗಾಣಿಕೆ ಮಾಡಲ್ಪಟ್ಟಿದ್ದು ಕಳ್ಳಭಟ್ಟಿ ಸಾರಾಯಿ ತುಂಬಿದ ಕ್ಯಾನು, ಬಾಟಲಿಗಳು ಎಂಬುದು ರಸಾಯನಿಕ ವಿಶ್ಲೇಷಣೆಯ ವರದಿಯಿಂದ ದೃಢಪಟ್ಟಿರುತ್ತದೆ. ಸದರಿ ಕಳ್ಳಭಟ್ಟಿ ಸಾರಾಯಿ ತುಂಬಿದ ಕ್ಯಾನು, ಬಾಟಲಿಗಳು ಸಾಗಾಣಿಕೆಗೆ ಸಂಬಂಧಪಟ್ಟ ದಾಖಲಾತಿಗಳು ವಾಹನದಲ್ಲಿ ಇಲ್ಲದಿರುವ ಅಂಶವನ್ನು ಗಮನಿಸಿದಾಗ, ಮತ್ತು ವಾಹನ ಮಾಲೀಕರು ತಮ್ಮ ತಪ್ಪನ್ನು ಒಪ್ಪಿಕೊಂಡಿರುವನ್ನು ಗಮನಿಸಿದಾಗ ಸದರಿ ವಾಹನದಲ್ಲಿ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ತುಂಬಿದ ಕ್ಯಾನು, ಬಾಟಲಿಗಳು ಸಾಗಾಣಿಕೆಯಾಗಿರುವುದು ಸ್ಪಷ್ಟವಾಗಿ ಸಾಬೀತವಾಗಿದೆ. ಸದರಿ ವಾಹನದಲ್ಲಿ ಕಳ್ಳಭಟ್ಟಿ ಸಾರಾಯಿ ತುಂಬಿದ ಕ್ಯಾನು, ಬಾಟಲಿಗಳು ಸಾಗಿಸಿದ ಬಗ್ಗೆ ಎದುರುದಾರರಿಂದ ಯಾವುದೇ ರೀತಿಯ ಅಭ್ಯಂತರ ವ್ಯಕ್ತವಾಗಿರುವುದಿಲ್ಲಾ.

ಎರಡನೆಯ ವಿವಾದಾಂಶಕ್ಕೆ ಉತ್ತರ-ಇಲ್ಲಾ :-

ಮೊದಲನೆಯ ವಿವಾದಾಂಶದಿಂದ ಪಡೆದ ಉತ್ತರದಲ್ಲಿ ಸದರಿ ವಾಹನದಲ್ಲಿ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ತುಂಬಿದ ಕ್ಯಾನು, ಬಾಟಲಿಗಳು ಸಾಗಾಣಿಕೆಯಾಗಿರುವುದು ಸ್ಪಷ್ಟವಾಗಿ ಸಾಬೀತಾಗಿದ್ದು, ಪ್ರಕರಣವು ಸಂಭವಿಸಿದ ಸಮಯದಲ್ಲಿ ಆರೋಪಿ ವಾಹನದ ಚಾಲಕನಾಗಿದ್ದು, ಇವನ ತಿಳಿವಳಿಕೆಯಿಂದ ಹಾಗೂ ವಾಹನ ಮಾಲೀಕನ ಒಪ್ಪಿಗೆಯಿಂದ ವಾಹನ ಮಾಲೀಕನ ಇತನ ಶಾಮೀಲಿನಿಂದಲೇ ಸದರಿ ವಾಹನದಲ್ಲಿ ಅಕ್ರಮ ಕಳ್ಳಭಟ್ಟಿ ಸಾರಾಯಿ ತುಂಬಿದ ಕ್ಯಾನು, ಬಾಟಲಿಗಳು ಸಾಗಾಣಿಕೆಯಾಗಿರುವುದು ಸ್ಪಷ್ಟವಾಗಿ ರುಜುವಾತ ಆಗಿದ್ದು ಇದರ ಬಗ್ಗೆ ವಾಹನ ಮಾಲೀಕನಿಗೂ ಸಹ ತಿಳುವಳಿಕೆ ಇದ್ದಿತೆಂಬುದು ತಿಳಿದು ಬರುತ್ತದೆ. ವಾಹನದ ಮಾಲೀಕರ ತಿಳುವಳಿಕೆಯಿಂದಲೇ ವಾಹನದಲ್ಲಿ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ತುಂಬಿದ ಕ್ಯಾನು, ಬಾಟಲಿಗಳು ಸಾಗಾಣಿಕೆಯಾಗಿರುತ್ತದೆ ಎಂಬುದು ಸಂದೇಹಾತೀತವಾಗಿ ರುಜುವಾತುವಾಗಿದೆ. ಇದನ್ನು ವಾಹನ ಮಾಲೀಕರು ಸಹ ಒಪ್ಪಿಕೊಂಡಿರುತ್ತಾರೆ. ಮತ್ತು ಇದನ್ನು ಅಲ್ಲಗಳೆಯಲು ಅರ್ಜಿದಾರನು ತನ್ನ ಪರ ಯಾವುದೇ ಸಾಕ್ಷಾಧಾರಗಳನ್ನು ನೀಡಿರುವುದಿಲ್ಲಾ.

ನಿಯಮ 43(ಬಿ) (2) ರನ್ವಯ ಸ್ವತಃ ವಾಹನದ ಮಾಲೀಕ ಅವರ ಪ್ರತಿನಿಧಿ ಮತ್ತು ವಾಹನ ಯಾರ ವಶದಲ್ಲಿತ್ತೋ ಆತನು ವಿವರಗಳು ವಾಹನದಲ್ಲಿ ಮದ್ಯ ಅಥವಾ ಅಮಲಿನ ಪದಾರ್ಥ ಸಾಗಾಣಿಕೆಯಾಗಿರುವುದರ ಬಗ್ಗೆ ತಮ್ಮಗಳ ಗಮನಕ್ಕೆ ಬಾರದೇ ಅಥವಾ ಶಾಮೀಲಾಗದೇ ಈ ಕೃತ್ಯವು ಸಂಭವಿಸಿದೆ. ಮತ್ತು ಇಂತಹ ಉಪಯೋಗದ ವಿರುದ್ಧ ತಾವು ಪ್ರತಿಯೊಬ್ಬರು ಎಲ್ಲ ರೀತಿಯ ಸಕಾರಣವಾದ ಮತ್ತು ಅಗತ್ಯವಾದ ಮಂಜೂರಾತಿಯನ್ನು ತೆಗದುಕೊಂಡಿರುವುದರ ಬಗ್ಗೆ ಪ್ರಾಧಿಕೃತ ಅಧಿಕಾರಿಗಳಿಗೆ ತೃಪ್ತಿಕರವಾಗಿ ಸಾಭೀತು ಪಡಿಸಬೇಕಾಗಿರುತ್ತದೆ. ಆದರೆ ಅರ್ಜಿದಾರರು ತಮ್ಮ ಹೇಳಿಕೆಯಿಂದಾಗಲೀ ಅಥವಾ ಸಾಕ್ಷಾಧಾರಗಳಿಂದಾಗಲೀ ತಮ್ಮ ಹೊಣೆಗಾರಿಕೆಯನ್ನು ಈ ಪ್ರಾಧಿಕಾರಕ್ಕೆ ತೃಪ್ತಿಕರವಾಗಿ ಸಾಭೀತು ಪಡಿಸಿರುವುದಿಲ್ಲ.

ಈ ಪ್ರಕರಣದಲ್ಲಿ ವಾಹನದ ಚಾಲಕ ಮತ್ತು ಮಾಲೀಕ ಶಾಮಿಲಿನಿಂದ ಈ ಕೃತ್ಯವು ಪರೋಕ್ಷವಾಗಿ ಅರ್ಜಿದಾರನ ತಿಳುವಳಿಕೆಯಿಂದಲೇ ನಡೆದಿರುವುದು ಸ್ಪಷ್ಟವಾಗಿ ತಿಳಿದು ಬರುತ್ತದೆ.

ಮೂರನೇ ವಿವಾದಾಂಶಕ್ಕೆ ಉತ್ತರ-ಹೌದು :-

ಆದೇಶ

ಶ್ರೀ ಬಿ.ಎ. ಹಡಲಗೆ ಪ್ರಾಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಉಪ ಆಯುಕ್ತರು ಬಿಜಾಪೂರ ಜಿಲ್ಲೆ ಬಿಜಾಪೂರ ಆದ ನಾನು, ಕರ್ನಾಟಕ ಅಬಕಾರಿ ಅಧಿನಿಯಮ 1965ರ ನಿಯಮ 43 (ಎ) ನಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ನಿಯಮ 43(ಎ) 2 ರನ್ವಯ ಅಬಕಾರಿ ಉಪ ನಿರೀಕ್ಷಕರು ವಿಜಾಪೂರ ಇವರ ದಿನಾಂಕ : 19-4-2008 ರಂದು ಗುನ್ನಾ ನಂಬರ : 24/2007-08 ರಲ್ಲಿ ಜಪ್ತು ಮಾಡಲ್ಪಟ್ಟ ವಾಹನ ನಂಬರ : ಕೆಎ-28-ಎ-910 (ಆಟೋ) ಮತ್ತು 22 ಲೀಟರ ಕಳ್ಳಭಟ್ಟಿ ಸಾರಾಯಿಯನ್ನು (ಶ್ಯಾಂಪಲ್ ಹೊರತು ಪಡಿಸಿ) ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿದ್ದೇನೆ.

ಪ್ರಕರಣದಲ್ಲಿ ಜಪ್ತು ಮಾಡಿದ 22 ಲೀಟರ ಕಳ್ಳಭಟ್ಟಿ ಸಾರಾಯಿ (ರಸಾಯನಿಕ ವಿಶ್ಲೇಷಣೆಗಾಗಿ) ತೆಗದ ಶ್ಯಾಂಪಲಗಳನ್ನು ಹೊರತುಪಡಿಸಿ ಅಬಕಾರಿ ಉಪ ಅಧೀಕ್ಷಕರು ವಿಜಾಪೂರ ಉಪ ವಿಭಾಗ ಇವರ ಸಮಕ್ಷಮದಲ್ಲಿ ನಾಶ ಪಡಿಸಲು ಆದೇಶಿಸಿದೆ ಮತ್ತು ಉಳಿದ ಕ್ಯಾನು, ಬಾಟಲಿ ಹಾಗೂ ವಾಹನ ನಂ. ಕೆಎ-28-ಎ-0910ನ್ನು ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲು ಪ್ರಸ್ತಾವನೆಯನ್ನು ಸಲ್ಲಿಸಲು ಆದೇಶಿಸಿದೆ.

ಈ ಆದೇಶವನ್ನು ಇಂದು ಅಂದರೆ ದಿನಾಂಕ : 5-12-2011 ರಂದು ಶೀಘ್ರಲಿಪಿಗಾರರಿಗೆ ಉಕ್ತ ಲೇಖನ ಕೊಟ್ಟು ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿದೆ. ಪ್ರತಿಯನ್ನು ತಿದ್ದಿ ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಅಮಲಿನಲ್ಲಿ ಬರುವುದು.

ಬಿ.ಎ. ಹಡಲಗೆ
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್
ಬಿಜಾಪೂರ ಜಿಲ್ಲೆ, ಬಿಜಾಪೂರ.

ಅನುಬಂಧ (1)

ಫಿರ್ಯಾಧಿದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಪ್ರಾ.ಸಾ-1	ಶ್ರೀ ಪಿ.ಎಸ್. ಪೀಡಕರ ತನಿಖಾಧಿಕಾರಿ ಅಬಕಾರಿ ಉಪ ನಿರೀಕ್ಷಕರು ವಿಜಾಪೂರ ವಲಯ

ಅನುಬಂಧ(2)

ಫಿರ್ಯಾಧಿದಾರರ ಪರಮಂಡಿಸಲಾದ ದಾಖಲೆಗಳು

ನಿಶಾನೆ-ಪಿ-1	ಪಂಚನಾಮೆ
ನಿಶಾನೆ-ಪಿ-1(ಎ)	ಪ್ರಾ.ಸಾ-1 ರವರ ಸಹಿ
ನಿಶಾನೆ-ಪಿ-2	ಪ್ರಥಮ ವರ್ತಮಾನ ವರದಿ
ನಿಶಾನೆ-ಪಿ-2(ಎ)	ಪ್ರಾ.ಸಾ.-1 ರವರ ಸಹಿ
ನಿಶಾನೆ-ಪಿ-3	ರಸಾಯನಿಕ ಮಾದರಿಗೆ ಕಳುಹಿಸಿದ ಮುಖ ಪ್ರತಿ
ನಿಶಾನೆ-ಪಿ-3(ಎ)	ಪ್ರಾ.ಸಾ-1 ರವರ ಸಹಿ
ನಿಶಾನೆ-ಪಿ-4	ರಸಾಯನಿಕ ತಜ್ಞರ ವರದಿ
ನಿಶಾನೆ-ಪಿ-5	ವಾಹನ ಮಾಲೀಕರ ತಪ್ಪು ಒಪ್ಪಿಕೊಂಡ ಪ್ರತಿ

ಅನುಬಂಧ-(3)

ಫಿರ್ಯಾಧಿಕಾರರ ಪರ ಗುರುತಿಸಲಾದ ವಸ್ತುಗಳು

1) ಎಂ.ಓ.-1 ಮಾದರಿ ವಾಹನ ನಂ. ಕೆಎ-28-ಎ-0910

ಅನುಬಂಧ-(4)

ವಾಹನ ಮಾಲೀಕರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರು.

ಇಲ್ಲಾ

ಅನುಬಂಧ-(5)

ವಾಹನದ ಮಾಲೀಕರ ಪರವಾಗಿ ಗುರುತಿಸಲಾದ ದಾಖಲೆಗಳು

ಇಲ್ಲಾ

ಬಿ.ಎ. ಹಡಲಗೆ
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್
ಬಿಜಾಪೂರ ಜಿಲ್ಲೆ, ಬಿಜಾಪೂರ.

ಪಿ.ಆರ್. 92

ನಗರಾಭಿವೃದ್ಧಿ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ನಅಇ 17 ಬೆಮಪ್ರಾ 2012, ಬೆಂಗಳೂರು, ದಿನಾಂಕ : 22-2-2012.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 4(ಎ) ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಕರ್ನಾಟಕ ಸರ್ಕಾರವು ಮೂಡಲಗಿ ಪುರಸಭೆ ವ್ಯಾಪ್ತಿ ಪ್ರದೇಶವನ್ನು ಸ್ಥಳೀಯ ಯೋಜನಾ ಪ್ರದೇಶವೆಂದು ಘೋಷಿಸಲಾಗಿದೆ. ಹಾಗೂ ಇದೇ ಕಾಯ್ದೆಯ ಕಲಂ 2(7)(ಬಿ) ರಲ್ಲಿನ ಅವಕಾಶದಂತೆ ಮೂಡಲಗಿ ಪುರಸಭೆಯು ಯೋಜನಾ ಪ್ರಾಧಿಕಾರವಾಗಿ ಕೂಡಲೇ ಜಾರಿಗೆ ಬರುವಂತೆ ಕಾರ್ಯನಿರ್ವಹಿಸತಕ್ಕದ್ದು.

ಅನುಬಂಧ-1ರಲ್ಲಿ ಮೂಡಲಗಿ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಬರುವ ಗ್ರಾಮಗಳ ವಿವರಗಳನ್ನು ಹಾಗೂ ಅನುಬಂಧ-2 ರಲ್ಲಿ ಮೂಡಲಗಿ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಎಲ್ಲೆಯ ವಿವರಗಳನ್ನು ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ.ಎಂ. ವಾಸುದೇವ ರಾವ್
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

ಅನುಬಂಧ-1

ಮೂಡಲಗಿ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಬರುವ ಗ್ರಾಮಗಳ ವಿವರ

1. ಮೂಡಲಗಿ ಪಟ್ಟಣ.
2. ಮೂಡಲಗಿ ಗ್ರಾಮದ ಭಾಗಶಃ ಸ.ನಂ. ಗಳು (1 ರಿಂದ 4,7 ರಿಂದ 65,267 ರಿಂದ 276, 280 ರಿಂದ 282, 300 ರಿಂದ 322, 368 ರಿಂದ 415, 440 ರಿಂದ 456, 461 ರಿಂದ 465, 483 ರಿಂದ 545, 554 ರಿಂದ 558)

ಟಿ.ಎಂ. ವಾಸುದೇವ ರಾವ್
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

ಅನುಬಂಧ-2

ಮೂಡಲಗಿ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಎಲ್ಲೆಯ ವಿವರ

ಮೂಡಲಗಿ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಎಲ್ಲೆಯ ಪ್ರಾರಂಭ ಬಿಂದು ಮೂಡಲಗಿ ಗ್ರಾಮದ ಸ.ನಂ. 63 ರ ವಾಯುವ್ಯ ಮೂಲೆಯಿಂದ ಪ್ರಾರಂಭವಾಗಿ, ಪೂರ್ವಾಭಿಮುಖವಾಗಿ ಸ.ನಂ. 63 ಹಾಗೂ 64ರ ಉತ್ತರ ಗಡಿಗುಂಟ ಚಲಿಸುತ್ತ ಸ.ನಂ. 65ರ ವಾಯುವ್ಯ ಮೂಲೆಯನ್ನು ತಲುಪುತ್ತದೆ. ಈ ಬಿಂದುವಿನಿಂದ ಪೂರ್ವಾಭಿಮುಖವಾಗಿ, ಸ.ನಂ. 65ರ ಉತ್ತರ ಗಡಿಗುಂಟ ಚಲಿಸುತ್ತ ಸ.ನಂ. 65ರ ಈಶಾನ್ಯ ಮೂಲೆಯನ್ನು ತಲುಪುತ್ತದೆ. ಈ ಬಿಂದುವಿನಿಂದ ಉತ್ತರಾಭಿಮುಖವಾಗಿ ಹಳ್ಳದ ಪಶ್ಚಿಮ ಗಡಿಗುಂಟ ಚಲಿಸುತ್ತ ಚಿಕ್ಕೋಡಿ ಮಹಾಲಿಂಗಪೂರ ರಾಜ್ಯ ಹೆದ್ದಾರಿ ಹಾಗೂ ಹಳ್ಳವನ್ನು ದಾಟಿ ಸ.ನಂ. 270ರ ಉತ್ತರ ಗಡಿಗುಂಟ ಚಲಿಸುತ್ತಾ ಸ.ನಂ. 267ರ ನೈರುತ್ಯ ಮೂಲೆಯನ್ನು ತಲುಪುತ್ತದೆ ಈ ಬಿಂದುವಿನಿಂದ ಉತ್ತರಾಭಿಮುಖವಾಗಿ ಸ.ನಂ. 267ರ ಪಶ್ಚಿಮ ಗಡಿಗುಂಟ ಚಲಿಸುತ್ತ ಸ.ನಂ. 267ರ ವಾಯುವ್ಯ ಮೂಲೆಯನ್ನು ತಲುಪುತ್ತದೆ. ಈ ಬಿಂದುವಿನಿಂದ ಪೂರ್ವಾಭಿಮುಖವಾಗಿ ಸ.ನಂ. 267 ಹಾಗೂ 268ರ ಉತ್ತರ ಗಡಿಗುಂಟ ಚಲಿಸುತ್ತ ಮತ್ತು ಸ.ನಂ. 268ರ ಪೂರ್ವ ಗಡಿಯನ್ನು ಸುತ್ತುವರೆದು ಸ.ನಂ. 268ರ ಈಶಾನ್ಯ ಮೂಲೆಯನ್ನು ತಲುಪುತ್ತದೆ. ಈ ಬಿಂದುವಿನಿಂದ ಪೂರ್ವಾಭಿಮುಖವಾಗಿ ಸ.ನಂ. 269 ಹಾಗೂ 276ರ ಉತ್ತರ ಗಡಿಗುಂಟ ಚಲಿಸುತ್ತ ಸ.ನಂ. 276ರ ಈಶಾನ್ಯ ಮೂಲೆಯನ್ನು ತಲುಪುತ್ತದೆ. ಈ ಬಿಂದುವಿನಿಂದ ದಕ್ಷಿಣಾಭಿಮುಖವಾಗಿ ಸ.ನಂ. 276ರ ಪೂರ್ವಗಡಿಗುಂಟ ಚಲಿಸುತ್ತ ಮುಗಳಖೋಡ ರಸ್ತೆಯನ್ನು ದಾಟಿ ಸ.ನಂ. 280ರ ವಾಯುವ್ಯ ಮೂಲೆಯನ್ನು ತಲುಪುತ್ತದೆ. ಈ ಬಿಂದುವಿನಿಂದ

ಪೂರ್ವಾಭಿಮುಖವಾಗಿ ಸ.ನಂ. 280ರ ಉತ್ತರ ಗಡಿಗುಂಟ ಚಲಿಸುತ್ತ ಸ.ನಂ. 280ರ ಈಶಾನ್ಯ ಮೂಲೆಯನ್ನು ತಲುಪುತ್ತದೆ. ಈ ಬಿಂದುವಿನಿಂದ ಉತ್ತರಾಭಿಮುಖವಾಗಿ ಸ.ನಂ. 281 ಹಾಗೂ 282ರ ಪಶ್ಚಿಮ ಗಡಿಗುಂಟ ಮುಗಳಖೋಡ ರಸ್ತೆಯನ್ನು ದಾಟಿ ಸ.ನಂ. 282ರ ವಾಯುವ್ಯ ಮೂಲೆಯನ್ನು ತಲುಪುತ್ತದೆ. ಈ ಬಿಂದುವಿನಿಂದ ಪೂರ್ವಾಭಿಮುಖವಾಗಿ ಸ.ನಂ. 282ರ ಉತ್ತರ ಗಡಿಗುಂಟ ಚಲಿಸುತ್ತ ಸ.ನಂ. 282ರ ಈಶಾನ್ಯ ಮೂಲೆಯನ್ನು ತಲುಪುತ್ತದೆ. ಈ ಬಿಂದುವಿನಿಂದ ದಕ್ಷಿಣಾಭಿಮುಖವಾಗಿ ಮುಗಳಖೋಡ ರಸ್ತೆಯನ್ನು ದಾಟಿ ಸ.ನಂ. 281ರ ಪೂರ್ವಗಡಿಗುಂಟ ಚಲಿಸುತ್ತ ಮತ್ತು ದಕ್ಷಿಣ ಗಡಿಯನ್ನು ಸುತ್ತುವರೆದು ಹಾಗೂ ಸ.ನಂ. 280ರ ಪೂರ್ವ ಗಡಿಗುಂಟ ಚಲಿಸುತ್ತಾ ಸ.ನಂ. 280 ರ ಆಗ್ನೇಯ ಮೂಲೆಯನ್ನು ತಲುಪುತ್ತದೆ. ಈ ಬಿಂದುವಿನಿಂದ ಪೂರ್ವಾಭಿಮುಖವಾಗಿ ಸ.ನಂ. 300 ರ ಉತ್ತರ ಹಾಗೂ ಪೂರ್ವ ಗಡಿಗುಂಟ ಚಲಿಸುತ್ತಾ ಸ.ನಂ. 300 ರ ಆಗ್ನೇಯ ಮೂಲೆಯನ್ನು ತಲಪುತ್ತದೆ ಈ ಬಿಂದುವಿನಿಂದ ಪೂರ್ವಾಭಿಮುಖವಾಗಿ ಮಹಾಲಿಂಗಪೂರ ರಸ್ತೆಯ ಉತ್ತರ ಗಡಿಗುಂಟ ಚಲಿಸುತ್ತಾ ಸ.ನಂ. 558ರ ಈಶಾನ್ಯ ಮೂಲೆಯನ್ನು ತಲಪುತ್ತದೆ. ಈ ಬಿಂದುವಿನಿಂದ ದಕ್ಷಿಣಾಭಿಮುಖವಾಗಿ ಸ.ನಂ. 558 ಮತ್ತು 322 ರ ಪೂರ್ವ ಗಡಿಗುಂಟ ಚಲಿಸುತ್ತ ಸ.ನಂ. 322ರ ಆಗ್ನೇಯ ಮೂಲೆಯನ್ನು ತಲುಪುತ್ತದೆ. ಈ ಬಿಂದುವಿನಿಂದ ಪೂರ್ವಾಭಿಮುಖವಾಗಿ ಸ.ನಂ. 35,34,33 ಉತ್ತರ ಗಡಿಗುಂಟ ಚಲಿಸುತ್ತ ಸ.ನಂ. 33ರ ಈಶಾನ್ಯ ಮೂಲೆಯನ್ನು ತಲುಪುತ್ತದೆ. ಈ ಬಿಂದುವಿನಿಂದ ದಕ್ಷಿಣಾಭಿಮುಖವಾಗಿ ಸ.ನಂ. 33, 32, 23 ರ ಪೂರ್ವ ಗಡಿಗುಂಟ ಚಲಿಸುತ್ತ ಸ.ನಂ. 383ರ ವಾಯುವ್ಯ ಮೂಲೆಯನ್ನು ತಲುಪುತ್ತದೆ. ಈ ಬಿಂದುವಿನಿಂದ ಪೂರ್ವಾಭಿಮುಖವಾಗಿ ಸ.ನಂ. 383ರ ಉತ್ತ ಗಡಿಗುಂಟ ಹಾಗೂ ಸ.ನಂ. 382ರ ಪಶ್ಚಿಮ ಗಡಿಯನ್ನು ಸುತ್ತುವರೆದು ಸ.ನಂ. 382ರ ವಾಯುವ್ಯ ಮೂಲೆಯನ್ನು ತಲುಪುತ್ತದೆ. ಈ ಬಿಂದುವಿನಿಂದ ಪೂರ್ವಾಭಿಮುಖವಾಗಿ ಸ.ನಂ. 382, 381, 380, 377, 376, 374, 373 ರ ಉತ್ತರ ಗಡಿಗುಂಟ ಚಲಿಸುತ್ತ ಸ.ನಂ. 373ರ ಈಶಾನ್ಯ ಮೂಲೆಯನ್ನು ತಲುಪುತ್ತದೆ. ಈ ಬಿಂದುವಿನಿಂದ ಉತ್ತರಾಭಿಮುಖವಾಗಿ ಸ.ನಂ. 370ರ ಪಶ್ಚಿಮ ಗಡಿಗುಂಟ ಚಲಿಸುತ್ತ ಸ.ನಂ. 370ರ ವಾಯುವ್ಯ ಮೂಲೆಯನ್ನು ತಲುಪುತ್ತದೆ. ಈ ಬಿಂದುವಿನಿಂದ ಪೂರ್ವಾಭಿಮುಖವಾಗಿ ಸ.ನಂ. 370 ಹಾಗೂ 368ರ ಉತ್ತರ ಗಡಿಗುಂಟ ಚಲಿಸುತ್ತ ಸ.ನಂ. 368ರ ಈಶಾನ್ಯ ಮೂಲೆಯನ್ನು ತಲುಪುತ್ತದೆ. ಈ ಬಿಂದುವಿನಿಂದ ದಕ್ಷಿಣಾಭಿಮುಖವಾಗಿ ಸ.ನಂ. 368ರ ಪೂರ್ವ ಗಡಿಗುಂಟ ಚಲಿಸುತ್ತ ಹಳ್ಳೂರ ರಸ್ತೆಯನ್ನು ದಾಟಿ ಸ.ನಂ. 403, 404, 412, 413 ರ ಪೂರ್ವ ಗಡಿಗುಂಟ ಚಲಿಸುತ್ತ ಶಿವಾಪೂರ ಹಾಗೂ ಕಾನಟ್ಟಿ ರಸ್ತೆಯನ್ನು ದಾಟಿ, ಸ.ನಂ. 413 ರ ಆಗ್ನೇಯ ಮೂಲೆಯನ್ನು ತಲುಪುತ್ತದೆ. ಈ ಬಿಂದುವಿನಿಂದ ಪೂರ್ವಾಭಿಮುಖವಾಗಿ ರಂಗಾಪೂರ ರಸ್ತೆಯನ್ನು ದಾಟಿ ಸ.ನಂ. 414 ಹಾಗೂ 415ರ ಉತ್ತರ ಗಡಿಗುಂಟ ಚಲಿಸುತ್ತ ಸ.ನಂ. 415ರ ಈಶಾನ್ಯ ಮೂಲೆಯನ್ನು ತಲುಪುತ್ತದೆ. ಈ ಬಿಂದುವಿನಿಂದ ದಕ್ಷಿಣಾಭಿಮುಖವಾಗಿ ಸ.ನಂ. 415ರ ಪೂರ್ವ ಗಡಿಗುಂಟ ಚಲಿಸುತ್ತ ಸ.ನಂ. 415ರ ಆಗ್ನೇಯ ಮೂಲೆಯನ್ನು ತಲುಪುತ್ತದೆ. ಈ ಬಿಂದುವಿನಿಂದ ಪಶ್ಚಿಮಾಭಿಮುಖವಾಗಿ ಹಳ್ಳ ದಾಟಿ ಸ.ನಂ. 415, 440, 455, 456, 461ರ ದಕ್ಷಿಣ ಗಡಿಗುಂಟ ಚಲಿಸುತ್ತಾ ಸುಣದೋಳಿ ರಸ್ತೆಯನ್ನು ದಾಟಿ ಮತ್ತು ಸ.ನಂ. 462ರ ಪೂರ್ವಗಡಿಯನ್ನು ಸುತ್ತುವರೆದು ಸ.ನಂ. 462ರ ಆಗ್ನೇಯ ಮೂಲೆಯನ್ನು ತಲುಪುತ್ತದೆ. ಈ ಬಿಂದುವಿನಿಂದ ಪಶ್ಚಿಮಾಭಿಮುಖವಾಗಿ ಸ.ನಂ. 462 ಹಾಗೂ 465 ರ ದಕ್ಷಿಣ ಗಡಿಗುಂಟ ಹಾಗೂ ಸ.ನಂ. 465ರ ಪಶ್ಚಿಮ ಗಡಿಯನ್ನು ಸುತ್ತುವರೆದು ಸ.ನಂ. 490ರ ಆಗ್ನೇಯ ಮೂಲೆಯನ್ನು ತಲುಪುತ್ತದೆ. ಈ ಬಿಂದುವಿನಿಂದ ಪಶ್ಚಿಮಾಭಿಮುಖವಾಗಿ ಸ.ನಂ. 490, 489, 486, 483 ರ ದಕ್ಷಿಣ ಗಡಿಗುಂಟ ಚಲಿಸುತ್ತ ಮತ್ತು ಧರಮಟ್ಟಿ ರಸ್ತೆಯನ್ನು ದಾಟಿ ಸ.ನಂ. 483ರ ನೈರುತ್ಯ ಮೂಲೆಯನ್ನು ತಲುಪುತ್ತದೆ ಈ ಬಿಂದುವಿನಿಂದ ಉತ್ತರಾಭಿಮುಖವಾಗಿ, ಸ.ನಂ. 483 ಹಾಗೂ 484ರ ಪಶ್ಚಿಮ ಗಡಿಗುಂಟ ಚಲಿಸುತ್ತ ಮತ್ತ ನಾಗನೂರ ರಸ್ತೆಯನ್ನು ದಾಟಿ ಸ.ನಂ. 484ರ ವಾಯುವ್ಯ ಮೂಲೆಯನ್ನು ತಲುಪುತ್ತದೆ. ಈ ಬಿಂದುವಿನಿಂದ ಉತ್ತರಾಭಿಮುಖವಾಗಿ ಸ.ನಂ. 508, 510, 511, 518, 519, 520, 524, 62, 63 ರ ಪಶ್ಚಿಮ ಗಡಿಗುಂಟ ಚಲಿಸುತ್ತ ಹಾಗೂ ನಾಗನೂರ ರಸ್ತೆಯನ್ನು ದಾಟಿ ಸ.ನಂ. 63ರ ವಾಯುವ್ಯ ಮೂಲೆಯನ್ನು ತಲಪುತ್ತದೆ. ಇದೇ ಬಿಂದುವು ಮೂಡಲಗಿ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಮೊದಲನೇ ಬಿಂದು ಆಗಿರುತ್ತದೆ.

ಟಿ.ಎಂ. ವಾಸುದೇವ ರಾವ್
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.

ಪಿ.ಆರ್. 270

ನಗರಾಭಿವೃದ್ಧಿ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ನಅಇ 18 ಬೆಮಪ್ರಾ 2012, ಬೆಂಗಳೂರು, ದಿನಾಂಕ : 21-2-2012.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 4(ಎ) ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಕರ್ನಾಟಕ ಸರ್ಕಾರವು ತೇರದಾಳ ಪುರಸಭೆಯ ವ್ಯಾಪ್ತಿ ಪ್ರದೇಶವನ್ನು ಸ್ಥಳೀಯ ಯೋಜನಾ ಪ್ರದೇಶವೆಂದು ಘೋಷಿಸಲಾಗಿದೆ. ಹಾಗೂ ಇದೇ ಕಾಯ್ದೆಯ ಕಲಂ 2(7)(ಬಿ) ರಲ್ಲಿನ ಅವಕಾಶದಂತೆ ತೇರದಾಳ ಪುರಸಭೆಯು ಯೋಜನಾ ಪ್ರಾಧಿಕಾರವಾಗಿ ಕೂಡಲೇ ಜಾರಿಗೆ ಬರುವಂತೆ ಕಾರ್ಯನಿರ್ವಹಿಸತಕ್ಕದ್ದು.

ಅನುಬಂಧ-1ರಲ್ಲಿ ತೇರದಾಳ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಪಟ್ಟಣ/ಗ್ರಾಮಗಳ ವಿವರಗಳನ್ನು ಮತ್ತು ಅನುಬಂಧ-2ರಲ್ಲಿ ಪ್ರಸ್ತಾಪಿತ ತೇರದಾಳ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಎಲ್ಲೆಯ ವಿವರಗಳನ್ನು ಹಾಗೂ ಅನುಸೂಚಿ-3ರ ತೇರದಾಳ ಪಟ್ಟಣದ ಪ್ರಸ್ತಾಪಿತ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಬ್ಲಾಕ್ ನಂಬರುಗಳ ವಿವರಗಳನ್ನು ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ.ಎಂ. ವಾಸುದೇವ ರಾವ್
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

ಅನುಬಂಧ-1

ತೇರದಾಳ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಪಟ್ಟಣ/ಗ್ರಾಮಗಳ ವಿವರಗಳು

ಕ್ರಮ ಸಂಖ್ಯೆ	ಗ್ರಾಮಗಳು/ಪಟ್ಟಣ	ಕ್ಷೇತ್ರ	ಜನ ಸಂಖ್ಯೆ	ಷರಾ
1.	ತೇರದಾಳ ಗ್ರಾಮಠಾಣಾ ಹಾಗೂ ಭಾಗಶಃ ತೇರದಾಳ ಕಂದಾಯ ಗ್ರಾಮ	925.00 ಹೆಕ್ಟರ್ಸ್	26116	–

ಟಿ.ಎಂ. ವಾಸುದೇವ ರಾವ್
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

ಅನುಬಂಧ-2

ತೇರದಾಳ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಎಲ್ಲೆಯ ವಿವರ

ತೇರದಾಳ ಪಟ್ಟಣದ ಸ್ಥಳೀಯ ಪ್ರದೇಶದ ಎಲ್ಲೆಯು ರಿ.ಸ.ನಂ. 377ರ ಈಶಾನ್ಯ ಮೂಲೆಯ ಪ್ರಾರಂಭದ ಬಿಂದು 'ಪಿ' ಪ್ರಾರಂಭವಾಗಿ ತೇರದಾಳ ಶೇಗುಣಸಿ ರಸ್ತೆಯನ್ನು ದಾಟಿ ಸ.ನಂ. 418ರ ವಾಯು ಮೂಲೆಯಿಂದ ಸ.ನಂ. 418, 416, 415 ರ ಉತ್ತರ ಗಡಿಯಿಂದ ಪೂರ್ವಕ್ಕೆ ಚಲಿಸಿ ತೇರದಾಳ ತಮದಡ್ಡಿ ರಸ್ತೆ ದಾಟಿ ಸ.ನಂ. 514ರ ವಾಯು ಮೂಲೆಯಿಂದ ಪೂರ್ವಕ್ಕೆ ಚಲಿಸಿ ಸ.ನಂ. 514 ರಿಂದ 528 ರ ಜಮೀನುಗಳ ಉತ್ತರ ಗಡಿಯಿಂದ ಚಲಿಸಿ ಸ.ನಂ. 528 ರ ಈಶಾನ್ಯ ಮೂಲೆಯಿಂದ ಆಗ್ನೇಯ ಮೂಲೆ ತಲುಪಿ ಪೂರ್ವಕ್ಕೆ ತಿರಿಗಿ ತೇರದಾಳ ಹಳಿಂಗಳಿ ರಸ್ತೆಯ ಉತ್ತರ ಗಡಿಯೊಂದಿಗೆ ಪೂರ್ವಕ್ಕೆ ಚಲಿಸಿ ಹಳಿಂಗಳಿ ಗ್ರಾಮದ ಗಡಿಗೆ ತಲುಪಿ ದಕ್ಷಿಣಕ್ಕೆ ತಿರಿಗಿ ಹಳಿಂಗಳಿ ಗ್ರಾಮದ ಗಡಿಯೊಂದಿಗೆ ಚಲಿಸಿ ಹನಗಂಡಿ ಗ್ರಾಮದ ಗಡಿಗೆ ಸೇರಿ ದಕ್ಷಿಣ ದಿಕ್ಕಿಗೆ ಮುಂದುವರೆದು ತೇರದಾಳ ಜಮಖಂಡಿ ರಸ್ತೆಯನ್ನು ದಾಟಿ ಪಶ್ಚಿಮಕ್ಕೆ ತಿರುಗಿ ಸ.ನಂ. 606 ರ ಪೂರ್ವ ಮತ್ತು ದಕ್ಷಿಣಗಡಿಯೊಂದಿಗೆ ಚಲಿಸಿ ಸ.ನಂ. 605ರ ನೈರುತ್ಯ ಮೂಲೆಯನ್ನು ತಲುಪಿ ದಕ್ಷಿಣಕ್ಕೆ ತಿರುಗಿ ಸ.ನಂ. 604 ರ ಆಗ್ನೇಯ ಮೂಲೆಯಿಂದ ಪಶ್ಚಿಮಕ್ಕೆ ತಿರುಗಿ ಸ.ನಂ. 604, 588, 589, 591ರ ದಕ್ಷಿಣ ಗಡಿಯೊಂದಿಗೆ ಚಲಿಸಿ ಕರಲ್ಲಟ್ಟಿ ಗ್ರಾಮದ ಗ್ರಾಮ ಠಾಣದ ದಕ್ಷಿಣ ಮತ್ತು ಪಶ್ಚಿಮ ಗಡಿಯೊಂದಿಗೆ ಚಲಿಸಿ ಕರಲ್ಲಟ್ಟಿ ಗ್ರಾಮದ ಗ್ರಾಮ ಠಾಣದ ದಕ್ಷಿಣ ಮತ್ತು ಪಶ್ಚಿಮ ಗಡಿಯೊಂದಿಗೆ ಸ.ನಂ. 670ರ ಆಗ್ನೇಯ ಮೂಲೆ ತಲುಪಿ ಪಶ್ಚಿಮಕ್ಕೆ ತಿರುಗಿ ಗೋಲಬಾವಿ ತೇರದಾಳ ರಸ್ತೆಯನ್ನು ದಾಟಿ ಸ.ನಂ. 673ರ ಆಗ್ನೇಯ ಮೂಲೆಯಿಂದ ಪಶ್ಚಿಮಕ್ಕೆ ತಿರುಗಿ 673 ಹಾಗೂ 696ರ ದಕ್ಷಿಣ ಗಡಿಯೊಂದಿಗೆ ಸಸಾಲಟ್ಟಿ ತೇರದಾಳ ರಸ್ತೆಯನ್ನು ದಾಟಿ ಉತ್ತರಕ್ಕೆ ತಿರುಗಿ ಸಸಾಲಟ್ಟಿ ರಸ್ತೆಯ ಪಶ್ವಿಮ ಗಡಿಯೊಂದಿಗೆ ಚಲಿಸಿ ಸ.ನಂ. 165ರ ಉತ್ತರ ಮೂಲೆ ತಲುಪಿ ಮುಂದುವರೆದು ಸ.ನಂ. 157, 156 ರ ಪೂರ್ವ ಗಡಿಯೊಂದಿಗೆ ಸ.ನಂ. 156ರ ಈಶಾನ್ಯ ಮೂಲೆ ತಲುಪಿ ಪಶ್ವಿಮಕ್ಕೆ ತಿರುಗಿ ತೇರದಾಳ ಹಿಡಕಲ್ ರಸ್ತೆಯ ದಕ್ಷಿಣ ಬದಿಯೊಂದಿಗೆ ಚಲಿಸಿ ಸ.ನಂ. 8 ರ ನೈರುತ್ಯ ಮೂಲೆಯ ತಲುಪಿ ಉತ್ತರಕ್ಕೆ ಚಲಿಸಿ ಸ.ನಂ. 8ರ ವಾಯುವ್ಯ ಮೂಲೆಯ ತಲುಪಿ ಪಶ್ವಿಮಕ್ಕೆ ತಿರುಗಿ ಸ.ನಂ. 17ರ ಆಗ್ನೇಯ ಮೂಲೆಯಿಂದ ಪಶ್ವಿಮಕ್ಕೆ ತಿರುಗಿ ಸ.ನಂ. 17 ರ ನೈರುತ್ಯ ಮೂಲೆ ತಲುಪಿ ಉತ್ತರಕ್ಕೆ ತಿರುಗಿ ಸ.ನಂ. 17, 16, 15, 14, 13, 12 ರ ಪಶ್ವಿಮ ಗಡಿಯೊಂದಿಗೆ ಚಲಿಸಿ ಸ.ನಂ. 402ರ ನೈರುತ್ಯ ಮೂಲೆಯ ತಲುಪಿ ಉತ್ತರಕ್ಕೆ ತಿರುಗಿ ಸ.ನಂ. 402ರ ಪಶ್ವಿಮ ಗಡಿಯಿಂದ ತೇರದಾಳ ಕುಡಚಿ ರಸ್ತೆಯನ್ನು ದಾಟಿ ಸ.ನಂ. 401ರ ವಾಯುವ್ಯ ಮೂಲೆ ತಲುಪಿ ಸ.ನಂ. 401ರ ಉತ್ತರ ಮತ್ತು ಪಶ್ವಿಮ ಗಡಿಯೊಂದಿಗೆ ತೇರದಾಳ ಯಬರಟ್ಟಿ ರಸ್ತೆಯನ್ನು ದಾಟಿ ಸ.ನಂ. 400ರ ಉತ್ತರ ಗಡಿಯೊಂದಿಗೆ ಚಲಿಸಿ ಸ.ನಂ. 393ರ ಪಶ್ವಿಮ ಮತ್ತು ಉತ್ತರ ಗಡಿಯಿಂದ ನೈರುತ್ಯ ಮೂಲೆ ತಲುಪಿ ಉತ್ತರಕ್ಕೆ ಚಲಿಸಿ ಸ.ನಂ. 380ರ ಪಶ್ವಿಮ ಗಡಿ ಹಾಗೂ 381ರ ಪಶ್ವಿಮ ಮತ್ತು ಉತ್ತರ ಗಡಿಯೊಂದಿಗೆ ಪೂರ್ವಕ್ಕೆ ಚಲಿಸಿ ಸ.ನಂ. 377ರ ಪ್ರಾರಂಭದ ಬಿಂದು 'ಪಿ' ಬಂದು ಸೇರುತ್ತದೆ.

ಟಿ.ಎಂ. ವಾಸುದೇವ ರಾವ್
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

ಅನುಸೂಚಿ-3

ತೇರದಾಳ ಪಟ್ಟಣದ ಪ್ರಸ್ತಾವಿತ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಬ್ಲಾಕ್ ನಂಬರುಗಳ ವಿವರಗಳು

ತೇರದಾಳ ಪಟ್ಟಣದ ಗ್ರಾಮ ಠಾಣೆ ಮತ್ತು ತೇರದಾಳ ಪಟ್ಟಣದ ಬ್ಲಾಕ ನಂ. 1, 2, 3, 4, 5, 6, 7, 8, 9, 10, 11, 12, 13, 14, 15, 16, 17, 377, 378, 379, 380, 381, 393, 394, 395, 396, 397, 398, 399, 400, 401, 402, 403, 404, 405, 406, 407, 408, 409, 410, 411, 412, 413, 414, 415, 416, 417, 418, 514, 515, 516, 517, 518, 519, 520, 521, 522, 523, 524, 525, 526, 527, 528, 536, 537, 538, 539, 540, 541, 542, 543, 544, 545, 546, 547, 548, 549, 550, 551, 552, 553, 554, 555, 556, 557, 558, 559,

560, 561, 562, 563, 564, 565, 566, 567, 568, 569, 570, 571, 572, 573, 574, 575, 576, 577, 578, 579, 580, 581, 582, 583, 584, 585, 586, 587, 588, 589, 590, 591, 604, 605, 606, 670, 671, 672, 673, 696, 711, 712.

ಟಿ.ಎಂ. ವಾಸುದೇವ ರಾವ್
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

ಪಿ.ಆರ್. 271

ನಗರಾಭಿವೃದ್ಧಿ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ನಅಇ 19 ಬೆಮಪ್ರಾ 2012, ಬೆಂಗಳೂರು, ದಿನಾಂಕ : 21-2-2012.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 4(ಎ) ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಕರ್ನಾಟಕ ಸರ್ಕಾರವು ಹಳಿಯಾಳ ಪಟ್ಟಣ ಪಂಚಾಯಿತ್ತಿ ವ್ಯಾಪ್ತಿ ಪ್ರದೇಶವನ್ನು ಸ್ಥಳೀಯ ಯೋಜನಾ ಪ್ರದೇಶವೆಂದು ಘೋಷಿಸಲಾಗಿದೆ ಹಾಗೂ ಇದೇ ಕಾಯ್ದೆಯ ಕಲಂ 2(7)(ಬಿ) ರಲ್ಲಿನ ಅವಕಾಶದಂತೆ ಹಳಿಯಾಳ ಪಟ್ಟಣ ಪಂಚಾಯಿತ್ತಿಯು ಯೋಜನಾ ಪ್ರಾಧಿಕಾರವಾಗಿ ಕೂಡಲೇ ಜಾರಿಗೆ ಬರುವಂತೆ ಕಾರ್ಯನಿರ್ವಹಿಸತಕ್ಕದ್ದು.

ಅನುಬಂಧ-1ರಲ್ಲಿ ಹಳಿಯಾಳ ಪಟ್ಟಣ ಪಂಚಾಯತ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಪಟ್ಟಣ/ಗ್ರಾಮಗಳ ವಿವರಗಳನ್ನು ಹಾಗೂ ಅನುಬಂಧ-2ರಲ್ಲಿ ಪ್ರಸ್ತಾಪಿತ ಹಳಿಯಾಳ ಪಟ್ಟಣ ಪಂಚಾಯತ ಸ್ಥಳೀಯ ಯೋಜನಾ ಪ್ರದೇಶದ ಎಲ್ಲೆಯ ವಿವರಗಳನ್ನು ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ.ಎಂ. ವಾಸುದೇವ ರಾವ್
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

ಅನುಬಂಧ-1

ಪ್ರಸ್ತಾಪಿತ ಹಳಿಯಾಳ ಪಟ್ಟಣ ಪಂಚಾಯತ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಪಟ್ಟಣ : ಗ್ರಾಮಗಳ ಹೆಸರು

ಕ್ರಮ ಸಂಖ್ಯೆ		ಪಟ್ಟಣ/ಗ್ರಾಮಗಳ ಹೆಸರು
1.	ಹಳಿಯಾಳ	ಪಟ್ಟಣ ಮತ್ತು ಪೂರ್ಣ ಕಂದಾಯ ಗ್ರಾಮ (ಸ.ನಂ. 1 ರಿಂದ ಸ.ನಂ. 155 ರವರೆಗೆ)
2.	ಗುತ್ತಿಗೇರಿ	ಪೂರ್ಣ ಕಂದಾಯ ಗ್ರಾಮ (ಸ.ನಂ. 1 ರಿಂದ ಸ.ನಂ. 188 ರವರೆಗೆ)
3.	ಗುಡ್ಡಾಪುರ	ಪೂರ್ಣ ಕಂದಾಯ ಗ್ರಾಮ (ಸ.ನಂ. 1 ರಿಂದ ಸ.ನಂ. 51 ರವರೆಗೆ)
4.	ಹುಲ್ಲಟ್ಟಿ	ಪೂರ್ಣ ಕಂದಾಯ ಗ್ರಾಮ (ಸ.ನಂ. 1 ರಿಂದ ಸ.ನಂ. 126 ರವರೆಗೆ)
5.	ಭತ್ರನಾಳ	ಪೂರ್ಣ ಕಂದಾಯ ಗ್ರಾಮ (ಸ.ನಂ. 1 ರಿಂದ ಸ.ನಂ. 56 ರ ವರೆಗೆ)

ಟಿ.ಎಂ. ವಾಸುದೇವ ರಾವ್
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

ಅನುಬಂಧ-2

ಪ್ರಸ್ತಾಪಿತ ಹಳಿಯಾಳ ಪಟ್ಟಣ ಪಂಚಾಯತ ಸ್ಥಳೀಯ ಯೋಜನಾ ಪ್ರದೇಶದ ಎಲ್ಲೆಯ ವಿವರಣೆ

ಹಳಿಯಾಳ ಪಟ್ಟಣ ಪಂಚಾಯತ ಸ್ಥಳೀಯ ಯೋಜನಾ ಪ್ರದೇಶದ ಎಲ್ಲೆಯು 'ಎ' ಬಿಂದುವಿನಲ್ಲಿ ಅಂದರೆ ಹಳಿಯಾಳ ಗ್ರಾಮದ ಸ.ನಂ. 130ರ ವಾಯುವ್ಯ ಮೂಲೆಯಲ್ಲಿ ಪ್ರಾರಂಭವಾಗಿ ಇದೇ ಸ.ನಂ. 130ರ ಉತ್ತರ ಗಡಿಯ ಮೂಲಕ ಈಶಾನ್ಯ ದಿಕ್ಕಿಗೆ ಚಲಿಸುತ್ತಾ ಹಳಿಯಾಳ ಗ್ರಾಮದ ಸ.ನಂ. 133 ರ ವಾಯುವ್ಯ ಮೂಲೆಯಲ್ಲಿ ಸಂಧಿಸಿ ನಂತರ ಇದೇ ಸ.ನಂ. 133 ಹಾಗೂ ಹಳಿಯಾಳ ಗ್ರಾಮದ ಸ.ನಂ. 134, 135, 138 ರ ಉತ್ತರ ಗಡಿಯ ಮೂಲಕ ಪೂರ್ವಾಭಿಮುಖವಾಗಿ ಚಲಿಸುತ್ತಾ ಇದೇ ಸ.ನಂ. 138 ರ ಈಶಾನ್ಯ ಮೂಲೆಯಲ್ಲಿ ಸಂಧಿಸುತ್ತದೆ. ನಂತರ ಹಳಿಯಾಳದಿಂದ ತಿಮ್ಮಾಪುರಕ್ಕೆ ಹೋಗುವ ಗ್ರಾಮ ರಸ್ತೆಯನ್ನು ದಾಟಿ ಹಳಿಯಾಳ ಗ್ರಾಮ ಸ.ನಂ. 139ರ ವಾಯುವ್ಯ ಮೂಲೆಯಲ್ಲಿ ಸಂಧಿಸುತ್ತದೆ. ನಂತರ ಇದೇ ಸ.ನಂ. 139ರ ಉತ್ತರ ಗಡಿಯ ಮೂಲಕ ಪೂರ್ವಾಭಿಮುಖವಾಗಿ ಚಲಿಸುತ್ತಾ ಗುತ್ತಿಗೇರಿ ಗ್ರಾಮದ ಸ.ನಂ. 32ರ ನೈರುತ್ಯ ಮೂಲೆಯಲ್ಲಿ ಸಂಧಿಸುತ್ತದೆ. ನಂತರ

ಇದೇ ಸ.ನಂ. 32ರ ಪಶ್ಚಿಮ ಗಡಿಯ ಮೂಲಕ ಉತ್ತರಾಭಿಮುಖವಾಗಿ ಚಲಿಸಿ ಗುತ್ತಿಗೇರಿ ಗ್ರಾಮದ ಸ.ನಂ. 33ರ ದಕ್ಷಿಣ ಮೂಲೆಯನ್ನು ಸಂಧಿಸುತ್ತದೆ. ನಂತರ ಇದೇ ಸ.ನಂ. 33 ರ ದಕ್ಷಿಣ ಗಡಿಯ ಮೂಲಕ ಪಶ್ಚಿಮಾಭಿಮುಖವಾಗಿ ಚಲಿಸಿ ಇದೇ ಸ.ನಂ. 33 ರ ನೈರುತ್ಯ ಮೂಲೆಯಲ್ಲಿ ಸಂಧಿಸುತ್ತೆ. ನಂತರ ಇದೇ ಸ.ನಂ. 33ರ ಪಶ್ಚಿಮ ಗಡಿಯ ಮೂಲಕ ಉತ್ತರಾಭಿಮುಖವಾಗಿ ಚಲಿಸುತ್ತಾ ಇದೇ ಸ.ನಂ. 33 ರ ವಾಯುವ್ಯ ಮೂಲೆಯಲ್ಲಿ ಸಂಧಿಸುತ್ತದೆ. ನಂತರ ಇದೇ ಸ.ನಂ. 33 ಹಾಗೂ ಗುತ್ತಿಗೇರಿ ಗ್ರಾಮದ ಸ.ನಂ. 32, 31, 30, 29, 26, 18, 17, 16, 15, 9, 8, 34, 35, 36, 37, 38, 58, 59, 61ರ ಉತ್ತರ ಗಡಿಯ ಮೂಲಕ ಪೂರ್ವಾಭಿಮುಖವಾಗಿ ಚಲಿಸುತ್ತಾ ಇದೇ ಸ.ನಂ. 61 ರ ಈಶಾನ್ಯ ಮೂಲೆಯಲ್ಲಿ ಸಂಧಿಸುತ್ತದೆ. ನಂತರ ಹಳಿಯಾಳದಿಂದ ಬೆಳಗಾಂವಗೆ ಹೋಗುವ ರಾಜ್ಯ ಹೆದ್ದಾರಿಯನ್ನು ದಾಟಿ ಗುತ್ತಿಗೇರಿ ಗ್ರಾಮದ ಸ.ನಂ. 65ರ ವಾಯುವ್ಯ ಮೂಲೆಯಲ್ಲಿ ಸಂಧಿಸುತ್ತದೆ. ನಂತರ ಇದೇ ಸ.ನಂ. 65 ಹಾಗೂ ಗುತ್ತಿಗೇರಿ ಗ್ರಾಮದ ಸ.ನಂ. 66, 67, 73, 74, 84, 85, 86, 87, 96, 106, 107, 110 ರ ಉತ್ತರ ಗಡಿಯ ಮೂಲಕ ಪೂರ್ವಾಭಿಮುಖವಾಗಿ ಚಲಿಸುತ್ತಾ ಇದೇ ಸ.ನಂ. 110 ರ ಈಶಾನ್ಯ ಮೂಲೆಯಲ್ಲಿ ಸಂಧಿಸುತ್ತದೆ. ನಂತರ ಇದೇ ಸ.ನಂ. 110ರ ಪೂರ್ವ ಗಡಿಯ ಮೂಲಕ ದಕ್ಷಿಣಾಭಿಮುಖವಾಗಿ ಚಲಿಸುತ್ತಾ ಗುತ್ತಿಗೇರಿ ಗ್ರಾಮದ ಸ.ನಂ. 111 ರ ಈಶಾನ್ಯ ಮೂಲೆಯಲ್ಲಿ ಸಂಧಿಸುತ್ತದೆ. ನಂತರ ಇದೇ ಸ.ನಂ. 111ರ ಪೂರ್ವ ಗಡಿಯ ಮೂಲಕ ದಕ್ಷಿಣಾಭಿಮುಖವಾಗಿ ಚಲಿಸಿ ಇದೇ ಸ.ನಂ. 111ರ ಆಗ್ನೇಯ ಮೂಲೆಯಲ್ಲಿ ಸಂಧಿಸುತ್ತದೆ. ನಂತರ ಹಳಿಯಾಳದಿಂದ ಧಾರವಾಡಕ್ಕೆ ಹೋಗುವ ರಾಜ್ಯ ಹೆದ್ದಾರಿಯನ್ನು ದಾಟಿ ಗುತ್ತಿಗೇರಿ ಗ್ರಾಮದ ಸ.ನಂ. 112 ರ ಈಶಾನ್ಯ ಮೂಲೆಯಲ್ಲಿ ಸಂಧಿಸುತ್ತದೆ. ನಂತರ ಇದೇ ಸ.ನಂ. 112 ರ ಪೂರ್ವ ಗಡಿಯ ಮೂಲಕ ದಕ್ಷಿಣಾಭಿಮುಖವಾಗಿ ಚಲಿಸಿ ಛತ್ರನಾಳ ಗ್ರಾಮದ ಸ.ನಂ. 25ರ ಈಶಾನ್ಯ ಮೂಲೆಯನ್ನು ಸಂಧಿಸುತ್ತದೆ. ನಂತರ ಇದೇ ಸ.ನಂ. 25ರ ಪೂರ್ವ ಗಡಿಯ ಮೂಲಕ ದಕ್ಷಿಣಾಭಿಮುಖವಾಗಿ ಚಲಿಸಿ ಛತ್ರನಾಳ ಗ್ರಾಮದ ಸ.ನಂ. 26ರ ಉತ್ತರ ಗಡಿಯಲ್ಲಿನ ವಾಯುವ್ಯ ಮೂಲೆಯಲ್ಲಿ ಸಂಧಿಸಿ ಇದೇ ಸ.ನಂ. 26ರ ಉತ್ತರ ಗಡಿಯ ಮೂಲಕ ಪೂರ್ವಾಭಿಮುಖವಾಗಿ ಚಲಿಸುತ್ತಾ ಇದೇ ಸ.ನಂ. 28ರ ಪೂರ್ವ ಗಡಿಯ ಮೂಲಕ ದಕ್ಷಿಣಾಭಿಮುಖವಾಗಿ ಚಲಿಸುತ್ತಾ ಛತ್ರನಾಳ ಗ್ರಾಮದ ಸ.ನಂ. 30 ರ ವಾಯುವ್ಯ ಮೂಲೆಯಲ್ಲಿ ಸಂಧಿಸುತ್ತದೆ. ನಂತರ ಇದೇ ಸ.ನಂ. 30ರ ಉತ್ತರ ಗಡಿಯ ಮೂಲಕ ಪೂರ್ವಾಭಿಮುಖವಾಗಿ ಚಲಿಸಿ ಇದೇ ಸ.ನಂ. 30ರ ಈಶಾನ್ಯ ಮೂಲೆಯಲ್ಲಿ ಸಂಧಿಸುತ್ತದೆ. ನಂತರ ಇದೇ ಸ.ನಂ. 30ರ ಪೂರ್ವ ಗಡಿಯ ಮೂಲಕ ದಕ್ಷಿಣಾಭಿಮುಖವಾಗಿ ಚಲಿಸಿ ಹಳಿಯಾಳದಿಂದ ಭೂಜುರಕಂಚನಹಳ್ಳಿಗೆ ಹೋಗುವ ಜಿಲ್ಲಾ ಮುಖ್ಯ ರಸ್ತೆಯನ್ನು ದಾಟಿ ಛತ್ರನಾಳ ಗ್ರಾಮದ ಸ.ನಂ. 32 ರ ಈಶಾನ್ಯ ಮೂಲೆಯಲ್ಲಿ ಸಂಧಿಸುತ್ತದೆ. ನಂತರ ಇದೇ ಸ.ನಂ. 32 ಹಾಗೂ ಛತ್ರನಾಳ ಗ್ರಾಮದ ಸ.ನಂ. 38, 39, 40, 41ರ ಪೂರ್ವ ಗಡಿಯ ಮೂಲಕ ದಕ್ಷಿಣಾಭಿಮುಖವಾಗಿ ಚಲಿಸಿ ಇದೇ ಸ.ನಂ. 41ರ ಆಗ್ನೇಯ ಮೂಲೆಯಲ್ಲಿ ಸಂಧಿಸುತ್ತದೆ. ನಂತರ ಹಳಿಯಾಳದಿಂದ ಕಲಘಟಗಿಗೆ ಹೋಗುವ ರಾಜ್ಯ ಹೆದ್ದಾರಿಯನ್ನು ದಾಟಿ ಛತ್ರನಾಳ ಸ.ನಂ. 42ರ ಈಶಾನ್ಯ ಮೂಲೆಯಲ್ಲಿ ಸಂಧಿಸುತ್ತದೆ. ನಂತರ ಇದೇ ಸ.ನಂ. 42ರ ಪೂರ್ವ ಗಡಿಯ ಮೂಲಕ ಚಲಿಸಿ ಇದೇ ಸ.ನಂ. 42ರ ಆಗ್ನೇಯ ಮೂಲೆಯಲ್ಲಿ ಸಂಧಿಸುತ್ತದೆ. ನಂತರ ಇದೇ ಸ.ನಂ. 42 ಹಾಗೂ ಛತ್ರನಾಳ ಗ್ರಾಮದ ಸ.ನಂ. 47, 48, 49, 50, 51, 56, 1ರ ದಕ್ಷಿಣ ಗಡಿಯ ಮೂಲಕ ಪಶ್ಚಿಮಾಭಿಮುಖವಾಗಿ ಚಲಿಸಿ ಇದೇ ಸ.ನಂ. 1 ರ ನೈರುತ್ಯ ಮೂಲೆಯಲ್ಲಿ ಸಂಧಿಸುತ್ತದೆ. ನಂತರ ಇದೇ ಸ.ನಂ. 1 ರ ಪಶ್ಚಿಮ ಗಡಿಯ ಮೂಲಕ ಉತ್ತರಾಭಿಮುಖವಾಗಿ ಚಲಿಸಿ ಛತ್ರನಾಳ ಗ್ರಾಮದ ಸ.ನಂ. 2 ರ ನೈರುತ್ಯ ಮೂಲೆಯಲ್ಲಿ ಸಂಧಿಸುತ್ತದೆ. ನಂತರ ಇದೇ ಸ.ನಂ. 2 ರ ನೈರುತ್ಯ ಮೂಲೆಯಿಂದ ವಾಯುವ್ಯ ದಿಕ್ಕಿಗೆ ಅಭಿಮುಖವಾಗಿ ಚಲಿಸಿ ಗುಡ್ನಾಪುರ ಗ್ರಾಮದ ಸ.ನಂ. 32ರ ಪೂರ್ವ ಗಡಿಯ ಬಿಂದುವಿನಲ್ಲಿ ಸಂಧಿಸುತ್ತದೆ. ನಂತರ ಇದೇ ಸ.ನಂ. 32 ಹಾಗೂ ಗುಡ್ನಾಪುರ ಗ್ರಾಮದ ಸ.ನಂ. 33 ರ ಪೂರ್ವ ಗಡಿಯ ಮೂಲಕ ದಕ್ಷಿಣಾಭಿಮುಖವಾಗಿ ಚಲಿಸಿ ಇದೇ ಸ.ನಂ. 33 ರ ಆಗ್ನೇಯ ಮೂಲೆಯಲ್ಲಿ ಸಂಧಿಸುತ್ತದೆ. ನಂತರ ಇದೇ ಸ.ನಂ. 33 ಹಾಗೂ ಗುಡ್ನಾಪುರ ಗ್ರಾಮದ ಸ.ನಂ. 32ರ ದಕ್ಷಿಣ ಗಡಿಯ ಮೂಲಕ ಪಶ್ಚಿಮಾಭಿಮುಖವಾಗಿ ಚಲಿಸುತ್ತಾ ಇದೇ ಸ.ನಂ. 32ರ ನೈರುತ್ಯ ಮೂಲೆಯಲ್ಲಿ ಸಂಧಿಸುತ್ತದೆ. ನಂತರ ಇದೇ ಸ.ನಂ. 32 ರ ಪಶ್ಚಿಮ ಗಡಿಯ ಮೂಲಕ ಉತ್ತರಾಭಿಮುಖವಾಗಿ ಚಲಿಸಿ ಗುಡ್ನಾಪುರ ಗ್ರಾಮದ ಸ.ನಂ. 31 ರ ದಕ್ಷಿಣ ಗಡಿಯಲ್ಲಿನ ಆಗ್ನೇಯ ಮೂಲೆಯಲ್ಲಿ ಸಂಧಿಸುತ್ತದೆ. ನಂತರ ಇದೇ ಸ.ನಂ. 31ರ ದಕ್ಷಿಣ ಗಡಿಯ ಮೂಲಕ ಪಶ್ಚಿಮಾಭಿಮುಖವಾಗಿ ಚಲಿಸುತ್ತಾ ಇದೇ ಸ.ನಂ. 31ರ ನೈರುತ್ಯ ಮೂಲೆಯಲ್ಲಿ ಸಂಧಿಸುತ್ತದೆ. ನಂತರ ಇದೇ ಸ.ನಂ. 31 ಹಾಗೂ ಗುಡ್ನಾಪುರ ಗ್ರಾಮದ ಸ.ನಂ. 34ರ ಪಶ್ಚಿಮ ಗಡಿಯ ಮೂಲಕ ಗುಡ್ನಾಪುರ ಗ್ರಾಮದ ಸ.ನಂ. 36ರ ದಕ್ಷಿಣ ಗಡಿಯವರೆಗೆ ಉತ್ತರಾಭಿಮುಖವಾಗಿ ಚಲಿಸಿ ನಂತರ ಇದೇ ಸ.ನಂ. 36ರ ದಕ್ಷಿಣ ಗಡಿಯ ಮೂಲಕ ಪಶ್ಚಿಮಾಭಿಮುಖವಾಗಿ ಚಲಿಸಿ ಗುಡ್ನಾಪುರ ಗ್ರಾಮದ ಸ.ನಂ. 39 ರ ಪೂರ್ವ ಮೂಲೆಯಲ್ಲಿ ಸಂಧಿಸಿ ಇದೇ ಸ.ನಂ. 39 ಹಾಗೂ ಗುಡ್ಡಪುರ ಗ್ರಾಮದ ಸ.ನಂ. 40 ರ ಪೂರ್ವ ಗಡಿಯ ಮೂಲಕ ದಕ್ಷಿಣಾಭಿಮುಖವಾಗಿ ಚಲಿಸಿ ಹುಲ್ಲಟ್ಟಿ ಗ್ರಾಮದ ಸ.ನಂ. 12ರ ಉತ್ತರ ಗಡಿಯ ಬಿಂದುವಿನಲ್ಲಿ ಸಂಧಿಸುತ್ತದೆ. ನಂತರ ಇದೇ ಸ.ನಂ. 12 ರ ಉತ್ತರ ಗಡಿಯ ಮೂಲಕ ಚಲಿಸಿ ಇದೇ ಸ.ನಂ. 12ರ ಈಶಾನ್ಯ ಮೂಲೆಯಲ್ಲಿ ಸಂಧಿಸುತ್ತದೆ. ನಂತರ ಇದೇ ಸ.ನಂ. 12 ಹಾಗೂ ಹುಲ್ಲಟ್ಟಿ ಗ್ರಾಮದ ಸ.ನಂ. 13, 14, 15, 38, 39, 56ರ ಪೂರ್ವ ಗಡಿಯ ಮೂಲಕ ದಕ್ಷಿಣಾಭಿಮುಖವಾಗಿ ಚಲಿಸಿ ಇದೇ ಸ.ನಂ. 56ರ ಆಗ್ನೇಯ ಮೂಲೆಯಲ್ಲಿ ಸಂಧಿಸುತ್ತದೆ. ನಂತರ ಇದೇ ಸ.ನಂ. 56ರ ದಕ್ಷಿಣ ಗಡಿಯ ಮೂಲಕ ಪಶ್ಚಿಮಾಭಿಮುಖವಾಗಿ ಚಲಿಸುತ್ತಾ ಹಳಿಯಾಳದಿಂದ ಬಾಮನಿಕೊಪ್ಪಕ್ಕೆ ಹೋಗುವ ರಸ್ತೆಯನ್ನು ದಾಟಿ ಇದೇ ಸ.ನಂ. 56ರ ಹಾಗೂ ಹುಲ್ಲಟ್ಟಿ ಗ್ರಾಮದ ಸ.ನಂ. 59, 57 ರ ದಕ್ಷಿಣ ಗಡಿಯ ಮೂಲಕ ಪಶ್ಚಿಮಾಭಿಮುಖವಾಗಿ ಚಲಿಸಿ ಇದೇ ಸ.ನಂ. 57 ರ ನೈರುತ್ಯ ಮೂಲೆಯಲ್ಲಿ ಸಂಧಿಸಿ ಇದೇ ಸ.ನಂ. 57 ರ ಪಶ್ಚಿಮ ಗಡಿಯ ಮೂಲಕ ಉತ್ತರಾಭಿಮುಖವಾಗಿ ಚಲಿಸಿ ಹುಲ್ಲಟ್ಟಿ ಗ್ರಾಮದ ಸ.ನಂ. 68ರ ಆಗ್ನೇಯ ಮೂಲೆಯಲ್ಲಿ ಸಂಧಿಸುತ್ತದೆ. ನಂತರ ಇದೇ ಸ.ನಂ. 68ರ ದಕ್ಷಿಣ ಗಡಿಯ ಮೂಲಕ ಪಶ್ಚಿಮಾಭಿಮುಖವಾಗಿ ಚಲಿಸಿ ಇದೇ ಸ.ನಂ. 68 ರ ನೈರುತ್ಯ ಮೂಲೆಯಲ್ಲಿ ಸಂಧಿಸುತ್ತದೆ. ನಂತರ ಇದೇ ಸ.ನಂ. 68 ಹಾಗೂ ಹುಲ್ಲಟ್ಟಿ ಗ್ರಾಮದ ಸ.ನಂ. 69, 70, 71, 73, 76, 77, 87, 88, 89, 91 ರ ಪಶ್ಚಿಮ ಗಡಿಯ ಮೂಲಕ ಉತ್ತರಾಭಿಮುಖವಾಗಿ ಚಲಿಸುತ್ತಾ ಹುಲ್ಲಟ್ಟಿ ಗ್ರಾಮದ ಸ.ನಂ. 97ರ ಆಗ್ನೇಯ ಮೂಲೆಯಲ್ಲಿ ಸಂಧಿಸುತ್ತದೆ. ನಂತರ ಇದೇ ಸ.ನಂ. 97ರ ದಕ್ಷಿಣ ಗಡಿಯ ಮೂಲಕ ಪಶ್ಚಿಮಾಭಿಮುಖವಾಗಿ ಚಲಿಸಿ ಇದೇ ಸ.ನಂ. 97 ರ ನೈರುತ್ಯ ಮೂಲೆಯಲ್ಲಿ ಸಂಧಿಸಿ ಇದೇ ಸ.ನಂ. 97 ಹಾಗೂ ಹುಲ್ಲಟ್ಟಿ ಗ್ರಾಮದ ಸ.ನಂ. 99, 101, 102 ರ ಪಶ್ಚಿಮ ಗಡಿಯ ಮೂಲಕ

ಉತ್ತರಾಭಿಮುಖವಾಗಿ ಚಲಿಸುತ್ತಾ ಇದೇ ಸ.ನಂ. 102ರ ವಾಯುವ್ಯ ಮೂಲೆಯಲ್ಲಿ ಸಂಧಿಸುತ್ತದೆ. ನಂತರ ಹಳಿಯಾಳದಿಂದ ಯಲ್ಲಾಪುರಕ್ಕೆ ಹೋಗುವ ರಾಜ್ಯ ಹೆದ್ದಾರಿಯನ್ನು ದಾಟಿ ಹಳಿಯಾಳ ಗ್ರಾಮದ ಸ.ನಂ. 69 ರ ನೈರುತ್ಯ ಮೂಲೆಯಲ್ಲಿ ಸಂಧಿಸುತ್ತದೆ. ನಂತರ ಇದೇ ಸ.ನಂ. 69ರ ಪಶ್ಚಿಮ ಗಡಿಯ ಮೂಲಕ ಉತ್ತರಾಭಿಮುಖವಾಗಿ ಚಲಿಸುತ್ತಾ ಹಳಿಯಾಳದಿಂದ ಕೆಸರೊಳ್ಳಿಗೆ ಹೋಗುವ ಗ್ರಾಮ ರಸ್ತೆಯನ್ನು ದಾಟಿ ಹಳಿಯಾಳ ಗ್ರಾಮದ ಸ.ನಂ. 72 ರ ಆಗ್ನೇಯ ಮೂಲೆಯನ್ನು ಸಂಧಿಸುತ್ತದೆ. ನಂತರ ಇದೇ ಸ.ನಂ. 72 ಹಾಗೂ ಹಳಿಯಾಳ ಗ್ರಾಮದ ಸ.ನಂ. 83, 84, 85, 86 ರ ದಕ್ಷಿಣ ಗಡಿಯ ಮೂಲಕ ಪಶ್ಚಿಮಾಭಿಮುಖವಾಗಿ ಚಲಿಸುತ್ತಾ ಇದೇ ಸ.ನಂ. 86ರ ನೈರುತ್ಯ ಮೂಲೆಯಲ್ಲಿ ಸಂಧಿಸುತ್ತದೆ. ನಂತರ ಇದೇ ಸ.ನಂ. 86 ಹಾಗೂ ಹಳಿಯಾಳ ಗ್ರಾಮದ ಸ.ನಂ. 88, 97, 98, 99, 102 ರ ಪಶ್ಚಿಮ ಗಡಿಯ ಮೂಲಕ ಉತ್ತರಾಭಿಮುಖವಾಗಿ ಚಲಿಸುತ್ತಾ ಇದೇ ಸ.ನಂ. 102 ರ ವಾಯುವ್ಯ ಮೂಲೆಯಲ್ಲಿ ಸಂಧಿಸುತ್ತದೆ. ನಂತರ ಹಳಿಯಾಳದಿಂದ ಜಾವಳ್ಳಿಗೆ ಹೋಗುವ ರಾಜ್ಯ ಹೆದ್ದಾರಿಯನ್ನು ದಾಟಿ ಹಳಿಯಾಳ ಸ.ನಂ. 79ರ ನೈರುತ್ಯ ಮೂಲೆಯಲ್ಲಿ ಸಂಧಿಸುತ್ತದೆ. ನಂತರ ಇದೇ ಸ.ನಂ. 79 ಹಾಗೂ ಹಳಿಯಾಳ ಗ್ರಾಮದ ಸ.ನಂ. 103, 106ರ ಪಶ್ಚಿಮ ಗಡಿಯ ಮೂಲಕ ಉತ್ತರಾಭಿಮುಖವಾಗಿ ಚಲಿಸಿ ಹಳಿಯಾಳ ಗ್ರಾಮದ ಸ.ನಂ.128 ರ ಆಗ್ನೇಯ ಮೂಲೆಯಲ್ಲಿ ಸಂಧಿಸುತ್ತದೆ. ನಂತರ ಇದೇ ಸ.ನಂ. 128 ಹಾಗೂ ಹಳಿಯಾಳ ಗ್ರಾಮದ ಸ.ನಂ. 129 ರ ದಕ್ಷಿಣ ಗಡಿಯ ಮೂಲಕ ಪಶ್ಚಿಮಾಭಿಮುಖವಾಗಿ ಚಲಿಸುತ್ತಾ ಇದೇ ಸ.ನಂ. 129 ರ ನೈರುತ್ಯ ಮೂಲೆಯಲ್ಲಿ ಸಂಧಿಸುತ್ತದೆ. ನಂತರ ಇದೇ ಸ.ನಂ. 129 ಹಾಗೂ ಹಳಿಯಾಳ ಗ್ರಾಮದ 130 ರ ಪಶ್ಚಿಮ ಗಡಿಯ ಮೂಲಕ ಉತ್ತರಾಭಿಮುಖವಾಗಿ ಚಲಿಸಿ ಪ್ರಾರಂಭಿಸಿದ 'ಎ' ಬಿಂದುವಿನಲ್ಲಿ ಅಂದರೆ ಹಳಿಯಾಳ ಗ್ರಾಮದ ಸ.ನಂ. 130ರ ವಾಯುವ್ಯ ಮೂಲೆಯಲ್ಲಿ ವಿಲೀನವಾಗುತ್ತದೆ.

ಟಿ.ಎಂ. ವಾಸುದೇವ ರಾವ್
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ.

ಪಿ.ಆರ್. 272

ನಗರಾಭಿವೃದ್ಧಿ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ನಅಇ 688 ಮೈಅಪ್ರಾ 2011, ಬೆಂಗಳೂರು, ದಿನಾಂಕ : 16-2-2012.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 4(ಎ) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಕರ್ನಾಟಕ ಸರ್ಕಾರವು ಚಿಕ್ಕಮಗಳೂರು ಜಿಲ್ಲೆ, ನರಸಿಂಹರಾಜಪುರ ಪಟ್ಟಣ ಪಂಚಾಯಿತಿ ಎಲ್ಲೆಯ ಕ್ಷೇತ್ರವನ್ನೇ ನರಸಿಂಹರಾಜಪುರ ಸ್ಥಳೀಯ ಯೋಜನಾ ಪ್ರದೇಶವೆಂದು ದಿನಾಂಕ : 16-2-2012 ರಿಂದ ಜಾರಿಗೆ ಬರುವಂತೆ ಈ ಮೂಲಕ ಘೋಷಿಸಿದೆ ಹಾಗೂ ಸದರಿ ಕಾಯ್ದೆಯ ಕಲಂ-2(7)(ಬಿ) ರನ್ವಯ ಸದರಿ ಪಟ್ಟಣ ಪಂಚಾಯಿತಿಯೇ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಯೋಜನಾ ಪ್ರಾಧಿಕಾರವಾಗಿ ಕೆಲಸಕಾರ್ಯಗಳನ್ನು ನಿರ್ವಹಿಸತಕ್ಕದ್ದೆಂದು ಆದೇಶಿಸಿದೆ

ಅನುಬಂಧ-ಎ ಯಲ್ಲಿ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳ ವಿವರಗಳನ್ನು ಹಾಗೂ ಅನುಸೂಚಿ-ಬಿ ಯಲ್ಲಿ ಸ್ಥಳೀಯ ಯೋಜನಾ ಪ್ರದೇಶದ ಎಲ್ಲೆಯ ವಿವರಗಳನ್ನು ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ.ಎಂ. ವಾಸುದೇವ ರಾವ್
190	201275	SIDDAPPA	MALE	01/01/1988	2A	YES RC KM	B.Sc. Agri	79.80 %	2A-RU
191	201365	LANKESH KUMAR R	MALE	01/06/1981	2A	YES RC	B.Sc. Agri	79.70 %	2A-RU
192	202157	SANJAY A R	MALE	21/06/1985	2A	YES RC	B.Sc. Agri	79.70 %	2A-RU

Sl.No	Application ID	CandidateName	Gender	DOB	Reservation	Reservation (Catagory)	Qualification	Aggregate	Selected Under
193	202393	NIYAZ MOHAMMED MUNVAR	MALE	13/01/1990	2B	YES RC	B.Sc. Agri	79.70 %	2B-RU
194	201459	VASANTI NAGARAHALLI	FEMALE	23/01/1989	2A	NO	B.Sc. Agri	79.60 %	2A-WO
195	202886	SOWNDARYA D C	FEMALE	04/05/1989	SC	NO	B.Sc. Agri	79.60 %	SC-WO
196	200561	KARIBASAVAIAH H B	MALE	22/07/1975	2A	YES RC KM	B.Sc. Agri	79.50 %	2A-OT
197	201303	ASHOK KAMBLE	MALE	01/06/1977	SC	YES KM	B.Sc. Agri	79.50 %	SC-KM
198	201785	MENDI HANUMAPPA	MALE	01/06/1981	Cat-1	YES KM	B.Sc. Agri	79.50 %	Cat-1-KM
199	201173	SHUBHA SHREE K S	FEMALE	25/05/1983	2A	NO	B.Sc. Agri	79.40 %	2A-WO
200	201985	MAMATHA P	FEMALE	26/08/1984	SC	NO	B.Sc. Agri	79.40 %	SC-WO
201	202908	RAJASHEKHAR	MALE	01/06/1988	ST	YES KM	B.Sc. Agri	79.40 %	ST-KM
202	200707	SHRISHAIL BALAPPA KARAGANNI	MALE	01/06/1977	Cat-1	YES RC KM	B.Sc. Agri	79.30 %	Cat-1-RU
203	200710	PUSHPALATHA SM	FEMALE	16/02/1979	Cat-1	NO	B.Sc. Agri	79.30 %	Cat-1-WO
204	202542	BIRADAR BANASIDHA MADANNA	MALE	02/06/1988	2A	YES KM	B.Sc. Agri	79.30 %	2A-OT
205	200557	LAXMI KAMBLE	FEMALE	20/12/1988	SC	NO	B.Sc. Agri	79.30 %	SC-WO
206	201790	VENKATESHA C	MALE	20/05/1989	SC	NO	B.Sc. Agri	79.30 %	SC-OT
207	201704	SRIDHAR LAXMAN DASAR	MALE	15/03/1977	Cat-1	YES RC	B.Sc. Agri	79.20 %	Cat-1-RU

Sl.No	Application ID	CandidateName	Gender	DOB	Reservation	Reservation (Catagory)	Qualification	Aggregate	Selected Under
208	201022	SHEKHAPPA	MALE	13/04/1988	Cat-1	YES KM	B.Sc. Agri	79.20 %	Cat-1-OT
209	201298	SAYABANNA LINGADALLI	MALE	25/07/1988	2A	YES RC KM	B.Sc. Agri	79.20 %	2A-OT
210	201887	JAHANGIR	MALE	06/04/1980	2B	YES KM GSLB	B.Sc. Agri	79.10 %	2B-KM
211	200648	SURESH B C	MALE	15/12/1978	2A	NO	B.Sc. Agri	79.00 %	2A-OT
212	201562	RAGHAVENDRA HAVANNAVAR	MALE	22/07/1981	Cat-1	YES KM GSLB	B.Sc. Agri	79.00 %	Cat-1-OT
213	200989	SAVITA S KAMMAR	FEMALE	19/06/1986	2A	NO	B.Sc. Agri	79.00 %	2A-WO
214	202827	SUDARSHAN S	MALE	22/07/1988	SC	YES RC KM	B.Sc. Agri	79.00 %	SC-RU
215	201889	SHIVA KUMAR M	MALE	30/05/1975	SC	NO	B.Sc. Agri	78.90 %	SC-OT
216	202114	SHREESHAIL B R	MALE	20/07/1977	SC	YES RC	B.Sc. Agri	78.90 %	SC-RU
217	203126	MOHAMMED SIDDIQ R	MALE	02/05/1982	2B	NO	B.Sc. Agri	78.90 %	2B-OT
218	200077	DEEPTHI PATIL	FEMALE	24/07/1987	SC	NO	B.Sc. Agri	78.90 %	SC-WO
219	202804	SWETHA B M	FEMALE	27/08/1988	2A	YES KM	B.Sc. Agri	78.90 %	2A-WO
220	201391	MAHESH KATAGERI	MALE	01/06/1985	2A	YES RC KM	B.Sc. Agri	78.80 %	2A-OT
221	201736	LATHA H C	FEMALE	30/05/1987	SC	NO	B.Sc. Agri	78.60 %	SC-WO
222	200484	SUMALATHA E	FEMALE	14/03/1984	SC	NO	B.Sc. Agri	78.50 %	SC-WO

Sl.No	Application ID	CandidateName	Gender	DOB	Reservation	Reservation (Catagory)	Qualification	Aggregate	Selected Under
223	202877	KAILASHNATH	MALE	30/05/1988	ST	YES KM	B.Sc. Agri	78.50 %	ST-OT
224	200570	PUTTANNA	MALE	01/06/1988	SC	YES RC KM	B.Sc. Agri	78.50 %	SC-RU
225	201902	SHAHNAWAZ KADRI	MALE	01/06/1979	2B	NO	B.Sc. Agri	78.40 %	2B-OT
226	202696	ANANDA KUMAR B V	MALE	18/05/1983	SC	YES RC KM	B.Sc. Agri	78.40 %	SC-RU
227	200864	LAVANYA T N	FEMALE	17/08/1984	2A	NO	B.Sc. Agri	78.20 %	2A-WO
228	200418	SHIVAMURTHI NAIK R	MALE	01/06/1986	SC	YES RC KM	B.Sc. Agri	78.20 %	SC-RU
229	200588	PRASAD M C	MALE	26/12/1976	SC	NO	B.Sc. Agri	78.10 %	SC-OT
230	201273	PRAKASH G	MALE	19/02/1985	SC	NO	B.Sc. Agri	78.10 %	SC-OT
231	200844	PALLAVI V	FEMALE	30/08/1989	SC	YES KM	B.Sc. Agri	78.10 %	SC-WO
232	202268	MOHD MOHINUL HASSAN	MALE	14/03/1986	2B	NO	B.Sc. Agri	78.00 %	2B-OT
233	201364	HUMERA JABEEN	FEMALE	08/05/1990	2B	NO	B.Sc. Agri	78.00 %	2B-WO
234	202341	JAYASHANKARA M	MALE	05/05/1986	SC	YES RC	B.Sc. Agri	77.90 %	SC-RU
235	201597	RADHIKA B R	FEMALE	18/08/1988	2A	YES KM	B.Sc. Agri	77.90 %	2A-WO
236	200208	KORAMARA BHEERAPPA	MALE	04/06/1978	SC	YES KM	B.Sc. Agri	77.80 %	SC-KM
237	202163	ROOPA T K	FEMALE	10/07/1979	ST	NO	B.Sc. Agri	77.80 %	ST-WO

Sl.No	Application ID	CandidateName	Gender	DOB	Reservation	Reservation (Catagory)	Qualification	Aggregate	Selected Under
238	201425	NAVEEN KUMAR H N	MALE	29/06/1987	SC	NO	B.Sc. Agri	77.70 %	SC-OT
239	202858	CHANDRAKANT	MALE	10/12/1979	SC	YES RC GSLB	B.Sc. Agri	77.60 %	SC-RU
240	201839	DHANYA KUMAR B R	MALE	20/10/1985	SC	NO	B.Sc. Agri	77.50 %	SC-OT
241	202362	RUCHI KENGAPUR	FEMALE	28/06/1988	2A	NO	B.Sc. Agri	77.50 %	2A-WO
242	200792	JEEVAN P N	MALE	25/05/1990	SC	NO	B.Sc. Agri	77.50 %	SC-OT
243	200461	KALAKAPPA	MALE	25/09/1976	SC	YES RC KM GSLB	B.Sc. Agri	77.40 %	SC-OT
244	202466	RUKMINI T	FEMALE	09/06/1979	2A	NO	B.Sc. Agri	77.40 %	2A-WO
245	200404	SWARNA A	FEMALE	05/11/1987	SC	NO	B.Sc. Agri	77.30 %	SC-WO
246	202242	KESHAVAMURTHY NAIK V G	MALE	08/03/1979	SC	NO	B.Sc. Agri	77.10 %	SC-OT
247	200328	ROOPASHREE R	FEMALE	14/11/1982	ST	NO	B.Sc. Agri	77.10 %	ST-WO
248	201982	JAIKUMAR C	MALE	06/03/1986	SC	NO	B.Sc. Agri	77.10 %	SC-OT
249	200670	ERESH NAIK KP	MALE	10/01/1988	SC	YES RC KM	B.Sc. Agri	77.10 %	SC-OT
250	200581	ASHA M G	FEMALE	05/08/1989	Cat-1	YES KM	B.Sc. Agri	77.00 %	Cat-1-WO
251	201804	SHABNAM A R	FEMALE	19/11/1989	2B	NO	B.Sc. Agri	76.90 %	2B-WO
252	200298	GAYATHRI DEVI S	FEMALE	29/09/1982	SC	NO	B.Sc. Agri	76.80 %	SC-WO

Sl.No	Application ID	CandidateName	Gender	DOB	Reservation	Reservation (Catagory)	Qualification	Aggregate	Selected Under
253	202851	VARADARAJU M V	MALE	06/06/1983	SC	NO	B.Sc. Agri	76.70 %	SC-OT
254	202015	NEELA NAIK B	MALE	05/07/1986	SC	YES KM	B.Sc. Agri	76.70 %	SC-OT
255	200061	R V TEJAVARDHAN	MALE	20/05/1977	ST	YES RC	B.Sc. Agri	76.40 %	ST-RU
256	200237	DEVINDRAPPA	MALE	01/08/1987	ST	YES RC KM	B.Sc. Agri	75.60 %	ST-RU
257	201387	RAJALAKSHMI M	FEMALE	02/06/1988	ST	YES RC	B.Sc. Agri	75.60 %	ST-WO
258	200705	RUHINA BEGUM	FEMALE	15/07/1986	2B	NO	B.Sc. Agri	75.40 %	2B-WO
259	201164	RAMANJANEYA M	MALE	26/06/1976	3A	YES RC KM PHLC GSLB	B.Sc. Agri	74.50 %	3A-PH
260	200878	MAHAMUD MUZAMIL	MALE	02/02/1985	2B	YES RC KM	B.Sc. Agri	73.80 %	2B-RU
261	201582	MOHANA RANGANATHA DANDAGI	MALE	12/07/1983	SC	YES PHBL KM	B.Sc. Agri	70.30 %	GM-PH
262	202324	YESU BABU K	MALE	18/05/1986	2A	YES PHLC	B.Sc. Agri	70.10 %	2A-PH
263	200796	ESWARAPPA V	MALE	15/03/1983	SC	YES RC KM PHLC	B.Sc. Agri	66.00 %	SC-PH
264	202132	NAGARAJA U T	MALE	11/03/1976	3B	YES KM PHLC	B.Sc. Agri	65.60 %	3B-PH
265	201344	LAKSHMIPATHI R N	MALE	01/06/1976	Cat-1	YES RC PHBL	B.Sc. Agri	62.60 %	Cat-1-PH

Government of Karnataka – Department of Agriculture
Post of Assistant Agricultural Officer – 265 Posts Cut Off Mark

Sl.No.	Name	Description	Quota	Allotted	Cutoff %
1	GM-OT	General Merit - Others	36	49	82.1
2	GM-WO	General Merit - Women	39	39	81.6
3	GM-RU	General Merit - Rural	34	34	82
4	GM-EXMP	General Merit - Ex - Serviceman	13	0	------
5	GM-KM	General Merit - Kannada Medium	7	7	84.9
6	GM-PH	General Merit - Physically Handicapped	3	3	70.3
7	SC-OT	Schedule Caste - Others	11	15	76.7
8	SC-WO	Schedule Caste - Women	12	12	76.8
9	SC-RU	Schedule Caste - Rural	10	10	77.6
10	SC-EXMP	Schedule Caste - Ex - Serviceman	4	0	------
11	SC-KM	Schedule Caste - Kannada Medium	2	2	77.8
12	SC-PH	Schedule Caste - Physically Handicapped	1	1	66
13	ST-OT	Schedule Tribe - Others	1	2	78.5
14	ST-WO	Schedule Tribe - Women	3	3	75.6
15	ST-RU	Schedule Tribe - Rural	2	2	75.6
16	ST-EXMP	Schedule Tribe - Ex - Serviceman	1	0	------
17	ST-KM	Schedule Tribe - Kannada Medium	1	1	79.4
18	ST-PH	Schedule Tribe - Physically Handicapped	0	0	------
19	C1-OT	CAT-1 - Others	2	3	79
20	C1-WO	CAT-1 - Women	3	3	77
21	C1-RU	CAT-1 - Rural	2	2	79.2
22	C1-EXMP	CAT-1 - Ex - Serviceman	1	0	------
23	C1-KM	CAT-1 - Kannada Medium	1	1	79.5
24	C1-PH	CAT-1 - Physically Handicapped	1	1	62.6
25	2A-OT	CAT-2A - Others	11	15	78.8
26	2A-WO	CAT-2A - Women	12	12	77.4

Sl.No.	Name	Description	Quota	Allotted	Cutoff %
27	2A-RU	CAT-2A - Rural	10	10	79.7
28	2A-EXMP	CAT-2A - Ex - Serviceman	4	0	------
29	2A-KM	CAT-2A - Kannada Medium	2	2	80.6
30	2A-PH	CAT-2A - Physically Handicapped	1	1	70.1
31	2B-OT	CAT-2B - Others	2	4	78
32	2B-WO	CAT-2B - Women	3	3	75.4
33	2B-RU	CAT-2B - Rural	3	3	73.8
34	2B-EXMP	CAT-2B - Ex - Serviceman	1	0	------
35	2B-KM	CAT-2B - Kannada Medium	1	1	79.1
36	2B-PH	CAT-2B - Physically Handicapped	1	0	------
37	3A-OT	CAT-3A - Others	2	3	80.5
38	3A-WO	CAT-3A - Women	3	3	80.6
39	3A-RU	CAT-3A - Rural	3	3	81
40	3A-EXMP	CAT-3A - Ex - Serviceman	1	0	------
41	3A-KM	CAT-3A - Kannada Medium	1	1	81
42	3A-PH	CAT-3A - Physically Handicapped	1	1	74.5
43	3B-OT	CAT-3B - Others	3	4	81.1
44	3B-WO	CAT-3B - Women	4	4	80.8
45	3B-RU	CAT-3B - Rural	3	3	80.1
46	3B-EXMP	CAT-3B - Ex - Serviceman	1	0	------
47	3B-KM	CAT-3B - Kannada Medium	1	1	81.8
48	3B-PH	CAT-3B - Physically Handicapped	1	1	65.6
		Total	265	265	

Commissioner for Agriculture (I/c)

Bangalore-1.

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೭	ಬೆಂಗಳೂರು, ಗುರುವಾರ, ಏಪ್ರಿಲ್ ೨೬, ೨೦೧೨ (ವೈಶಾಖ ೬, ಶಕ ವರ್ಷ ೧೯೩೪)	ಸಂಚಿಕೆ ೧೭

ಭಾಗ–೬

ಬೆಂಗಳೂರು ವಿಭಾಗಕ್ಕೆ ಮತ್ತು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು, ಚಿತ್ರದುರ್ಗ, ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಸ್ಥಳೀಯವಾಗಿ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು

ಜಿಲ್ಲಾಧಿಕಾರಿಗಳ ಕಾರ್ಯಾಲಯ, Tumkur ಜಿಲ್ಲೆ, Tumkur

ಭೂಸ್ವಾಧೀನ ಅಧಿನಿಯಮ 1894 (ತಿದ್ದುಪಡಿ ಅಧಿನಿಯಮ 1984) ಕಲಂ 4(1)ರ ಮೇರೆಗೆ ಅಧಿಸೂಚನೆ

ಕ್ರಮಾಂಕ : LAQ/SR/39/2011-12 ದಿನಾಂಕ 9/4/2012

ಈ ಮುಂದಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಜಮೀನು ಒಂದು ಸಾರ್ವಜನಿಕ ಉದ್ದೇಶಕ್ಕ ಅಂದರೆ Gubbi APMC ಎಂದು ಕರ್ನಾಟಕ ಸರ್ಕಾರದವರಿಗೆ ಕಂಡು ಬಂದಿರುವುದರಿಂದ,

ಕರ್ನಾಟಕ ಅಧಿನಿಯಮ 1961 ರ 17ರ ಮೂಲಕ ತಿದ್ದುಪಡಿಯಾದ ಭೂಸ್ವಾಧೀನ ಅಧಿನಿಯಮ 1894 (ಕೇಂದ್ರ) ಅಧಿನಿಯಮ ಸಂಖ್ಯೆ 1984ರ 4ನೇ ಪ್ರಕರಣ (1)ನೇ ಉಪಪ್ರಕರಣದ ಉಪಬಂದಗಳ ಅನುಸಾರವಾಗಿ ಅದಕ್ಕೆ ಸಂಬಂದಪಟ್ಟ ಎಲ್ಲರಿಗೂ ಈ ಬಗ್ಗ, ಈ ಮೂಲಕ ನೋಟೀಸುಗಳನ್ನು ಕೊಡಲಾಗಿದೆ ಹಾಗೂ ಕರ್ನಾಟಕ ಸರ್ಕಾರದ ಅಧಿನಿಯಮ 4(2)ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಿಗಳನ್ನು ಚಲಾಯಿಸಲು ಸಹಾಯಕ ಆಯುಕ್ತರು ತುಮಕೂರು ಇವರ ಸಿಬ್ಬಂದಿ ಹಾಗೂ ಕೆಲಸಗಾರರಿಗೆ ಈ ಮೂಲಕ ಅಧಿಕಾರ ನೀಡಿರುತ್ತೆ.

ಸದರಿ ಅದಿನಿಯಮದ 3(ಸಿ) ಪ್ರಕರಣದ ಮೇರೆಗೆ ಕರ್ನಾಟಕ ಸರ್ಕಾರದ ಅಧಿನಿಯಮದ ಪ್ರಕರಣದ ಮೇರೆಗೆ ಜಿಲ್ಲಾದಿಕಾರಿಯವರ ಕಾರ್ಯಗಳನ್ನು ನಿರ್ವಹಿಸಲು ಸಹಾಯಕ ಆಯುಕ್ತರು,ಸಹಾಯಕ ಅಯುಕ್ತರ ಕಛೇರಿ, ತುಮಕೂರು ಉಪ-ವಿಭಾಗ,ತುಮಕೂರು ಇವರನ್ನು ನೇಮಕ ಮಾಡಿರುತ್ತೆ.

ಸದರಿ ಜಮೀನಿನಲ್ಲಿ ಆಸಕ್ತಿಯುಳ್ಳ ಯಾರೊಬ್ಬ ವ್ಯಕ್ತಿಯು ಈ ಬಗ್ಗ ಆಕ್ಷೇಪಣೆಗಳನ್ನು ಮಾಡುವುದಿದ್ದರೆ ಅಂತಹ ಆಕ್ಷೇಪಣೆಗಳನ್ನು ಈ ಅಧಿಸೂಚನೆಯು ಪ್ರಕಟವಾದ 30 ದಿನಗಳ ಒಳಗಾಗಿ 1991ನೇ ಸಾಲಿನ ಕರ್ನಾಟಕ ಅಧಿನಿಯಮ 33ರಲ್ಲಿ ತಿದ್ದುಪಡಿಯಾದ 1894ನೇ ಸಾಲಿನ ಭೂ ಸಂಗ್ರಹಣಾ ಅಧಿನಿಯಮ 3(ಸಿ) ಪ್ರಕರಣದ ಮೇರೆಗೆ ಜಿಲ್ಲಾಧಿಕಾರಿಯವರ ಪ್ರಶಾಸನ ಕಾರ್ಯಗಳನ್ನು ನಿರ್ವಹಿಸಲು ಕರ್ನಾಟಕ ಸರ್ಕಾರವು ನೇಮಕ ಮಾಡಲಾದ ಸಹಾಯಕ ಆಯುಕ್ತರು,ಸಹಾಯಕ ಅಯುಕ್ತರ ಕಛೇರಿ, ತುಮಕೂರು ಉಪ-ವಿಭಾಗ,ತುಮಕೂರು, ರವರಿಗೆ ಲಿಖಿತ ಮೂಲಕ ಸಲ್ಲಿಸತಕ್ಕದ್ದು. ಕರ್ನಾಟಕ ಸರ್ಕಾರದ ಅಧಿಸೂಚನೆ LAQ/SR/39/2011-12ನ್ನು ನೋಡಿ.

ಸದರಿ ಜಮೀನಿನ ಅಧಿಕೃತ ಸಂಗ್ರಹಣೆಗಾಗಿ ನಿಯೋಜಿಸಲ್ಪಟ್ಟ ಮೋಜಿಣಿದಾರರ ಅಥವಾ ಬೇರೆ ವ್ಯಕ್ತಿಗಳಿಗೆ ಅಡಚಣೆವುಂಟು ಮಾಡುವುದಾಗಲೀ ಅಥವಾ ಅತಿಕ್ರಮಿಸುವುದಾಗಲೀ ಮಾಡಬಾರದೆಂದು ಸದರಿ ಜಮೀನಿನಲ್ಲಿ ಆಸಕ್ತಿಯುಳ್ಳ ಎಲ್ಲರಿಗೂ ಈ ಮೂಲಕ ಎಚ್ಚರಿಕೆ ಕೊಡಲಾಗಿದೆ. ಸದರಿ ಜಮೀನಿನ ವಿಲೇವಾರಿಗಾಗಿ ಮಾರಾಟ ಗುತ್ತಿಗೆ, ಅಡಮಾನ, ಹಸ್ತಾಂತರಣ, ವಿನಿಮಯ ಅಥವಾ ಇನ್ನಾವುದೇ ರೀತಿಯ ಒಪ್ಪಂದಗಳನ್ನು ಅಥವಾ ಯಾವೊಂದು ವೆಚ್ಚವು ಅಭಿವೃದ್ಧಿಗಳನ್ನು ಈ ಅಧಿಸೂಚನೆಯು ಪ್ರಕಟವಾದ ನಂತರ ಜಿಲ್ಲಾಧಿಕಾರಿಗಳು, Tumkur ಜಿಲ್ಲೆ ರವರ ಮಂಜೂರಾತಿಯನ್ನು ಪಡೆಯದೇ ಮಾಡಿದ ಪಕ್ಷದಲ್ಲಿ ಅಂತಿಮವಾಗಿ ಅಧಿಕೃತ ಸಂಗ್ರಹಣೆಗಾಗಿ ಮಾಡಲಾದ ಅಂತಹ ಭಾಗಗಳಿಗೆ ಪರಿಹಾರ ಧನವನ್ನು ನಿರ್ದರಿಸುವ ಅಧಿಕಾರಿಯಿಂದ ಸದರಿ ಅಧಿನಿಯಮ 24ನೇ ಪ್ರಕರಣ 7ನೇ ಖಂಡದ ಮೇರೆಗೆ ಉಪೇಕ್ಷಿಸಲಾಗುವುದು.

ಸದರಿ ಜಮೀನಿನ ಒಂದು ಕರಡು ನಕ್ಷೆಯನ್ನು ಸಹಾಯಕ ಆಯುಕ್ತರು,ಸಹಾಯಕ ಅಯುಕ್ತರ ಕಛೇರಿ, ತುಮಕೂರು ಉಪ-ವಿಭಾಗ, ಇವರ ಕಾರ್ಯಾಲಯದಲ್ಲಿ ಪರಿಶೀಲನೆಗಾಗಿ ಇಡಲಾಗಿದೆ.

ಅನುಸೂಚಿ

ಲ್ಲ : Tumkur ತಾಲ್ಲೂಕು : Gubbi ಹೋಬಳಿ : ಕಸಬಾ ಗ್ರಾಮ : ಗುಬ್ಬಿ

gricultural

ಕ್ರ.ಸ.	ಖಾತೆದಾರರ ಹೆಸರು	ಸಾಗುವಳಿದಾರರು	ಸರ್ವೆ ನಂ	ತರಹೆ	ಚಕ್ಕು ಬಂದಿ				ಭೂ ಸ್ವಾಧೀನ ವಿವರ	
					ಉತ್ತರ	ದಕ್ಷಿಣ	ಪಶ್ಚಿಮ	ಪೂರ್ವ	ವಿಸ್ತೀರ್ಣ	ಮೌಲ್ಯ
1	ಜ.ಕೆ.ಅಬ್ಬಾಸ್‌ಜಬ್ಬರ್‌ಸಾಬ್ /		355/*/1B1	ಖುಷ್ಕಿ	355/5	16	355/1B2	355/1A	0.1.0	0-05
									0.1.0	
2	ಎನ್.ಎ.ಏರಾಬು /		355/*/5	ಖಾಲಿಜಾಗ	355/1A	355/1A,1B	355/1A	355/1A	0.2.0	
									0.2.0	
3	ಎನ್.ಎ.ಏರಾಬು /		355/*/1 B2	ಖಾಲಿಜಾಗ	355/1A,5	16	355/1C, 2E3, 2E2	355/1B1	0.8.0	

0.8.0

Village Extents: 0.11.0

Agricultural Total Extents: 0.11.0

DESIGNATION : ಸಹಾಯಕ ಆಯುಕ್ತರು

LAOCIRCLE : ಸಹಾಯಕ ಆಯುಕ್ತರ ಕಛೇರಿ, ತುಮಕೂರು ಉಪ-ವಿಭಾಗ

LAOLOCATION : ತುಮಕೂರು

ಜಿಲ್ಲಾಧಿಕಾರಿಗಳು

Tumkur ಜಿಲ್ಲೆ.

PR - 68

ಕಂದಾಯ ಸಚಿವಾಲಯ

ಭೂಸ್ವಾಧೀನ ಕಾಯ್ದೆ ಕಲಂ 6(1) ರ ಅನ್ವಯ ಘೋಷಣೆ

ಕ್ರಮಾಂಕ : / ಕಂ.ಇ/234/ಭೂಸ್ವಾಬೆ/ 2011 ದಿನಾಂಕ: 09-03-2012

ಈ ಮುಂದಿನ ಅನುಸೂಚಿಯಲ್ಲಿ ನಿರ್ದಿಷ್ಟ ಪಡಿಸಿರುವ ಜಮೀನು ಸಾರ್ವಜನಿಕ ಉದ್ದೇಶಕ್ಕೆ ಅಂದರೆ, ಬೆಂಗಳೂರು ಕರ್ನಾಟಕ ಗೃಹ ಮಂಡಳಿಯವರು ವಿವಿಧ ವರ್ಗದವರಿಗೆ ನಿವೇಶನ / ಮನೆಗಳನ್ನು ಕಟ್ಟಲು ವಸತಿ ಯೋಜನೆಗೆ ಬೇಕಾಗಬಹುದೆಂದು ಗೃಹ ಮಂಡಳಿಯ ಆಯುಕ್ತರವರ ಕ್ರಮಾಂಕ:ಕ.ಗೃ.ಮಂ/ಭೂಸ್ವಾವಿ/1/52/2001-02 ದಿನಾಂಕ: 16-4-2001 ರ ಅಧಿಸೂಚನೆಯಲ್ಲಿ ತಿಳಿಯಪಡಿಸಲಾಗಿತ್ತು. 6(1) ರ

ಅಧಿಸೂಚನೆಯನ್ನು ಸರ್ಕಾರ / ಕಂ.ಇ./35/ಭೂ.ಸ್ವಾಬೆಂ/2002 ದಿನಾಂಕ 21-9-2002 ರಲ್ಲಿ ಹೊರಡಿಸಿ ರಾಜ್ಯಪತ್ರದಲ್ಲಿ ದಿನಾಂಕ 24-10-2002 ರಲ್ಲಿ ಪ್ರಕಟಿಸಿತ್ತು ಕಲಂ 9 ಮತ್ತು 10 ರ ವಿಚಾರಣೆ ಹಂತದಲ್ಲಿ ಕೆಲವು ಹಿತಾಸಕ್ತದಾರರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 26533/2003(ಎಲ್.ಎ.ಆರ್.ಇ.ಎಸ್) ರಲ್ಲಿ ಭೂಸ್ವಾಧೀನ ನಡವಳಿಯನ್ನು ಪ್ರಶ್ನಿಸಿದರ ಮೇರೆಗೆ ಮಾನ್ಯ ಉಚ್ಚ ನ್ಯಾಯಾಲಯ ದಿನಾಂಕ 9-6-2003 ರಂದು ಅಂತಿಮ ಅಧಿಸೂಚನೆಗೆ ತಡೆಯಾಜ್ಞೆ ನೀಡಿ ದಿನಾಂಕ 8-11-2006 ರಂದು ಸರ್ಕಾರ ಹೊರಡಿಸಿದ್ದ ದಿನಾಂಕ 21-9-2002 ಮತ್ತು ರಾಜ್ಯಪತ್ರದ ಪ್ರಕಟಣೆ ದಿನಾಂಕ 24-10-2002 ರ ಅಂತಿಮ ಅಧಿಸೂಚನೆಯನ್ನು ವಜಾ ಮಾಡಿ 4(1) ರ ಅಧಿಸೂಚನೆಯಿಂದ ನಡವಳಿಯನ್ನು ಮುಂದುವರೆಸಿ, ರಿಟ್ ಅರ್ಜಿದಾರರಿಗೆ ಈ ಆದೇಶ ಹೊರಡಿಸಿದ ದಿನಾಂಕದಿಂದ 30 ದಿನಗಳ ಒಳಗಾಗಿ ಆಕ್ಷೇಪಣೆಯನ್ನು ಸಲ್ಲಿಸಬೇಕೆಂದು, ಸಂಬಂಧಿಸಿದ ಭೂಸ್ವಾಧೀನಾಧಿಕಾರಿಗಳು, ಅವರುಗಳು ಸಲ್ಲಿಸುವ ಆಕ್ಷೇಪಣೆಯನ್ನು ಪರಿಗಣಿಸಿ ನಡವಳಿಯನ್ನು ಮುಂದುವರೆಸಬಹುದೆಂದು ಆದೇಶಿಸಿತ್ತು.

ಮಾನ್ಯ ನ್ಯಾಯಾಲಯದ ಆದೇಶದ ಅನುಸಾರ ರಿಟ್ ಅರ್ಜಿದಾರರು ಸಲಿಸಿದ್ದ ಆಕ್ಷೇಪಣೆಗಳನ್ನು ಕೂಲಂಕುಶವಾಗಿ ಪರಿಗಣಿಸಿ, ಸಾಕಷ್ಟು ಕಾಲಾವಕಾಶ ನೀಡಿ ಪ್ರಸ್ತಾವಿತ ಭೂಸ್ವಾಧೀನದ ಜಮೀನುಗಳು ಸಾರ್ವಜನಿಕ ಉದ್ದೇಶಕ್ಕೆ ಅಂದರೆ ಗೃಹ ಮಂಡಳಿಯ ವಸತಿಯೋಜನೆಗೆ ಅವಶ್ಯಕವಾಗಿ ಬೇಕಾಗಿರುವುದನ್ನು ಮನಗಂಡು ಅರ್ಜಿದಾರರ ಆಕ್ಷೇಪಣೆಯನ್ನು ತಳ್ಳಿಹಾಕಿ ಸರ್ಕಾರಕ್ಕೆ ಕಲಂ 5(ಎ) ರಂತೆ ವರದಿಯನ್ನು ಸಲ್ಲಿಸಿ ಕಲಂ 6(1-ಎ) ರಂತೆ ಸರ್ಕಾರದ ನಿರ್ದೇಶನ ಕೋರಲಾಯಿತು. ಹಾಗೂ ರಿಟ್ ಅರ್ಜಿದಾರರನ್ನು ಹಿತಾಸಕ್ತಿಗಳೆಂದು ಪರಿಗಣಿಸಿ ಕಲಂ 6(1) ರ ಅಧಿಸೂಚನೆಯಲ್ಲಿ ಅಧಿಸೂಚಿಸಿ ಸರ್ಕಾರದ ಆದೇಶ ಸಂಖ್ಯೆ : ಕಂ.ಇ/133/ಭೂಸ್ವಾಬೆಂ /2007 ದಿನಾಂಕ 19-7-2007 ರಂದು ಹೊರಡಿಸಿ, ರಾಜ್ಯಪತ್ರದಲ್ಲಿ ದಿನಾಂಕ: 4-10-2007 ರಂದು ಪ್ರಕಟಿಸಿರುತ್ತದೆ. ಶ್ರೀ. ಸುರೇಶ್‌ಜುಗುರಾಜ್ ಮತ್ತು ಇತರರು 4(1) ರ ಅಧಿಸೂಚನೆ ದಿನಾಂಕ 16-4-2001 ಮತ್ತು ಕಲಂ 6(1) ರ ಅಧಿಸೂಚನೆ ದಿನಾಂಕ: 19-7-2007 ರ ಅಧಿಸೂಚನೆಗಳ ಸಿಂದುತ್ವವನ್ನು ಪ್ರಶ್ನಿಸಿ, ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 5948/2008 ರಲ್ಲಿ ಸಲ್ಲಿಸಿದ ಮೇರೆಗೆ ಮಾನ್ಯ ಉಚ್ಛನ್ಯಾಯಾಲಯ ದಿನಾಂಕ 5-10-2009 ರಂದು ಕಲಂ 6(1) ರ ಅಧಿಸೂಚನೆಯು ಕಲಂ 6(i) (ii) ರಂತೆ ನಿಗಧಿತ ಕಾಲಾವಧಿಯೊಳಗೆ ಹೊರಡಿಸದೇ ಗತಿಸಿಹೋಗಿ ರದ್ದಾಗಿರುವುದರಿಂದ 4(1) ಮತ್ತು 6(1) ರ ಅಧಿಸೂಚನೆಗಳನ್ನು ತಳ್ಳಿಹಾಕಿರುವುದಾಗಿಯೂ, ಪ್ರತಿವಾದಿ (ಗೃಹ ಮಂಡಳಿಯು) ಇಚ್ಛಿಸಿದಲ್ಲಿ ಈ ಜಮೀನಿಗೆ ಹೊಸದಾಗಿ ಕಾನೂನು ರೀತ್ಯಾ ನಡವಳಿಯನ್ನು ಕೈಗೊಳ್ಳಲು ಸ್ವತಂತ್ರ್ಯರಾಗಿರುತ್ತಾರೆಂದು ತೀರ್ಪು ನೀಡಿರುತ್ತದೆ. ಅದರಂತೆ ಗೃಹ ಆಯುಕ್ತರು ಕಲಂ 4(1) ರ ಅಧಿಸೂಚನೆಯನ್ನು ದಿನಾಂಕ 12-3-2010 ರಂದು ಹೊರಡಿಸಿ ರಾಜ್ಯಪತ್ರದಲ್ಲಿ ದಿನಾಂಕ 22-4-2010 ರಂದು ಪ್ರಕಟಿಸಿರುತ್ತದೆ. ಕಲಂ 5(ಎ) ರಂತೆ ವಿಚಾರಣೆ ನಡೆಸಿ ಸರ್ಕಾರದ ಪತ್ರ ಸಂಖ್ಯೆ : ಕಂ.ಇ. /234/ಭೂಸ್ವಾಬೆಂ/ 2011 ದಿನಾಂಕ 28-11-2011 ರಂದು ಕಲಂ 6(1-ಎ) ರಂತೆ ಭೂಸ್ವಾಧೀನ ನಡವಳಿಯನ್ನು ಮುಂದುವರೆಸಲು ನಿರ್ದೇಶನ ಪಡೆದು ಕೆಳಕಂಡಂತೆ ಕಲಂ 6(1) ರಂತೆ ಅಂತಿಮ ಅಧಿಸೂಚನೆಯನ್ನು ಹೊರಡಿಸಿದೆ.

ಕರ್ನಾಟಕ ಸರ್ಕಾರದವರು 1991 ನೇ ಸಾಲಿನ ಕರ್ನಾಟಕ ಅಧಿನಿಯಮ 33 ರಲ್ಲಿ ತಿದ್ದುಪಡಿಯಾದ 1894ನೇ ಸಾಲಿನ ಕೇಂದ್ರ ಅಧಿನಿಯಮ (1) 5ಎ ಪ್ರಕರಣ ಉಪಪ್ರಕರಣ (2) ಮತ್ತು 6(1ಎ) ಪ್ರಕರಣದ ಮೇರೆಗೆ ಗೃಹ ಆಯುಕ್ತರ ವರದಿಯನ್ನು ಪರಿಶೀಲಿಸಿದ ನಂತರ ಮೇಲೆ ಹೇಳಿದ ಉದ್ದೇಶಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳುವುದು ಅವಶ್ಯಕವೆಂದು ಪರಿಗಣಿಸಿದ್ದಾರೆ. ಸದರಿ ಭೂಸ್ವಾಧೀನ ಅಧಿನಿಯಮ 6ನೇ ಪ್ರಕರಣದ ಮೇರೆಗೆ ಸದರಿ ಜಮೀನು ಮೇಲಿನ ಉದ್ದೇಶಕ್ಕಾಗಿ ಬೇಕಾಗಿರುವುದೆಂದು ಈ ಮೂಲಕ ಘೋಷಿಸಲಾಗಿದೆ.

ಸದರಿ ಭೂಸ್ವಾಧೀನ ಅಧಿನಿಯಮ 3ನೇ ಪ್ರಕರಣದ (ಸಿ) ಖಂಡದ ಮೇರೆಗೆ ವಿಶೇಷ ಭೂಸ್ವಾಧೀನ ಅಧಿಕಾರಿಗಳು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರನ್ನು ಸದರಿ ಜಮೀನಿನ ಸಂಬಂದದಲ್ಲಿ ಮುಂದಿನ ಎಲ್ಲ ನಡವಳಿಕೆಗಳನ್ನು ಕೈಗೊಳ್ಳಲು ಗೃಹ ಆಯುಕ್ತರ ಪ್ರಶಾಸನ ಕಾರ್ಯಗಳನ್ನು ನಿರ್ವಹಿಸುವಂತೆ ಈ ಮೂಲಕ ನಿಯಮಿಸಲಾಗಿದೆ ಮತ್ತು ಸದರಿ ಜಮೀನಿನ ಅಧಿಕೃತ ಸಂಗ್ರಹಣೆಗಾಗಿ ಆದೇಶಗಳನ್ನು ಪಡೆಯುವಂತೆ ಸದರಿ ಅಧಿನಿಯಮದ 7ನೇ ಪ್ರಕರಣದ ಮೇರೆಗೆ ನಿರ್ದೇಶಿಸಲಾಗಿದೆ.

ಸದರಿ ಜಮೀನಿನ ನಕ್ಷೆಯನ್ನು ವಿಶೇಷ ಭೂಸ್ವಾಧೀನ ಅಧಿಕಾರಿಗಳು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರ ಕಾರ್ಯಾಲಯದಲ್ಲಿ ಪರಿಶೀಲನೆಗಾಗಿ ಇಡಲಾಗಿದೆ

ಪರಿಶಿಷ್ಟ

: ಬೆಂಗಳೂರು ತಾಲ್ಲೂಕು: ಬೆಂಗಳೂರು ದಕ್ಷಿಣ ಹೋಬಳಿ : ಕೆಂಗೇರಿ ಗ್ರಾಮ : ಕೆಂಗೇರಿ

ಖಾತೆದಾರರ / ಅನುಭವದಾರರ / ಹಿತಾಸಕ್ತಿ ಉಳ್ಳವರ ಹೆಸರು	ಖಾತೆದಾರರ / ತಕರಾರುದಾರರ ಹಿತಾಸಕ್ತಿ ಉಳ್ಳವರ ಹೆಸರು	ಸರ್ವೆ ನಂ	ತರಹೆ	ಚಕ್ಕುಬಂದಿ				ವಿಸ್ತೀರ್ಣ ಎ-ಗುಂ	ಆಕಾರ ರೂ.ಪೈ.
				ಪೂರ್ವ ಸರ್ವೆ ನಂ	ಪಶ್ಚಿಮ ಸರ್ವೆ ನಂ	ಉತ್ತರ ಸರ್ವೆ ನಂ	ದಕ್ಷಿಣ ಸರ್ವೆ ನಂ		
2	3	4	5	6	7	8	9	10	11
ಕಮಲಾಬಾಯಿ, ಸುರೇಶ್ ಕುಮಾರ್, ಅಶೋಕ್ ಕುಮಾರ್, ದಿನೇಶ್ ಕುಮಾರ್, ದಿಲೀಪ್ ಕುಮಾರ್, ಎಂ. ತಿಮ್ಮೇಗೌಡ ಬಿನ್ ಲೇಟ್ ಮುತ್ತೇಗೌಡ	ಕಮಲಾಬಾಯಿ, ಸುರೇಶ್ ಕುಮಾರ್, ಅಶೋಕ್ ಕುಮಾರ್, ದಿನೇಶ್ ಕುಮಾರ್, ದಿಲೀಪ್ ಕುಮಾರ್, ಎಂ. ತಿಮ್ಮೇಗೌಡ ಬಿನ್ ಲೇಟ್ ಮುತ್ತೇಗೌಡ	202	ಖುಷ್ಕಿ	201, 203	168	204	168	10-07 8-20ಖ	10.69
ಕಮಲಾಬಾಯಿ, ಸುರೇಶ್ ಕುಮಾರ್, ಅಶೋಕ್ ಕುಮಾರ್, ದಿನೇಶ್ ಕುಮಾರ್, ದಿಲೀಪ್ ಕುಮಾರ್, ಎಂ. ತಿಮ್ಮೇಗೌಡ ಬಿನ್ ಲೇಟ್ ಮುತ್ತೇಗೌಡ	ಕಮಲಾಬಾಯಿ, ಸುರೇಶ್ ಕುಮಾರ್, ಅಶೋಕ್ ಕುಮಾರ್, ದಿನೇಶ್ ಕುಮಾರ್, ದಿಲೀಪ್ ಕುಮಾರ್, ಎಂ. ತಿಮ್ಮೇಗೌಡ ಬಿನ್ ಲೇಟ್ ಮುತ್ತೇಗೌಡ	204	ಖುಷ್ಕಿ	202, 203	ಕೊಮ್ಮಘಟ್ಟ ಗಡಿ	205	202	16-09 3-08ಖ	15.42

ಘೋಷ್ವಾರೆ

ಗ್ರಾಮ: -ಕೆಂಗೇರಿ

ತರಹೆ	ವಿಸ್ತೀರ್ಣ ಎ-ಗುಂ
ಖುಷ್ಕಿ	26-16
ಖರಾಬು	11-28
ಒಟ್ಟು	**38-04**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ. ವೆಂಕಟೇಶಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ, (ಭೂಸ್ವಾಧೀನ-2 ಮತ್ತು ಪುನರ್ವಸತಿ).

...ರ್. 67

ಜಿಲ್ಲಾಧಿಕಾರಿಗಳ ಕಾರ್ಯಾಲಯ, Chitradurga ಜಿಲ್ಲೆ, Chitradurga

ಭೂಸ್ವಾಧೀನ ಅಧಿನಿಯಮ 1894 (ತಿದ್ದುಪಡಿ ಅಧಿನಿಯಮ 1984) ಕಲಂ 4(1)ರ ಮೇರೆಗೆ ಅಧಿಸೂಚನೆ

ಕ್ರಮಾಂಕ : laq/cr/54/2009-10 ದಿನಾಂಕ 18/04/2012

ಈ ಮುಂದಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಜಮೀನು ಒಂದು ಸಾರ್ವಜನಿಕ ಉದ್ದೇಶಕ್ಕೆ ಅಂದರೆ ಹಿರಿಯೂರು ತಾಲ್ಲೂಕು ಐಮಂಗಲ ಹೋಬಳಿ ಕಂದಿಕೆರೆ ಗ್ರಾಮದ ಕೆರೆಯಲ್ಲಿ ಮುಳುಗಡೆ ಮೀನನ್ನು ಭೂ ಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ ಎಂದು ಕರ್ನಾಟಕ ಸರ್ಕಾರದವರಿಗೆ ಕಂಡು ಬಂದಿರುವುದರಿಂದ.

ಕರ್ನಾಟಕ ಅಧಿನಿಯಮ 1961 ರ 17ರ ಮೂಲಕ ತಿದ್ದುಪಡಿಯಾದ ಭೂಸ್ವಾಧೀನ ಅಧಿನಿಯಮ 1894 (ಕೇಂದ್ರ) ಅಧಿನಿಯಮ ಸಂಖ್ಯೆ 1984ರ 4ನೇ ಪ್ರಕರಣ (1)ನೇ ಉಪಪ್ರಕರಣದ ಪಬಂದಗಳ ಅನುಸಾರವಾಗಿ ಅದಕ್ಕೆ ಸಂಬಂದಪಟ್ಟ ಎಲ್ಲರಿಗೂ ಈ ಬಗ್ಗೆ ಈ ಮೂಲಕ ನೋಟೀಸುಗಳನ್ನು ಕೊಡಲಾಗಿದೆ ಹಾಗೂ ಕರ್ನಾಟಕ ಸರ್ಕಾರದ ಅಧಿನಿಯಮ 4(2)ನೇ ಪ್ರಕರಣದ ಮೂಲಕ ದತ್ತವಾದ ಅಧಿಕಾರಿಗಳನ್ನು ಚಲಾಯಿಸಲು ಸಹಾಯಕ ಆಯುಕ್ತರು ಚಿತ್ರದುರ್ಗ ಇವರ ಸಿಬ್ಬಂದಿ ಹಾಗೂ ಕೆಲಸಗಾರರಿಗೆ ಈ ಮೂಲಕ ಅಧಿಕಾರ ನೀಡಿರುತ್ತೆ.

ಸದರಿ ಅದಿನಿಯಮದ 3(ಸಿ) ಪ್ರಕರಣದ ಮೇರೆಗೆ ಕರ್ನಾಟಕ ಸರ್ಕಾರದ ಅಧಿನಿಯಮದ ಪ್ರಕರಣದ ಮೇರೆಗೆ ಜಿಲ್ಲಾದಿಕಾರಿಯವರ ಕಾರ್ಯಗಳನ್ನು ನಿರ್ವಹಿಸಲು ಸಹಾಯಕ ಆಯುಕ್ತರು ,ಸಹಾಯಕ ಯುಕ್ತರ ಕಛೇರಿ, ಚಿತ್ರದುರ್ಗ ಉಪ-ವಿಭಾಗ,ಚಿತ್ರದುರ್ಗ ಇವರನ್ನು ನೇಮಕ ಮಾಡಿರುತ್ತೆ.

ಸದರಿ ಜಮೀನಿನಲ್ಲಿ ಆಸಕ್ತಿಯುಳ್ಳ ಯಾರೊಬ್ಬ ವ್ಯಕ್ತಿಯು ಈ ಬಗ್ಗೆ ಆಕ್ಷೇಪಣೆಗಳನ್ನು ಮಾಡುವುದಿದ್ದರೆ ಅಂತಹ ಆಕ್ಷೇಪಣೆಗಳನ್ನು ಈ ಅಧಿಸೂಚನೆಯು ಪ್ರಕಟವಾದ 30 ದಿನಗಳ ಒಳಗಾಗಿ 91ನೇ ಸಾಲಿನ ಕರ್ನಾಟಕ ಅಧಿನಿಯಮ 33ರಲ್ಲಿ ತಿದ್ದುಪಡಿಯಾದ 1894ನೇ ಸಾಲಿನ ಭೂ ಸಂಗ್ರಹಣಾ ಅಧಿನಿಯಮ 3(ಸಿ) ಪ್ರಕರಣದ ಮೇರೆಗೆ ಜಿಲ್ಲಾಧಿಕಾರಿಯವರ ಪ್ರಶಾಸನ ಕಾರ್ಯಗಳನ್ನು ರ್ವಹಿಸಲು ಕರ್ನಾಟಕ ಸರ್ಕಾರವು ನೇಮಕ ಮಾಡಲಾದ ಸಹಾಯಕ ಆಯುಕ್ತರು ,ಸಹಾಯಕ ಆಯುಕ್ತರ ಕಛೇರಿ, ಚಿತ್ರದುರ್ಗ ಉಪ-ವಿಭಾಗ,ಚಿತ್ರದುರ್ಗ, ರವರಿಗೆ ಲಿಖಿತ ಮೂಲಕ ಸಲ್ಲಿಸತಕ್ಕದ್ದು. ಕರ್ನಾಟಕ ರ್ಕಾರದ ಅಧಿಸೂಚನೆ laq/cr/54/2009-10ನ್ನು ನೋಡಿ.

ಸದರಿ ಜಮೀನಿನ ಅಧಿಕೃತ ಸಂಗ್ರಹಣೆಗಾಗಿ ನಿಯೋಜಿಸಲ್ಪಟ್ಟ ಮೋಜಿಣಿದಾರರ ಅಥವಾ ಬೇರೆ ವ್ಯಕ್ತಿಗಳಿಗೆ ಅಡಚಣೆವುಂಟು ಮಾಡುವುದಾಗಲೀ ಅಥವಾ ಅತಿಕ್ರಮಿಸುವುದಾಗಲೀ ಮಾಡಬಾರದೆಂದು ದರಿ ಜಮೀನಿನಲ್ಲಿ ಆಸಕ್ತಿಯುಳ್ಳ ಎಲ್ಲರಿಗೂ ಈ ಮೂಲಕ ಎಚ್ಚರಿಕೆ ಕೊಡಲಾಗಿದೆ. ಸದರಿ ಜಮೀನಿನ ವಿಲೇವಾರಿಗಾಗಿ ಮಾರಾಟ ಗುತ್ತಿಗೆ, ಅಡಮಾನ, ಹಸ್ತಾಂತರಣ, ವಿನಿಮಯ ಅಥವಾ ಇನ್ನಾವುದೇ ತಿಯ ಒಪ್ಪಂದಗಳನ್ನು ಅಥವಾ ಯಾವೊಂದು ವೆಚ್ಚವು ಅಭಿವೃದ್ಧಿಗಳನ್ನು ಈ ಅಧಿಸೂಚನೆಯು ಪ್ರಕಟವಾದ ನಂತರ ಜಿಲ್ಲಾಧಿಕಾರಿಗಳು, Chitradurga ಜಿಲ್ಲೆ ರವರ ಮಂಜೂರಾತಿಯನ್ನು ಪಡೆಯದೇ ಡಿದ ಪಕ್ಷದಲ್ಲಿ ಅಂತಿಮವಾಗಿ ಅಧಿಕೃತ ಸಂಗ್ರಹಣೆಗಾಗಿ ಮಾಡಲಾದ ಅಂತಹ ಭಾಗಗಳಿಗೆ ಪರಿಹಾರ ಧನವನ್ನು ನಿರ್ದರಿಸುವ ಅಧಿಕಾರಿಯಿಂದ ಸದರಿ ಅಧಿನಿಯಮ 24ನೇ ಪ್ರಕರಣ 7ನೇ ಖಂಡದ ಮೇರೆಗೆ ಪೇಕ್ಷಿಸಲಾಗುವುದು.

ಸದರಿ ಜಮೀನಿನ ಒಂದು ಕರಡು ನಕ್ಷೆಯನ್ನು ಸಹಾಯಕ ಆಯುಕ್ತರು, ಸಹಾಯಕ ಆಯುಕ್ತರ ಕಛೇರಿ, ಚಿತ್ರದುರ್ಗ ಉಪ-ವಿಭಾಗ, ಇವರ ಕಾರ್ಯಾಲಯದಲ್ಲಿ ಪರಿಶೀಲನೆಗಾಗಿ ಇಡಲಾಗಿದೆ.

ಅನುಸೂಚಿ

ಜಿಲ್ಲೆ : Chitradurga ತಾಲ್ಲೂಕು : Hiriyur ಹೋಬಳಿ : ಐಮಂಗಲ ಗ್ರಾಮ : ಕಂದಿಕೆರೆ

ricultural

ಕ್ರ.ಸ.	ಖಾತೆದಾರರ ಹೆಸರು	ಸಾಗುವಳಿದಾರರು	ಸರ್ವೆ ನಂ	ತರಹೆ	ಚಕ್ಕು ಬಂದಿ				ಭೂ ಸ್ವಾಧೀನ ವಿವರ	
					ಉತ್ತರ	ಪೂರ್ವ	ದಕ್ಷಿಣ	ಪಶ್ಚಿಮ	ವಿಸ್ತೀರ್ಣ	ಮೌಲ್ಯ
1.	ಎಂ.ಕೃಷ್ಣಪ್ಪ /ಲೇಟ್.ಮಲ್ಲಪ್ಪ		11/*/*	ಖುಷ್ಕಿ	ಲಾ.ಸ.ನಂ.12	ಬ್ಲಾಕ್ ನಂ 1	ಲಾ.ಸ.ನಂ.10	ಬ್ಲಾಕ್ ನಂ 3	2.2.0	1.62

2.2.0

Village Extents: 2.2.0

Agricultural Total Extents: 2.2.0

DESIGNATION : ಸಹಾಯಕ ಆಯುಕ್ತರು

LAOCIRCLE : ಸಹಾಯಕ ಆಯುಕ್ತರ ಕಛೇರಿ, ಚಿತ್ರದುರ್ಗ ಉಪ-ವಿಭಾಗ

LAOLOCATION : ಚಿತ್ರದುರ್ಗ

ಜಿಲ್ಲಾಧಿಕಾರಿಗಳು

Chitradurga ಜಿಲ್ಲೆ

PR - 70

ಜಿಲ್ಲಾಧಿಕಾರಿಗಳ ಕಾರ್ಯಾಲಯ, Chitradurga ಜಿಲ್ಲೆ, Chitradurga

ಭೂಸ್ವಾಧೀನ ಅಧಿನಿಯಮ 1894 (ತಿದ್ದುಪಡಿ ಅಧಿನಿಯಮ 1984) ಕಲಂ 4(1)ರ ಮೇರೆಗೆ ಅಧಿಸೂಚನೆ

ಕ್ರಮಾಂಕ : LAQ/CR/27/2010-11 ದಿನಾಂಕ 18/04/2012

ಈ ಮುಂದಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಜಮೀನು ಒಂದು ಸಾರ್ವಜನಿಕ ಉದ್ದೇಶಕ್ಕೆ ಅಂದರೆ ಚಳ್ಳಕೆರೆ ಪಟ್ಟಣ್ಣಕ್ಕೆ ನೀರು ಸರಬರಾಜು ಒತ್ತಡ ನಿಯಂತ್ರಣ ಘಟಕ ಎಂದು ಕರ್ನಾಟಕ ಸರ್ಕಾರದವರಿಗೆ ಕಂಡು ಬಂದಿರುವುದರಿಂದ, ಕರ್ನಾಟಕ ಅಧಿನಿಯಮ 1961 ರ 17ರ ಮೂಲಕ ತಿದ್ದುಪಡಿಯಾದ ಭೂಸ್ವಾಧೀನ ಅಧಿನಿಯಮ 1894 (ಕೇಂದ್ರ) ಅಧಿನಿಯಮ ಸಂಖ್ಯೆ 1984ರ 4ನೇ ಪ್ರಕರಣ (1)ನೇ ಉಪಪ್ರಕರಣದ ಉಪಬಂದಗಳ ಅನುಸಾರವಾಗಿ ಅದಕ್ಕೆ ಸಂಬಂದಪಟ್ಟ ...ರಿಗೂ ಈ ಬಗ್ಗೆ ಈ ಮೂಲಕ ನೋಟೀಸುಗಳನ್ನು ಕೊಡಲಾಗಿದೆ ಹಾಗೂ ಕರ್ನಾಟಕ ಸರ್ಕಾರದ ಅಧಿನಿಯಮ 4(2)ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಿಗಳನ್ನು ಚಲಾಯಿಸಲು ಸಹಾಯಕ ಆಯುಕ್ತರು ಚಿತ್ರದುರ್ಗ ಇವರ ಸಿಬ್ಬಂದಿ ಹಾಗೂ ...ಸಗಾರರಿಗೆ ಈ ಮೂಲಕ ಅಧಿಕಾರ ನೀಡಿರುತ್ತೆ.

ಸದರಿ ಅದಿನಿಯಮದ 3(ಸಿ) ಪ್ರಕರಣದ ಮೇರೆಗೆ ಕರ್ನಾಟಕ ಸರ್ಕಾರದ ಅಧಿನಿಯಮದ ಪ್ರಕರಣದ ಮೇರೆಗೆ ಜಿಲ್ಲಾದಿಕಾರಿಯವರ ಕಾರ್ಯಗಳನ್ನು ನಿರ್ವಹಿಸಲು ಸಹಾಯಕ ಆಯುಕ್ತರು ,ಸಹಾಯಕ ಆಯುಕ್ತರ ಕಛೇರಿ, ಚಿತ್ರದುರ್ಗ ಉಪ-...ಾಗ,ಚಿತ್ರದುರ್ಗ ಇವರನ್ನು ನೇಮಕ ಮಾಡಿರುತ್ತೆ.

ಸದರಿ ಜಮೀನಿನಲ್ಲಿ ಆಸಕ್ತಿಯುಳ್ಳ ಯಾರೊಬ್ಬ ವ್ಯಕ್ತಿಯು ಈ ಬಗ್ಗೆ ಆಕ್ಷೇಪಣೆಗಳನ್ನು ಮಾಡುವುದಿದ್ದರೆ ಅಂತಹ ಆಕ್ಷೇಪಣೆಗಳನ್ನು ಈ ಅಧಿಸೂಚನೆಯು ಪ್ರಕಟವಾದ 30 ದಿನಗಳ ಒಳಗಾಗಿ 1991ನೇ ಸಾಲಿನ ಕರ್ನಾಟಕ ಅಧಿನಿಯಮ 3ರಲ್ಲಿ ತಿದ್ದುಪಡಿಯಾದ 1894ನೇ ಸಾಲಿನ ಭೂ ಸಂಗ್ರಹಣಾ ಅಧಿನಿಯಮ 3(ಸಿ) ಪ್ರಕರಣದ ಮೇರೆಗೆ ಜಿಲ್ಲಾಧಿಕಾರಿಯವರ ಪ್ರಶಾಸನ ಕಾರ್ಯಗಳನ್ನು ನಿರ್ವಹಿಸಲು ಕರ್ನಾಟಕ ಸರ್ಕಾರವು ನೇಮಕ ಮಾಡಲಾದ ಸಹಾಯಕ ಆಯುಕ್ತರು ,ಸಹಾಯಕ ಆಯುಕ್ತರ ಕಛೇರಿ, ಚಿತ್ರದುರ್ಗ ಉಪ-ವಿಭಾಗ,ಚಿತ್ರದುರ್ಗ, ರವರಿಗೆ ಲಿಖಿತ ಮೂಲಕ ಸಲ್ಲಿಸತಕ್ಕದ್ದು. ಕರ್ನಾಟಕ ಸರ್ಕಾರದ ಅಧಿಸೂಚನೆ LAQ/CR/27/2010-11ನ್ನು ನೋಡಿ.

ಸದರಿ ಜಮೀನಿನ ಅಧಿಕೃತ ಸಂಗ್ರಹಣೆಗಾಗಿ ನಿಯೋಜಿಸಲ್ಪಟ್ಟ ಮೋಜಿಣಿದಾರರ ಅಥವಾ ಬೇರೆ ವ್ಯಕ್ತಿಗಳಿಗೆ ಅಡಚಣೆವುಂಟು ಮಾಡುವುದಾಗಲೀ ಅಥವಾ ಅತಿಕ್ರಮಿಸುವುದಾಗಲೀ ಮಾಡಬಾರದೆಂದು ಸದರಿ ಜಮೀನಿನಲ್ಲಿ ಆಸಕ್ತಿಯುಳ್ಳ ಎಲ್ಲರಿಗೂ ಈ ಮೂಲಕ ಎಚ್ಚರಿಕೆ ಕೊಡಲಾಗಿದೆ. ಸದರಿ ಜಮೀನಿನ ವಿಲೇವಾರಿಗಾಗಿ ಮಾರಾಟ ಗುತ್ತಿಗೆ, ಅಡಮಾನ, ಹಸ್ತಾಂತರಣ, ವಿನಿಮಯ ಅಥವಾ ಇನ್ನಾವುದೇ ರೀತಿಯ ಒಪ್ಪಂದಗಳನ್ನು ಅಥವಾ ಯಾವೊಂದು ವೆಚ್ಚವು ಅಭಿವೃದ್ಧಿಗಳನ್ನು ಈ ಅಧಿಸೂಚನೆಯು ಪ್ರಕಟವಾದ ನಂತರ ಜಿಲ್ಲಾಧಿಕಾರಿಗಳು, Chitradurga ಜಿಲ್ಲೆ ರವರ ಮಂಜೂರಾತಿಯನ್ನು ಪಡೆಯದೇ ಮಾಡಿದ ಪಕ್ಷದಲ್ಲಿ ಅಂತಿಮವಾಗಿ ಅಧಿಕೃತ ಸಂಗ್ರಹಣೆಗಾಗಿ ಮಾಡಲಾದ ಅಂತಹ ಭಾಗಗಳಿಗೆ ಪರಿಹಾರ ಧನವನ್ನು ನಿರ್ಧರಿಸುವ ಅಧಿಕಾರಿಯಿಂದ ಸದರಿ ಅಧಿನಿಯಮ 24ನೇ ಪ್ರಕರಣ 7ನೇ ಖಂಡದ ಮೇರೆಗೆ ಉಪೇಕ್ಷಿಸಲಾಗುವುದು.

ಸದರಿ ಜಮೀನಿನ ಒಂದು ಕರಡು ನಕ್ಷೆಯನ್ನು ಸಹಾಯಕ ಆಯುಕ್ತರು ,ಸಹಾಯಕ ಆಯುಕ್ತರ ಕಛೇರಿ, ಚಿತ್ರದುರ್ಗ ಉಪ-ವಿಭಾಗ, ಇವರ ಕಾರ್ಯಾಲಯದಲ್ಲಿ ಪರಿಶೀಲನೆಗಾಗಿ ಇಡಲಾಗಿದೆ.

ಅನುಸೂಚಿ

ಜಿಲ್ಲೆ : Chitradurga ತಾಲ್ಲೂಕು : Hiriyur ಹೋಬಳಿ : ಐಮಂಗಲ ಗ್ರಾಮ : ಹೇಮದಳ

Agricultural

ಕ್ರ.ಸ.	ಖಾತೆದಾರರ ಹೆಸರು	ಸಾಗುವಳಿದಾರರು	ಸರ್ವೆ ನಂ	ತರಹೆ	ಚಕ್ಕು ಬಂದಿ				ಭೂ ಸ್ವಾಧೀನ ವಿವರ	
					ಉತ್ತರ	ಪೂರ್ವ	ದಕ್ಷಿಣ	ಪಶ್ಚಿಮ	ವಿಸ್ತೀರ್ಣ	ಮೌಲ್ಯ
1.	ಆರ್.ಮಂಜುನಾಥ /ಎಂ.ರಂಗಪ್ಪ		201/*/*	ಖುಷ್ಕಿ	ರಿ.ಸ.ನಂ. 201 ರಲ್ಲಿ ಉಳಿಕೆ	ಹಿರಿಯೂರು ಬಳ್ಳಾರಿ ರಸ್ತೆ	ಮ್ಯಾಕ್ಲೂರಹಳ್ಳಿ ಗಡಿ	ರಿ.ಸ.ನಂ. 201 ರಲ್ಲಿ ಉಳಿಕೆ	0.9.0	3.98
									0.9.0	
							Village Extents:		0.9.0	
							Agricultural Total Extents:		0.9.0	

DESIGNATION : ಸಹಾಯಕ ಆಯುಕ್ತರು

LAOCIRCLE : ಸಹಾಯಕ ಆಯುಕ್ತರ ಕಛೇರಿ, ಚಿತ್ರದುರ್ಗ ಉಪ-ವಿಭಾಗ

LAOLOCATION : ಚಿತ್ರದುರ್ಗ

ಜಿಲ್ಲಾಧಿಕಾರಿಗಳು

Chitradurga ಜಿಲ್ಲೆ

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಂಗಳೂರು ಜಿಲ್ಲೆ, ಬೆಂಗಳೂರು

ಅಂತಿಮ ಅಧಿಸೂಚನೆ

ಸಂ. ಕೆ.ಎಸ್.ಎ/ಸಿಆರ್/51/11-12, ಬೆಂಗಳೂರು, ದಿನಾಂಕ: 22ನೇ ಮಾರ್ಚ್, 2012.

ಸಂ. ಕೆಎಸ್.ಎ/ಸಿಆರ್/51/11-12, ದಿನಾಂಕ: 14-12-2011ರ ಪ್ರಿಲಿಮಿನರಿ ಅಧಿಸೂಚನೆಯನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿ, ಅದರಲ್ಲಿ ಸದರಿ ಅಧಿಸೂಚನೆಯ ಷೆಡ್ಯೂಲ್‌ನಲ್ಲಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆರ್.ಆರ್.ನಗರ ವಲಯದ ವ್ಯಾಪ್ತಿಯಲ್ಲಿ ಬರುವ ಬೆಂಗಳೂರು ಉತ್ತರ (ಅಪರ) ಯಲಹಂಕ ಹೋಬಳಿ, ಗೊರಗುಂಟೆಪಾಳ್ಯ ಗ್ರಾಮದ, ಸರ್ವೆ ನಂ. 8/1ಬಿ ರಲ್ಲಿ 0-15 ಗುಂಟೆ ವಿಸ್ತೀರ್ಣದಲ್ಲಿರುವ ಗೊರಗುಂಟೆಪಾಳ್ಯ (ಗಿಣಿಶಾಸ್ತ್ರ) ಕೊಳಚೆ ಪ್ರದೇಶವನ್ನು ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನೆ ಕಾಯ್ದೆ 1973ರ ಸೆಕ್ಷನ್ 3ರ ಅಡಿಯಲ್ಲಿ ಪ್ರಾರಂಭಿಕವಾಗಿ ಕೊಳಚೆ ಪ್ರದೇಶವೆಂದು ಘೋಷಿಸಿ, ಸಂಬಂಧಿಸಿದವರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿತ್ತು.

ಆಯುಕ್ತರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಬೆಂಗಳೂರು ಇವರು ಪತ್ರದ ಸಂಖ್ಯೆ : ಕಕೊನಿಮ:ಕಂ:ಘೋ:ಗಿಣಿ/2011-12 ದಿನಾಂಕ : 22-02-2012ರ ಪತ್ರದಲ್ಲಿ ಸದರಿ ಪ್ರಿಲಿಮಿನರಿ ಅಧಿಸೂಚನೆಯನ್ನು ಸಂಬಂಧಿಸಿದ ಕೊಳಚೆ ಪ್ರದೇಶದಲ್ಲಿ ಪ್ರಚುರಪಡಿಸಿ, ಅಂಟಿಸಿ ಛಾಯಾ ಚಿತ್ರವನ್ನು ತೆಗೆದುಕೊಳ್ಳಲಾಗಿದೆಯೆಂದೂ, ಈ ಅಧಿಸೂಚನೆಯ ಬಗ್ಗೆ ಮಂಡಳಿಯಲ್ಲಿ ಈವರೆಗೂ ಯಾರಿಂದಲೂ ಆಕ್ಷೇಪಣೆಗಳು ಸ್ವೀಕೃತವಾಗಿರುವುದಿಲ್ಲವೆಂದೂ, ಈ ಪ್ರದೇಶವನ್ನು ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನೆ) ಕಾಯ್ದೆ 1973ರ ಸೆಕ್ಷನ್ 3 ರಡಿಯಲ್ಲಿ ಅಂತಿಮವಾಗಿ ಕೊಳಚೆ ಪ್ರದೇಶವೆಂದು ಘೋಷಿಸಿ ಅಧಿಸೂಚನೆ ಹೊರಡಿಸುವಂತೆ ಕೋರಿರುತ್ತಾರೆ.

ಪ್ರಶ್ನಿತ ಕೊಳಚೆ ಪ್ರದೇಶದಲ್ಲಿ ಹಿಂದಿನ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಸ್ವಲ್ಪಮಟ್ಟಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದ್ದರೂ ಸಹ ಈಗಲೂ ಇದು ಕೊಳಚೆ ಪ್ರದೇಶದ ಗುಣಲಕ್ಷಣಗಳನ್ನು ಹೊಂದಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಿನಾಂಕ : 16-01-2007 ರಿಂದ ಅಸ್ತಿತ್ವಕ್ಕೆ ಬಂದಿರುವ ಹಿನ್ನೆಲೆಯಲ್ಲಿ ಸದರಿ ಕೊಳಚೆ ಪ್ರದೇಶದಲ್ಲಿನ ನಿವಾಸಿಗಳಿಗೆ ಹಕ್ಕು ಪತ್ರಗಳನ್ನು ನೀಡಲು ಸರ್ಕಾರ ತೀರ್ಮಾನಿಸಿರುವುದರಿಂದ ಈ ಪ್ರದೇಶವನ್ನು ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನೆ) ಕಾಯ್ದೆ 1973 ರಡಿಯಲ್ಲಿ ದತ್ತವಾಗಿರುವ ಅಧಿಕಾರದಂತೆ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಪ್ರದೇಶವನ್ನು ಮೇಲ್ಕಂಡ ಕಾಯ್ದೆಯ ಸೆಕ್ಷನ್ 3 ರಡಿಯಲ್ಲಿ ಅಂತಿಮವಾಗಿ ಕೊಳಚೆ ಪ್ರದೇಶವೆಂದು ಘೋಷಿಸಿರುತ್ತೇನೆ.

-: ಷೆಡ್ಯೂಲ್ :-

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆರ್.ಆರ್. ನಗರ ವಲಯದ ವ್ಯಾಪ್ತಿಯಲ್ಲಿ ಬರುವ ಗೊರಗುಂಟೆಪಾಳ್ಯ ಗ್ರಾಮದ ಗೊರುಗುಂಟೆಪಾಳ್ಯ ಕೊಳಚೆ ಪ್ರದೇಶದ ಚಕ್ಕುಬಂದಿ ಮತ್ತು ಹದ್ದುಬಸ್ತು ತಃಖ್ತೆ.

ಕ್ರ ಸಂ.	ಕೊಳಚೆ ಪ್ರದೇಶದ ಹೆಸರು ಮತ್ತು ಸ್ಥಳ	ಕೊಳಚೆ ಪ್ರದೇಶದಲ್ಲಿರುವ ಜಮೀನಿನ ಮಾಲೀಕರ ಹೆಸರು	ಸರ್ವೆ ನಂ.	ವಿಸ್ತೀರ್ಣ ಎಕರೆ/ ಗುಂಟೆ	ಚೆಕ್ಕುಬಂದಿಗಳು			
					ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1	ಗೊರಗುಂಟೆಪಾಳ್ಯ (ಗಿಣಿಶಾಸ್ತ್ರ)	ಆರ್.ವೆಂಕಟಪ್ಪ ಕೆ.ಎನ್. ನಾರಾಯಣ ಲಕ್ಷ್ಮಿಪತಿ	8/1ಬಿ	0.15	ಖಾಸಗಿ ಕಾರ್ಖಾನೆ	ರಸ್ತೆ	ನಂದಿ ವಯರ್ಸ್	ಖಾಸಗಿ ಖಾಲಿ ಜಾಗ

ಎಂ. ಕೆ. ಅಯ್ಯಪ್ಪ,

ಜಿಲ್ಲಾಧಿಕಾರಿ,
ಬೆಂಗಳೂರು ಜಿಲ್ಲೆ, ಬೆಂಗಳೂರು

ಪಿ.ಆರ್. 69

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ಪತ್ರಿಕೆ

ಭಾಗ – IV-A	ಬೆಂಗಳೂರು, ಶುಕ್ರವಾರ, ಮಾರ್ಚ್ ೩೦, ೨೦೧೨ (ಚೈತ್ರ ೧೦, ಶಕ ವರ್ಷ ೧೯೩೪)	ನಂ. ೨೩೮

TRANSPORT SECRETARIAT

NOTIFICATION

No. SARIE 6 SAENI 2012, Bangalore, Dated: 29.3.2012

In exercise of the powers conferred by sub-clause (1) of section-16 of the Karnataka Motor Vehicle Taxation Act, 1957 (Karnataka Act 35 of 1957) the Government of Karnataka, hereby exempt from payment of Road Tax and also payment of Registration fee to the following Personal Vehicle of Ms. Yvonne Rohner, Attache of the Swiss Consulate General of Switzerland.

Name of the Foreign Representation	:	Ms. Yvonne Rohner, Attache of the Swiss Consulate General of Switzerland.
Personal Vehicle	:	05 CC 3A (Mahindra and Mahindra)

(* Vehicle No. to be assigned by the jurisdictional R.T.O.)

By order and in the name of the Governor of Karnataka,

RAMACHANDRA
Under Secretary to Government,
Transport Department

ವಿಶೇಷ ಪತ್ರಿಕೆ

ಭಾಗ – IV-A	ಬೆಂಗಳೂರು, ಶುಕ್ರವಾರ, ಮಾರ್ಚ್ ೩೦, ೨೦೧೨ (ಚೈತ್ರ ೧೦, ಶಕ ವರ್ಷ ೧೯೩೪)	ನಂ. ೨೩೯

TRANSPORT SECRETARIAT

NOTIFICATION

No. SARIE 5 SAENI 2012, Bangalore, Dated: 29.3.2012

In exercise of the powers conferred by sub-clause (1) of section-16 of the Karnataka Motor Vehicle Taxation Act, 1957 (Karnataka Act 35 of 1957) the Government of Karnataka, hereby exempt from payment of Road Tax and also payment of Registration fee to the following Personal Vehicle of Mr. Ian Felton, British Deputy High Commissioner.

Name of the Foreign Representation : Mr. Ian Felton, British Deputy High Commissioner.

Personal Vehicle : **04 CC 1A (Maruti Wagno R)**

(* Vehicle No. to be assigned by the jurisdictional R.T.O.)

By order and in the name of the Governor of Karnataka,

RAMACHANDRA
Under Secretary to Government,
Transport Department

ವಿಶೇಷ ಪತ್ರಿಕೆ

ಭಾಗ – IV-A	ಬೆಂಗಳೂರು, ಶುಕ್ರವಾರ, ಮಾರ್ಚ್ ೩೦, ೨೦೧೨ (ಚೈತ್ರ ೧೦, ಶಕ ವರ್ಷ ೧೯೩೪)	ನಂ. ೨೪೩

KARNATAKA LEGISLATIVE ASSEMBLY SECRETARIAT

NOTIFICATION

No. KLA/LGA/18/Bill/2012, Bangalore, Dated: 30.3.2012

The following Bill was introduced in Legislative Assembly on 30.3.2012.

ಕರ್ನಾಟಕ ವಿಧಾನ ಸಭೆ

ಹದಿಮೂರನೇ ವಿಧಾನ ಸಭೆ

ಹದಿಮೂರನೇ ಅಧಿವೇಶನ

ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ವಿಧೇಯಕ, 2012

(2012ರ ವಿಧಾನ ಸಭೆಯ ವಿಧೇಯಕ ಸಂಖ್ಯೆ 18)

ರಾಜ್ಯ ಸರ್ಕಾರ ಮತ್ತು ವೃತ್ತಿ ಶಿಕ್ಷಣ ಕೋರ್ಸುಗಳ ಶಿಕ್ಷಣ ನೀಡುತ್ತಿರುವ ಅನುದಾನಿತವಲ್ಲದ ಖಾಸಗಿ ಶಿಕ್ಷಣ ಸಂಸ್ಥೆಗಳ ನಡುವೆ ಮಾಡಿಕೊಳ್ಳಲು ಪ್ರಸ್ತಾವಿಸಲಾದ ಸಮ್ಮತಾಭಿಪ್ರಾಯದ ವ್ಯವಸ್ಥೆ ಅಥವಾ ಒಪ್ಪಂದಕ್ಕೆ ಮಾನ್ಯತೆ ನೀಡುವುದಕ್ಕಾಗಿ ಮತ್ತು 2005 (6) ಎಸ್‌ಸಿಸಿ 537 ರಲ್ಲಿ ವರದಿಯಾದ ಪಿ.ಎ. ಇನಾಂದಾರ್ ಮತ್ತು ಇತರರು – ವಿರುದ್ಧ – ಮಹಾರಾಷ್ಟ್ರ ರಾಜ್ಯ – ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪಿನಲ್ಲಿ ಉಪಬಂಧಿಸಲಾದಂಥ ಇತರ ವಿಷಯಗಳಿಗೆ ಉಪಬಂಧ ಕಲ್ಪಿಸುವುದಕ್ಕಾಗಿ ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಮತ್ತು ರಾಜ್ಯ ಸರ್ಕಾರವು, ಕರ್ನಾಟಕ ನಿವಾಸಿ ವಿದ್ಯಾರ್ಥಿಗಳ ಮತ್ತು ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಹಿತರಕ್ಷಣೆಗಾಗಿ 2006–07, 2007–08, 2008–09, 2009–10, 2010–11 ಮತ್ತು 2011–12 ವರ್ಷಗಳಲ್ಲಿ ಖಾಸಗಿ ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳೊಡನೆ ಸಮ್ಮತಾಭಿಪ್ರಾಯದ ವ್ಯವಸ್ಥೆ ಅಥವಾ ಒಪ್ಪಂದ ಮಾಡಿಕೊಂಡಿರುವುದರಿಂದ ಮತ್ತು 2012–13ನೇ ವರ್ಷದಲ್ಲಿ ಸಮ್ಮತಾಭಿಪ್ರಾಯದ ವ್ಯವಸ್ಥೆ ಅಥವಾ ಒಪ್ಪಂದ ಮಾಡಿಕೊಳ್ಳಲು ಉದ್ದೇಶಿಸಿರುವುದರಿಂದ ಮತ್ತು 2012–13ನೇ ಶೈಕ್ಷಣಿಕ ವರ್ಷದಲ್ಲಿ ಖಾಸಗಿ ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಮತ್ತು ಶುಲ್ಕ ನಿಗದಿಗಾಗಿ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) ಅಧಿನಿಯಮ, 2006ನ್ನು (2006ರ ಕರ್ನಾಟಕ ಅಧಿನಿಯಮ 8) ತಡೆಹಿಡಿಯಬೇಕೆಂದು ಅಭಿಪ್ರಾಯ ಪಟ್ಟಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

1. **ಸಂಕ್ಷಿಪ್ತ ಹೆಸರು, ಪ್ರಾರಂಭ ಮತ್ತು ಅನ್ವಯ.–** (1) ಈ ಅಧಿನಿಯಮವನ್ನು ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ಅಧಿನಿಯಮ, 2012 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

(3) ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) ಅಧಿನಿಯಮ, 2006 ರಲ್ಲಿ (2006ರ ಕರ್ನಾಟಕ ಅಧಿನಿಯಮ 8) ಏನೇ ಒಳಗೊಂಡಿದ್ದರೂ 2012-13ನೇ ಶೈಕ್ಷಣಿಕ ವರ್ಷಕ್ಕಾಗಿ ಅನುದಾನಿತವಲ್ಲದ ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಯಲ್ಲಿ ಪ್ರವೇಶಗಳು ಮತ್ತು ಶುಲ್ಕ ನಿಗದಿ ಈ ಅಧಿನಿಯಮದ ಉಪಬಂಧಗಳ ಅನುಸಾರವಾಗಿ ನಡೆಯತಕ್ಕದ್ದು.

2. ಪರಿಭಾಷೆಗಳು.- ಈ ಅಧಿನಿಯಮದಲ್ಲಿ ಸಂದರ್ಭಕ್ಕೆ ಅನ್ಯಥಾ ಅಗತ್ಯವಿದ್ದ ಹೊರತು,-

(ಎ) "ಸಾಮಾನ್ಯ ಪ್ರವೇಶ ಪರೀಕ್ಷೆ" ಎಂದರೆ, ಏಕಗವಾಕ್ಷಿ ಪ್ರಕ್ರಿಯೆಯ ಮೂಲಕ ವೃತ್ತಿ ಶಿಕ್ಷಣ ವ್ಯಾಸಂಗ ಕ್ರಮಗಳಿಗೆ ಪ್ರವೇಶ ನೀಡುವ ಉದ್ದೇಶಕ್ಕಾಗಿ ಅಭ್ಯರ್ಥಿಗಳ ಅರ್ಹತೆ (ಮೆರಿಟ್) ಯನ್ನು ನಿರ್ಧರಿಸುವುದಕ್ಕಾಗಿ ನಡೆಸಲಾಗುವ ಪರೀಕ್ಷೆ ಮತ್ತು ತರುವಾಯದ ಕೇಂದ್ರೀಯ ಕೌನ್ಸಲಿಂಗ್ ವ್ಯವಸ್ಥೆ;

(ಬಿ) "ಸಾಮಾನ್ಯ ಪ್ರವೇಶ ಪರೀಕ್ಷಾ ಘಟಕ" ಎಂದರೆ, ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸುವ ರಾಜ್ಯ ಸರ್ಕಾರದ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಎಂದು ಕರೆಯಲಾಗುವ ಒಂದು ಏಜೆನ್ಸಿ;

(ಸಿ) "ಸಮ್ಮತಾಭಿಪ್ರಾಯದ ವ್ಯವಸ್ಥೆ ಅಥವಾ ಒಪ್ಪಂದ" ಎಂದರೆ, ವೃತ್ತಿ ಶಿಕ್ಷಣ ಕೋರ್ಸುಗಳಿಗೆ ಪ್ರವೇಶ ಮತ್ತು ಶುಲ್ಕನಿಗದಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಮತ್ತು ಅನುದಾನಿತವಲ್ಲದ ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳ ಸಂಘ ತಮ್ಮ ನಡುವೆ ಮಾಡಿಕೊಳ್ಳಬಹುದಾದ ಯಾವುದೇ ಒಪ್ಪಂದ;

(ಡಿ) "ಸಂಸ್ಥೆ" ಎಂದರೆ, ವೃತ್ತಿ ಶಿಕ್ಷಣ ಕೋರ್ಸ್‌ಗಳ ವಿದ್ಯಾಭ್ಯಾಸ ನೀಡುತ್ತಿರುವ ವೃತ್ತಿ ಶಿಕ್ಷಣ ಸಂಸ್ಥೆಗಳು;

(ಇ) "ಏಕ ಸದಸ್ಯ ನಿಯಂತ್ರಕ ಸಮಿತಿ" ಎಂದರೆ, 3ನೇ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರವು ರಚಿಸಿದ ಸಮಿತಿ;

(ಎಫ್) "ವೃತ್ತಿ ಶಿಕ್ಷಣ ಕೋರ್ಸುಗಳು" ಎಂದರೆ,-

(I) ವೈದ್ಯಕೀಯ ಮತ್ತು ದಂತ ವೈದ್ಯ ಶಿಕ್ಷಣ ಸಂಸ್ಥೆಗಳಲ್ಲಿ,

(ಎ) ಬ್ಯಾಚುಲರ್ ಆಫ್ ಮೆಡಿಸಿನ್ ಮತ್ತು ಬ್ಯಾಚುಲರ್ ಆಫ್ ಸರ್ಜರಿ; ಮತ್ತು

(ಬಿ) ಬ್ಯಾಚುಲರ್ ಆಫ್ ಡೆಂಟಲ್ ಸರ್ಜರಿ

(II) ಇಂಜಿನಿಯರ್ ಸಂಸ್ಥೆಗಳಲ್ಲಿ,

(ಎ) ಬ್ಯಾಚುಲರ್ ಆಫ್ ಇಂಜನಿಯರಿಂಗ್;

(ಬಿ) ಬ್ಯಾಚುಲರ್ ಆಫ್ ಟೆಕ್ನಾಲಜಿ

(ಸಿ) ಬ್ಯಾಚುಲರ್ ಆಫ್ ಆರ್ಕಿಟೆಕ್ಚರ್;

(III) ವೈದ್ಯಕೀಯ ಮತ್ತು ದಂತ ವಿಜ್ಞಾನಗಳ ಸ್ನಾತಕೋತ್ತರ ಪದವಿ ಮತ್ತು ಡಿಪ್ಲೊಮೊ ಕೋರ್ಸುಗಳು;

(IV) ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂಥ ಇತರ ಕೋರ್ಸುಗಳು.

(ಜಿ) "ಅನುದಾನಿತವಲ್ಲದ ಸಂಸ್ಥೆ" ಎಂದರೆ, ರಾಜ್ಯ ಸರ್ಕಾರದಿಂದ ಯಾವುದೇ ಅನುದಾನವನ್ನು ಅಥವಾ ಸಹಾಯಾನುದಾನವನ್ನು ಸ್ವೀಕರಿಸದ ಯಾವುದೇ ಖಾಸಗಿ ಆಡಳಿತವುಳ್ಳ ವೃತ್ತಿ ಶಿಕ್ಷಣ ಸಂಸ್ಥೆ.

3. ಏಕ ಸದಸ್ಯ ನಿಯಂತ್ರಕ ಸಮಿತಿಯ ರಚನೆ.- ರಾಜ್ಯದ ಯಾವುದೇ ವಿಶ್ವವಿದ್ಯಾಲಯದ ಮಾಜಿ ಕುಲಪತಿಯವರು ಸದಸ್ಯರಾಗಿರುವ, ರಾಜ್ಯ ಸರ್ಕಾರವು ನೇಮಿಸಿದ ಒಂದು ಏಕ ಸದಸ್ಯ ನಿಯಂತ್ರಕ ಸಮಿತಿಯು ಇರತಕ್ಕದ್ದು. ಸದರಿ ಏಕಸದಸ್ಯ ನಿಯಂತ್ರಕ ಸಮಿತಿಯು, ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಮಾಡಿಕೊಂಡ ವೃತ್ತಿ ಶಿಕ್ಷಣ ಕೋರ್ಸುಗಳಿಗೆ ಪ್ರವೇಶದ ಮತ್ತು ಸಮ್ಮತಾಭಿಪ್ರಾಯ ವ್ಯವಸ್ಥೆ ಅಥವಾ ಒಪ್ಪಂದದ ಅನುಷ್ಠಾನದ ಮೇಲ್ವಿಚಾರಣೆಯನ್ನು ನಡೆಸತಕ್ಕದ್ದು.

4. ಶುಲ್ಕದ ನಿಗದಿ.- ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಜಾರಿಯಲ್ಲಿರುವ ವೃತ್ತಿ ಶಿಕ್ಷಣ ಸಂಸ್ಥೆಗಳ ಸಂಬಂಧದಲ್ಲಿ ನಿಗದಿಪಡಿಸಿದ ಶುಲ್ಕ ಏನೇ ಇದ್ದರೂ, ರಾಜ್ಯ ಸರ್ಕಾರವು, ಸಮ್ಮತಾಭಿಪ್ರಾಯದ ವ್ಯವಸ್ಥೆ ಅಥವಾ ಒಪ್ಪಂದದ ಅನುಸಾರವಾಗಿ, ಅಧಿಸೂಚನೆಯ ಮೂಲಕ, ಅನುದಾನಿತವಲ್ಲದ ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳ ಪ್ರವೇಶಕ್ಕೆ ಸಂದಾಯಮಾಡಬೇಕಾದ ಶುಲ್ಕವನ್ನು ನಿಗದಿಗೊಳಿಸಬಹುದು. ಬೇರೆ ಬೇರೆ ಪ್ರವರ್ಗದ ವಿದ್ಯಾರ್ಥಿಗಳಿಗೆ ಬೇರೆ ಬೇರೆ ಶುಲ್ಕದ ದರವನ್ನು ನಿಗದಿಗೊಳಿಸಬಹುದು.

5. ಪ್ರವೇಶ ನಿಯಂತ್ರಣ ಮತ್ತು ಸೀಟು ಹಂಚಿಕೆ ಪ್ರಮಾಣ.– ಸಮ್ಮತಾಭಿಪ್ರಾಯದ ವ್ಯವಸ್ಥೆ ಅಥವಾ ಒಪ್ಪಂದವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದಕ್ಕಾಗಿ, ಖಾಸಗಿ ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಯಲ್ಲಿ ಸೀಟುಗಳನ್ನು ಈ ಮುಂದಿನ ರೀತಿಯಲ್ಲಿ ಭರ್ತಿ ಮಾಡತಕ್ಕದ್ದು, ಎಂದರೆ:–

(i) 2012–13ನೇ ವರ್ಷಕ್ಕೆ, ಸರ್ಕಾರವು ಸಮ್ಮತಾಭಿಪ್ರಾಯದ ವ್ಯವಸ್ಥೆ ಅಥವಾ ಒಪ್ಪಂದದಡಿಯಲ್ಲಿ ಒಪ್ಪಬಹುದಾದಂಥ ಸಂಖ್ಯೆಯ ಸೀಟುಗಳನ್ನು ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳಲ್ಲಿ ಸರ್ಕಾರಿ ಸೀಟುಗಳಿಗೆ ಪ್ರವೇಶಕ್ಕಾಗಿ ವಿದ್ಯಾರ್ಥಿಗಳ ಆಯ್ಕೆ ನಿಯಮಗಳು, 2006ಕ್ಕೆ ಅನುಸಾರವಾಗಿ ಸರ್ಕಾರಿ ಸಾಮಾನ್ಯ ಪ್ರವೇಶ ಪರೀಕ್ಷೆ ಘಟಕದ ಮೂಲಕ ತುಂಬತಕ್ಕದ್ದು.

(ii) ಸಮ್ಮತಾಭಿಪ್ರಾಯದ ವ್ಯವಸ್ಥೆ ಅಥವಾ ಒಪ್ಪಂದದಲ್ಲಿ ಅನ್ಯಥಾ ನಿರ್ದಿಷ್ಟಪಡಿಸಿದ ಹೊರತು, ಉಳಿದ ಸೀಟುಗಳನ್ನು ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು ನಿರ್ಧರಿಸಲಾದ ಅರ್ಹತೆಯ ಆಧಾರದ ಮೇಲೆ ನ್ಯಾಯಯುತ ಹಾಗೂ ಪಾರದರ್ಶಕ ರೀತಿಯಲ್ಲಿ ಸಂದರ್ಭಾನುಸಾರ ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳ ಸಂಘ ಅಥವಾ ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರ ಸಂಸ್ಥೆಗಳ ಸಂಘ ನಡೆಸಿದ ಸಾಮಾನ್ಯ ಪ್ರವೇಶ ಪರೀಕ್ಷೆ ಹಾಗೂ ತರುವಾಯ ನಡೆಸಲಾಗುವ ಕೇಂದ್ರೀಯ ಕೌನ್ಸಿಲಿಂಗ್ ಮೂಲಕ ತುಂಬತಕ್ಕದ್ದು.

(2) ರಾಜ್ಯ ಸರ್ಕಾರದ ಮೀಸಲಾತಿ ನೀತಿ ಮತ್ತು ಸಮ್ಮತಾಭಿಪ್ರಾಯದ ವ್ಯವಸ್ಥೆ ಅಥವಾ ಒಪ್ಪಂದಕ್ಕೆ ಒಳಪಟ್ಟು, ರಾಜ್ಯ ಸರ್ಕಾರವು ವಿವಿಧ ಪ್ರವರ್ಗದ ಸಂಸ್ಥೆಗಳ ಸಂಬಂಧದಲ್ಲಿ ವಿವಿಧ ಪ್ರವರ್ಗದ ವಿದ್ಯಾರ್ಥಿಗಳನ್ನು ಸಾಮಾನ್ಯ ಪ್ರವೇಶ ಪರೀಕ್ಷಾ ಘಟಕದವರು ಹಾಗೂ ಆಡಳಿತ ಮಂಡಳಿಯವರು ತುಂಬಬೇಕಾದ ಸೀಟುಗಳ ಹಂಚಿಕೆ ಪ್ರಮಾಣವನ್ನು ಅಧಿಸೂಚನೆಯ ಮೂಲಕ ಪ್ರಕಟಿಸಬಹುದು.

6. ಈ ಅಧಿನಿಯಮವನ್ನು ಉಲ್ಲಂಘಿಸಿ ಮಾಡಿದ ಪ್ರವೇಶಗಳು ಅಸಿಂಧುವಾಗಿರುವುದು.– ಈ ಅಧಿನಿಯಮದ ಉಪಬಂಧಗಳನ್ನು ಅಥವಾ ಸಮ್ಮತಾಭಿಪ್ರಾಯ ವ್ಯವಸ್ಥೆ ಅಥವಾ ಒಪ್ಪಂದವನ್ನು ಉಲ್ಲಂಘಿಸಿ ಯಾವುವೇ ಖಾಸಗಿ ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳು 2012–13ನೇ ಶೈಕ್ಷಣಿಕ ವರ್ಷಕ್ಕಾಗಿ ಈ ಅಧಿನಿಯಮದ ಪ್ರಾರಂಭಕ್ಕೆ ಮೊದಲು ಅಥವಾ ತರುವಾಯ ಮಾಡಿದ ಎಲ್ಲ ಪ್ರವೇಶಗಳು ಅಸಿಂಧುವಾಗಿರತಕ್ಕದ್ದು. ಅಂಥ ಉಲ್ಲಂಘನೆಯ ಸಂಬಂಧದಲ್ಲಿ ರಾಜ್ಯ ಸರ್ಕಾರವು ಅಂಥ ಪ್ರವೇಶಗಳನ್ನು ಅಥವಾ ಸಂದರ್ಭಾನುಸಾರ ಅಂಥ ಸಂಸ್ಥೆಯ ಸಂಯೋಜನೆಯನ್ನು ರದ್ದುಪಡಿಸುವುದಕ್ಕೆ ಸಂಬಂಧಪಟ್ಟ ವಿಶ್ವವಿದ್ಯಾಲಯಕ್ಕೆ ನಿರ್ದೇಶಿಸಬಹುದು.

7. ತೊಂದರೆಗಳನ್ನು ನಿವಾರಿಸುವ ಅಧಿಕಾರ.– ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಯಾವುದೇ ತೊಂದರೆ ಉದ್ಭವಿಸಿದಲ್ಲಿ, ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ತೊಂದರೆಗಳನ್ನು ನಿವಾರಿಸಲು ತನಗೆ ಅವಶ್ಯಕ ಅಥವಾ ಯುಕ್ತವೆಂದು ಕಂಡುಬರುವ ಮತ್ತು ಈ ಅಧಿನಿಯಮದ ಉದ್ದೇಶಗಳಿಗೆ ಅಸಂಗತವಾಗಿರದಂಥ ಉಪಬಂಧಗಳನ್ನು ರಚಿಸಬಹುದು.

8. ನಿಯಮಗಳ ರಚನಾಧಿಕಾರ.– (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಪೂರ್ವಾನ್ವಯವಾಗಿ ಅಥವಾ ಉತ್ತರಾನ್ವಯವಾಗಿ, ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೇ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಒಂದು ಅಧಿವೇಶನ ಅಥವಾ ಎರಡು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳವರೆಗೆ ಅಧಿವೇಶನದಲ್ಲಿರುವಾಗ, ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಿದ ಅಧಿವೇಶನ ಅಥವಾ ನಿಕಟೋತ್ತರ ಅಧಿವೇಶನಗಳು ಮುಕ್ತಾಯವಾಗುವ ಮೊದಲು, ವಿಧಾನಮಂಡಲದ ಉಭಯಸದನಗಳು ನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡಬೇಕೆಂದು ಒಪ್ಪಿದರೆ ಅಥವಾ ನಿಯಮವನ್ನು ರಚಿಸಬಾರದೆಂದು ತೀರ್ಮಾನಿಸಿದರೆ, ಆ ತರುವಾಯ ಅಂಥ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂಥ ಮಾರ್ಪಾಟು ಅಥವಾ ರದ್ದತಿಯು ಆ ನಿಯಮದ ಅಡಿಯಲ್ಲಿ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವಾಗತಕ್ಕದ್ದಲ್ಲ.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ರಾಜ್ಯ ಸರ್ಕಾರ ಮತ್ತು ವೃತ್ತಿ ಶಿಕ್ಷಣ ಕೋರ್ಸುಗಳ ಶಿಕ್ಷಣ ನೀಡುತ್ತಿರುವ ಅನುದಾನಿತವಲ್ಲದ ಖಾಸಗಿ ಶಿಕ್ಷಣ ಸಂಸ್ಥೆಗಳ ನಡುವೆ ಮಾಡಿಕೊಳ್ಳಲು ಪ್ರಸ್ತಾವಿಸಲಾದ ಸಮ್ಮತಾಭಿಪ್ರಾಯದ ಒಪ್ಪಂದಕ್ಕೆ ಮಾನ್ಯತೆ ನೀಡುವುದಕ್ಕಾಗಿ ಮತ್ತು 2005 (6) ಎಸ್‌ಸಿಸಿ 537 ರಲ್ಲಿ ವರದಿಯಾದ ಪಿ.ಎ. ಇನಾಂದಾರ್ ಮತ್ತು ಇತರರು–ವಿರುದ್ಧ–ಮಹಾರಾಷ್ಟ್ರ ರಾಜ್ಯ – ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪಿನಲ್ಲಿ ಉಪಬಂಧಿಸಲಾದಂಥ ಇತರ ವಿಷಯಗಳಿಗೆ ಉಪಬಂಧ ಕಲ್ಪಿಸುವುದಕ್ಕಾಗಿ ಒಂದು ವಿಧೇಯಕ.

ರಾಜ್ಯ ಸರ್ಕಾರವು ಕರ್ನಾಟಕ ನಿವಾಸಿ ವಿದ್ಯಾರ್ಥಿಗಳ ಮತ್ತು ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳ ಹಿತರಕ್ಷಣೆಗಾಗಿ ಖಾಸಗಿ ಅನುದಾನಿತವಲ್ಲದ ವೃತ್ತಿ ಶಿಕ್ಷಣ ಸಂಸ್ಥೆಗಳೊಡನೆ 2008–09, 2009–10, 2010–11ನೇ ಶೈಕ್ಷಣಿಕ ವರ್ಷಗಳಿಗೆ

ಸಮ್ಮತಾಭಿಪ್ರಾಯದ ವ್ಯವಸ್ಥೆ ಅಥವಾ ಒಪ್ಪಂದ ಮಾಡಿಕೊಂಡಿರುವ ಹಿನ್ನೆಲೆಯಲ್ಲಿ ಮತ್ತು 2012-13ನೇ ಶೈಕ್ಷಣಿಕ ವರ್ಷಕ್ಕಾಗಿ ಸಮ್ಮತಾಭಿಪ್ರಾಯದ ವ್ಯವಸ್ಥೆ ಅಥವಾ ಒಪ್ಪಂದವನ್ನು ಮಾಡಿಕೊಳ್ಳಲು ಉದ್ದೇಶಿಸಿರುವ ಹಿನ್ನೆಲೆಯಲ್ಲಿ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) ಅಧಿನಿಯಮ, 2006ನ್ನು 2012-13ನೇ ಶೈಕ್ಷಣಿಕ ವರ್ಷಕ್ಕೆ ಖಾಸಗಿ ಅನುದಾನಿತವಲ್ಲದ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಮತ್ತು ಶುಲ್ಕ ನಿಗದಿಗಾಗಿ ತಡೆಹಿಡಿಯುವುದು ಅವಶ್ಯವೆಂದು ಅಭಿಪ್ರಾಯಪಡಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತು ಜ್ಞಾಪನ ಪತ್ರ

ಖಂಡ-8 ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ, ಪೂರ್ವಾನ್ವಯವಾಗಿ ಅಥವಾ ಉತ್ತರಾನ್ವಯವಾಗಿ ಪೂರ್ವ ಪ್ರಕಟಣೆಯ ತರುವಾಯ, ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

ಡಿ. ವಿ. ಸದಾನಂದ ಗೌಡ
ಮುಖ್ಯಮಂತ್ರಿ

ಪಿ. ಓಂಪ್ರಕಾಶ
ಕಾರ್ಯದರ್ಶಿ
ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

THIRTEENTH LEGISLATIVE ASSEMBLY

THIRTEENTH SESSION

THE KARNATAKA PROFESSIONAL EDUCATIONAL INSTITUTIONS (REGULATION OF ADMISSION AND FIXATION OF FEE) (SPECIAL PROVISIONS) BILL, 2012

(L.A. Bill No. 18 of 2012)

A Bill to provide for recognition of the consensual arrangement or agreement proposed to be entered into between the State Government and the Private Unaided Educational Institutions imparting Professional Educational Courses and for other matters, as provided in the judgment of the Supreme Court of India in P.A. Inamdar and others Vs. State of Maharashtra reported in 2005(6) SCC 537.

Whereas the State Government, to protect the interest of the students of Karnataka domicile and students belonging to educationally and socially backward classes, have entered into a consensual arrangement or agreement with the Private Unaided Professional Educational Institutions for the years 2006-2007, 2007-2008 2008-09, 2009-10, 2010-11 and 2011-12 and has proposed to enter into a consensual arrangement or agreement for the year 2012-2013 and felt that the Karnataka Professional Educational Institutions (Regulation of Admission and Determination of Fee)

Act, 2006 (Karnataka Act 8 of 2006) be kept in abeyance for admission and fixation of fee in private unaided professional educational institutions for the academic year 2012-13 and for the purposes hereinafter appearing;

Be it enacted by the Karnataka State Legislature in the sixty third year of the Republic of India, as follows:-

1. Short title, commencement and application.- (1) This Act may be called the Karnataka Professional Educational Institutions (Regulation of Admission and Fixation of Fee) (Special Provisions) Act, 2012.

(2) It shall come into force at once.

(3) Notwithstanding anything contained in the Karnataka Professional Educational Institutions (Regulation of Admission and Determination of Fee) Act, 2006 (Karnataka Act 8 of 2006), admissions and fixation of fee in an un-aided Private Professional Educational Institution for the academic year 2012-13 shall be governed by the provisions of this Act.

2. Definitions.- In this Act, unless the context otherwise requires,-

(a) **"Common Entrance Test"** means the entrance test conducted for determination of merit of the candidates followed by centralized counseling for the purpose of admission to professional educational courses through a single window procedure;

(b) **"Common Entrance Test Cell"** means the agency called the Karnataka Examination Authority of the State Government which conducts the common entrance test;

(c) **"Consensual arrangement or agreement"** means any agreement that may be entered into between the State Government and association of unaided Private Professional Educational Institutions relating to admission and fixation of fee in professional courses;

(d) **"Institution"** means Professional Educational Institutions offering Professional Educational courses;

(e) **"One Man Regulatory Committee"** means the Committee constituted by the State Government under section 3;

(f) **"Professional Educational Courses"** means,-

(I) In Medical and Dental Institutions,-

(a) Bachelor of Medicine and Bachelor of Surgery; and

(b) Bachelor of Dental Surgery.

(II) In Engineering Institutions,-

(a) Bachelor of Engineering;

(b) Bachelor of Technology;

(c) Bachelor of Architecture.

(III) Post Graduate Degree and Diploma courses in Medical and Dental Sciences; and

(IV) such other courses as may be notified by the State Government

(g) **"Unaided institution"** means any privately managed professional educational institution, which is not receiving aid or grant-in-aid from the State Government.

3. Constitution of One Man Regulatory Committee.- There shall be a One-Man Regulatory Committee appointed by the State Government, who shall be a former Vice-Chancellor of any University in the State. The said One-Man Regulatory Committee shall oversee the admission to professional courses and the implementation of the consensual arrangement or agreement done in accordance to the provisions of this Act.

4. Fixation of fee.- Notwithstanding the fee fixed in respect of Professional Educational Institutions which are in force on the date of commencement of this Act, the State Government may in accordance with the consensual

arrangement or agreement, by notification, fix the fee payable for admission to the Unaided Private Professional Educational Institutions. Different rates of fees may be fixed for different categories of students.

5. Regulation of admission and seat matrix.- (1) For effective implementation of the consensual arrangement or agreement, seats in a Private Unaided Professional Educational Institution shall be filled in the following manner, namely:-

(i) for the year 2012-13 such number of seats as may be agreed to by the Government under the consensual arrangement or agreement;

shall be filled through the Common Entrance Test Cell in accordance with the Karnataka Selection of Candidates for Admission to Government seats in Professional Educational Institutions Rules, 2006 as amended from time to time.

(ii) The remaining seats shall be filled through the Common Entrance Test conducted by the association of Private Professional Educational Institutions or the association of religious and linguistic minority institutions, as the case may be followed by centralized counseling, in a fair and transparent manner on the basis of merit determined subject to such rules as may be prescribed except otherwise specified in the consensual arrangement or agreement.

(2) Subject to reservation policy of the State Government and the consensual arrangement or agreement, the State Government may, by notification, publish the seat matrix to be filled by the Common Entrance Test Cell and the management, by different categories of students in respect of different categories of institutions.

6. Invalidation of admissions made in violation of this Act.- All admissions made in violation of the provisions of this Act or the consensual arrangement or agreement by any Private Unaided Professional Educational Institutions for the academic years 2012-13 whether made before or after commencement of this Act shall be invalid. In case of such violation, the State Government may direct the concerned university to cancel such admissions or affiliation of such institution as the case may be.

7. Power to remove difficulties.- If any difficulty arises in giving effect to the provisions of this Act, the State Government may, by order published in the official Gazette, make provisions not inconsistent with the provisions of this Act as appear it to be necessary or expedient for removing the difficulty.

8. Power to make rules.- (1) The State Government may, by notification, in the official Gazette, make rules prospectively or retrospectively for carrying out the purposes of this Act.

(2) Every rule made under this Act shall be laid as soon as may be after it is made before each House of the State Legislature while it is in session for a total period of thirty days which may be comprised in one session or in two or more successive sessions, and if, before the expiry of the session immediately following the session or the successive sessions aforesaid, both Houses agree in making any modification in the rule or both Houses agree that the rule should not be made, the rule shall thereafter have effect only in such modified form or be of no effect, as the case may be, so however, that any such modification or annulment shall be without prejudice to the validity of anything previously done under that rule.

STATEMENT OF OBJECTS AND REASONS

A Bill to provide for recognition of the consensual agreement proposed to be entered into between the State Government and the Private Unaided Educational Institutions imparting Professional Educational Courses and for other matters, as provided in the judgment of the Supreme Court of India in P.A. Inamdar and others Vs. State of Maharashtra reported in 2005(6) SCC 537.

Whereas the State Government, to protect the interest of the students of Karnataka domicile and students belonging to educationally and socially backward classes, for the academic year 2008-09, 2009-10, and 2010-11 have entered into such consensual arrangement or agreement and has proposed to enter into consensual arrangement

agreement for the year 2012-13 with the Private Unaided Professional Educational Institutions and felt necessary that the Karnataka Professional Educational Institutions (Regulation of Admission and Determination of Fee) Act, 2006 be kept in abeyance for the academic year 2012-13 in respect of admission and fixation of fee in a unaided private professional educational institutions..

Hence, the Bill.

FINANCIAL MEMORANDUM

There is no extra expenditure involved in the proposed legislative measure.

MEMORANDUM REGARDING DELEGATED LEGISLATION

Clause 8	Clause 8 empower the State Government to make rules to carry out the purposes of the Act.

The proposed delegation of legislative power is normal in character.

D.V. SADANANDA GOWDA
Chief Minister

P. OMPRAKASHA
Secretary
Karnataka Legislative Assembly

ವಿಶೇಷ ಪತ್ರಿಕೆ

ಭಾಗ – IV-A	ಬೆಂಗಳೂರು, ಶುಕ್ರವಾರ, ಮಾರ್ಚ್ ೩೦, ೨೦೧೨ (ಚೈತ್ರ ೧೦, ಶಕ ವರ್ಷ ೧೯೩೪)	ನಂ. ೨೪೪

KARNATAKA LEGISLATIVE ASSEMBLY SECRETARIAT

NOTIFICATION

No. KLA/LGA/13/Bill/2012, Bangalore, Dated: 30.3.2012

The following Bill was introduced in Legislative Assembly on 30.3.2012.

ಕರ್ನಾಟಕ ವಿಧಾನ ಸಭೆ

ಹದಿಮೂರನೇ ವಿಧಾನ ಸಭೆ

ಹದಿಮೂರನೇ ಅಧಿವೇಶನ

ಅರ್ಕ ವಿಶ್ವವಿದ್ಯಾಲಯ ವಿಧೇಯಕ, 2012

(2012ರ ವಿಧಾನ ಸಭೆಯ ವಿಧೇಯಕ ಸಂಖ್ಯೆ 13)

ಕಲೆ, ವಿಜ್ಞಾನ, ವಾಣಿಜ್ಯ, ಕಾನೂನು, ಇಂಜಿನಿಯರಿಂಗ್, ನಗರ ಯೋಜನೆ, ವ್ಯವಸ್ಥಾಪನೆ, ಆತಿಥ್ಯ, ಸಂಗೀತ, ಭಾಷಾ ವಿಜ್ಞಾನ ಮತ್ತು ತತ್ಸಂಬಂಧಿ ವಲಯಗಳಲ್ಲಿ ಹಾಗೂ ಅವುಗಳಿಗೆ ಸಂಬಂಧಿಸಿದ ಅಥವಾ ಅವುಗಳಿಗೆ ಆನುಷಂಗಿಕವಾದ ವಿಷಯಗಳಲ್ಲಿ ವಿಶ್ವವಿದ್ಯಾಲಯದ ಶಿಕ್ಷಣದ ಪ್ರಗತಿಪರ ವಿಚಾರಗಳನ್ನು ಉತ್ತೇಜಿಸಲು ಮತ್ತು ಕೈಗೊಳ್ಳಲು ಖಾಸಗಿ ವಲಯದಲ್ಲಿ ಒಂದು ವಿಶ್ವವಿದ್ಯಾಲಯವನ್ನು ಕರ್ನಾಟಕ ರಾಜ್ಯದಲ್ಲಿ ಸ್ಥಾಪಿಸಿ ನಿಗಮಿತಗೊಳಿಸುವುದಕ್ಕಾಗಿ ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕಲೆ, ವಿಜ್ಞಾನ, ವಾಣಿಜ್ಯ, ಕಾನೂನು, ಇಂಜಿನಿಯರಿಂಗ್, ನಗರ ಯೋಜನೆ, ವ್ಯವಸ್ಥಾಪನೆ, ಆತಿಥ್ಯ, ಸಂಗೀತ, ಭಾಷಾ ವಿಜ್ಞಾನ ಮತ್ತು ತತ್ಸಂಬಂಧಿ ವಲಯಗಳಲ್ಲಿ ಹಾಗೂ ಅವುಗಳಿಗೆ ಸಂಬಂಧಿಸಿದ ಅಥವಾ ಅವುಗಳಿಗೆ ಆನುಷಂಗಿಕವಾದ ವಿಷಯಗಳಲ್ಲಿ ವಿಶ್ವವಿದ್ಯಾಲಯದ ಶಿಕ್ಷಣದ ಪ್ರಗತಿಪರ ವಿಚಾರಗಳನ್ನು ಉತ್ತೇಜಿಸಲು ಮತ್ತು ಕೈಗೊಳ್ಳಲು ಖಾಸಗಿ ವಲಯದಲ್ಲಿ ಒಂದು ವಿಶ್ವವಿದ್ಯಾಲಯವನ್ನು ಕರ್ನಾಟಕ ರಾಜ್ಯದಲ್ಲಿ ಸ್ಥಾಪಿಸಿ ನಿಗಮಿತಗೊಳಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

ಅಧ್ಯಾಯ – I

ಪ್ರಾರಂಭಿಕ

1. **ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಅರ್ಕ ವಿಶ್ವವಿದ್ಯಾಲಯ ಅಧಿನಿಯಮ, 2012 ಎಂದು ಕರೆಯತಕ್ಕದ್ದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು.- ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-**

(ಎ) "ಶೈಕ್ಷಣಿಕ ಪರಿಷತ್ತು (ಅಕೆಡೆಮಿಕ್ ಕೌನ್ಸಿಲ್)" ಎಂದರೆ, 25ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿಸಲಾದ ವಿಶ್ವವಿದ್ಯಾಲಯದ ಶೈಕ್ಷಣಿಕ ಪರಿಷತ್ತು;

(ಬಿ) "ಕಾರ್ಯಸೂಚಿ ವಿಷಯಗಳು", ಎಂದರೆ, ಪರಿನಿಯಮಗಳಲ್ಲಿ ಹೆಸರಿಸಬಹುದಾದ ಮತ್ತು ಒಂದು ಸಭೆಯಲ್ಲಿ ಆ ವಿಷಯಗಳನ್ನು ಮತ್ತು ಕಲಾಪಗಳನ್ನು ಅನುಮೋದಿಸಬಹುದೆಂದು ತಮ್ಮ ಸಮ್ಮತಿ ಸೂಚಿಸಿ ಕುಲಾಧಿಪತಿಯವರು ಮುಂಚಿತವಾಗಿಯೇ ಲಿಖಿತ ಅನುಮೋದನೆಯನ್ನು ಕೊಟ್ಟಿದ್ದಾಗ ಮಾತ್ರವೇ ಸಂದರ್ಭಾನುಸಾರ ಪ್ರಬಂಧಕರ ಮಂಡಳಿ ಅಥವಾ ವ್ಯವಸ್ಥಾಪನಾ ಮಂಡಳಿ ಅಥವಾ ಯಾವುದೇ ಸಮಿತಿಯವರು ಕಾರ್ಯಸೂಚಿಯಲ್ಲಿ ಸೇರಿಸಬಹುದಾದ ಅಥವಾ ಸಭೆಯಲ್ಲಿ ಚರ್ಚೆಗೆ ತೆಗೆದುಕೊಂಡು ನಿರ್ಣಯವನ್ನು ಕೊಡಬಹುದಾದ ಎಲ್ಲಾ ವಿಷಯಗಳು ಮತ್ತು ಕಲಾಪಗಳು;

(ಸಿ) "ಪ್ರಬಂಧಕರ ಮಂಡಳಿ" ಎಂದರೆ, 23ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ವಿಶ್ವವಿದ್ಯಾಲಯದ ಪ್ರಬಂಧಕರ ಮಂಡಳಿ;

(ಡಿ) "ವ್ಯವಸ್ಥಾಪನಾ ಮಂಡಳಿ" ಎಂದರೆ, 24ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ವಿಶ್ವವಿದ್ಯಾಲಯದ ಆಡಳಿತ ಮಂಡಳಿ;

(ಇ) "ಕುಲಾಧಿಪತಿ", "ಕುಲಪತಿ", "ಸಹಕುಲಪತಿ" ಎಂದರೆ, ಅನುಕ್ರಮವಾಗಿ ವಿಶ್ವವಿದ್ಯಾಲಯದ ಕುಲಾಧಿಪತಿ, ಕುಲಪತಿ ಮತ್ತು ಸಹಕುಲಪತಿ;

(ಎಫ್) "ಕ್ಯಾಂಪಸ್" ಎಂದರೆ, ಅದು ಎಲ್ಲಾದರೂ ಇರಲಿ ವಿಶ್ವವಿದ್ಯಾಲಯವು ಸ್ಥಾಪಿಸಿದ, ನಿರ್ವಹಿಸುವ ಒಂದು ಕ್ಯಾಂಪಸ್;

(ಜಿ) "ಸಮಿತಿಗಳು" ಎಂದರೆ, ಈ ಅಧಿನಿಯಮದಡಿಯಲ್ಲಿ ರೂಪಿಸಲಾದ ಸಮಿತಿಗಳು ಅಥವಾ ಸಂದರ್ಭಾನುಸಾರವಾಗಿ ವಿಶ್ವವಿದ್ಯಾಲಯದ ವಿವಿಧ ಕಾರ್ಯಕರ್ತರು ರಚಿಸಿರುವ ಸಮಿತಿಗಳು ಮತ್ತು ಅದರಲ್ಲಿ ನಾಮನಿರ್ದೇಶನ ಸಮಿತಿ, ಹಣಕಾಸು ಸಮಿತಿ, ಮತ್ತು ಅಂಥ ಇತರ ಸಮಿತಿಗಳು ಒಳಗೊಳ್ಳುತ್ತವೆ;

(ಎಚ್) "ಘಟಕ ಕಾಲೇಜು" ಎಂದರೆ, ವಿಶ್ವವಿದ್ಯಾಲಯವು ಸ್ಥಾಪಿಸಿ ನಿರ್ವಹಿಸುತ್ತಿರುವ ಒಂದು ಕಾಲೇಜು ಅಥವಾ ಸಂಸ್ಥೆ;

(ಐ) "ದೂರಶಿಕ್ಷಣ" ಎಂದರೆ, ದೃಶ್ಯ ಸಂಪರ್ಕ, ಧ್ವನಿ ಸಂಪರ್ಕ, ಗಣಕಯಂತ್ರ, ಬಹುಮಾಧ್ಯಮ (ಮಲ್ಟಿ ಮಿಡಿಯ) ಪ್ರಸಾರ, ದೂರದರ್ಶನ ಪ್ರಸಾರ (ಟೆಲಿಕ್ಯಾಸ್ಟ್) ತಂತ್ರಜ್ಞಾನಗಳು ಮತ್ತು ಸಂಪರ್ಕಸಾಧನಗಳನ್ನು ಬಳಸಿಕೊಂಡು, ಒಂದು ತರಗತಿ, ಕಟ್ಟಡ ಅಥವಾ ನಿವೇಶನದಿಂದ ದೂರದಲ್ಲಿರುವ ಬೇರೊಂದು ತರಗತಿ, ಕಟ್ಟಡ ಅಥವಾ ನಿವೇಶನದಲ್ಲಿರುವವರಿಗೆ ಶಿಕ್ಷಣವನ್ನು ನೀಡುವ ಪ್ರಕ್ರಿಯೆ ಮತ್ತು ಇದು ಅಂಚೆ ಶಿಕ್ಷಣ, ವಿಚಾರಗೋಷ್ಠಿ, ಸಂಪರ್ಕ ಕಾರ್ಯಕ್ರಮ ಅಥವಾ ಅಂಥ ವಿಧಾನಗಳ ಯಾವುದೇ ಎರಡು ಅಥವಾ ಹೆಚ್ಚಿನ ಸಂಯೋಜನೆಗಳು ಮುಂತಾದವುಗಳನ್ನು ಒಳಗೊಳ್ಳುತ್ತದೆ;

(ಜೆ) "ದೂರ ಶಿಕ್ಷಣ ಸಮಿತಿ" ಎಂದರೆ, 27ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ವಿಶ್ವವಿದ್ಯಾಲಯದ ದೂರ ಶಿಕ್ಷಣ ಸಮಿತಿ;

(ಕೆ) "ಹಣಕಾಸು ಸಮಿತಿ" ಎಂದರೆ, 28ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ವಿಶ್ವವಿದ್ಯಾಲಯದ ಹಣಕಾಸು ಸಮಿತಿ;

(ಎಲ್) "ಸರ್ಕಾರ" ಎಂದರೆ, ಕರ್ನಾಟಕ ಸರ್ಕಾರ;

(ಎಂ) "ರಾಷ್ಟ್ರೀಯ ಅಧಿಮಾನ್ಯತಾ ಸಂಸ್ಥೆಗಳು" ಎಂದರೆ, ವಿಶ್ವವಿದ್ಯಾಲಯ ಅನುದಾನ ಆಯೋಗ, ಅಖಿಲ ಭಾರತ ತಾಂತ್ರಿಕ ವಿದ್ಯಾಪರಿಷತ್ತು, ಭಾರತೀಯ ವೈದ್ಯಕೀಯ ಪರಿಷತ್ತು, ಭಾರತೀಯ ಔಷಧ ವಿಜ್ಞಾನ ಪರಿಷತ್ತು, ಭಾರತೀಯ ಕೃಷಿ ಸಂಶೋಧನಾ

ಪರಿಷತ್ತು, ರಾಷ್ಟ್ರೀಯ ಮೌಲ್ಯಮಾಪನ ಮತ್ತು ಅಧಿಮಾನ್ಯತಾ ಪರಿಷತ್ತು, ರಾಷ್ಟ್ರೀಯ ಬೋಧಕ ಶಿಕ್ಷಣ ಪರಿಷತ್ತು, ದೂರಶಿಕ್ಷಣ ಪರಿಷತ್ತು, ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಪರಿಷತ್ತು ಮುಂತಾದ, ಉನ್ನತ ಶಿಕ್ಷಣದಲ್ಲಿ ಗುಣಮಟ್ಟದ ಶಿಕ್ಷಣ ದೊರೆಯುವಂತೆ ನೋಡಿಕೊಳ್ಳುವುದಕ್ಕಾಗಿ ಗುಣಮಟ್ಟಗಳು ಮತ್ತು ಷರತ್ತುಗಳನ್ನು ವಿಧಿಸುವುದಕ್ಕಾಗಿ, ಕೇಂದ್ರ ಸರ್ಕಾರವು ಸ್ಥಾಪಿಸಿರುವ ಒಂದು ಸಂಸ್ಥೆ ಮತ್ತು ಇದರಲ್ಲಿ ಸರ್ಕಾರವೂ ಸೇರಿರುತ್ತದೆ;

(ಎನ್) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದಡಿಯಲ್ಲಿ ಸರ್ಕಾರವು ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು;

(ಒ) "ಒಂದು ಘಟಕ ಕಾಲೇಜಿಗೆ ಸಂಬಂಧಪಟ್ಟಂತೆ ಪ್ರಾಂಶುಪಾಲರು" ಎಂದರೆ, ಘಟಕ ಕಾಲೇಜಿನ ಮುಖ್ಯಸ್ಥರು ಮತ್ತು ಪ್ರಾಂಶುಪಾಲರು ಇಲ್ಲದಿದ್ದಲ್ಲಿ ಅಥವಾ ನೇಮಕವಾದ ಪ್ರಾಂಶುಪಾಲರ ಗೈರುಹಾಜರಿಯಲ್ಲಿ, ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸಲು ತಾತ್ಕಾಲಿಕವಾಗಿ ನೇಮಕಗೊಂಡಿರುವ ಉಪಪ್ರಾಂಶುಪಾಲರು ಅಥವಾ ಯಾವುದೇ ಇತರ ವ್ಯಕ್ತಿಯೂ ಇದರಲ್ಲಿ ಒಳಗೊಳ್ಳುತ್ತಾರೆ;

(ಪಿ) "ಕುಲಸಚಿವರು" ಎಂದರೆ, ವಿಶ್ವವಿದ್ಯಾಲಯದ ಕುಲಸಚಿವರು;

(ಕ್ಯೂ) "ಪ್ರಾದೇಶಿಕ ಕೇಂದ್ರ" ಎಂದರೆ, ಯಾವುದೇ ಪ್ರದೇಶದಲ್ಲಿನ ಅಧ್ಯಯನ ಕೇಂದ್ರಗಳ ಕಾರ್ಯವನ್ನು ಸಮನ್ವಯಗೊಳಿಸುವ ಮತ್ತು ಮೇಲ್ವಿಚಾರಣೆ ಮಾಡುವ ಉದ್ದೇಶಕ್ಕಾಗಿ ಮತ್ತು ಅಂಥ ಕೇಂದ್ರಕ್ಕೆ ವ್ಯವಸ್ಥಾಪನಾ ಮಂಡಳಿಯು ವಹಿಸಿಕೊಡಬಹುದಾದ ಅಂಥ ಇತರ ಕರ್ತವ್ಯಗಳನ್ನು ನೆರವೇರಿಸುವುದಕ್ಕಾಗಿ ವಿಶ್ವವಿದ್ಯಾಲಯವು ಸ್ಥಾಪಿಸಿದ ಅಥವಾ ನಿರ್ವಹಿಸಿಕೊಂಡುಬರುವ ಒಂದು ಕೇಂದ್ರ;

(ಆರ್) ಈ ಅಧಿನಿಯಮಕ್ಕೆ ಸಂಬಂಧಿಸಿದಂತೆ "ಪ್ರಾಯೋಜಕ ಪ್ರಾಧಿಕಾರ" ಅಥವಾ "ಪ್ರಾಯೋಜಕ ಸಂಸ್ಥೆ" ಎಂದರೆ, ನ್ಯಾಸ;

(ಎಸ್) "ರಾಜ್ಯ" ಎಂದರೆ, ಕರ್ನಾಟಕ ರಾಜ್ಯ;

(ಟಿ) "ಪರಿನಿಯಮಗಳು" ಮತ್ತು "ವಿನಿಯಮಗಳು" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಅನುಕ್ರಮವಾಗಿ ವಿಶ್ವವಿದ್ಯಾಲಯದ ಪರಿನಿಯಮಗಳು ಮತ್ತು ವಿನಿಯಮಗಳು;

(ಯು) "ಅಧ್ಯಯನ ಕೇಂದ್ರ" ಎಂದರೆ, ದೂರ ಶಿಕ್ಷಣದ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಅಗತ್ಯವಾದ ಬುದ್ಧಿವಾದ, ಸಲಹೆಗಳನ್ನು ನೀಡುವ ಅಥವಾ ಇತರ ಯಾವುದೇ ನೆರವನ್ನು ನೀಡುವ ಉದ್ದೇಶಕ್ಕಾಗಿ ವಿಶ್ವವಿದ್ಯಾಲಯವು ಸ್ಥಾಪಿಸಿದ ಮತ್ತು ನಿರ್ವಹಿಸಿಕೊಂಡುಬಂದ ಒಂದು ಕೇಂದ್ರ;

(ವಿ) "ಅಧ್ಯಾಪಕರು" ಎಂದರೆ, ಒಬ್ಬ ಪ್ರಾಧ್ಯಾಪಕರು, ಸಹಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು, ಅಥವಾ ವಿಶ್ವವಿದ್ಯಾಲಯದಲ್ಲಿ ಅಥವಾ ಒಂದು ಘಟಕ ಕಾಲೇಜಿನಲ್ಲಿ ಬೋಧಿಸುವುದಕ್ಕೆ ಅಥವಾ ಸಂಶೋಧನೆ ನಡೆಸುವುದಕ್ಕೆ ಅಥವಾ ಸಂಶೋಧನೆಗೆ ಮಾರ್ಗದರ್ಶನ ನೀಡುವುದಕ್ಕೆ ನೇಮಕವಾದ ಅಂಥ ಇತರ ವ್ಯಕ್ತಿ ಎಂದರ್ಥ ಮತ್ತು ವಿಶ್ವವಿದ್ಯಾಲಯ ಅನುದಾನ ಆಯೋಗವು ನಿಯಮಿಸಿದ ಗುಣಮಟ್ಟಗಳಿಗೆ ಅನುಸಾರವಾಗಿ ಇರುವ ಘಟಕ ಕಾಲೇಜಿನ ಪ್ರಾಂಶುಪಾಲರು ಇದರಲ್ಲಿ ಒಳಗೊಳ್ಳುತ್ತಾರೆ;

(ಡಬ್ಲ್ಯೂ) "ನ್ಯಾಸ" ಎಂದರೆ ಅರ್ಕ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ನ್ಯಾಸ, ಬೆಂಗಳೂರು;

(ಎಕ್ಸ್) "ವಿಶ್ವವಿದ್ಯಾಲಯ ಅನುದಾನಗಳ ಆಯೋಗ" ಎಂದರೆ, ವಿಶ್ವವಿದ್ಯಾಲಯ ಅನುದಾನಗಳ ಆಯೋಗ ಅಧಿನಿಯಮ, 1956ರ (1956ರ ಕೇಂದ್ರ ಅಧಿನಿಯಮ 3) 4ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿತವಾದ ಆಯೋಗ;

(ವೈ) "ವಿಶ್ವವಿದ್ಯಾಲಯ" ಎಂದರೆ, ಈ ಅಧಿನಿಯಮದಡಿಯಲ್ಲಿ ಸ್ಥಾಪಿಸಿ ನಿಗಮಿತಗೊಳಿಸಲಾದ ಅರ್ಕ ವಿಶ್ವವಿದ್ಯಾಲಯ;

(ಜೆಡ್) "ಸಂದರ್ಶಕರು" ಎಂದರೆ, 13ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ವಿಶ್ವವಿದ್ಯಾಲಯದ ಸಂದರ್ಶಕರು.

ಅಧ್ಯಾಯ– II

ವಿಶ್ವವಿದ್ಯಾಲಯ ಮತ್ತು ಪ್ರಾಯೋಜಕ ಸಂಸ್ಥೆ

3. **ವಿಶ್ವವಿದ್ಯಾಲಯದ ಸ್ಥಾಪನೆಗೆ ಪ್ರಸ್ತಾವ.**– (1) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ಮತ್ತು ಅದಕ್ಕನುಸಾರವಾಗಿ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಹಕ್ಕನ್ನು ನ್ಯಾಸವು ಹೊಂದಿರತಕ್ಕದ್ದು.

(2) ನ್ಯಾಸವು ರಾಜ್ಯ ಸರ್ಕಾರಕ್ಕೆ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಪ್ರಸ್ತಾವವನ್ನು ಸಲ್ಲಿಸತಕ್ಕದ್ದು.

(3) ನ್ಯಾಸವು ಈ ಮುಂದಿನ ವಿವರಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:–

(i) ನ್ಯಾಸದ ವಿವರಗಳೊಂದಿಗೆ ವಿಶ್ವವಿದ್ಯಾಲಯದ ಧ್ಯೇಯೋದ್ದೇಶಗಳು;

(ii) ವಿಶ್ವವಿದ್ಯಾಲಯದ ವ್ಯಾಪ್ತಿ ಮತ್ತು ಸ್ಥಾನಮಾನ ಹಾಗೂ ಭೂಮಿಯ ಲಭ್ಯತೆ;

(iii) ಪ್ರಾರಂಭದ ದಿನಾಂಕದಿಂದ ನಿಕಟ ಐದು ಶೈಕ್ಷಣಿಕ ವರ್ಷಗಳ ಅವಧಿಯಲ್ಲಿ ವಿಶ್ವವಿದ್ಯಾಲಯವು ಕೈಗೊಳ್ಳಬೇಕೆಂದಿರುವ ಅಧ್ಯಯನ ಮತ್ತು ಸಂಶೋಧನಾ ಕಾರ್ಯಕ್ರಮಗಳ ಸ್ವರೂಪ ಮತ್ತು ಬಗೆಗಳು;

(iv) ಪ್ರಾರಂಭಿಸಬೇಕೆಂದು ಪ್ರಸ್ತಾಪಿಸಿರುವ ವ್ಯಾಸಂಗ ವಿಭಾಗಗಳು (ಫ್ಯಾಕಲ್ಟಿಗಳು), ಅಧ್ಯಯನ ಕ್ರಮಗಳು ಮತ್ತು ಸಂಶೋಧನೆಗಳ ಸ್ವರೂಪ;

(v) ಕಟ್ಟಡಗಳು, ಸಲಕರಣೆಗಳು ಮತ್ತು ರಚನಾ ಸೌಕರ್ಯಗಳನ್ನು ಒದಗಿಸುವಂಥ ಕ್ಯಾಂಪಸ್ ಅಭಿವೃದ್ಧಿ;

(vi) ಪ್ರಾರಂಭದ ದಿನಾಂಕದ ನಿಕಟ ಐದು ಶೈಕ್ಷಣಿಕ ವರ್ಷಗಳ ಅವಧಿಗಾಗಿ ಬಂಡವಾಳ ವೆಚ್ಚದ ಹಂತಗಳು;

(vii) ಬಾಬುವಾರು ಆವರ್ತಕ ವೆಚ್ಚ, ಆರ್ಥಿಕ ಮೂಲಗಳು ಮತ್ತು ಪ್ರತಿಯೊಬ್ಬ ವಿದ್ಯಾರ್ಥಿಗೆ ತಗಲುವ ಅಂದಾಜು ವೆಚ್ಚ;

(viii) ಸಂಪನ್ಮೂಲ ಸಂಗ್ರಹಣೆಗಾಗಿ ಯೋಜನೆ ಮತ್ತು ಅದಕ್ಕೆ ಬಂಡವಾಳದಿಂದ ತಗಲುವ ವೆಚ್ಚ ಹಾಗೂ ಪ್ರತಿಯೊಂದು ಮೂಲಕ್ಕೂ ಮರು ಸಂದಾಯ ಮಾಡುವ ರೀತಿ;

(ix) ವಿದ್ಯಾರ್ಥಿಗಳಿಂದ ಶುಲ್ಕ ವಸೂಲು ಮಾಡಿ ಆಂತರಿಕವಾಗಿ ನಿಧಿ ಸಂಗ್ರಹಿಸುವ ಯೋಜನೆ, ಸಲಹಾ ಸೇವೆ ಮತ್ತು ವಿಶ್ವವಿದ್ಯಾಲಯದ ಧ್ಯೇಯೋದ್ದೇಶಗಳಿಗೆ ಸಂಬಂಧಿಸಿದ ಇತರ ಚಟುವಟಿಕೆಗಳಿಂದ ನಿರೀಕ್ಷಿತ ವರಮಾನಗಳು ಮತ್ತು ಇತರ ನಿರೀಕ್ಷಿತ ವರಮಾನಗಳು;

(x) ಘಟಕವೊಂದಕ್ಕೆ ತಗಲುವ ವೆಚ್ಚದ ವಿವರಗಳು, ಆರ್ಥಿಕವಾಗಿ ದುರ್ಬಲವಾದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಶುಲ್ಕ, ಉಚಿತ ಶಿಕ್ಷಣ (ಫ್ರೀಶಿಪ್) ಮತ್ತು ವಿದ್ಯಾರ್ಥಿ ವೇತನದಲ್ಲಿ ನೀಡುವ ರಿಯಾಯಿತಿ ಅಥವಾ ವಿನಾಯತಿಯ ಪರಿಮಿತಿಯ ವಿವರಗಳನ್ನು ಮತ್ತು ಅನಿವಾಸಿ ಭಾರತೀಯರು ಅಥವಾ ಭಾರತೀಯ ಮೂಲದ ವ್ಯಕ್ತಿಗಳಿಗೆ ಅಥವಾ ಅನಿವಾಸಿ ಭಾರತೀಯರು ಅಥವಾ ಭಾರತೀಯ ಮೂಲದ ವ್ಯಕ್ತಿಗಳು ಪ್ರಾಯೋಜಿಸಿದ ವಿದ್ಯಾರ್ಥಿಗಳಿಗೆ ಮತ್ತು ಭಾರತವನ್ನುಳಿದು ಇತರ ರಾಷ್ಟ್ರಗಳ ವಿದ್ಯಾರ್ಥಿಗಳಿಗೆ ವಿಧಿಸತಕ್ಕ ಶುಲ್ಕದ ದರಗಳು ಬೇರೆ ಬೇರೆ ಇದ್ದಲ್ಲಿ ಅವುಗಳನ್ನು ಸೂಚಿಸುವ ಶುಲ್ಕ ರಚನೆಯ ವಿವರಗಳು;

(xi) ಸಂಬಂಧಪಟ್ಟ ವಿದ್ಯಾ ವಿಭಾಗದಲ್ಲಿ ಎಷ್ಟು ವರ್ಷಗಳ ಅನುಭವ ಮತ್ತು ಪರಿಣಿತಿಯನ್ನು ನ್ಯಾಸವು ದೊರಕಿಸಿಕೊಡಲಿದೆ ಹಾಗೂ ಅದರ ಹಣಕಾಸಿನ ಸಂಪನ್ಮೂಲಗಳು;

(xii) ವಿಶ್ವವಿದ್ಯಾಲಯದಲ್ಲಿರುವ ಅಧ್ಯಯನ ಕ್ರಮಗಳಿಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವುದಕ್ಕಾಗಿ ಇರುವ ವ್ಯವಸ್ಥೆ;

(xiii) ವಿಶ್ವವಿದ್ಯಾಲಯವು ಸ್ಥಾಪನೆಯಾಗುವುದಕ್ಕೆ ಮೊದಲು ನೆರವೇರಿಸಬೇಕೆಂದು ರಾಜ್ಯ ಸರ್ಕಾರವು ಅಗತ್ಯಪಡಿಸಬಹುದಾದ ಅಂಥ ಇತರ ಷರತ್ತುಗಳ ನೆರವೇರಿಕೆಯ ಹಂತ.

(4) ಸ್ವೀಕರಿಸಿದ ಪ್ರಸ್ತಾವಗಳನ್ನು ಪರೀಕ್ಷಿಸಲು ರಾಜ್ಯ ಸರ್ಕಾರವು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಪದನಿಮಿತ್ತ ಸದಸ್ಯರಾದ ಮೂರು ಸದಸ್ಯರುಗಳನ್ನು ಒಳಗೊಂಡ ಒಂದು ಪರಿಶೋಧನಾ ಸಮಿತಿಯನ್ನು ರಚಿಸತಕ್ಕದ್ದು ಮತ್ತು ಅದು ರಾಜ್ಯ ಸರ್ಕಾರಕ್ಕೆ ಶಿಫಾರಸ್ಸನ್ನು ಮಾಡತಕ್ಕದ್ದು.

4. ವಿಶ್ವವಿದ್ಯಾಲಯದ ಸ್ಥಾಪನೆ.- (1) ರಾಜ್ಯ ಸರ್ಕಾರವು, ಪರಿಶೋಧನಾ ಸಮಿತಿಯು ಮಾಡಿದ ಶಿಫಾರಸ್ಸುಗಳನ್ನು ಪರಿಶೀಲಿಸಿದ ತರುವಾಯ ಮತ್ತು ತಾನು ಅವಶ್ಯವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ತರುವಾಯ, 3ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ ಅಗತ್ಯಪಡಿಸಲಾದಂತೆ ನ್ಯಾಸವು ಒದಗಿಸಿದ ವಿವರಗಳ ಆಧಾರದ ಮೇಲೆ, ಅದು ಸಾಕಷ್ಟು ಮೂಲ ಸೌಕರ್ಯಗಳನ್ನು ಮತ್ತು ಐವತ್ತು ಎಕರೆಗಳಿಗಿಂತ ಕಡಿಮೆಯಲ್ಲದಷ್ಟು ಭೂಮಿಯನ್ನು ಹೊಂದಿದ್ದು, ಒಂದು ವಿಶ್ವವಿದ್ಯಾಲಯವನ್ನು ನಡೆಸಲು ನ್ಯಾಸವು ಸಮರ್ಥವಾಗಿದೆಯೆಂದು ಅದು ಮನಗಂಡರೆ, ಅದು 47ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಶಾಶ್ವತ ಶಾಸನಬದ್ಧ ದತ್ತಿ ನಿಧಿಯನ್ನು ಸ್ಥಾಪಿಸಬೇಕೆಂದು ಪ್ರತಿಷ್ಠಾನಕ್ಕೆ ನಿರ್ದೇಶನ ನೀಡಬಹುದು.

(2) ಶಾಶ್ವತ ಶಾಸನಬದ್ಧ ದತ್ತಿ ನಿಧಿಯ ಸ್ಥಾಪನೆಯ ತರುವಾಯ, ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, "ಅರ್ಕ ವಿಶ್ವವಿದ್ಯಾಲಯ" ಎಂಬ ಹೆಸರಿನ ಒಂದು ವಿಶ್ವವಿದ್ಯಾಲಯವನ್ನು ರಾಜ್ಯದಲ್ಲಿ ಸ್ಥಾಪಿಸುವುದಕ್ಕೆ ಮಂಜೂರಾತಿಯನ್ನು ನೀಡಬಹುದು.

(3) ವಿಶ್ವವಿದ್ಯಾಲಯದ ಕೇಂದ್ರಕಾರ್ಯಸ್ಥಾನವು ಬೆಂಗಳೂರಿನಲ್ಲಿ ಇರತಕ್ಕದ್ದು. . ವಿಶ್ವವಿದ್ಯಾಲಯವು ತನ್ನ ಕ್ಯಾಂಪಸ್ಸುಗಳನ್ನು ಅಥವಾ ಪ್ರಾದೇಶಿಕ ಕೇಂದ್ರಗಳನ್ನು, ಅಧ್ಯಯನ ಕೇಂದ್ರಗಳನ್ನು ಕರ್ನಾಟಕದ ಯಾವುದೇ ಭಾಗದಲ್ಲಿ ಹೊಂದಿರತಕ್ಕದ್ದು ಮತ್ತು ಆ ಬಗ್ಗೆ ರಾಜ್ಯ ಸರ್ಕಾರದ ಪೂರ್ವಾನುಮತಿಯನ್ನು ಪಡೆದುಕೊಳ್ಳುವುದಕ್ಕೊಳಪಟ್ಟು ಹಾಗೂ ವಿಶ್ವವಿದ್ಯಾಲಯದ ಅನುದಾನ ಆಯೋಗದ ಗುಣಮಟ್ಟಗಳಿಗನುಸಾರವಾಗಿ ಹೊಂದಿರತಕ್ಕದ್ದು.

(4) ಮೊದಲ ಕುಲಾಧಿಪತಿಯವರು, ಮೊದಲ ಕುಲಪತಿಯವರು, ಪ್ರಬಂಧಕ ಮಂಡಳಿಯ ಮೊದಲ ಸದಸ್ಯರುಗಳು, ವ್ಯವಸ್ಥಾಪನಾ ಮಂಡಳಿಯ ಹಾಗೂ ಶೈಕ್ಷಣಿಕ ಪರಿಷತ್ತಿನ ಮೊದಲ ಸದಸ್ಯರುಗಳು ಮತ್ತು ಇನ್ನು ಮುಂದೆ, ಅಂಥ ಅಧಿಕಾರಿಗಳು ಅಥವಾ ಸದಸ್ಯರುಗಳಾಗಬಹುದಾದಂಥ ಎಲ್ಲಾ ವ್ಯಕ್ತಿಗಳು, ಅಂಥ ಪದ ಅಥವಾ ಸದಸ್ಯತ್ವವನ್ನು ಹೊಂದಿರುವುದು ಮುಂದುವರೆಯುವವರೆಗೆ, ಒಂದು ನಿಗಮಿತ ನಿಕಾಯವನ್ನು ರಚಿಸತಕ್ಕದ್ದು. ಮತ್ತು ಅದು ವಿಶ್ವವಿದ್ಯಾಲಯದ ಹೆಸರಿನಲ್ಲಿ ದಾವೆ ಹೂಡಬಹುದು ಮತ್ತು ದಾವೆಗೊಳಗಾಗಬಹುದು.

(5) (2)ನೇ ಉಪಪ್ರಕರಣದ ಅಡಿಯಲ್ಲಿ ವಿಶ್ವವಿದ್ಯಾಲಯವು ಸ್ಥಾಪನೆಗೆ ಮಂಜೂರಾತಿಯಾದ ಮೇಲೆ, ವಿಶ್ವವಿದ್ಯಾಲಯದ ಉದ್ದೇಶಕ್ಕಾಗಿ, ನ್ಯಾಸವು ಆರ್ಜಿಸಿದ, ಸೃಜಿಸಿದ, ಏರ್ಪಾಟು ಮಾಡಿಕೊಂಡ ಅಥವಾ ಕಟ್ಟಲ್ಪಟ್ಟ ಭೂಮಿ ಮತ್ತು ಇತರ ಸ್ಥಿರ ಮತ್ತು ಚರ ಸ್ವತ್ತು, ವಿಶ್ವವಿದ್ಯಾಲಯದಲ್ಲಿ ನಿಹಿತವಾಗಿರತಕ್ಕದ್ದು.

(6) ವಿಶ್ವವಿದ್ಯಾಲಯವು ಹೂಡಿದ ಅಥವಾ ಅದರ ವಿರುದ್ಧ ಹೂಡಲಾದ ಎಲ್ಲಾ ದಾವೆಗಳಲ್ಲಿ ಮತ್ತು ಇತರ ಕಾನೂನು ವ್ಯವಹರಣೆಗಳಲ್ಲಿ ವಾದ ಪತ್ರಗಳಿಗೆ ಕುಲಸಚಿವರು ಸಹಿ ಮಾಡಿ ಸತ್ಯಾಪನೆ ಮಾಡತಕ್ಕದ್ದು ಮತ್ತು ಅಂಥ ದಾವೆಗಳಲ್ಲಿನ ಮತ್ತು ವ್ಯವಹರಣೆಗಳಲ್ಲಿನ ಎಲ್ಲಾ ಆದೇಶಿಕೆಗಳನ್ನು ಕುಲಸಚಿವರಿಗೆ ನೀಡತಕ್ಕದ್ದು ಮತ್ತು ಅವರಿಗೆ ಜಾರಿ ಮಾಡತಕ್ಕದ್ದು.

(7) ವಿಶ್ವವಿದ್ಯಾಲಯದಲ್ಲಿನ ಭೂಮಿ, ಕಟ್ಟಡ ಮತ್ತು ಇತರ ಸ್ವತ್ತುಗಳನ್ನು ವಿಶ್ವವಿದ್ಯಾಲಯದ ಉದ್ದೇಶಗಳಿಗೆ ಆನುಷಂಗಿಕವಾಗಿರುವುದನ್ನು ಹೊರತುಪಡಿಸಿ ಇತರ ಯಾವುದೇ ಉದ್ದೇಶಕ್ಕಾಗಿ ಬಳಸತಕ್ಕದ್ದಲ್ಲ.

5. ಅನುದಾನಗಳು ಮತ್ತು ಹಣಕಾಸು ನೆರವು.– ವಿಶ್ವವಿದ್ಯಾಲಯವು ಸ್ವಂತ ಧನಮೂಲ ಉಳ್ಳದ್ದಾಗಿರತಕ್ಕದ್ದು ಮತ್ತು ರಾಜ್ಯದಿಂದ ಅಥವಾ ರಾಜ್ಯದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಯಾವುದೇ ಇತರ ಸಂಸ್ಥೆ ಅಥವಾ ನಿಗಮದಿಂದ ಯಾವುದೇ ನಿರ್ವಹಣಾ ಸಹಾಯ ಅನುದಾನ ಅಥವಾ ಯಾವುದೇ ಹಣಕಾಸು ನೆರವನ್ನು ಹಕ್ಕಿನಿಂದ ಕೇಳತಕ್ಕದ್ದಲ್ಲ ಅಥವಾ ಅದನ್ನು ಪಡೆಯಲು ಹಕ್ಕನ್ನು ಹೊಂದಿರತಕ್ಕದ್ದಲ್ಲ:

ಪರಂತು, ರಾಜ್ಯವು,–

(ಎ) ಇತರ ರಾಜ್ಯ ಸರ್ಕಾರದ ಸಂಘಟನೆಗಳಿಗೆ ಹಣಕಾಸು ನೆರವನ್ನು ಒದಗಿಸುತ್ತಿರುವಂಥದ್ದೇ ಸಂಶೋಧನೆ, ಅಭಿವೃದ್ಧಿ ಮತ್ತಿತರ ಚಟುವಟಿಕೆಗಳಿಗಾಗಿ; ಅಥವಾ

(ಬಿ) ಸರ್ಕಾರದಿಂದ ನೆರವನ್ನು ಪಡೆಯುವ ಯಾವುದೇ ನಿರ್ದಿಷ್ಟ ಸಂಶೋಧನೆ ಅಥವಾ ಕಾರ್ಯಕ್ರಮಗಳಿಗಾಗಿ; ಮತ್ತು

(ಸಿ) ರಾಜ್ಯ ಕಾರ್ಯನೀತಿಯ ಬದಲಾವಣೆಗೆ ಒಳಪಟ್ಟು ಅಥವಾ ಅನ್ಯಥಾ ಇದೇ ಬಗೆಯ ವಿಶ್ವವಿದ್ಯಾಲಯಗಳಿಗೆ ಅವಕಾಶವನ್ನು ಕಲ್ಪಿಸುವುದಕ್ಕೆ ಅಥವಾ ಅವುಗಳ ಪ್ರಯೋಜನಕ್ಕಾಗಿ,

–ಅನುದಾನದ ಮೂಲಕ ಅಥವಾ ಅನ್ಯಥಾ ಹಣಕಾಸು ಬೆಂಬಲವನ್ನು ಒದಗಿಸಬಹುದು:

ಮತ್ತು ಪರಂತು, ವಿಶ್ವವಿದ್ಯಾಲಯವು, ಯಾವುದೇ ಇತರ ಮೂಲದಿಂದ ಯಾವುದೇ ಆರ್ಥಿಕ ನೆರವನ್ನು ಸ್ವೀಕರಿಸಬಹುದು.

6. ಘಟಕ ಕಾಲೇಜು, ಪ್ರಾದೇಶಿಕ ಕೇಂದ್ರಗಳು ಅಥವಾ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸುವುದಕ್ಕೆ ಅಧಿಕಾರ.– ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಮತ್ತು ವಿಶ್ವವಿದ್ಯಾಲಯ ಅನುದಾನ ಆಯೋಗದ ಮತ್ತು ಇತರ ರಾಷ್ಟ್ರೀಯ ಅಧಿಮಾನ್ಯತಾ ಸಂಸ್ಥೆಗಳ ಗುಣಮಟ್ಟಗಳಿಗೆ ಒಳಪಟ್ಟು, ವಿಶ್ವವಿದ್ಯಾಲಯವು, ರಾಜ್ಯದಲ್ಲಿ ತನಗೆ ಸೂಕ್ತವೆನಿಸುವಂಥ ಸ್ಥಳಗಳಲ್ಲಿ ಘಟಕ ಕಾಲೇಜುಗಳು, ಪ್ರಾದೇಶಿಕ ಕೇಂದ್ರಗಳು ಮತ್ತು ಅಧ್ಯಯನ ಕೇಂದ್ರಗಳನ್ನು ಹೊಂದಿರಬಹುದು.

7. ವಿಶ್ವವಿದ್ಯಾಲಯದ ಧ್ಯೇಯೋದ್ದೇಶಗಳು.– ವಿಶ್ವವಿದ್ಯಾಲಯವು, ತನ್ನ ಭವಿಷ್ಯದ್‌ದೃಷ್ಟಿ ಮತ್ತು ಧ್ಯೇಯೋದ್ದೇಶಗಳನ್ನು ಸಾಧಿಸಲು ಈ ಮುಂದಿನಂತೆ ವಿವಿಧ ಬಗೆಯ ಕಾರ್ಯತಂತ್ರಗಳನ್ನು ಕೈಗೊಳ್ಳಬಹುದು:–

(i) ಪ್ರಜ್ಞಾವಂತ ಸಮಾಜದ ಸೃಜನೆಗಾಗಿ ಸಾಮಾಜಿಕವಾದ ಸುಸಂಬದ್ಧ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ಸಂಶೋಧನೆ ಮತ್ತು ಬೋಧನೆಗಾಗಿ ಸುಭದ್ರ ನೆಲೆಗಟ್ಟನ್ನು ರೂಪಿಸುವುದು;

(ii) ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ನ್ಯಾಸಧಾರಿಗಳು ಯುಕ್ತವೆಂದು ಭಾವಿಸಬಹುದಾದಂಥ ಕಲೆ, ವಿಜ್ಞಾನ, ವಾಣಿಜ್ಯ, ಕಾನೂನು, ಇಂಜನಿಯರಿಂಗ್, ನಗರ ಯೋಜನೆ, ವ್ಯವಸ್ಥಾಪನೆ, ಆತಿಥ್ಯ, ಸಂಗೀತ, ಭಾಷಾ ವಿಜ್ಞಾನ ಮತ್ತು ಅಂಥ ಇತರ ವಿಷಯಗಳಲ್ಲಿ ಪದವಿ, ಸ್ನಾತಕೋತ್ತರ, ಡಾಕ್ಟೊರೇಟ್ ಪದವಿಯ (ಜಂಭಿಣಂಡಿಚಟ) ಮತ್ತು ಡಾಕ್ಟೊರೇಟ್ ಪದವಿ ನಂತರದ ವ್ಯಾಸಂಗ ವಿಷಯಗಳ ಕೋರ್ಸುಗಳವರೆಗೆ ಮತ್ತು ಅವುಗಳನ್ನು ಒಳಗೊಂಡಂತೆ ವಿಶ್ವವಿದ್ಯಾಲಯದ ಶಿಕ್ಷಣದ ಸುಧಾರಣೆಯನ್ನು ಬೆಂಬಲಿಸುವುದು, ಉತ್ತೇಜಿಸುವುದು ಮತ್ತು ಕೈಗೆತ್ತಿಕೊಳ್ಳುವುದು;

(iii) ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ವಿಶ್ವವಿದ್ಯಾಲಯದ ಗುಣಮಟ್ಟಗಳಿಗನುಸಾರವಾಗಿ ಶೈಕ್ಷಣಿಕ ಬದಲಾವಣೆ

ಕರ್ನಾಟಕದಲ್ಲಿನ ವಿವಿಧ ಸ್ಥಳಗಳಲ್ಲಿ ಕ್ಯಾಂಪಸ್ಸುಗಳನ್ನು ಸ್ಥಾಪಿಸುವುದು ಮತ್ತು ಅಧ್ಯಯನ ಕೇಂದ್ರಗಳು, ಸಂಯೋಜಿತ ಕಾಲೇಜುಗಳು ಮತ್ತು ಪ್ರಾದೇಶಿಕ ಕೇಂದ್ರಗಳನ್ನು ಹೊಂದುವುದು;

(iv) ಪರಿಸರ ಸ್ನೇಹಿ ನಿರ್ಮಾಣ, ಇಂಧನ ಸಂರಕ್ಷಣೆ, ಪರಂಪರಾ ಸಂರಕ್ಷಣೆ, ದೇಶೀಯ ಉತ್ಪಾದನಾ ಸಂಪ್ರದಾಯಗಳ ಕಡೆಗೆ ಒಲ್ಯವಂತೆ ಸಂಶೋಧನೆ ಮತ್ತು ಬೋಧನೆ, ವಾಸ್ತು ಶಿಲ್ಪ ಮತ್ತು ನಗರ ಯೋಜನೆ, ಪರಂಪರೆಯ ಸಂರಕ್ಷಣೆ, ಭೂದೃಶ್ಯ ವಿನ್ಯಾಸ, ಕರಕುಶಲಕಲೆಗಳು ಮತ್ತು ಗ್ರಾಫೀಕ್ ವಿನ್ಯಾಸಗಳಿಗೆ ಸಮಗ್ರ ಚೌಕಟ್ಟನ್ನು ಹೊಂದಿರುವುದು;

(v) ಏರೋಸ್ಪೇಸ್ ಇಂಜಿನಿಯರಿಂಗ್ ಮತ್ತು ನಿರ್ವಹಣೆಯ ವಿಶೇಷ ಕ್ಷೇತ್ರಗಳಲ್ಲಿ ಶಿಕ್ಷಣ ಮತ್ತು ತರಬೇತಿ ನೀಡುವುದು, ಜ್ಞಾನದಲ್ಲಿ ಅಭಿವೃದ್ಧಿ ಮತ್ತು ಪ್ರಸಾರಕ್ಕೆ ಸಂಬಂಧಿಸಿದಂತೆ ಸಂಶೋಧನೆಯ ಅವಕಾಶವನ್ನು ಕಲ್ಪಿಸುವುದು, ಅಂತರಾಷ್ಟ್ರೀಯ ವ್ಯವಹಾರಗಳೊಂದಿಗೆ, ನಿರ್ದಿಷ್ಟವಾಗಿ ಗ್ರಾಮೀಣಾಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ರಾಷ್ಟ್ರೀಯ ಅಭಿವೃದ್ಧಿಯ ಮೇಲೆ ಏರೋಸ್ಪೇಸ್ ತಾಂತ್ರಿಕತೆಗಳ ಪ್ರಭಾವದ ಮೇಲೆ ಅಧ್ಯಯನವನ್ನು ಕೈಗೊಳ್ಳುವುದು, ಏರೋಸ್ಪೇಸ್ ಇಂಜಿನಿಯರಿಂಗ್ ಮತ್ತು ನಿರ್ವಹಣೆಯಲ್ಲಿ ಅದ್ವಿತೀಯ ಕೇಂದ್ರವನ್ನು ಸೃಜಿಸುವ ಉದ್ದೇಶಗಳನ್ನು ಸಾಧಿಸಲು ಅವಶ್ಯಕವಾಗಬಹುದಾದಂಥ ಅಥವಾ ಅಪೇಕ್ಷಣೀಯವಾಗಬಹುದಾದಂಥ ಇತರೆ ಕಾರ್ಯಗಳು ಮತ್ತು ಕೆಲಸಗಳನ್ನು ಮಾಡುವುದು;

(vi) ಸಾರ್ವಜನಿಕ ಆಡಳಿತಗಳ ವಿವಿಧ ಆಯಾಮಗಳನ್ನು ವಿಶ್ಲೇಷಿಸಲು ಮತ್ತು ನಿರ್ಧರಿಸಲು ಸಂಪನ್ಮೂಲ ಕೇಂದ್ರ ಮತ್ತು ಸಂಶೋಧನಾ ತಂಡದ ಅಭಿವೃದ್ಧಿಗೆ ಮಾನವಿಕಗಳು, ಸಮಾಜ ವಿಜ್ಞಾನ ಮತ್ತು ಕಲೆಗಳ ಮೇಲೆ ಹೆಚ್ಚಿನ ಗಮನ ನೀಡುವುದು;

(vii) ವಾಣಿಜ್ಯೋದ್ಯಮ ಮತ್ತು ವಾಣಿಜ್ಯೋದ್ಯಮಿಗೆ ಸಂಬಂಧಿಸಿದ ಕ್ಷೇತ್ರಗಳಲ್ಲಿ ಸಂಶೋಧನೆ ನಡೆಸಲು ಸುಭದ್ರ ನೆಲೆಗಟ್ಟನ್ನು ರೂಪಿಸುವುದು ಮತ್ತು ಈಗಷ್ಟೆ ರೂಪುತಳೆಯುತ್ತಿರುವ ಕಂಪನಿಗಳಿಗೆ ಕಾರ್ಯತಂತ್ರದ ಸಲಹೆಗಳನ್ನು ಒದಗಿಸುವುದೂ ಒಳಗೊಂಡಂತೆ ಪ್ರಕರಣದ ಅಧ್ಯಯನಗಳನ್ನು ಅಭಿವೃದ್ಧಿಪಡಿಸುವುದು.

(viii) ಕರ್ನಾಟಕದ ಪ್ರಾಚೀನ ಇತಿಹಾಸ ಮತ್ತು ಶ್ರೀಮಂತ ಸಂಸ್ಕೃತಿಯ ಅಧ್ಯಯನಕ್ಕೆ ವಿಶೇಷ ಪ್ರಾಶಸ್ತ್ಯ ನೀಡಿ, ಪ್ರಾಚೀನ ಭಾರತದ ಸಾಹಿತ್ಯ, ಸಂಕಲನ ಮತ್ತು ಪ್ರಕಟಗೊಳ್ಳದ ಹಸ್ತ ಪ್ರತಿಗಳನ್ನು ಭಾಷಾಂತರಿಸುವುದು, ಮನಃಶಾಸ್ತ್ರ ಕ್ಷೇತ್ರದಲ್ಲಿ ಪ್ರಾಚೀನ ಭಾರತೀಯರ ಕೊಡುಗೆಗಳ ವಿಶಿಷ್ಟವಾದ ಲಕ್ಷಣಗಳನ್ನು ಗುರುತಿಸುವುದು ಇವುಗಳಲ್ಲಿ ಬಳಸಿಕೊಂಡ ತಾಂತ್ರಿಕ ವೈಜ್ಞಾನಿಕ ಪರಿಭಾಷೆಗಳಾಗಿರುವಂಥ ಭಾರತೀಯ ಸ್ಥಾವರಗಳ ಆಧಾರದ ಮೇಲೆ ಪ್ರಾಚೀನ ಹಸ್ತಪ್ರತಿಗಳ ಅಧ್ಯಯನ, ಸಂಗ್ರಹಣೆ ಮತ್ತು ಮಾಹಿತಿಯನ್ನು ಸಿದ್ಧಪಡಿಸುವುದರ ಮೇಲೆ ಗಮನ ನೀಡಿ ಪ್ರಾಚೀನ ಇತಿಹಾಸ ಮತ್ತು ಸಂಸ್ಕೃತಿಯ ಅಧ್ಯಯನಕ್ಕೆ ಸಮರ್ಪಿತವಾದಂಥ ಸಂಶೋಧನಾ ಕೇಂದ್ರವನ್ನು ಸೃಜಿಸುವುದು.

(ix) ದೂರ ಶಿಕ್ಷಣ ಪರಿಷತ್ತು ಮತ್ತು ಸಂಬಂಧಪಟ್ಟ ರಾಜ್ಯ ಸರ್ಕಾರವು ಕಾಲಕಾಲಕ್ಕೆ ವಿಧಿಸಿದ ಗುಣಮಟ್ಟಗಳ ಪ್ರಕಾರ ಲಕ್ಷಾಂತರ ವಿದ್ಯಾರ್ಥಿಗಳು, ಶಿಕ್ಷಕರು, ಶಿಕ್ಷಣ ಆಡಳಿತಗಾರರು ಮತ್ತು ಅಭಿವೃದ್ಧಿ ವೃತ್ತಿಗರಿಗೆ ನಿಲುಕುವಂತೆ ಮುಂದುವರೆದ ಹಾಗೂ ದೂರ ಶಿಕ್ಷಣ ಕಾರ್ಯಕ್ರಮಗಳನ್ನು ಪ್ರಾರಂಭಿಸುವುದು;

(x) ಮೌಲ್ಯಮಾಪನದ ವಿವಿಧ ಆಧುನಿಕ ವಿಧಾನಗಳ ಮೂಲಕ ಮಾಡಿದ ಮೌಲ್ಯಮಾಪನಕ್ಕೆ ಅನುಸಾರವಾಗಿ ಶಿಕ್ಷಣವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದುದರ ಆಧಾರದ ಮೇಲೆ ನೀಡಲು ಪದವಿಗಳನ್ನು, ಡಿಪ್ಲೋಮೋಗಳನ್ನು, ಪ್ರಮಾಣಪತ್ರಗಳನ್ನು ಮತ್ತು ಯಶೋಪತ್ರ ಪ್ರದಾನದಂಥ ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಪ್ರಾರಂಭಿಸುವುದು;

(xi) ನಗರ ವಿನ್ಯಾಸ ಯೋಜನೆಯನ್ನು ರೂಪಿಸುವುದಕ್ಕಾಗಿ, ಅಭಿವೃದ್ಧಿಪಡಿಸುವುದಕ್ಕಾಗಿ ವಿದ್ಯಾರ್ಥಿಗಳಿಗೆ, ಬೋಧಕ ವೃಂದದ (ಫ್ಯಾಕಲ್ಟಿ) ಸದಸ್ಯರಿಗೆ ಮತ್ತು ಇತರರಿಗೆ ನಿರ್ದಿಷ್ಟ ಶೈಕ್ಷಣಿಕ ಮತ್ತು ಸಂಶೋಧನಾ ಕಾರ್ಯಕ್ರಮಗಳನ್ನು, ತರಬೇತಿ ಕಾರ್ಯಕ್ರಮಗಳನ್ನು ಮತ್ತು ವಿನಿಮಯ ಕಾರ್ಯಕ್ರಮಗಳನ್ನು ಏರ್ಪಡಿಸುವುದಕ್ಕಾಗಿ ಭಾರತದಲ್ಲಿಯ ಅಥವಾ ವಿದೇಶದಲ್ಲಿಯ ಇತರ ಯಾವುದೇ ವಿಶ್ವವಿದ್ಯಾಲಯಗಳು, ಸಂಶೋಧನಾ ಸಂಸ್ಥೆಗಳು, ಲಾಭರಹಿತ ಸಂಸ್ಥೆಗಳು, ಕೈಗಾರಿಕಾ ಸಂಸ್ಥೆಗಳು, ವೃತ್ತಿಪರ ಸಂಸ್ಥೆಗಳು ಅಥವಾ ಇತರ ಸಂಸ್ಥೆಗಳೊಂದಿಗೆ ಸಹಯೋಗವನ್ನು ಹೊಂದುವುದು;

(xii) ರಾಜ್ಯ ಸರ್ಕಾರದ ಪೂರ್ವಾನುಮತಿಯೊಡನೆ, ವಿಶ್ವಾಸ್ಯಂತ ಇರುವ ಉತ್ತಮ ಗುಣಮಟ್ಟದ ಇತರ ಯಾವುವೇ ವಿಶ್ವವಿದ್ಯಾಲಯಗಳೊಂದಿಗೆ ಸಹಭಾಗಿಗಳಾಗಿ ವಿಶ್ವವಿದ್ಯಾಲಯದ ಬೋಧಕ ವೃಂದ (ಫ್ಯಾಕಲ್ಟಿ) ಮತ್ತು ಸಂಶೋಧಕರ ಅಭಿವೃದ್ಧಿ ಮತ್ತು ತರಬೇತಿಗಾಗಿ ಕಾರ್ಯಕ್ರಮಗಳನ್ನು ಕೈಗೊಳ್ಳುವುದು;

(xiii) ರಾಜ್ಯ ಸರ್ಕಾರದ ಪೂರ್ವ ಅನುಮೋದನೆಯೊಡನೆ, ಭಾರತದಲ್ಲಿನ ಅಥವಾ ವಿದೇಶದಲ್ಲಿನ ಯಾವುದೇ ಸಂಸ್ಥೆಯೊಂದಿಗೆ ಸಹಯೋಗ ಹೊಂದಿ ಸಂಶೋಧನೆಯನ್ನು ಮತ್ತು ಹೊಸತನವನ್ನು ಬೆಳಕಿಗೆ ತರುವುದು;

(xiv) ತಾನು ಸೂಕ್ತವೆಂದು ಭಾವಿಸಬಹುದಾದಂತೆ, ಕಲಿಕೆಯ ಅಂಥ ಶಾಖೆಗಳಲ್ಲಿ ಬೋಧನಾ ಮತ್ತು ಸಂಶೋಧನಾ ಸೌಲಭ್ಯಗಳನ್ನು ಒದಗಿಸಿ ಜ್ಞಾನ ಪ್ರಸಾರ ಮಾಡುವುದು ಮತ್ತು ಅದನ್ನು ಮುಂದುವರೆಸುವುದು ಹಾಗೂ ವಿಶೇಷವಾಗಿ ವಿಶ್ವವಿದ್ಯಾಲಯದ ಶೈಕ್ಷಣಿಕ ಕಾರ್ಯಕ್ರಮದಲ್ಲಿ ಮಾನವಿಕ ಮತ್ತು ವಿಜ್ಞಾನ ವಿಷಯಗಳಲ್ಲಿ ಸಮಗ್ರ ವ್ಯಾಸಂಗ ವಿಷಯಗಳಿಗಾಗಿ ವಿಶೇಷ ಉಪಬಂಧ ಕಲ್ಪಿಸುವುದು ಮತ್ತು ವಿಶ್ವವಿದ್ಯಾಲಯದಲ್ಲಿ ಅಂತರವಿದ್ಯಾವಿಷಯಗಳ ಅಧ್ಯಯನ ಮತ್ತು ಸಂಶೋಧನೆಗೆ ಉತ್ತೇಜನ ನೀಡುವುದಕ್ಕಾಗಿ ಸೂಕ್ತ ಕ್ರಮ ಕೈಗೊಳ್ಳುವುದು;

(xv) ಉನ್ನತ ಕಲಿಕೆಗೆ ಪ್ರವೇಶಾವಕಾಶಗಳನ್ನು ಮತ್ತು ನ್ಯಾಯ ನೀತಿಗೆ ಉತ್ತೇಜನ ನೀಡುವ ದೃಷ್ಟಿಯಿಂದ, ಕಲಿಕೆಯ ವಿಧಾನಗಳು ಮತ್ತು ಸ್ಥಳಗಳು, ವ್ಯಾಸಂಗ ಕ್ರಮಗಳ ಸಂಯೋಜನೆ, ದಾಖಲಾತಿಗಾಗಿ ಅರ್ಹತೆ, ಪ್ರವೇಶದ ವಯಸ್ಸು, ಪರೀಕ್ಷೆಯನ್ನು ನಡೆಸುವುದು ಮತ್ತು ಕಾರ್ಯಕ್ರಮಗಳ ನಿರ್ವಹಣೆಗೆ ಸಂಬಂಧಿಸಿದಂತೆ ನಮ್ಯವಾದ (ಫ್ಲೆಕ್ಸಿಬಲ್) ಮತ್ತು ಮುಕ್ತವಾದ, ವಿಶ್ವವಿದ್ಯಾಲಯ ಮಟ್ಟದ ಶಿಕ್ಷಣದ ಅನ್ವೇಷಣಾ ಪದ್ಧತಿಯನ್ನು ಅಳವಡಿಸುವುದು ಹಾಗೂ ಜ್ಞಾನದ ಹೊಸ ಕ್ಷೇತ್ರಗಳಲ್ಲಿ ಉತ್ಕೃಷ್ಟತೆಗೆ ಪ್ರೋತ್ಸಾಹಿಸುವುದು, ಶೈಕ್ಷಣಿಕ ಮತ್ತು ಸಮನ್ವಯ ಕಲಿಕೆ, ಇವೆರೆಡಕ್ಕೂ ಸಮನಾದ ಪ್ರಾಮುಖ್ಯತೆಯನ್ನು ನೀಡುವುದು;

(xvi) ತನ್ನ ಕಾರ್ಯನೀತಿಗಳು ಮತ್ತು ಕಾರ್ಯಕ್ರಮಗಳ ಮೂಲಕ ರಾಷ್ಟ್ರೀಯ ಸಮಗ್ರತೆ ಮತ್ತು ಮಾನವ ವ್ಯಕ್ತಿತ್ವದ ಸಮಗ್ರ ವಿಕಾಸಕ್ಕೆ ಪ್ರೋತ್ಸಾಹಿಸುವುದು.

8. ವಿಶ್ವವಿದ್ಯಾಲಯದ ಅಧಿಕಾರಗಳು.– ವಿಶ್ವವಿದ್ಯಾಲಯವು ಈ ಮುಂದಿನ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:-

(i) ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಮತ್ತು ವಿಶ್ವವಿದ್ಯಾಲಯದ ಅನುದಾನ ಆಯೋಗದ ಗುಣಮಟ್ಟಗಳಿಗೆ ಅನುಸಾರವಾಗಿ ಪರಿನಿಯಮಗಳಲ್ಲಿ ಹೇಳಲಾದ ರೀತಿಯಲ್ಲಿ ಕಾಲಕಾಲಕ್ಕೆ ವಿಶ್ವವಿದ್ಯಾಲಯವು ನಿರ್ಧರಿಸಬಹುದಾದಂತೆ ಕ್ಯಾಂಪಸ್ಸುಗಳು, ಪ್ರಾದೇಶಿಕ ಕೇಂದ್ರಗಳು ಮತ್ತು ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು;

(ii) ವಿಶ್ವವಿದ್ಯಾಲಯದ ಉದ್ದೇಶವನ್ನು ಕಾರ್ಯರೂಪಕ್ಕೆ ತರುವಲ್ಲಿ ಅಗತ್ಯವಾಗಬಹುದಾದ ಅಥವಾ ಕಾರ್ಯಸಾಧ್ಯವಾಗಬಹುದಾದ ಎಲ್ಲಾ ಅಂಥ ಇತರ ಚಟುವಟಿಕೆಗಳನ್ನು ಕೈಗೊಳ್ಳುವುದು;

(iii) ಪರಿನಿಯಮಗಳಲ್ಲಿ ಹೇಳಲಾದ ರೀತಿಯಲ್ಲಿ ಮತ್ತು ಷರತ್ತುಗಳಿಗೊಳಪಟ್ಟು ಪದವಿಗಳು ಅಥವಾ ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಪ್ರದಾನಮಾಡುವುದು;

(iv) ಪರಿನಿಯಮಗಳನ್ವಯ ಸಂಶೋಧನಾ ವೇತನಗಳು (ಫೆಲೋಶಿಪ್‌ಗಳು), ವಿದ್ಯಾರ್ಥಿ ವೇತನಗಳು ಮತ್ತು ಬಹುಮಾನಗಳು, ಅವಾರ್ಡುಗಳು, ಪಾರಿತೋಷಕಗಳು ಇತ್ಯಾದಿಗಳನ್ನು ಸ್ಥಾಪಿಸುವುದು ಮತ್ತು ನೀಡುವುದು;

(v) ಪರಿನಿಯಮಗಳಲ್ಲಿ ಅಥವಾ ಸಂದರ್ಭಾನುಸಾರವಾಗಿ ನಿಯಮಗಳಲ್ಲಿ ನಿಗದಿಪಡಿಸಬಹುದಾದ ಅಂಥ ಶುಲ್ಕಗಳು, ಬಿಲ್ಲುಗಳು, ಖರೀದಿ ಪಟ್ಟಿಗಳನ್ನು ಕೇಳಿಪಡೆದುಕೊಳ್ಳುವುದು ಮತ್ತು ಸ್ವೀಕರಿಸುವುದು ಹಾಗೂ ಚಾರ್ಜುಗಳನ್ನು ವಸೂಲು ಮಾಡುವುದು;

(vi) ವಿದ್ಯಾರ್ಥಿಗಳಿಗೆ ಮತ್ತು ಸಿಬ್ಬಂದಿಗಳಿಗೆ ಪಠ್ಯೇತರ ಚಟುವಟಿಕೆಗಳಿಗೆ ಅವಕಾಶಗಳನ್ನು ಕಲ್ಪಿಸುವುದು;

(vii) ವಿಶ್ವವಿದ್ಯಾಲಯದ ಅಥವಾ ಘಟಕ ಕಾಲೇಜಿನ, ಕ್ಯಾಂಪಸುಗಳ, ಪ್ರಾದೇಶಿಕ ಕೇಂದ್ರಗಳ, ಅಧ್ಯಯನ ಕೇಂದ್ರಗಳ ಫ್ಯಾಕಲ್ಟಿ, ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳುವುದು;

(viii) ವಿಶ್ವವಿದ್ಯಾಲಯದ ಅಥವಾ ಒಂದು ಘಟಕ ಕಾಲೇಜಿನ ಅಥವಾ ಕ್ಯಾಂಪಸ್ಸಿನ, ಪ್ರಾದೇಶಿಕ ಕೇಂದ್ರದ, ಅಧ್ಯಯನ ಕೇಂದ್ರದ ಉದ್ದೇಶಕ್ಕಾಗಿ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ನಿಷೇಧಿಸದಿರುವ, ಯಾವುದೇ ರೀತಿಯ ಸ್ವಯಂ ದೇಣಿಗೆಗಳು ಮತ್ತು ಕೊಡುಗೆಗಳನ್ನು ಸ್ವೀಕರಿಸುವುದು ಮತ್ತು ನ್ಯಾಸ ಮತ್ತು ದತ್ತಿ ಸ್ವತ್ತುಗಳೂ ಸೇರಿದಂತೆ, ಯಾವುದೇ ಚರ ಅಥವಾ ಸ್ಥಿರ ಸ್ವತ್ತನ್ನು ಅರ್ಜಿಸುವುದು, ಹೊಂದಿರುವುದು, ನಿರ್ವಹಿಸುವುದು, ನಡೆಸುವುದು ಮತ್ತು ಹಸ್ತಾಂತರ ಮಾಡುವುದು;

(ix) ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸಿಕೊಂಡು ಬರುವುದು ಹಾಗೂ ವಿಶ್ವವಿದ್ಯಾಲಯದ ಅಥವಾ ಘಟಕ ಕಾಲೇಜಿನ ವಿದ್ಯಾರ್ಥಿಗಳಿಗೆ ವಸತಿ ಸ್ಥಳಗಳಾಗಿ ಮಾನ್ಯತೆ ನೀಡುವುದು;

(x) ವಸತಿಯ ಮೇಲ್ವಿಚಾರಣೆ ಮಾಡುವುದು ಮತ್ತು ನಿಯಂತ್ರಣ ಮಾಡುವುದು ಹಾಗೂ ವಿದ್ಯಾರ್ಥಿಗಳು ಮತ್ತು ಎಲ್ಲಾ ಪ್ರವರ್ಗಗಳ ಸಿಬ್ಬಂದಿಗಳಲ್ಲಿ ಶಿಸ್ತು ನಿಯಂತ್ರಣ ಮಾಡುವುದು ಮತ್ತು ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳಿಗೆ ನಡತೆ ಸಂಹಿತೆಯನ್ನು ರೂಪಿಸುವುದೂ ಒಳಗೊಂಡಂತೆ, ಅಂಥ ಸಿಬ್ಬಂದಿಗಳ ಸೇವಾಷರತ್ತುಗಳನ್ನು ನಿರೂಪಿಸುವುದು;

(xi) ಶೈಕ್ಷಣಿಕ, ಆಡಳಿತಾತ್ಮಕ ಮತ್ತು ಬೆಂಬಲ ಸಿಬ್ಬಂದಿಯ ಹುದ್ದೆಗಳನ್ನು ಮತ್ತು ಇತರ ಅವಶ್ಯ ಹುದ್ದೆಗಳನ್ನು ಸೃಜಿಸುವುದು;

(xii) ವಿಶ್ವವಿದ್ಯಾಲಯವು ಕಾಲಕಾಲಕ್ಕೆ ನಿರ್ಧರಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಉದ್ದೇಶಗಳಿಗಾಗಿ ಇತರ ವಿಶ್ವವಿದ್ಯಾಲಯಗಳೊಡನೆ ಸಹಕರಿಸುವುದು ಮತ್ತು ಸಹಯೋಗ ಹೊಂದುವುದು;

(xiii) ದೂರ ಶಿಕ್ಷಣಕ್ಕೆ ಮತ್ತು ವಿಶ್ವವಿದ್ಯಾಲಯದ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಸಂಬಂಧಪಟ್ಟಂತೆ ದೂರ ಶಿಕ್ಷಣವನ್ನು ಯಾವ ರೀತಿಯಲ್ಲಿ ಸಂಘಟಿಸಬಹುದು ಎಂಬುದಕ್ಕೆ ಉಪಬಂಧ ಕಲ್ಪಿಸುವುದು;

(xiv) ಶಿಕ್ಷಕರಿಗೆ, ಪಾಠಗಳನ್ನು ರಚಿಸುವವರಿಗೆ, ಮೌಲ್ಯಮಾಪಕರಿಗೆ ಮತ್ತಿತರ ಶೈಕ್ಷಣಿಕ ಸಿಬ್ಬಂದಿಗೆ ಪುನರ್ಮನನ ವ್ಯಾಸಂಗಕ್ರಮಗಳು, ಅಭಿಮುಖ ವ್ಯಾಸಂಗ ಕ್ರಮಗಳು, ಕಾರ್ಯಾಗಾರಗಳು, ವಿಚಾರಗೋಷ್ಠಿಗಳು ಮತ್ತಿತರ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಮತ್ತು ನಡೆಸುವುದು.

(xv) ಶೈಕ್ಷಣಿಕ ಪರಿಷತ್ತಿನ ಅನುಮೋದನೆಯೊಂದಿಗೆ ವಿಶ್ವವಿದ್ಯಾಲಯದ ಅಥವಾ ಘಟಕ ಕಾಲೇಜಿನ, ಪ್ರಾದೇಶಿಕ ಕೇಂದ್ರಗಳಿಗೆ, ಅಧ್ಯಯನ ಕೇಂದ್ರಗಳಿಗೆ ಪ್ರವೇಶಕ್ಕೆ ಮಾನಕ ಗುಣಮಟ್ಟಗಳನ್ನು ನಿರ್ಧರಿಸುವುದು;

(xvi) ವಿಶ್ವವಿದ್ಯಾಲಯದ ಧ್ಯೇಯೋದ್ದೇಶಗಳನ್ನು ಕಾರ್ಯರೂಪಕ್ಕೆ ತರಲು ಅವಶ್ಯವಾಗಬಹುದಾದಂಥ ಇತರ ಎಲ್ಲಾ ಕ್ರಮಗಳನ್ನು ಅಥವಾ ಕಾರ್ಯಗಳನ್ನು, ಅವು ಮೇಲೆ ಹೇಳಿದ ಅಧಿಕಾರಗಳಿಗೆ ಪ್ರಾಸಂಗಿಕವಾಗಿರಲಿ ಅಥವಾ ಇಲ್ಲದಿರಲಿ, ಕೈಗೊಳ್ಳುವುದು;

(xvii) ಪರೀಕ್ಷೆಗಳ ಆಧಾರದ ಮೇಲೆ ಅಥವಾ ಸರ್ಕಾರದಿಂದ ಅನುಮೋದಿತವಾದ ಇತರ ಯಾವುದೇ ಮೌಲ್ಯಮಾಪನ ವಿಧಾನದ ಆಧಾರದ ಮೇಲೆ ನೀಡಲು ಪದವಿಗಳು, ಡಿಪ್ಲೋಮಾಗಳು, ಪ್ರಮಾಣಪತ್ರಗಳು ಮತ್ತು ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಸ್ಥಾಪಿಸುವುದು;

(xviii) ಫಿಲಂಗಳು, ಕ್ಯಾಸೆಟ್‌ಗಳು, ಧ್ವನಿಸುರುಳಿಗಳು, ದೃಶ್ಯಸುರುಳಿಗಳು, ಸಿ.ಡಿ., ವಿ.ಸಿ.ಡಿ. ಮತ್ತು ಇತರ ತಂತ್ರಾಂಶಗಳೂ ಹಾಗೂ ಇತರ ಸಂಬಂಧಿತ ವಿದ್ಯುನ್ಮಾನ ಮತ್ತು ಮುದ್ರಣ ಮಾಧ್ಯಮ ಸೇರಿದಂತೆ ಬೋಧಕ ಸಾಮಗ್ರಿಗಳನ್ನು ತಯಾರಿಸುವುದಕ್ಕಾಗಿ ಅವಕಾಶ ಕಲ್ಪಿಸುವುದು;

(xix) ಪ್ರಬಂಧಕ ಮಂಡಳಿಯ ಅನುಮೋದನೆಯೊಡನೆ ವಿಶ್ವವಿದ್ಯಾಲಯದ ಉದ್ದೇಶಗಳಿಗಾಗಿ ವಿಶ್ವವಿದ್ಯಾಲಯದ ಸ್ವತ್ತುಗಳನ್ನು ಭದ್ರತೆಯಾಗಿ ನೀಡಿ ಅಥವಾ ನೀಡದೆ ಹಣವನ್ನು ಪಡೆಯುವುದು, ಸಂಗ್ರಹಿಸುವುದು, ಚಂದಾದಾರರಾಗುವುದು ಮತ್ತು ಸಾಲ ಪಡೆಯುವುದು;

(xx) ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಯಾವುದೇ ಇತರ ಶೈಕ್ಷಣಿಕ ಸಂಸ್ಥೆಗಳ ಆಡಳಿತವನ್ನು ವಶಪಡಿಸಿಕೊಳ್ಳುವುದು, ವಹಿಸಿಕೊಳ್ಳುವುದು ಮತ್ತು ನಡೆಸುವುದು;

(xxi) ವ್ಯವಸ್ಥಾಪನಾ ಮಂಡಳಿಯ ಪೂರ್ವಾನುಮೋದನೆಯೊಂದಿಗೆ ಸ್ವತ್ತುಗಳನ್ನು ಆರ್ಜಿಸುವುದು;

(xxii) ವಿಶ್ವವಿದ್ಯಾಲಯದ ಮೇಲಿನ ಉದ್ದೇಶಗಳಿಗೆ ಸಂಬಂಧಿಸಿದ ಅಥವಾ ಪ್ರಾಸಂಗಿಕವಾದ ಯಾವುದೇ ಇತರ ಚಟುವಟಿಕೆಗಳನ್ನು ಕೈಗೊಳ್ಳುವುದು.

9. ವಿಶ್ವವಿದ್ಯಾಲಯವು ಎಲ್ಲಾ ವರ್ಗ, ಜಾತಿ, ಮತ ಮತ್ತು ಲಿಂಗಭೇದವಿಲ್ಲದೆ ಎಲ್ಲರಿಗೂ ಮುಕ್ತವಾಗಿರತಕ್ಕದ್ದು.– ವಿಶ್ವವಿದ್ಯಾಲಯದ ಪ್ರವೇಶಗಳು ವರ್ಗ, ಜಾತಿ, ಮತ, ಲಿಂಗ ಅಥವಾ ರಾಷ್ಟ್ರ ಭೇದವಿಲ್ಲದೆ ಎಲ್ಲಾ ವ್ಯಕ್ತಿಗಳಿಗೂ ಮುಕ್ತವಾಗಿರತಕ್ಕದ್ದು. ಎಲ್ಲಾ ಪ್ರವೇಶಗಳನ್ನು ಅರ್ಹತಾ ಪರೀಕ್ಷೆಗಳಲ್ಲಿನ ಅರ್ಹತೆಯ ಆಧಾರದ ಮೇಲೆ ಮಾಡತಕ್ಕದ್ದು:

ಪರಂತು, ವೃತ್ತಿಪರ ಮತ್ತು ತಾಂತ್ರಿಕ ಕೋರ್ಸು (ವಿಷಯ)ಗಳಲ್ಲಿನ ಪ್ರವೇಶವನ್ನು, ವಿಶ್ವವಿದ್ಯಾಲಯದಿಂದ ಅಥವಾ ಅದೇ ಕೋರ್ಸು (ವಿಷಯ)ಗಳನ್ನು ನಡೆಸುವ ವಿಶ್ವವಿದ್ಯಾಲಯದ ಸಂಘಗಳಿಂದ ನಡೆಸುವ ಮುಕ್ತ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಅಥವಾ ಯಾವುದೇ ರಾಜ್ಯ ಅಥವಾ ಕೇಂದ್ರ ಏಜೆನ್ಸಿಗಳು ಅಥವಾ ಯಾವುದೇ ಇತರ ನಿಕಾಯಗಳು ನಡೆಸುವ ಪ್ರವೇಶ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಮಾಡಿಕೊಳ್ಳತಕ್ಕದ್ದು.

ಮತ್ತು ಪರಂತು, ವಿಶ್ವವಿದ್ಯಾಲಯದ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿನ ಒಟ್ಟು ಸೀಟುಗಳ ಶೇಕಡ ಐವತ್ತಕ್ಕಿಂತ ಕಡಿಮೆಯಿಲ್ಲದ ಸೀಟುಗಳಿಗೆ ಪ್ರವೇಶವನ್ನು ಕರ್ನಾಟಕ ರಾಜ್ಯದಲ್ಲಿ ನಿವಾಸಿಗಳಾಗಿರುವ ವಿದ್ಯಾರ್ಥಿಗಳಿಗೆ, ಅವರು ಪ್ರವೇಶಕ್ಕೆ ಇರುವ ಮಾನದಂಡಗಳನ್ನು ಪೂರೈಸುವುದಕ್ಕೆ ಒಳಪಟ್ಟು, ಕಾಯ್ದಿರಿಸತಕ್ಕದ್ದು. ಈ ಪ್ರವರ್ಗದಲ್ಲಿ, ಅಂಥ ವಿದ್ಯಾರ್ಥಿಗಳು ಸಾಕಷ್ಟು ಸಂಖ್ಯೆಯಲ್ಲಿ ಲಭ್ಯವಿಲ್ಲದಿದ್ದಾಗ ಹಾಗೆ ಕಾಯ್ದಿರಿಸಿದ ಸೀಟುಗಳನ್ನು ಸಾಮಾನ್ಯ ವರ್ಗದ ಅಭ್ಯರ್ಥಿಗಳಿಂದ ಭರ್ತಿಮಾಡತಕ್ಕದ್ದು:

ಅಲ್ಲದೆ ಪರಂತು ವಿಶ್ವವಿದ್ಯಾಲಯವು ಒಪ್ಪಿಗೆಯ ಕರಾರಿನ ಮೂಲಕ ಸರ್ಕಾರವು ನಿರ್ಧರಿಸಬಹುದಾದಂತೆ ಅಷ್ಟರ ಮಟ್ಟಿಗೆ ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ಅಥವಾ ಅಶಕ್ತ ವರ್ಗದ ವಿದ್ಯಾರ್ಥಿಗಳಿಗೆ ರಿಯಾಯಿತಿ ಸೀಟುಗಳನ್ನು ಒದಗಿಸತಕ್ಕದ್ದು

10. **ರಾಷ್ಟ್ರೀಯ ಅಧಿಮಾನ್ಯತೆ.**– ವಿಶ್ವವಿದ್ಯಾಲಯವು ಸಂಬಂಧಪಟ್ಟ ಶಾಸನಾತ್ಮಕ ರಾಷ್ಟ್ರೀಯ ಅಧಿಮಾನ್ಯತಾ ಸಂಸ್ಥೆಗಳಿಂದ ಅಧಿಮಾನ್ಯತೆಯನ್ನು ಕೋರತಕ್ಕದ್ದು.

11. **ಪ್ರಾಯೋಜಕ ಸಂಸ್ಥೆಯ ಅಧಿಕಾರಗಳು.**– ಪ್ರಾಯೋಜಕ ಸಂಸ್ಥೆಯು ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದಂತೆ ಈ ಮುಂದಿನ ಅಧಿಕಾರಗಳನ್ನು ಹೊಂದಿರತಕ್ಕದ್ದು, ಇವುಗಳಲ್ಲಿ ಪ್ರತಿಯೊಂದನ್ನು ಪ್ರಾಯೋಜಕ ಸಂಸ್ಥೆಯು ತನ್ನ ವಿವೇಚನಾನುಸಾರ ಚಲಾಯಿಸಬಹುದು, ಎಂದರೆ:–

(i) ಕುಲಾಧಿಪತಿಯವರನ್ನು ನೇಮಿಸುವುದು ಅಥವಾ ಪುನರ್‌ನೇಮಿಸುವುದು ಅಥವಾ ಅವರ ನೇಮಕಾತಿಯನ್ನು ಅಂತ್ಯಗೊಳಿಸುವುದು;

(ii) ವಿಶ್ವವಿದ್ಯಾಲಯದ ಪ್ರಥಮ ಪ್ರಬಂಧಕ ಮಂಡಳಿಯನ್ನು ರಚಿಸುವುದು;

(iii) ಪ್ರಬಂಧಕ ಮಂಡಳಿಯ ಅಧ್ಯಕ್ಷರನ್ನು ನಾಮನಿರ್ದೇಶಿಸುವುದು;

(iv) ಪ್ರಬಂಧಕ ಮಂಡಳಿಯ ಸದಸ್ಯರಾಗಿ ಮೂರು ವ್ಯಕ್ತಿಗಳನ್ನು ನಾಮನಿರ್ದೇಶಿಸುವುದು;

(v) ವ್ಯವಸ್ಥಾಪನಾ ಮಂಡಳಿಯ ಸದಸ್ಯರಾಗಿ ಇಬ್ಬರು ವ್ಯಕ್ತಿಗಳನ್ನು ನಾಮ ನಿರ್ದೇಶಿಸುವುದು;

(vi) ವಿಶ್ವವಿದ್ಯಾಲಯದ ದತ್ತಿ ನಿಧಿಗೆ ದೇಣಿಗೆ ನೀಡಲು ನಿಧಿ ಮೂಲಗಳನ್ನು ನಿರ್ಧರಿಸುವುದು;

(vii) ವಿಶ್ವವಿದ್ಯಾಲಯದ ಹಣದ ವಿನಿಯೋಗ ಮತ್ತು ವೆಚ್ಚ ಮಾಡುವುದನ್ನು ನಿರ್ಧರಿಸುವುದು;

(viii) ಈ ಅಧಿನಿಯಮದಲ್ಲಿ ಉಪಬಂಧಿಸಿರುವ ವಿಧಾನದಲ್ಲಿ ಪ್ರಬಂಧಕ ಮಂಡಳಿಯ ಸಭೆಯಲ್ಲಿಯ ವಿವಾದಗಳನ್ನು ಬಗೆಹರಿಸುವುದು;

ಅಧ್ಯಾಯ – III

ವಿಶ್ವವಿದ್ಯಾಲಯದ ಅಧಿಕಾರಿಗಳು

12. **ವಿಶ್ವವಿದ್ಯಾಲಯದ ಅಧಿಕಾರಿಗಳು.**– ಈ ಮುಂದಿನವರು ವಿಶ್ವವಿದ್ಯಾಲಯದ ಅಧಿಕಾರಿಗಳಾಗಿರತಕ್ಕದ್ದು, ಎಂದರೆ:–

(i) ಸಂದರ್ಶಕರು;

(ii) ಸಹ–ಸಂದರ್ಶಕರು;

(iii) ಕುಲಾಧಿಪತಿಗಳು;

(iv) ಕುಲಪತಿಗಳು;

(v) ಸಹಕುಲಪತಿಗಳು;

(vi) ಕುಲಸಚಿವರು;

(vii) ಹಣಕಾಸು ಅಧಿಕಾರಿ; ಮತ್ತು

(viii) ಪರಿನಿಯಮಗಳ ಮೂಲಕ ವಿಶ್ವವಿದ್ಯಾಲಯದ ಅಧಿಕಾರಿಗಳೆಂದು ಘೋಷಿಸಬಹುದಾದಂಥ ಇತರ ಅಧಿಕಾರಿಗಳು.

13. **ಸಂದರ್ಶಕರು.**– (1) ಕರ್ನಾಟಕದ ಘನತೆವೆತ್ತ ರಾಜ್ಯಪಾಲರು ವಿಶ್ವವಿದ್ಯಾಲಯದ ಸಂದರ್ಶಕರಾಗಿರತಕ್ಕದ್ದು ಮತ್ತು ಸಂದರ್ಶಕರು ವಿಶ್ವವಿದ್ಯಾಲಯದ ಕಾರ್ಯನಿರ್ವಹಣೆಯ ಸುಧಾರಣೆಗಾಗಿ ಸಲಹೆಗಳನ್ನು ನೀಡಬಹುದು.

(2) ಸಂದರ್ಶಕರು, ಪದವಿಗಳನ್ನು ಮತ್ತು ಡಿಪ್ಲೋಮೊಗಳನ್ನು ಪ್ರದಾನ ಮಾಡಲು ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(3) ಸಂದರ್ಶಕರು ಈ ಮುಂದಿನ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:–

(i) ವಿಶ್ವವಿದ್ಯಾಲಯದ ವ್ಯವಹಾರಗಳಿಗೆ ಸಂಬಂಧಿಸಿದಂತೆ, ಯಾವುದೇ ಪತ್ರ ಅಥವಾ ಮಾಹಿತಿಯನ್ನು ತರಿಸಿಕೊಳ್ಳುವುದು.

(ii) ಸಂದರ್ಶಕರು, ಅವರು ಸ್ವೀಕರಿಸಿದ ಮಾಹಿತಿಯ ಆಧಾರದ ಮೇಲೆ ವಿಶ್ವವಿದ್ಯಾಲಯಗಳ ಯಾವುದೇ ಪ್ರಾಧಿಕಾರವು ಮಾಡಿದ ಯಾವುದೇ ಆದೇಶ, ನಡೆಸಿದ ವ್ಯವಹರಣೆಗಳು ಅಥವಾ ಕೈಗೊಂಡ ತೀರ್ಮಾನಗಳು, ಈ ಅಧಿನಿಯಮ, ವಿನಿಯಮಗಳು ಅಥವಾ ನಿಯಮಗಳಿಗೆ ಪೂರಕವಾಗಿಲ್ಲವೆಂದು ಮನಗಂಡರೆ ಅವರು ವಿಶ್ವವಿದ್ಯಾಲಯದ ಹಿತಾಸಕ್ತಿಯಿಂದ ತಾವು ಸೂಕ್ತವೆಂದು

ಭಾವಿಸಬಹುದಾದಂಥ ನಿರ್ದೇಶನಗಳನ್ನು ಹೊರಡಿಸಬಹುದು ಮತ್ತು ಹಾಗೆ ಹೊರಡಿಸಿದ ನಿರ್ದೇಶನಗಳನ್ನು ಸಂಬಂಧಪಟ್ಟವರೆಲ್ಲರೂ ಪಾಲಿಸತಕ್ಕದ್ದು.

14. ಸಹ-ಸಂದರ್ಶಕರು.- (1) ಕರ್ನಾಟಕ ಸರ್ಕಾರದ ಮಾನ್ಯ ಉನ್ನತ ಶಿಕ್ಷಣ ಸಚಿವರು ವಿಶ್ವವಿದ್ಯಾಲಯದ ಸಹ-ಸಂದರ್ಶಕರಾಗಿರತಕ್ಕದ್ದು.

(2) ಸಂದರ್ಶಕರ ಅನುಪಸ್ಥಿತಿಯಲ್ಲಿ ಸಹ-ಸಂದರ್ಶಕರು ಪದವಿಗಳನ್ನು ಮತ್ತು ಡಿಪ್ಲೋಮೊಗಳನ್ನು ಪ್ರದಾನ ಮಾಡಲು ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

15. ಕುಲಾಧಿಪತಿಗಳು.- (1) ಕುಲಾಧಿಪತಿಯವರನ್ನು ಪ್ರಾಯೋಜಕ ಸಂಸ್ಥೆಯು ನೇಮಿಸತಕ್ಕದ್ದು.

(2) ಪ್ರಾಯೋಜಕ ಸಂಸ್ಥೆಯ ಸಂಸ್ಥಾಪಿತ ನ್ಯಾಸಧಾರಿಯು ಮೊದಲನೇ ಕುಲಾಧಿಪತಿಗಳಾಗಿರತಕ್ಕದ್ದು, ಅವರು ತಮ್ಮ ಜೀವನಪರ್ಯಂತ ಅಥವಾ ಅವರು ತಮ್ಮ ಪದವನ್ನು ಬಿಟ್ಟುಕೊಡುವವರೆಗೆ ಕುಲಾಧಿಪತಿಗಳಾಗಿ ಪದಧಾರಣ ಮಾಡಿರತಕ್ಕದ್ದು.

(3) ತದನಂತರದ ಕುಲಾಧಿಪತಿಗಳು, ಅಂಥ ನೇಮಕಾತಿಯನ್ನು ಪರಿಗಣಿಸುವ ಸಂದರ್ಭದಲ್ಲಿ ಪ್ರಾಯೋಜಕ ಸಂಸ್ಥೆಯು ನಿರ್ಧರಿಸಬಹುದಾದಂತೆ, ಪ್ರಾಯೋಜಕ ಸಂಸ್ಥೆಯ ನ್ಯಾಸಧಾರಿಯಾಗಿರತಕ್ಕದ್ದು ಅಥವಾ ಶಿಕ್ಷಣ, ವಿಜ್ಞಾನ, ಸಂಸ್ಕೃತಿ ಅಥವಾ ಸಾರ್ವಜನಿಕ ಜೀವನ ಕ್ಷೇತ್ರಗಳಲ್ಲಿ ರಾಷ್ಟ್ರೀಯ ಮಟ್ಟದ ಛಾಪನ್ನು ಪಡೆದಿರುವ ಅಂಥ ಇತರ ವ್ಯಕ್ತಿಯಾಗಿರತಕ್ಕದ್ದು.

(4) ಹಾಗೆ ನೇಮಕಗೊಂಡ ತದನಂತರದ ಕುಲಾಧಿಪತಿಗಳು ಪ್ರಾಯೋಜಕ ಸಂಸ್ಥೆಯು ನಿರ್ಧರಿಸಬಹುದಾದಂತೆ ಪದಧಾರಣ ಮಾಡತಕ್ಕದ್ದು.

(5) ಕುಲಾಧಿಪತಿಗಳು ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಿದ ಪರಿನಿಯಮಗಳ ಅಡಿಯಲ್ಲಿ ಅವರಿಗೆ ಪ್ರದಾನ ಮಾಡಬಹುದಾದಂಥ ಅಧಿಕಾರಗಳನ್ನು ಹೊಂದಿರತಕ್ಕದ್ದು, ಅವುಗಳಲ್ಲಿ ಈ ಮುಂದಿನ ಅಧಿಕಾರಗಳು ಒಳಗೊಂಡಿರತಕ್ಕದ್ದು, ಎಂದರೆ:-

(i) ವಿಶ್ವವಿದ್ಯಾಲಯದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುವುದು;

(ii) ಸಂದರ್ಶಕರ ಮತ್ತು ಸಹ-ಸಂದರ್ಶಕರಿಬ್ಬರ ಗೈರುಹಾಜರಿಯಲ್ಲಿ ವಿಶ್ವವಿದ್ಯಾಲಯದ ಎಲ್ಲಾ ಘಟಿಕೋತ್ಸವಗಳಲ್ಲಿ ಅಧ್ಯಕ್ಷತೆಯನ್ನು ವಹಿಸುವುದು;

(iii) ವಿಶ್ವವಿದ್ಯಾಲಯದ ಪ್ರಬಂಧಕ ಮಂಡಳಿಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುವುದು;

(iv) ಈ ಅಧಿನಿಯಮ ಮತ್ತು ಪರಿನಿಯಮಗಳ ಉಪಬಂಧಗಳಿಗೆ ಅನುಸಾರವಾಗಿ ಕುಲಪತಿಗಳನ್ನು ನೇಮಿಸುವುದು ಅಥವಾ ಪುನರ್ನೇಮಿಸುವುದು ಅಥವಾ ಅವರ ನೇಮಕಾತಿಯನ್ನು ಅಂತ್ಯಗೊಳಿಸುವುದು;

(v) ಈ ಅಧಿನಿಯಮದ 16ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ನಾಮನಿರ್ದೇಶಕ ಸಮಿತಿಯ ಸದಸ್ಯರಾಗಿ ಒಬ್ಬ ವ್ಯಕ್ತಿಯನ್ನು ನಾಮನಿರ್ದೇಶನ ಮಾಡುವುದು;

(vi) ಸಹಕುಲಪತಿಗಳು, ಡೀನ್, ಕುಲಸಚಿವರು ಹಾಗೂ ಹಣಕಾಸು ಅಧಿಕಾರಿಗಳ ನೇಮಕಾತಿಯನ್ನು ಪೂರ್ವಾನುಮೋದಿಸುವುದು;

(vii) ಪ್ರಬಂಧಕ ಮಂಡಳಿಯ ಸದಸ್ಯರನ್ನಾಗಿ ಇಬ್ಬರು ಶಿಕ್ಷಣ ತಜ್ಞರನ್ನು ನಾಮನಿರ್ದೇಶಿಸುವುದು;

(viii) ಮೊದಲ ಸಹಕುಲಪತಿಗಳು ಮತ್ತು ಹಣಕಾಸು ಅಧಿಕಾರಿಗಳನ್ನು ನೇಮಿಸುವುದು;

(ix) ಮೊದಲ ವ್ಯವಸ್ಥಾಪನಾ ಮಂಡಳಿ, ಹಣಕಾಸು ಸಮಿತಿ, ಸಂಶೋಧನಾ ಪರಿಷತ್ತು ಹಾಗೂ ಶೈಕ್ಷಣಿಕ ಪರಿಷತ್ತುಗಳನ್ನು ರಚಿಸುವುದು;

(x) ಈ ಅಧಿನಿಯಮದಲ್ಲಿ ಉಪಬಂಧಿಸಿದ ವಿಧಾನದಲ್ಲಿ ಕಾರ್ಯಸೂಚಿ ವಿಷಯಗಳನ್ನು ಪೂರ್ವಾನುಮೋದಿಸುವುದು;

(xi) ಈ ಅಧಿನಿಯಮದಲ್ಲಿ ಉಪಬಂಧಿಸಿದ ವಿಧಾನದಲ್ಲಿ (ಪ್ರಬಂಧಕ ಮಂಡಳಿಯ ಸಭೆಯಲ್ಲಿ ಉಂಟಾದ ವಿವಾದಗಳನ್ನು ಹೊರತುಪಡಿಸಿ) ವಿವಾದಗಳನ್ನು ಪರಿಹರಿಸುವುದು.

(6) ಪದಾಧಿಕಾರಿ ಅಥವಾ ಪದಾಧಿಕಾರಿಗಳು ಅಥವಾ ಸಂಸ್ಥೆ ಅಥವಾ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯದ ಯಾವುದೇ ಇತರ ಪದಾಧಿಕಾರಿ ಅಥವಾ ಸಂಸ್ಥೆಗಳ ನಡುವೆ ವಿವಾದಗಳು ಉಂಟಾದಲ್ಲಿ, ಆ ವಿವಾದವನ್ನು ಕುಲಾಧಿಪತಿಯವರ ಪರ್ಯಾಲೋಚನೆಗೆ ಕಳುಹಿಸತಕ್ಕದ್ದು ಮತ್ತು ಅಂಥ ವಿವಾದದ ಸಂದರ್ಭದಲ್ಲಿ ಕುಲಾಧಿಪತಿಯವರ ತೀರ್ಮಾನವು ಅಂತಿಮವಾಗಿರತಕ್ಕದ್ದು ಮತ್ತು ಅದಕ್ಕೆ ವಿಶ್ವವಿದ್ಯಾಲಯವು ಬದ್ಧವಾಗಿರತಕ್ಕದ್ದು.

16. ಕುಲಪತಿಗಳು.- (1) (2)ನೇ ಉಪಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ನಾಮನಿರ್ದೇಶಕ ಸಮಿತಿಯು ಶಿಫಾರಸ್ಸು ಮಾಡಿದ ಮೂರು ವ್ಯಕ್ತಿಗಳ ಪೈಕಿಯಿಂದ ಒಬ್ಬರನ್ನು ಕುಲಪತಿಗಳಾಗಿ, ಪರಿನಿಯಮಗಳಲ್ಲಿ ನಿಯಮಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ

ಕುಲಾಧಿಪತಿಯವರು ನೇಮಿಸತಕ್ಕದ್ದು. ಮೂರು ವರ್ಷಗಳ ಅವಧಿಯು ಮುಗಿದ ತರುವಾಯ, ಇದನ್ನು ಮೂರು ವರ್ಷಗಳ ಮತ್ತೊಂದು ಅವಧಿಗೆ ನವೀಕರಿಸಬಹುದು:

ಪರಂತು, ಕುಲಪತಿಯವರು, ತಮ್ಮ ಅವಧಿ ಮುಗಿದ ನಂತರವೂ ಹೊಸ ಕುಲಪತಿಯವರು ಸೇರಿಕೊಳ್ಳುವವರೆಗೆ ಪದದಲ್ಲಿ ಮುಂದುವರೆಯತಕ್ಕದ್ದು. ಆದಾಗ್ಯೂ ಈ ಅವಧಿಯು ಯಾವುದೇ ಸಂದರ್ಭದಲ್ಲಿ ಒಂದು ವರ್ಷವನ್ನು ಮೀರತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಹೇಳಿರುವ ನಾಮನಿರ್ದೇಶಕ ಸಮಿತಿಯಲ್ಲಿ ಈ ಮುಂದಿನ ವ್ಯಕ್ತಿಗಳು ಇರತಕ್ಕದ್ದು, ಎಂದರೆ:-

(i) ಕುಲಾಧಿಪತಿಯವರು ನಾಮನಿರ್ದೇಶಿಸಿದ ಒಬ್ಬ ವ್ಯಕ್ತಿ;

(ii) ಪ್ರಬಂಧಕ ಮಂಡಳಿಯ ಇಬ್ಬರು ನಾಮ ನಿರ್ದೇಶಿತರು, ಇವರಲ್ಲಿ ಒಬ್ಬರನ್ನು ಪ್ರಬಂಧಕ ಮಂಡಳಿಯು ಸಮಿತಿಯ ಸಂಚಾಲಕರೆಂದು ನಾಮನಿರ್ದೇಶಿಸತಕ್ಕದ್ದು.

(3) ನಾಮನಿರ್ದೇಶಕ ಸಮಿತಿಯು, ಅರ್ಹತೆಯ ಆಧಾರದ ಮೇಲೆ ಕುಲಪತಿಯ ಹುದ್ದೆಗೆ ಸೂಕ್ತವಾದ ಮೂರು ವ್ಯಕ್ತಿಗಳ ಹೆಸರನ್ನು ಶಿಫಾರಸ್ಸು ಮಾಡತಕ್ಕದ್ದು ಮತ್ತು ಅದನ್ನು ಪ್ರತಿಯೊಬ್ಬ ವ್ಯಕ್ತಿಯ ವಿದ್ಯಾರ್ಹತೆ ಮತ್ತಿತರ ವಿಶಿಷ್ಟ ಪ್ರಶಸ್ತಿಗಳನ್ನು ತಿಳಿಸುವ ಒಂದು ಸಂಕ್ಷಿಪ್ತ ವರದಿಯೊಂದಿಗೆ ಕುಲಾಧಿಪತಿಯವರಿಗೆ ಕಳುಹಿಸತಕ್ಕದ್ದು.

(4) ಕುಲಪತಿಯವರು ವಿಶ್ವವಿದ್ಯಾಲಯದ ಪ್ರಧಾನ ಕಾರ್ಯನಿರ್ವಾಹಕ ಮತ್ತು ಶೈಕ್ಷಣಿಕ ಅಧಿಕಾರಿಯಾಗಿರತಕ್ಕದ್ದು ಮತ್ತು ವಿಶ್ವವಿದ್ಯಾಲಯದ ವ್ಯವಹಾರಗಳ ಬಗ್ಗೆ ಸಾಮಾನ್ಯ ಮೇಲ್ವಿಚಾರಣೆ ಮತ್ತು ನಿಯಂತ್ರಣವನ್ನು ಚಲಾಯಿಸತಕ್ಕದ್ದು ಹಾಗೂ ವಿಶ್ವವಿದ್ಯಾಲಯದ ಪ್ರಾಧಿಕಾರಗಳ ತೀರ್ಮಾನಗಳನ್ನು ಜಾರಿಗೊಳಿಸತಕ್ಕದ್ದು:

ಪರಂತು, ಶಿಕ್ಷಕರ ನೇಮಕಾತಿಯನ್ನು ಹೊರತುಪಡಿಸಿ ಕೂಡಲೇ ಕ್ರಮವನ್ನು ಕೈಗೊಳ್ಳಬೇಕಾದ ತುರ್ತು ಸ್ವರೂಪದ ಯಾವುದೇ ಇತರ ವಿಷಯಗಳಲ್ಲಿ ಮತ್ತು ಅದನ್ನು ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ವಿಶ್ವವಿದ್ಯಾಲಯವು ಇದಕ್ಕಾಗಿ ಅಧಿಕೃತಗೊಳಿಸಿದ್ದ ಯಾವೊಬ್ಬ ಅಧಿಕಾರಿ ಅಥವಾ ಪ್ರಾಧಿಕಾರ ಅಥವಾ ಇತರ ಸಂಸ್ಥೆಯು ಕೂಡಲೇ ಕ್ರಮಕೈಗೊಳ್ಳುವುದು ಸಾಧ್ಯವಿರದಿರುವಾಗ ಕುಲಪತಿಯವರು ತಾನು ಸೂಕ್ತವೆಂದು ಭಾವಿಸಬಹುದಾದಂತಹ ಕ್ರಮವನ್ನು ಕುಲಾಧಿಪತಿಯವರ ಲಿಖಿತ ಪೂರ್ವಾನುಮೋದನೆಯನ್ನು ಪಡೆದು ಕೈಗೊಳ್ಳತಕ್ಕದ್ದು.

(5) ಕುಲಪತಿಯವರು ಪರಿನಿಯಮಗಳು ಅಥವಾ ನಿಯಮಗಳಲ್ಲಿ ಹೇಳಲಾದ ಅಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಹಾಗೂ ಅಂಥ ಇತರ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು:

ಪರಂತು, ಕುಲಪತಿಗಳ ಅಭಿಪ್ರಾಯದಲ್ಲಿ, ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಯಾವುದೇ ನಿರ್ಣಯವು, ಈ ಅಧಿನಿಯಮ ಅಥವಾ ಅದರಡಿಯಲ್ಲಿ ರಚಿಸಿದ ಪರಿನಿಯಮಗಳು, ವಿನಿಯಮಗಳು ಅಥವಾ ನಿಯಮಗಳ ಮೂಲಕ ಪ್ರದತ್ತವಾದ ಅಧಿಕಾರದ ಹೊರಗಿದ್ದರೆ ಅಥವಾ ವಿಶ್ವವಿದ್ಯಾಲಯದ ಹಿತಾಸಕ್ತಿಗೆ ಪ್ರತಿಕೂಲವಾಗಬಹುದಾಗಿದ್ದರೆ, ಅದರ ನಿರ್ಣಯದ ದಿನಾಂಕದಿಂದ ಹದಿನೈದು ದಿನಗಳ ಒಳಗೆ ತನ್ನ ನಿರ್ಣಯವನ್ನು ಪರಿಷ್ಕರಿಸಲು ಸಂಬಂಧಪಟ್ಟ ಪ್ರಾಧಿಕಾರವನ್ನು ಆತನು ಕೋರತಕ್ಕದ್ದು ಮತ್ತು ಪ್ರಾಧಿಕಾರವು ಅಂಥ ನಿರ್ಣಯವನ್ನು ಸಂಪೂರ್ಣವಾಗಿ ಅಥವಾ ಭಾಗಶಃವಾಗಿ ಪರಿಷ್ಕರಿಸಲು ನಿರಾಕರಿಸಿದ ಸಂದರ್ಭದಲ್ಲಿ ಅಥವಾ ಹದಿನೈದು ದಿನಗಳೊಳಗೆ ಯಾವುದೇ ನಿರ್ಣಯವನ್ನು ತೆಗೆದುಕೊಳ್ಳಲು ವಿಫಲವಾದಲ್ಲಿ, ನಂತರ ಅಂಥ ವಿಷಯವನ್ನು ಕುಲಾಧಿಪತಿಗಳಿಗೆ ಕಳುಹಿಸತಕ್ಕದ್ದು ಮತ್ತು ಈ ಬಗ್ಗೆ ಇವರ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

(6) ಕುಲಪತಿಯವರ ಸೇವೆಗಳನ್ನು, ಪ್ರಬಂಧಕ ಮಂಡಳಿಯ ಅನುಮೋದನೆಯೊಂದಿಗೆ ಮತ್ತು ಸಹಜ ನ್ಯಾಯದ ತತ್ವಗಳನ್ನು ಅನುಸರಿಸಿದ ನಂತರ ಹಾಗೂ ಶಿಸ್ತಿನ ಆಧಾರದ ಮೇಲೆ ಅಂತ್ಯಗೊಳಿಸುವ ಸಂದರ್ಭವೂ ಸೇರಿದಂತೆ, ಪ್ರಕರಣದ ಬಗ್ಗೆ ಕುಲಪತಿಯು ತನ್ನ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ತರುವಾಯ, ಕುಲಾಧಿಪತಿಯವರು ಅಂತ್ಯಗೊಳಿಸಬಹುದು.

(7) ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಸಂದರ್ಶಕರು, ಸಹ-ಸಂದರ್ಶಕರು ಮತ್ತು ಕುಲಾಧಿಪತಿಯವರು ಇವರುಗಳ ಗೈರು ಹಾಜರಿಯ ಸಂದರ್ಭದಲ್ಲಿ ಕುಲಪತಿಯವರು ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

17. ಸಹಕುಲಪತಿಗಳು.- ಕುಲಪತಿಯವರು, ಕುಲಾಧಿಪತಿಯವರ ಲಿಖಿತ ಅನುಮೋದನೆಯನ್ನು ಪಡೆದುಕೊಂಡು ಮೂರು ಜನರನ್ನು ಮೀರದಂತೆ ಸಹಕುಲಪತಿಗಳನ್ನು ಪರಿನಿಯಮಗಳ ಮೂಲಕ ನಿಯಮಿಸಬಹುದಾದಂಥ ವಿಧಾನದಲ್ಲಿ ನೇಮಕಮಾಡತಕ್ಕದ್ದು ಮತ್ತು ಅವರು ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಹಾಗೂ ಅಂಥ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

18. ವ್ಯಾಸಂಗ ವಿಭಾಗಗಳ ಡೀನ್‌ಗಳು.- ಕುಲಪತಿಯವರು, ಕುಲಾಧಿಪತಿಯವರ ಲಿಖಿತ ಅನುಮೋದನೆಯನ್ನು ಪಡೆದುಕೊಂಡು ಪರಿನಿಯಮಗಳ ಮೂಲಕ ನಿಯಮಿಸಬಹುದಾದ ಅಂಥ ವಿಧಾನದಲ್ಲಿ ವ್ಯಾಸಂಗ ವಿಭಾಗಗಳ ಡೀನ್‌ಗಳನ್ನು ನೇಮಕಮಾಡತಕ್ಕದ್ದು ಮತ್ತು ಅವರು ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಹಾಗೂ ಅಂಥ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

19. ಕುಲಸಚಿವರು.–(1) ಕುಲಾಧಿಪತಿಯವರು, ಪರಿನಿಯಮಗಳ ಮೂಲಕ ನಿಯಮಿಸಬಹುದಾದಂಥ ವಿಧಾನದಲ್ಲಿ ಮತ್ತು ಅಂಥ ನಿಬಂಧನೆ ಮತ್ತು ಷರತ್ತುಗಳ ಮೇಲೆ ಕುಲಸಚಿವರನ್ನು ನೇಮಕ ಮಾಡತಕ್ಕದ್ದು.

(2) ಪರಿನಿಯಮಗಳಲ್ಲಿ ಪರಿಭಾಷಿಸಿರುವಂಥ ಎಲ್ಲಾ ಕರಾರುಗಳನ್ನು ವಿಶ್ವವಿದ್ಯಾಲಯದ ಪರವಾಗಿ ಕುಲಸಚಿವರು ಮಾಡಿಕೊಳ್ಳತಕ್ಕದ್ದು ಮತ್ತು ಅದಕ್ಕೆ ಸಹಿ ಹಾಕತಕ್ಕದ್ದು.

(3) ಕುಲಸಚಿವರು ವಿಶ್ವವಿದ್ಯಾಲಯದ ಪರವಾಗಿ ದಾಖಲೆಗಳನ್ನು ಅಧಿಕೃತಗೊಳಿಸುವ ಅಧಿಕಾರವನ್ನು ಹೊಂದಿರತಕ್ಕದ್ದು ಹಾಗೂ ಪರಿನಿಯಮಗಳಿಂದ ಪ್ರದತ್ತಗೊಳಿಸಬಹುದಾದಂಥ ಅಥವಾ ಕುಲಾಧಿಪತಿಯವರು ಮತ್ತು ಕುಲಪತಿಯವರು ಕಾಲಕಾಲಕ್ಕೆ ಅಗತ್ಯಪಡಿಸಬಹುದಾದ ಅಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಹಾಗೂ ಅಂಥ ಇತರ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

(4) ಕುಲಸಚಿವರು ವಿಶ್ವವಿದ್ಯಾಲಯದ ದಾಖಲೆಗಳು ಮತ್ತು ಸಾಮಾನ್ಯ ಮೊಹರನ್ನು ಸರಿಯಾದ ರೀತಿಯಲ್ಲಿ ರಕ್ಷಿಸಿಕೊಂಡು ಬರುವ ಹೊಣೆಗಾರಿಕೆಯನ್ನು ಹೊಂದಿರತಕ್ಕದ್ದು ಮತ್ತು ಕುಲಾಧಿಪತಿಯವರು, ಕುಲಪತಿಯವರು ಅಥವಾ ಇತರ ಯಾವುದೇ ಪ್ರಾಧಿಕಾರವು ಕೋರಿದಂಥ ಎಲ್ಲಾ ಅಂಥ ಮಾಹಿತಿಯನ್ನು ಮತ್ತು ದಾಖಲೆಗಳನ್ನು ಅವರ ಮುಂದೆ ಮಂಡಿಸಲು ಬದ್ಧರಾಗಿತಕ್ಕದ್ದು.

20. ಹಣಕಾಸು ಅಧಿಕಾರಿ.– ಕುಲಪತಿಯವರು, ಕುಲಾಧಿಪತಿಯವರ ಲಿಖಿತ ಅನುಮೋದನೆಯನ್ನು ಪಡೆದುಕೊಂಡು, ಪರಿನಿಯಮಗಳ ಮೂಲಕ ಪ್ರದತ್ತಗೊಳಿಸಬಹುದಾದ ಅಂಥ ವಿಧಾನದಲ್ಲಿ ಹಣಕಾಸು ಅಧಿಕಾರಿಯನ್ನು ನೇಮಕ ಮಾಡತಕ್ಕದ್ದು ಮತ್ತು ಅವರು ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಹಾಗೂ ಅಂಥ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

21. ಇತರ ಅಧಿಕಾರಿಗಳು.– ವಿಶ್ವವಿದ್ಯಾಲಯದ ಇತರ ಅಧಿಕಾರಿಗಳ ನೇಮಕಾತಿಯ ವಿಧಾನ, ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ಹಾಗೂ ಅವರ ಅಧಿಕಾರಗಳು ಮತ್ತು ಕರ್ತವ್ಯಗಳು ಪರಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಇರತಕ್ಕದ್ದು.

ಅಧ್ಯಾಯ – IV

ವಿಶ್ವವಿದ್ಯಾಲಯದ ಪ್ರಾಧಿಕಾರಗಳು

22. ವಿಶ್ವವಿದ್ಯಾಲಯದ ಪ್ರಾಧಿಕಾರಗಳು.– ಈ ಮುಂದಿನವುಗಳು ವಿಶ್ವವಿದ್ಯಾಲಯದ ಪ್ರಾಧಿಕಾರಗಳಾಗಿರತಕ್ಕದ್ದು, ಎಂದರೆ:–

(i) ಪ್ರಬಂಧಕ ಮಂಡಳಿ;

(ii) ವ್ಯವಸ್ಥಾಪನ ಮಂಡಳಿ;

(iii) ಶೈಕ್ಷಣಿಕ ಪರಿಷತ್ತು;

(iv) ಸಂಶೋಧನೆ ಮತ್ತು ಅನ್ವೇಷಣಾ ಪರಿಷತ್ತು;

(v) ದೂರ ಶಿಕ್ಷಣ ಸಮಿತಿ;

(vi) ಹಣಕಾಸು ಸಮಿತಿ; ಮತ್ತು

(vii) ವಿಶ್ವವಿದ್ಯಾಲಯದ ಪ್ರಾಧಿಕಾರಗಳೆಂದು ಪರಿನಿಯಮಗಳ ಮೂಲಕ ಘೋಷಿಸಬಹುದಾದ ಅಂಥ ಇತರ ಪ್ರಾಧಿಕಾರಗಳು.

23. ಪ್ರಬಂಧಕ ಮಂಡಳಿ ಮತ್ತು ಇದರ ಅಧಿಕಾರಗಳು.– (1) ಪ್ರಬಂಧಕ ಮಂಡಳಿಯು ಈ ಮುಂದಿನವರುಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:–

(i) ಕುಲಾಧಿಪತಿಯವರು – ಅಧ್ಯಕ್ಷರು;

(ii) ಕುಲಪತಿಯವರು – ಸದಸ್ಯರು;

(iii) ರಾಜ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ;

(iv) ರಾಜ್ಯ ಸರ್ಕಾರವು ನಾಮ ನಿರ್ದೇಶನ ಮಾಡಿದ ಆಡಳಿತವನ್ನು ಒಳಗೊಂಡಂತೆ ವ್ಯವಸ್ಥಾಪನೆ, ಹಣಕಾಸು ಅಥವಾ ಯಾವುದೇ ಇತರ ವಿಶೇಷ ಕ್ಷೇತ್ರದಲ್ಲಿನ ಒಬ್ಬರು ತಜ್ಞರು;

(v) ಪ್ರಾಯೋಜಕ ಸಂಸ್ಥೆಯು ನಾಮನಿರ್ದೇಶಿಸಿದ ಮೂರು ವ್ಯಕ್ತಿಗಳು;

(2) ಕುಲಸಚಿವರು ಪ್ರಬಂಧಕ ಮಂಡಳಿಯ ಮತ ದಾನದ ಹಕ್ಕಿರದ ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು.

(3) ಪ್ರಬಂಧಕ ಮಂಡಳಿಯ ಸದಸ್ಯರ ಪದಾವಧಿ, ಸರ್ಕಾರದಿಂದ ನಾಮನಿರ್ದೇಶಿತರಾದ ಇಬ್ಬರು ಸದಸ್ಯರನ್ನು ಹೊರತುಪಡಿಸಿ, ಸದಸ್ಯರ ನೇಮಕಾತಿ, ನವೀಕರಣ ಮತ್ತು ತೆಗೆದುಹಾಕುವುದು ಮುಂತಾದವುಗಳು ಪರಿನಿಯಮಗಳ ಮೂಲಕ ನಿಯಮಿಸಬಹುದಾದಂತೆ ಇರತಕ್ಕದ್ದು.

(4) ಪ್ರಬಂಧಕ ಮಂಡಳಿಯ ಎಲ್ಲಾ ಸಭೆಗಳಲ್ಲಿ ಕುಲಾಧಿಪತಿಯವರು ಅಧ್ಯಕ್ಷತೆಯನ್ನು ವಹಿಸತಕ್ಕದ್ದು ಮತ್ತು ಅವರ ಗೈರುಹಾಜರಿಯಲ್ಲಿ ಕುಲಾಧಿಪತಿಯವರಿಂದ ನಾಮನಿರ್ದೇಶಿತರಾದ ಯಾರಾದರೂ ಒಬ್ಬರು ಅಧ್ಯಕ್ಷತೆಯನ್ನು ವಹಿಸತಕ್ಕದ್ದು. ಅಂಥ ಸಭೆಯ ಅಧ್ಯಕ್ಷತೆಯನ್ನು ವಹಿಸುವುದಕ್ಕೆ ಕುಲಾಧಿಪತಿಯವರು ಯಾವೊಬ್ಬ ವ್ಯಕ್ತಿಯನ್ನೂ ನಾಮನಿರ್ದೇಶನ ಮಾಡಿರದಿದ್ದಲ್ಲಿ, ಸಭೆಯಲ್ಲಿ ಹಾಜರಿರುವ ಸದಸ್ಯರು ಸರಳ ಬಹುಮತದ ಮೂಲಕ ಅವರುಗಳ ಪೈಕಿಯಿಂದಲೇ ಆ ಸಭೆಗೆ ಮಾತ್ರವೇ ಅಧ್ಯಕ್ಷನನ್ನು ಚುನಾಯಿಸತಕ್ಕದ್ದು.

(5) ಪ್ರಬಂಧಕ ಮಂಡಳಿಯ ಎಲ್ಲಾ ಸಭೆಗಳಿಗೆ, ಅಂಥ ಸಭೆಯಲ್ಲಿ ಹಾಜರಾಗುವ ಮತ್ತು ಮತದಾನ ನೀಡುವ ಮೂರು ಜನ ಸದಸ್ಯರು ಗಣಪೂರ್ತಿ (ಕೋರಂ) ಆಗಿರತಕ್ಕದ್ದು:

ಪರಂತು, ಪ್ರಬಂಧಕ ಮಂಡಳಿಯ ಯಾವುದೇ ಸಭೆಯ ಕೋರಂ ಪೂರ್ಣವಾಗಬೇಕಾದರೆ ಕುಲಾಧಿಪತಿಯವರು ಅಥವಾ ಪ್ರಾಯೋಜಕ ಸಂಸ್ಥೆಯ ಒಬ್ಬ ನಾಮನಿರ್ದೇಶಿತರು ಹಾಜರಿರುವುದು ಮತ್ತು ಕುಲಾಧಿಪತಿಯವರು ಅಥವಾ ಪ್ರಾಯೋಜಕ ಸಂಸ್ಥೆಯ ನಾಮನಿರ್ದೇಶಿತರು ಹಾಜರಾಗದೇ ಇದ್ದಾಗ ಕುಲಪತಿಯವರು ಹಾಜರಿರುವುದು ಯಾವಾಗಲೂ ಅವಶ್ಯವಾಗಿರತಕ್ಕದ್ದು.

(6) ಪ್ರಬಂಧಕ ಮಂಡಳಿಯು ವಿಶ್ವವಿದ್ಯಾಲಯದ ಪ್ರಧಾನ ಪ್ರಬಂಧಕ ಸಂಸ್ಥೆಯಾಗಿರತಕ್ಕದ್ದು ಮತ್ತು ಅದು ಈ ಮುಂದಿನ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:-

(i) ವಿಶ್ವವಿದ್ಯಾಲಯದ ಶಾಸನಬದ್ಧ ಲೆಕ್ಕಪರಿಶೋಧಕರನ್ನು ನೇಮಕಗೊಳಿಸುವುದು;

(ii) ವಿಶ್ವವಿದ್ಯಾಲಯವು ಅನುಸರಿಸಬೇಕಾದ ಕಾರ್ಯನೀತಿಗಳನ್ನು ರಚಿಸುವುದು;

(iii) ಈ ಅಧಿನಿಯಮದ ಅಥವಾ ಪರಿನಿಯಮಗಳ ಅಥವಾ ನಿಯಮಗಳ ಉಪಬಂಧಗಳಿಗೆ ಅನುಗುಣವಾಗಿ ಇರದ ವಿಶ್ವವಿದ್ಯಾಲಯದ ಇತರ ಪ್ರಾಧಿಕಾರಗಳ ತೀರ್ಮಾನಗಳನ್ನು ಪುನರೀಕ್ಷಿಸುವುದು;

(iv) ವಿಶ್ವವಿದ್ಯಾಲಯದ ಆಯವ್ಯಯ ಮತ್ತು ವಾರ್ಷಿಕ ವರದಿಗಳನ್ನು ಅನುಮೋದಿಸುವುದು;

(v) ಹೊಸ ಅಥವಾ ಹೆಚ್ಚುವರಿ ಪರಿನಿಯಮಗಳನ್ನು ರಚಿಸುವುದು ಅಥವಾ ಈಗಾಗಲೇ ಇರುವ ಪರಿನಿಯಮಗಳು ಮತ್ತು ನಿಯಮಗಳನ್ನು ತಿದ್ದುಪಡಿ ಮಾಡುವುದು ಅಥವಾ ನಿರಸನಗೊಳಿಸುವುದು;

(vi) ವಿಶ್ವವಿದ್ಯಾಲಯವನ್ನು ಸ್ವಯಂಸಮಾಪನಗೊಳಿಸುವ ನಿರ್ಧಾರವನ್ನು ತೆಗೆದುಕೊಳ್ಳುವುದು;

(vii) ಸರ್ಕಾರಕ್ಕೆ ಸಲ್ಲಿಸುವ ಪ್ರಸ್ತಾವಗಳನ್ನು ಅನುಮೋದಿಸುವುದು;

(viii) ಶುಲ್ಕ ನಿಯಂತ್ರಣ ಸಮಿತಿಗೆ ಮೂವರು ಸದಸ್ಯರನ್ನು ನಾಮನಿರ್ದೇಶನ ಮಾಡುವುದು;

(ix) ವಿಶ್ವವಿದ್ಯಾಲಯದ ಉದ್ದೇಶಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದಕ್ಕೆ ಅಪೇಕ್ಷಣೀಯವೆಂದು ಕಂಡುಬರುವಂಥ ತೀರ್ಮಾನಗಳನ್ನು ಮತ್ತು ಕ್ರಮಗಳನ್ನು ಕೈಗೊಳ್ಳುವುದು.

(7) ಪ್ರಬಂಧಕ ಮಂಡಳಿಯು ಒಂದು ವರ್ಷದಲ್ಲಿ ಕನಿಷ್ಠ ಮೂರು ಸಲ ಸಭೆ ಸೇರತಕ್ಕದ್ದು.

24. ವ್ಯವಸ್ಥಾಪನಾ ಮಂಡಳಿ.– (1) ವ್ಯವಸ್ಥಾಪನಾ ಮಂಡಳಿಯು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(i) ಕುಲಪತಿಗಳು;

(ii) ಸಹಕುಲಪತಿಗಳು;

(iii) ಕುಲಸಚಿವರು;

(iv) ಪ್ರಾಯೋಜಕ ಸಂಸ್ಥೆಯ ಇಬ್ಬರು ನಾಮನಿರ್ದೇಶಿತರು;

(v) ಕುಲಪತಿಗಳು ನಾಮನಿರ್ದೇಶಿಸಬಹುದಾದ ವಿದ್ಯಾಲಯಗಳ ಇಬ್ಬರು ಡೀನ್‌ಗಳು;

(2) ಕುಲಪತಿಯವರು ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರಾಗಿರತಕ್ಕದ್ದು ಮತ್ತು ಕುಲಸಚಿವರು ವ್ಯವಸ್ಥಾಪನಾ ಮಂಡಳಿಯ ಕಾರ್ಯದರ್ಶಿಯಾಗಿರತಕ್ಕದ್ದು.

(3) ವ್ಯವಸ್ಥಾಪನಾ ಮಂಡಳಿಯು ವಿಶ್ವವಿದ್ಯಾಲಯದ ಕಾರ್ಯನಿರ್ವಾಹಕ ಸಂಸ್ಥೆಯಾಗಿರತಕ್ಕದ್ದು. ವ್ಯವಸ್ಥಾಪನಾ ಮಂಡಳಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು ಪರಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ಇರತಕ್ಕದ್ದು.

(4) ವ್ಯವಸ್ಥಾಪನಾ ಮಂಡಳಿಯ ಎಲ್ಲಾ ಸಭೆಗಳಲ್ಲಿ ಯಾವಾಗಲೂ ಕುಲಪತಿಯವರು ಅಧ್ಯಕ್ಷತೆ ವಹಿಸತಕ್ಕದ್ದು ಹಾಗೂ ಕುಲಪತಿಯವರ ಗೈರುಹಾಜರಿಯಲ್ಲಿ ಪ್ರಾಯೋಜಕ ಸಂಸ್ಥೆಯು ನಾಮನಿರ್ದೇಶನ ಮಾಡಿದವರು ಅಧ್ಯಕ್ಷತೆ ವಹಿಸತಕ್ಕದ್ದು ಮತ್ತು ಪ್ರಾಯೋಜಕ ಸಂಸ್ಥೆಯು ಯಾರನ್ನೂ ನಾಮನಿರ್ದೇಶನ ಮಾಡದೇ ಇದ್ದ ಸಂದರ್ಭದಲ್ಲಿ ಸಭೆಯಲ್ಲಿ ಹಾಜರಿರುವ ಸದಸ್ಯರು ಚುನಾಯಿಸಿದ ಯಾವುದೇ ಇತರ ಸದಸ್ಯರು ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(5) ವ್ಯವಸ್ಥಾಪನಾ ಮಂಡಳಿಯ ಸಭೆಯಲ್ಲಿ ಯಾವುದೇ ವಿಷಯವನ್ನು ಕುರಿತು ವಿವಾದ ಉಂಟಾದಲ್ಲಿ ಸದರಿ ವಿಷಯವನ್ನು ಕುಲಾಧಿಪತಿಯವರಿಗೆ ಕಳುಹಿಸತಕ್ಕದ್ದು ಮತ್ತು ಅಂಥ ವಿಷಯದ ಬಗ್ಗೆ ಕುಲಾಧಿಪತಿಯವರ ತೀರ್ಮಾನವು ಅಂತಿಮವಾಗಿರತಕ್ಕದ್ದು ಮತ್ತು ಅದಕ್ಕೆ ವಿಶ್ವವಿದ್ಯಾಲಯವು ಬದ್ಧವಾಗಿರತಕ್ಕದ್ದು.

25. ಶೈಕ್ಷಣಿಕ ಪರಿಷತ್ತು.-(1) ಶೈಕ್ಷಣಿಕ ಪರಿಷತ್ತು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(i)	ಕುಲಪತಿಯವರು	– ಅಧ್ಯಕ್ಷರು
(ii)	ಸಹಕುಲಪತಿಯವರು	– ಸದಸ್ಯರು
(iii)	ಕುಲಸಚಿವರು	– ಕಾರ್ಯದರ್ಶಿಗಳು
(iv)	ಪರಿನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಇತರ ಸದಸ್ಯರು.	

(2) ಶೈಕ್ಷಣಿಕ ಪರಿಷತ್ತು ವಿಶ್ವವಿದ್ಯಾಲಯದ ಪ್ರಧಾನ ಶೈಕ್ಷಣಿಕ ಸಂಸ್ಥೆಯಾಗಿರತಕ್ಕದ್ದು ಮತ್ತು ಈ ಅಧಿನಿಯಮದ, ಪರಿನಿಯಮಗಳ, ವಿನಿಯಮಗಳ ಹಾಗೂ ನಿಯಮಗಳ ಉಪಬಂಧಗಳಿಗೆ ಒಳಪಟ್ಟು, ವಿಶ್ವವಿದ್ಯಾಲಯದ ಶೈಕ್ಷಣಿಕ ಕಾರ್ಯನೀತಿಗಳನ್ನು ಸಮನ್ವಯಗೊಳಿಸತಕ್ಕದ್ದು ಮತ್ತು ಅದರ ಬಗ್ಗೆ ಸಾಮಾನ್ಯ ಮೇಲ್ವಿಚಾರಣೆಯನ್ನು ನಡೆಸತಕ್ಕದ್ದು.

26. ಸಂಶೋಧನೆ ಮತ್ತು ಅನ್ವೇಷಣಾ ಪರಿಷತ್ತು.- (1) ಸಂಶೋಧನೆ ಮತ್ತು ಅನ್ವೇಷಣಾ ಪರಿಷತ್ತು ವಿಶ್ವವಿದ್ಯಾಲಯದ ಪ್ರಧಾನ ಸಂಶೋಧನೆ ಮತ್ತು ಅನ್ವೇಷಣಾ ಸಮಿತಿಯಾಗಿರತಕ್ಕದ್ದು ಹಾಗೂ ಸಂಶೋಧನೆ ಮತ್ತು ಅನ್ವೇಷಣಾ ಕ್ಷೇತ್ರಗಳ ಆದ್ಯತೆಯೂ ಒಳಗೊಂಡಂತೆ, ವಿಶ್ವವಿದ್ಯಾಲಯವು ಕೈಗೊಳ್ಳಬೇಕಾದ ಸಂಶೋಧನೆ ಮತ್ತು ಅನ್ವೇಷಣೆಯ ಬಗ್ಗೆ ಒಂದು ವ್ಯಾಪಕವಾದ ಪರಿಪೂರ್ಣ ಭವಿಷ್ಯದ್ ದೃಷ್ಟಿಯನ್ನು ಒದಗಿಸತಕ್ಕದ್ದು. ಈ ಪರಿಷತ್ತು, ಈ ಅಧಿನಿಯಮದ, ಪರಿನಿಯಮಗಳ, ವಿನಿಯಮಗಳ ಮತ್ತು ನಿಯಮಗಳ ಉಪಬಂಧಗಳಿಗೆ ಒಳಪಟ್ಟು, ವಿಶ್ವವಿದ್ಯಾಲಯದ ಸಂಶೋಧನೆ ಮತ್ತು ಅನ್ವೇಷಣಾ ಕಾರ್ಯನೀತಿಗಳನ್ನು ಸಮನ್ವಯಗೊಳಿಸತಕ್ಕದ್ದು ಮತ್ತು ಅದರ ಸಾಮಾನ್ಯ ಮೇಲ್ವಿಚಾರಣೆಯನ್ನು ನಡೆಸತಕ್ಕದ್ದು.

(2) ಸಂಶೋಧನೆ ಮತ್ತು ಅನ್ವೇಷಣಾ ಪರಿಷತ್ತು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(i)	ಕುಲಪತಿಯವರು	– ಅಧ್ಯಕ್ಷರು
(ii)	ಸಹಕುಲಪತಿಯವರು	– ಸದಸ್ಯರು
(iii)	ಸಂಶೋಧನೆಯ ಡೀನ್	– ಕಾರ್ಯದರ್ಶಿ
(iv)	ಅನ್ವೇಷಣಾ ವಿಭಾಗದ ಮುಖ್ಯಸ್ಥರು	– ಸದಸ್ಯರು
(v)	ಎಲ್ಲಾ ವ್ಯಾಸಂಗ ವಿಭಾಗಗಳ ಡೀನ್‌ಗಳು	– ಸದಸ್ಯರು ಮತ್ತು
(vi)	ಪರಿನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಇತರ ಸದಸ್ಯರು.	

27. ದೂರ ಶಿಕ್ಷಣ ಸಮಿತಿ.- (1) ದೂರ ಶಿಕ್ಷಣ ಸಮಿತಿಯು, ಮುಖ್ಯ ಕ್ಯಾಂಪಸಿಗೆ ಆಗಮಿಸಬಹುದಾದ ಅಥವಾ ಆಗಮಿಸದೇ ಇರಬಹುದಾದ ಬಹುಸಂಖ್ಯಾತ ವಿದ್ಯಾ ಜಿಜ್ಞಾಸುಗಳ ಸಮುದಾಯಕ್ಕೆ, ಸಂಶೋಧನೆ ಕೆಲಸದ ಸಂಯೋಜನೆಯೂ ಒಳಗೊಂಡಂತೆ, ದೂರ ಕಲಿಕೆಯನ್ನು ಪ್ರವರ್ತನಗೊಳಿಸುವ ವಿಶ್ವ ವಿದ್ಯಾಲಯದ ಪ್ರಧಾನ ಸಂಸ್ಥೆಯಾಗಿರತಕ್ಕದ್ದು. ದೂರ ಶಿಕ್ಷಣ ಸಮಿತಿಯು ಈ ಅಧಿನಿಯಮದ, ಪರಿನಿಯಮಗಳ, ವಿನಿಯಮಗಳ ಮತ್ತು ನಿಯಮಗಳ ಉಪಬಂಧಗಳಿಗೆ, ಒಳಪಟ್ಟು ವಿಶ್ವವಿದ್ಯಾಲಯದ ದೂರ ಕಲಿಕಾ ಯೋಜನೆಗಳು ಅಥವಾ ಕಾರ್ಯನೀತಿಗಳ ವಿಷಯಗಳನ್ನು ಸಮನ್ವಯಗೊಳಿಸತಕ್ಕದ್ದು ಮತ್ತು ಅದರ ಸಾಮಾನ್ಯ ಮೇಲ್ವಿಚಾರಣೆಯನ್ನು ನಡೆಸತಕ್ಕದ್ದು.

(2) ದೂರ ಶಿಕ್ಷಣ ಸಮಿತಿಯು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು, ಎಂದರೆ :-

(i)	ಕುಲಪತಿಯವರು	– ಅಧ್ಯಕ್ಷರು
(ii)	ಸಹಕುಲಪತಿಯವರು	– ಸದಸ್ಯರು
(iii)	ಕುಲಸಚಿವರು	– ಕಾರ್ಯದರ್ಶಿ ಮತ್ತು
(iv)	ಪರಿನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಇತರ ಸದಸ್ಯರು.	

28. ಹಣಕಾಸು ಸಮಿತಿ.– (1) ಹಣಕಾಸು ಸಮಿತಿಯು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(i)	ಕುಲಾಧಿಪತಿಯವರು ಅಥವಾ ಅವರ ನಾಮನಿರ್ದೇಶಿತರು	– ಅಧ್ಯಕ್ಷರು
(ii)	ಕುಲಪತಿಯವರು	– ಸದಸ್ಯರು
(iii)	ಕುಲಸಚಿವರು	– ಸದಸ್ಯರು
(iv)	ಹಣಕಾಸು ಅಧಿಕಾರಿ	– ಕಾರ್ಯದರ್ಶಿ
(v)	ಪ್ರಾಯೋಜಕ ಸಂಸ್ಥೆಯ ಒಬ್ಬ ನಾಮನಿರ್ದೇಶಿತರು	– ಸದಸ್ಯರು; ಮತ್ತು
(vi)	ಪರಿನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಇತರ ಸದಸ್ಯರು.	

(2) ಹಣಕಾಸು ಸಮಿತಿಯು ಹಣಕಾಸಿನ ವಿಷಯಗಳನ್ನು ಕೈಗೊಳ್ಳುವ ವಿಶ್ವವಿದ್ಯಾಲಯದ ಪ್ರಧಾನ ಹಣಕಾಸು ಸಂಸ್ಥೆಯಾಗಿರತಕ್ಕದ್ದು ಹಾಗೂ ಅದು ಈ ಅಧಿನಿಯಮ, ನಿಯಮಗಳು ಮತ್ತು ಪರಿನಿಯಮಗಳ ಉಪಬಂಧಗಳಿಗೆ ಒಳಪಟ್ಟು ವಿಶ್ವವಿದ್ಯಾಲಯದ ಹಣಕಾಸು ವಿಷಯಗಳನ್ನು ಸಮನ್ವಯಗೊಳಿಸತಕ್ಕದ್ದು ಮತ್ತು ಸಾಮಾನ್ಯ ಮೇಲ್ವಿಚಾರಣೆಯನ್ನು ನಡೆಸತಕ್ಕದ್ದು.

29. ಇತರ ಪ್ರಾಧಿಕಾರಗಳು.– ವಿಶ್ವವಿದ್ಯಾಲಯದ ಇತರ ಪ್ರಾಧಿಕಾರಗಳ ರಚನೆ, ಅಧಿಕಾರಗಳು ಹಾಗೂ ಪ್ರಕಾರ್ಯಗಳು ಪರಿನಿಯಮಗಳಿಂದ ನಿರ್ದಿಷ್ಟಪಡಿಸಬಹುದಾದಂತೆ ಇರತಕ್ಕದ್ದು.

30. ಒಂದು ಪ್ರಾಧಿಕಾರದ ಅಥವಾ ಸಂಸ್ಥೆಯ ಸದಸ್ಯತ್ವಕ್ಕೆ ಅನರ್ಹತೆ.– ವಿಶ್ವವಿದ್ಯಾಲಯದ ಸಂಸ್ಥೆಗಳ ಯಾವುವೇ ಪ್ರಾಧಿಕಾರದ ಒಬ್ಬ ವ್ಯಕ್ತಿಯು,–

(ಎ) ಅಸ್ವಸ್ಥ ಚಿತ್ತನಾಗಿದ್ದು ಹಾಗೆಂದು ಸಕ್ಷಮ ನ್ಯಾಯಾಲಯದಿಂದ ಘೋಷಿಸಲ್ಪಟ್ಟಿದ್ದರೆ;

(ಬಿ) ಅವಿಮುಕ್ತ ದಿವಾಳಿಯಾಗಿದ್ದರೆ;

(ಸಿ) ನೈತಿಕ ಅಧಃಪತನವನ್ನೊಳಗೊಳ್ಳುವ ಒಂದು ಅಪರಾಧಕ್ಕಾಗಿ ಅಪರಾಧಿ ಎಂದು ನಿರ್ಣೀತನಾಗಿದ್ದರೆ;

(ಡಿ) ಖಾಸಗಿ ಬೋಧನಾ ತರಗತಿಗಳನ್ನು ನಡೆಸುತ್ತಿದ್ದರೆ ಅಥವಾ ಸ್ವತಃ ನಿರತನಾಗಿದ್ದರೆ;

(ಇ) ಯಾವುದೇ ವಿಧದಲ್ಲಿ, ಎಲ್ಲಿಯೇ, ಯಾವುದೇ ಪರೀಕ್ಷೆಯನ್ನು ನಡೆಸುವಲ್ಲಿ ಅನುಚಿತ ಅಭ್ಯಾಸದಲ್ಲಿ ತೊಡಗಿದ್ದಕ್ಕಾಗಿ ಅಥವಾ ಉತ್ತೇಜಿಸಿದ್ದಕ್ಕಾಗಿ ದಂಡಿತನಾಗಿದ್ದರೆ;

(ಎಫ್) ಪ್ರಾಯೋಜಿತ ಸಂಸ್ಥೆಯು ಯಾವುವೇ ಪ್ರಾಧಿಕಾರಗಳ ಅಥವಾ ಸಂಸ್ಥೆಗಳ ಯಾವೊಬ್ಬ ಸದಸ್ಯನನ್ನು ಆ ಪದವನ್ನು ಹೊಂದಿರುವುದಕ್ಕೆ ಅರ್ಹನಲ್ಲನೆಂದು ಲಿಖಿತದಲ್ಲಿ ಅಭಿಪ್ರಾಯ ನೀಡಿದಾಗಲೆಲ್ಲಾ,

–ಸದಸ್ಯನಾಗಿರುವುದಕ್ಕೆ ಅನರ್ಹನಾಗತಕ್ಕದ್ದು.

31. ಖಾಲಿಸ್ಥಾನ ಇರುವ ಕಾರಣದಿಂದಾಗಿ ವ್ಯವಹರಣೆಗಳು ಅಸಿಂಧುವಾಗತಕ್ಕದ್ದಲ್ಲ.– ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಕಾರ್ಯ ಅಥವಾ ವ್ಯವಹರಣೆಗಳು ಕೇವಲ ಅದರಲ್ಲಿ ಯಾವುದೇ ಖಾಲಿಸ್ಥಾನ ಇದೆ ಎಂಬ ಕಾರಣದಿಂದ ಅಥವಾ ಪ್ರಾಧಿಕಾರದ ರಚನೆಯಲ್ಲಿ ದೋಷವಿದೆ ಎಂಬ ಕಾರಣದಿಂದ ಮಾತ್ರವೇ ಅಸಿಂಧುವಾಗತಕ್ಕದ್ದಲ್ಲ.

32. ಕಾರ್ಯಸೂಚಿ ವಿಷಯಗಳ ಬಗ್ಗೆ ಉಪಬಂಧಗಳು.– (1) ಯಾವುವೇ ಕಾರ್ಯಸೂಚಿ ವಿಷಯಗಳನ್ನು ಕುಲಾಧಿಪತಿಯವರ ಪೂರ್ವಾನುಮೋದನೆಯನ್ನು ಪಡೆಯದೇ ಪ್ರಬಂಧಕ ಮಂಡಳಿಯ ಅಥವಾ ವ್ಯವಸ್ಥಾಪನಾ ಮಂಡಳಿಯ ಅಥವಾ ಯಾವುದೇ ಸಮಿತಿಯ ಸಭೆಗಳ ಕಾರ್ಯಸೂಚಿ ವಿಷಯಗಳಲ್ಲಿ ಸೇರಿಸತಕ್ಕದ್ದಲ್ಲ ಅಥವಾ ಚರ್ಚೆಗೆ ತೆಗೆದುಕೊಳ್ಳತಕ್ಕದ್ದಲ್ಲ ಮತ್ತು ತೀರ್ಮಾನಿಸತಕ್ಕದ್ದಲ್ಲ.

(2) ಈ ಅಧಿನಿಯಮದ ಯಾವುದೇ ಉಪಬಂಧಗಳನ್ನು ಪಾಲಿಸದೆ ಇರುವ ಸಂದರ್ಭದಲ್ಲಿ, ಕುಲಾಧಿಪತಿಯವರು ವಿಶ್ವವಿದ್ಯಾಲಯದ ಯಾವುದೇ ಪದಾಧಿಕಾರಿ ಅಥವಾ ಸಂಸ್ಥೆಯು ತೆಗೆದುಕೊಂಡ ಎಲ್ಲಾ ತೀರ್ಮಾನಗಳನ್ನು ವಿಪರ್ಯಯಗೊಳಿಸುವ ಮೂಲಕ ಪರಿಹಾರ ಕ್ರಮಗಳನ್ನು ಕೂಡಲೇ ಕೈಗೊಳ್ಳಲು ಅಧಿಕಾರವನ್ನು ಎಲ್ಲಾ ಸಮಯದಲ್ಲಿ ಹೊಂದಿರತಕ್ಕದ್ದು ಮತ್ತು ಅಂಥ ಪರಿಹಾರ ಕ್ರಮದ ಪರಿಣಾಮವಾಗಿ ಅಧಿನಿಯಮದ ಉಪಬಂಧಗಳನ್ನು ಪಾಲಿಸದೇ ವಿಶ್ವವಿದ್ಯಾಲಯದ ಪದಾಧಿಕಾರಿ ಅಥವಾ ಸಂಸ್ಥೆಯು ಕೈಗೊಂಡಿದ್ದ ಎಲ್ಲಾ ಅಂಥ ಕ್ರಮಗಳು, ಮೊದಲಿನಿಂದಲೂ ಶೂನ್ಯ ಮತ್ತು ಅಕೃತ ಎಂದು ಭಾವಿಸತಕ್ಕದ್ದು ಹಾಗೂ ತತ್ಪರಿಣಾಮವಾಗಿ, ಉಪಬಂಧ ಪಾಲಿಸದೇ ಇದ್ದ ವಿಷಯ ಅಥವಾ ನಿರ್ಧಾರದ ಸಂಬಂಧದಲ್ಲಿ ಅದಕ್ಕೆ ಮುಂಚೆ ಇದ್ದ ವಸ್ತುಸ್ಥಿತಿಯೇ ಮುಂದುವರಿಯತಕ್ಕದ್ದು.

ಅಧ್ಯಾಯ – V

ಪರಿನಿಯಮಗಳು ಮತ್ತು ವಿನಿಯಮಗಳು

33. ಪರಿನಿಯಮಗಳು.– ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಪರಿನಿಯಮಗಳು ಈ ಮುಂದಿನ ಎಲ್ಲಾ ಅಥವಾ ಯಾವುವೇ ವಿಷಯಗಳಿಗೆ ಸಂಬಂಧಪಟ್ಟಂತೆ ಉಪಬಂಧ ಕಲ್ಪಿಸಬಹುದು, ಎಂದರೆ:–

(i) ವಿಶ್ವವಿದ್ಯಾಲಯದ ಪ್ರಾಧಿಕಾರಗಳ ಕಾರ್ಯಕಲಾಪಗಳನ್ನು ನಡೆಸುವ ಮತ್ತು ಈ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸದಿರುವ ಸಂಸ್ಥೆಗಳ ರಚನೆಯ ಕಾರ್ಯವಿಧಾನ;

(ii) ಶಾಶ್ವತ ಶಾಸನಬದ್ಧ ದತ್ತಿ ನಿಧಿ, ವಿಶ್ವವಿದ್ಯಾಲಯ ದತ್ತಿ ನಿಧಿ, ಸಾಮಾನ್ಯ ನಿಧಿ ಹಾಗೂ ಅಭಿವೃದ್ಧಿ ನಿಧಿಗಳ ನಿರ್ವಹಣೆ;

(iii) ಕುಲಪತಿಗಳು, ಕುಲಸಚಿವರು ಹಾಗೂ ಹಣಕಾಸು ಅಧಿಕಾರಿ ಇವರ ನೇಮಕಾತಿಯ ನಿಬಂಧನೆಗಳು ಹಾಗೂ ಷರತ್ತುಗಳು ಹಾಗೂ ಅವರ ಅಧಿಕಾರಗಳು ಮತ್ತು ಪ್ರಕಾರ್ಯಗಳು;

(iv) ವಿಶ್ವವಿದ್ಯಾಲಯದ ಇತರ ಅಧಿಕಾರಿಗಳ, ಅಧ್ಯಾಪಕರ ಮತ್ತು ನೌಕರರ ನೇಮಕಾತಿ ವಿಧಾನ ಹಾಗೂ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು;

(v) ವಿಶ್ವವಿದ್ಯಾಲಯ ಹಾಗೂ ಅದರ ಅಧಿಕಾರಿಗಳು, ವ್ಯಾಸಂಗ ವಿಭಾಗದ (ಫ್ಯಾಕಲ್ಟಿ) ಸದಸ್ಯರು, ನೌಕರರು ಹಾಗೂ ವಿದ್ಯಾರ್ಥಿಗಳ ನಡುವೆ ಉಂಟಾದ ವಿವಾದಗಳನ್ನು ಪರಿಹರಿಸುವ ಕಾರ್ಯವಿಧಾನ;

(vi) ವಿಭಾಗಗಳು ಮತ್ತು ವ್ಯಾಸಂಗ ವಿಭಾಗಗಳ (ಫ್ಯಾಕಲ್ಟಿಗಳ) ಸೃಜನೆ, ರದ್ಧತಿ ಅಥವಾ ಪುನಾರಚನೆ;

(vii) ಇತರ ವಿಶ್ವವಿದ್ಯಾಲಯಗಳು ಅಥವಾ ಉನ್ನತ ಕಲಿಕಾ ಸಂಸ್ಥೆಗಳ ಜೊತೆಯಲ್ಲಿ ಸಹಕರಿಸಬೇಕಾದ ರೀತಿ;

(viii) ಗೌರವ ಪದವಿಗಳ ನೀಡಿಕೆಯ ಕಾರ್ಯವಿಧಾನ;

(ix) ಉಚಿತ ಶಿಕ್ಷಣ (ಫ್ರಿಶಿಪ್) ಮತ್ತು ವಿದ್ಯಾರ್ಥಿವೇತನ ಮಂಜೂರಾತಿಗೆ ಸಂಬಂಧಿಸಿದ ಉಪಬಂಧಗಳು;

(x) ವಿವಿಧ ವ್ಯಾಸಂಗ ಕ್ರಮಗಳಲ್ಲಿನ ಸೀಟುಗಳ ಸಂಖ್ಯೆಗೆ ಸಂಬಂಧಿಸಿದ ಕಾರ್ಯನೀತಿಗಳು ಮತ್ತು ಅಂಥ ವ್ಯಾಸಂಗ ಕ್ರಮಗಳಿಗೆ ವಿದ್ಯಾರ್ಥಿಗಳ ಪ್ರವೇಶಕ್ಕೆ ಕಾರ್ಯವಿಧಾನ;

(xi) ವಿವಿಧ ವ್ಯಾಸಂಗ ಕ್ರಮಗಳಿಗೆ ವಿದ್ಯಾರ್ಥಿಗಳಿಗೆ ವಿಧಿಸಬಹುದಾದ ಶುಲ್ಕಕ್ಕೆ ಸಂಬಂಧಿಸಿದ ಕಾರ್ಯನೀತಿ;

(xii) ಸಂಶೋಧನಾ ವೇತನಗಳು (ಫೆಲೋಶಿಪ್‌ಗಳು), ವಿದ್ಯಾರ್ಥಿವೇತನಗಳು, ಶಿಷ್ಯವೇತನಗಳು, ಉಚಿತ ಶಿಕ್ಷಣ, ಪದಕಗಳು ಹಾಗೂ ಬಹುಮಾನಗಳನ್ನು ಪ್ರಾರಂಭಿಸುವುದು;

(xiii) ಪ್ರಬಂಧಕ ಮಂಡಳಿಯು ನಿರ್ಧರಿಸಬಹುದಾದ ಅಥವಾ ಈ ಅಧಿನಿಯಮದ ಅಡಿಯಲ್ಲಿ ಪರಿನಿಯಮಗಳ ಮೂಲಕ ಉಪಬಂಧ ಕಲ್ಪಿಸಬೇಕಾದ ಅಗತ್ಯತೆಯುಳ್ಳ ಯಾವುದೇ ಇತರ ವಿಷಯಗಳು.

34. ಪರಿನಿಯಮಗಳ ರಚನೆ ವಿಧಾನ.– (1) ವ್ಯವಸ್ಥಾಪನಾ ಮಂಡಳಿಯು ರಚಿಸಿದ ಮೊದಲ ಶಾಸನಗಳನ್ನು ಅನುಮೋದನೆಗಾಗಿ ಪ್ರಬಂಧಕ ಮಂಡಳಿಗೆ ಸಲ್ಲಿಸತಕ್ಕದ್ದು.

(2) ವ್ಯವಸ್ಥಾಪನಾ ಮಂಡಳಿಯು ಸಲ್ಲಿಸಿದ ಮೊದಲ ಪರಿನಿಯಮಗಳನ್ನು ಪ್ರಬಂಧಕ ಮಂಡಳಿಯು ಪರಿಗಣಿಸತಕ್ಕದ್ದು ಹಾಗೂ ತಾನು ಅವಶ್ಯವೆಂದು ಭಾವಿಸಬಹುದಾದ ಅಂಥ ಮಾರ್ಪಾಡುಗಳು, ಯಾವುದಾದರು ಇದ್ದಲ್ಲಿ, ಅವುಗಳೊಡನೆ ತನ್ನ ಅನುಮೋದನೆಯನ್ನು ನೀಡತಕ್ಕದ್ದು.

(3) ವಿಶ್ವವಿದ್ಯಾಲಯವು, ಪ್ರಬಂಧಕ ಮಂಡಳಿಯು ಅನುಮೋದಿಸಿದ ಮೊದಲ ಪರಿನಿಯಮಗಳನ್ನು ವಿಶ್ವವಿದ್ಯಾಲಯದ ಅಧಿಸೂಚನೆಯಲ್ಲಿ ಪ್ರಕಟಿಸತಕ್ಕದ್ದು ಮತ್ತು ತದನಂತರ ಮೊದಲ ಶಾಸನವು ಅದರ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

35. ಪರಿನಿಯಮಗಳ ತಿದ್ದುಪಡಿಯ ಅಧಿಕಾರ.– ಪ್ರಬಂಧಕ ಮಂಡಳಿಯು ಹೊಸ ಅಥವಾ ಹೆಚ್ಚುವರಿ ಪರಿನಿಯಮಗಳನ್ನು ರಚಿಸಬಹುದು ಅಥವಾ ಪರಿನಿಯಮಗಳ ತಿದ್ದುಪಡಿ ಮಾಡಬಹುದು ಅಥವಾ ಅವನ್ನು ನಿರಸನಗೊಳಿಸಬಹುದು.

36. ವಿನಿಯಮಗಳು.– ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ವಿನಿಯಮಗಳು ಈ ಮುಂದಿನ ವಿಷಯಗಳಿಗೆ ಉಪಬಂಧಗಳನ್ನು ಕಲ್ಪಿಸಬಹುದು, ಎಂದರೆ:–

(i) ವಿಶ್ವವಿದ್ಯಾಲಯಕ್ಕೆ ವಿದ್ಯಾರ್ಥಿಗಳ ಪ್ರವೇಶ ಮತ್ತು ವಿದ್ಯಾರ್ಥಿ ಪಟ್ಟಿಯಲ್ಲಿ ಅವರುಗಳ ದಾಖಲಾತಿ ಹಾಗೂ ಮುಂದುವರಿಕೆ;

(ii) ವಿಶ್ವವಿದ್ಯಾಲಯದ ಎಲ್ಲಾ ಪದವಿಗಳು ಮತ್ತು ಇತರ ಶೈಕ್ಷಣಿಕ ಪ್ರಶಸ್ತಿಗಳಿಗಾಗಿ ನಿಗದಿಪಡಿಸತಕ್ಕ ವ್ಯಾಸಂಗ ಕ್ರಮಗಳು;

(iii) ಪದವಿಗಳ ಮತ್ತು ಇತರ ಶೈಕ್ಷಣಿಕ ಪ್ರಶಸ್ತಿಗಳ ಪ್ರದಾನ;

(iv) ಸಂಶೋಧನಾ ವೇತನಗಳು (ಫೆಲೋಶಿಪ್), ವಿದ್ಯಾರ್ಥಿವೇತನಗಳು, ಶಿಷ್ಯವೇತನಗಳು, ಪದಕಗಳು ಮತ್ತು ಬಹುಮಾನಗಳನ್ನು ನೀಡಲು ಷರತ್ತುಗಳು;

(v) ಪರೀಕ್ಷೆಗಳನ್ನು ನಡೆಸುವುದು ಹಾಗೂ ಪರೀಕ್ಷೆ ನಡೆಸುವ ಸಂಸ್ಥೆಗಳು, ಪರೀಕ್ಷಕರು, ಪರೀಕ್ಷಾ ಮೇಲ್ವಿಚಾರಕರು, ಟ್ಯಾಬುಲೇಟರ್‌ಗಳು ಮತ್ತು ಮಾಡರೇಟರ್‌ಗಳ ನೇಮಕಾತಿ ಷರತ್ತುಗಳು ಮತ್ತು ವಿಧಾನ ಹಾಗೂ ಅವರ ಕರ್ತವ್ಯಗಳು;

(vi) ವಿಶ್ವವಿದ್ಯಾಲಯದ ಪರೀಕ್ಷೆಗಳಿಗೆ, ಪದವಿಗಳಿಗೆ ಹಾಗೂ ಇತರ ಶೈಕ್ಷಣಿಕ ಪ್ರಶಸ್ತಿಗಳಿಗೆ ಪ್ರವೇಶಕ್ಕೆ ವಿಧಿಸತಕ್ಕ ಶುಲ್ಕ;

(vii) ವಿಶ್ವವಿದ್ಯಾಲಯ ಅಥವಾ ಒಂದು ಘಟಕ ಕಾಲೇಜಿನಲ್ಲಿ ವಿದ್ಯಾರ್ಥಿಗಳ ನಿವಾಸಕ್ಕಾಗಿ ಷರತ್ತುಗಳು;

(viii) ವಿಶ್ವವಿದ್ಯಾಲಯ ಅಥವಾ ಒಂದು ಘಟಕ ಕಾಲೇಜಿನ ವಿದ್ಯಾರ್ಥಿಗಳಲ್ಲಿ ಶಿಸ್ತು ಪಾಲನೆ;

(ix) ಈ ಅಧಿನಿಯಮದ ಅಡಿಯಲ್ಲಿನ ಪರಿನಿಯಮಗಳಲ್ಲಿ ಉಪಬಂಧ ಕಲ್ಪಿಸಬಹುದಾಂಥ ಇತರ ಎಲ್ಲಾ ವಿಷಯಗಳು.

37. ವಿನಿಯಮಗಳ ರಚನೆ ವಿಧಾನ.– ವಿನಿಯಮಗಳನ್ನು ಶೈಕ್ಷಣಿಕ ಪರಿಷತ್ತು ರಚಿಸತಕ್ಕದ್ದು ಹಾಗೂ ವ್ಯವಸ್ಥಾಪನಾ ಮಂಡಳಿಯು ಅನುಮೋದಿಸತಕ್ಕದ್ದು.

38. ವಿನಿಯಮಗಳ ತಿದ್ದುಪಡಿಗೆ ಅಧಿಕಾರ.– ವ್ಯವಸ್ಥಾಪನಾ ಮಂಡಳಿಯ ಅನುಮೋದನೆಯೊಡನೆ ಶೈಕ್ಷಣಿಕ ಪರಿಷತ್ತು ಹೊಸ ವಿನಿಯಮಗಳನ್ನು ಅಥವಾ ಹೆಚ್ಚುವರಿ ವಿನಿಯಮಗಳನ್ನು ರಚಿಸಬಹುದು ಅಥವಾ ವಿನಿಯಮಗಳ ತಿದ್ದುಪಡಿ ಮಾಡಬಹುದು ಅಥವಾ ನಿರಸನಗೊಳಿಸಬಹುದು.

39. ಶುಲ್ಕ ನಿಯಂತ್ರಣ ಸಮಿತಿ.– (1) ಪ್ರಬಂಧಕ ಮಂಡಳಿಯು ರಚಿಸಿದ ಹಾಗೂ ವಿಶ್ವವಿದ್ಯಾಲಯದ ಕುಲಾಧಿಪತಿ ಇವರು ಮುಖ್ಯಸ್ಥರಾಗಿರುವ, ಒಂದು ಶುಲ್ಕ ನಿಯಂತ್ರಣ ಸಮಿತಿಯು ಇರತಕ್ಕದ್ದು ಮತ್ತು ಇದು ಉನ್ನತ ಶಿಕ್ಷಣದ ಪ್ರಭಾರದಲ್ಲಿರುವ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಅಥವಾ ಕಾರ್ಯದರ್ಶಿಗಳು, ಕಾಲೇಜು ಶಿಕ್ಷಣದ ಆಯುಕ್ತರು ಮತ್ತು ಪ್ರಬಂಧಕ ಮಂಡಳಿಯು ನಾಮನಿರ್ದೇಶನ ಮಾಡಿದ ಇತರ ಇಬ್ಬರು ಸದಸ್ಯರನ್ನು ಒಳಗೊಂಡಿರತಕ್ಕದ್ದು.

(2) ಸಮಿತಿಯು, ಎಲ್ಲಾ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಶುಲ್ಕದ ಸ್ವರೂಪವನ್ನು ನಿಗದಿಪಡಿಸುವುದಕ್ಕಾಗಿ ಪರಿನಿಯಮಗಳಿಗೆ ಸುಸಂಗತವಾದ ಕಾರ್ಯವಿಧಾನ ಮತ್ತು ಪದ್ಧತಿಗಳನ್ನು ರೂಪಿಸತಕ್ಕದ್ದು.

(3) ಸಮಿತಿಯು ಹಾಗೆ ಪ್ರಸ್ತಾಪಿಸಿದ ಶುಲ್ಕದ ಸ್ವರೂಪವನ್ನು ಪ್ರಬಂಧಕ ಮಂಡಳಿಯ ಮುಂದೆ ಅದರ ಅನುಮೋದನೆಗಾಗಿ ಮಂಡಿಸತಕ್ಕದ್ದು.

ಅಧ್ಯಾಯ – VI

ಸಂಕೀರ್ಣ

40. ನೌಕರರ ಸೇವಾ ಷರತ್ತುಗಳು.– (1) ಪರಿನಿಯಮಗಳ ಮತ್ತು ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದ ಅಥವಾ ನಿಯಮಗಳ ಮೂಲಕ ನಿಯಮಿಸಬಹುದಾದ ಅಂಥ ನಿಬಂಧನೆಗಳು ಮತ್ತು ಷರತ್ತುಗಳು, ಯಾವುದಾದರೂ ಇದ್ದಲ್ಲಿ, ಅವುಗಳಿಗೆ ಒಳಪಟ್ಟು ಪ್ರತಿಯೊಬ್ಬ ನೌಕರನು ಲಿಖಿತ ಕರಾರಿನ ಅಡಿಯಲ್ಲಿ ನೇಮಕಗೊಳ್ಳತಕ್ಕದ್ದು ಮತ್ತು ಅದನ್ನು ವಿಶ್ವವಿದ್ಯಾಲಯದಲ್ಲಿ ಇಟ್ಟುಕೊಳ್ಳತಕ್ಕದ್ದು ಹಾಗೂ ಅದರ ಪ್ರತಿಯನ್ನು ಸಂಬಂಧಪಟ್ಟ ನೌಕರನಿಗೆ ನೀಡತಕ್ಕದ್ದು.

(2) ನೌಕರರ ವಿರುದ್ಧ ಶಿಸ್ತು ಕ್ರಮವನ್ನು ಪರಿನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದ ಕಾರ್ಯವಿಧಾನಗಳ ಮೂಲಕ ನಿಯಂತ್ರಿಸತಕ್ಕದ್ದು.

(3) ಕರಾರಿನಿಂದಾಗಿ ವಿಶ್ವವಿದ್ಯಾಲಯ ಮತ್ತು ನೌಕರನ ಮಧ್ಯದಲ್ಲಿ ಉದ್ಭವಿಸಬಹುದಾದ ಯಾವುದೇ ವಿವಾದವನ್ನು, ಲಿಖಿತ ಕರಾರಿನಲ್ಲಿ ಉಪಬಂಧಿಸಿದ ವಿಧಾನದಲ್ಲಿ ಹಾಗೂ ಪರಿನಿಯಮಗಳ ಅನುಸಾರವಾಗಿ ಪರಿಹರಿಸತಕ್ಕದ್ದು.

41. ಮೇಲ್ಮನವಿ ಹಕ್ಕು.– ವಿಶ್ವವಿದ್ಯಾಲಯವು ತನ್ನ ನೌಕರರ ಅಥವಾ ವಿದ್ಯಾರ್ಥಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಂಡ ಸಂದರ್ಭದಲ್ಲಿ, ಬಾಧಿತ ನೌಕರ ಅಥವಾ ವಿದ್ಯಾರ್ಥಿಗಳು ಪರಿನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಮೇಲ್ಮನವಿ ಹಕ್ಕನ್ನು ಹೊಂದಿರತಕ್ಕದ್ದು.

42. ಭವಿಷ್ಯ ಅಥವಾ ನಿವೃತ್ತಿ ವೇತನ ನಿಧಿ .– ವಿಶ್ವವಿದ್ಯಾಲಯವು, ತನ್ನ ನೌಕರರ ಪ್ರಯೋಜನಕ್ಕಾಗಿ, ಪರಿನಿಯಮಗಳು ಮತ್ತು ಜಾರಿಯಲ್ಲಿರುವ ಕಾನೂನುಗಳ ಮೂಲಕ ನಿರ್ದಿಷ್ಟಪಡಿಸಬಹುದಾದ ಅಂಥ ವಿಧಾನದಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ಭವಿಷ್ಯ ಅಥವಾ ನಿವೃತ್ತಿ ವೇತನ ನಿಧಿಯನ್ನು ರಚಿಸತಕ್ಕದ್ದು ಹಾಗೂ ಅಂಥ ವಿಮಾ ಯೋಜನೆಗಳನ್ನು ಒದಗಿಸತಕ್ಕದ್ದು.

43. ವಿಶ್ವವಿದ್ಯಾಲಯದ ಪ್ರಾಧಿಕಾರಗಳು ಮತ್ತು ಸಂಸ್ಥೆಗಳ ರಚನೆಯ ವಿವಾದಗಳು.– ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ಇತರ ಸಂಸ್ಥೆಯ ಸದಸ್ಯನಾಗಿ ಯಾವೊಬ್ಬ ವ್ಯಕ್ತಿಯು ಸೂಕ್ತವಾಗಿ ಆಯ್ಕೆಯಾಗಿದ್ದಾನೆಯೇ ಅಥವಾ ನೇಮಕಗೊಂಡಿದ್ದಾನೆಯೇ ಅಥವಾ ಅದಕ್ಕೆ ಅರ್ಹನಾಗಿದ್ದಾನೆಯೇ ಎಂಬ ಯಾವುದೇ ಪ್ರಶ್ನೆ ಉದ್ಭವಿಸಿದರೆ, ಆ ವಿಷಯವನ್ನು ತೀರ್ಮಾನಕ್ಕಾಗಿ ಕುಲಾಧಿಪತಿಯವರಿಗೆ ಕಳುಹಿಸತಕ್ಕದ್ದು ಮತ್ತು ಅವರ ತೀರ್ಮಾನವು ಅಂತಿಮವಾಗಿರತಕ್ಕದ್ದು.

44. ಸಮಿತಿಗಳ ರಚನೆ.– 22ನೇ ಪ್ರಕರಣದಲ್ಲಿ ನಮೂದಿಸಿದ ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರವು ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ಅಧಿಕಾರವನ್ನು ಹೊಂದಿರುವ ಅಂಥ ಸದಸ್ಯರನ್ನು ಒಳಗೊಂಡ ಅಂಥ ಪ್ರಾಧಿಕಾರದ ಒಂದು ಸಮಿತಿಯನ್ನು ರಚಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.

45. ಆಕಸ್ಮಿಕವಾಗಿ ಖಾಲಿಯಾದ ಸ್ಥಾನಗಳನ್ನು ತುಂಬುವುದು.– ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ಸಂಸ್ಥೆಯ ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ, ಸದಸ್ಯರ ಪೈಕಿ ಯಾವುದೇ ಸ್ಥಾನವು ಆಕಸ್ಮಿಕವಾಗಿ ಖಾಲಿಯಾದರೆ, ಯಾರ ಸ್ಥಾನವು ಖಾಲಿಯಾಗಿ ತುಂಬಬೇಕಾಗಿ ಬಂದಿದೆಯೋ ಆ ಸದಸ್ಯನನ್ನು ಯಾವ ರೀತಿಯಲ್ಲಿ ಆರಿಸಲಾಗಿತ್ತೋ ಅದೇ ರೀತಿಯಲ್ಲಿ ಹೊಸ ಸದಸ್ಯನನ್ನು ಆರಿಸಿ ಭರ್ತಿ ಮಾಡತಕ್ಕದ್ದು ಮತ್ತು ಹಾಗೆ ಖಾಲಿ ಸ್ಥಾನವನ್ನು ಭರ್ತಿ ಮಾಡಿದ ವ್ಯಕ್ತಿಯು ಆತನು ಯಾವ ಸದಸ್ಯನ ಸ್ಥಾನದಲ್ಲಿ ಭರ್ತಿಯಾಗಿರುವನೋ ಆ ಸದಸ್ಯನು ಪ್ರಾಧಿಕಾರ ಅಥವಾ ಸಂಸ್ಥೆಯ ಸದಸ್ಯನಾಗಿ ಉಳಿಯುತ್ತಿದ್ದ ಬಾಕಿ ಅವಧಿಯವರೆಗೆ ಮಾತ್ರ ಸದಸ್ಯನಾಗಿರತಕ್ಕದ್ದು.

46. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.– ಈ ಅಧಿನಿಯಮ ಅಥವಾ ಪರಿನಿಯಮಗಳು ಅಥವಾ ನಿಯಮಗಳಿಗೆ ಅನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ವಿಶ್ವವಿದ್ಯಾಲಯದ ಯಾವೊಬ್ಬ ಅಧಿಕಾರಿ ಅಥವಾ ಇತರ ನೌಕರರ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ನಡೆಸಲು ಅವಕಾಶ ಇರತಕ್ಕದ್ದಲ್ಲ.

47. ತಾತ್ಕಾಲಿಕ ಉಪಬಂಧಗಳು.– ಈ ಅಧಿನಿಯಮ ಮತ್ತು ಪರಿನಿಯಮಗಳ ಯಾವುದೇ ಇತರ ಉಪಬಂಧಗಳಲ್ಲಿ ಏನೇ ಇದ್ದರೂ,–

(i) ಮೊದಲ ಕುಲಪತಿ ಮತ್ತು ಸಹಕುಲಪತಿ, ಯಾರಾದರೂ ಇದ್ದರೆ, ಅವರನ್ನು ಕುಲಾಧಿಪತಿಯವರು ನೇಮಕಮಾಡತಕ್ಕದ್ದು;

(ii) ಮೊದಲ ಕುಲಸಚಿವರನ್ನು ಮತ್ತು ಮೊದಲ ಹಣಕಾಸು ಅಧಿಕಾರಿಯವರನ್ನು ಕುಲಾಧಿಪತಿಯವರು ನೇಮಕಮಾಡತಕ್ಕದ್ದು; ಮತ್ತು

(iii) ಮೊದಲ ವ್ಯವಸ್ಥಾಪನ ಮಂಡಳಿ, ಮೊದಲ ಹಣಕಾಸು ಸಮಿತಿ, ಮೊದಲ ಸಂಶೋಧನೆ ಮತ್ತು ಅನ್ವೇಷಣಾ ಪರಿಷತ್ತು ಹಾಗೂ ಮೊದಲ ಶೈಕ್ಷಣಿಕ ಪರಿಷತ್ತನ್ನು ಕುಲಾಧಿಪತಿಯವರು ರಚಿಸತಕ್ಕದ್ದು.

48. ಶಾಶ್ವತ ಶಾಸನಬದ್ಧ ದತ್ತಿ ನಿಧಿ.– (1) ವಿಶ್ವವಿದ್ಯಾಲಯವು, ಕನಿಷ್ಠ ಇಪ್ಪತ್ತೈದು ಕೋಟಿ ರೂಪಾಯಿಗಳನ್ನುಳ್ಳ ಒಂದು ಶಾಶ್ವತ ಶಾಸನಬದ್ಧ ದತ್ತಿ ನಿಧಿಯನ್ನು ಸ್ಥಾಪಿಸತಕ್ಕದ್ದು ಮತ್ತು ಈ ನಿಧಿಯನ್ನು ಸ್ವಪ್ರೇರಣೆಯಿಂದ ಹೆಚ್ಚಿಸಬಹುದು ಆದರೆ ಅದಕ್ಕಿಂತ ಕಡಿಮೆ ಮಾಡತಕ್ಕದ್ದಲ್ಲ.

(2) ವಿಶ್ವವಿದ್ಯಾಲಯವು, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಶಾಶ್ವತ ಶಾಸನಬದ್ಧ ದತ್ತಿ ನಿಧಿಯ ಹಣವನ್ನು ಹೂಡಲು ಅಧಿಕಾರವನ್ನು ಹೊಂದಿರತಕ್ಕದ್ದು.

(3) ವಿಶ್ವವಿದ್ಯಾಲಯವು ಸಾಮಾನ್ಯ ನಿಧಿ ಅಥವಾ ಅಭಿವೃದ್ಧಿ ನಿಧಿಯಿಂದ ಯಾವುದೇ ಮೊಬಲಗನ್ನು ಶಾಶ್ವತ ಶಾಸನಬದ್ಧ ದತ್ತಿ ನಿಧಿಗೆ ವರ್ಗಾವಣೆ ಮಾಡಬಹುದು. ವಿಶ್ವವಿದ್ಯಾಲಯವನ್ನು ಸಮಾಪನಗೊಳಿಸುವ ಸಂದರ್ಭವನ್ನು ಹೊರತುಪಡಿಸಿ, ಇತರ ಯಾವ ಸಂದರ್ಭಗಳಲ್ಲೂ ಶಾಶ್ವತ ಶಾಸನಬದ್ಧ ದತ್ತಿ ನಿಧಿಯಿಂದ ಯಾವುದೇ ಮೊಬಲಗನ್ನೂ ಇತರ ಉದ್ದೇಶಗಳಿಗಾಗಿ ವರ್ಗಾಯಿಸತಕ್ಕದ್ದಲ್ಲ.

(4) ಶಾಶ್ವತ ಶಾಸನಬದ್ಧ ದತ್ತಿ ನಿಧಿಯಿಂದ ಸ್ವೀಕರಿಸಿದ ವರಮಾನದ ಶೇಕಡಾ ಎಪ್ಪತ್ತೈದರಷ್ಟನ್ನು ವಿಶ್ವವಿದ್ಯಾಲಯದ ಅಭಿವೃದ್ಧಿ ಅಥವಾ ಸಾಮಾನ್ಯ ಕೆಲಸಗಳ ಉದ್ದೇಶಗಳಿಗಾಗಿ ಬಳಸಿಕೊಳ್ಳತಕ್ಕದ್ದು. ಉಳಿದ ಶೇಕಡಾ ಇಪ್ಪತ್ತೈದರಷ್ಟನ್ನು ಶಾಶ್ವತ ಶಾಸನಬದ್ಧ ದತ್ತಿ ನಿಧಿಯಲ್ಲಿ ಪುನಃ ತೊಡಗಿಸತಕ್ಕದ್ದು.

49. ವಿಶ್ವವಿದ್ಯಾಲಯದ ದತ್ತಿ ನಿಧಿ.– (1) ವಿಶ್ವವಿದ್ಯಾಲಯವು, ಪ್ರಾಯೋಜಕ ಸಂಸ್ಥೆಯು ನಿರ್ಧರಿಸಬಹುದಾದಂತೆ ನಿಧಿಗಳನ್ನು ಒಳಗೊಂಡ ವಿಶ್ವವಿದ್ಯಾಲಯದ ದತ್ತಿ ನಿಧಿಯನ್ನು ಸ್ಥಾಪಿಸತಕ್ಕದ್ದು. ಇದು ಕಾಲಕಾಲಕ್ಕೆ ಸ್ವೀಕರಿಸಬಹುದಾದ ದೇಣಿಗೆಗಳು ಮತ್ತು ಇತರ ನಿಧಿಗಳನ್ನು ಒಳಗೊಂಡಿರತಕ್ಕದ್ದು.

(2) ವಿಶ್ವವಿದ್ಯಾಲಯವು, ಪರಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದ ವಿಧಾನದಲ್ಲಿ ವಿಶ್ವವಿದ್ಯಾಲಯದ ದತ್ತಿನಿಧಿಯನ್ನು ಹೂಡುವ ಅಧಿಕಾರವನ್ನು ಹೊಂದಿರತಕ್ಕದ್ದು.

(3) ವಿಶ್ವವಿದ್ಯಾಲಯ ದತ್ತಿ ನಿಧಿಯು, ವಿಶ್ವವಿದ್ಯಾಲಯವು ತನ್ನ ಸಾಮಾಜಿಕ ಧ್ಯೇಯೋದ್ದೇಶಗಳನ್ನು ನೆರವೇರಿಸುವ ಸಂದರ್ಭದಲ್ಲಿ ಮತ್ತು/ಅಥವಾ ಮುಂಗಾಣದ ಸನ್ನಿವೇಶದಲ್ಲಿ ಉದ್ಭವಿಸಬಹುದಾದ ಹಣಕಾಸು ಸವಾಲುಗಳಿಂದ ತನ್ನನ್ನು ರಕ್ಷಿಸಿಕೊಳ್ಳುವುದಕ್ಕಾಗಿ, ಸ್ವಇಚ್ಛೆಯಿಂದ ನಿರ್ವಹಿಸಿಕೊಂಡು ಬರಲು ಮತ್ತು ಜವಾಬ್ದಾರಿಯಿಂದ ಹಣ ಹೂಡಿಕೆ ಮಾಡಲು ಇಚ್ಛೆಯುಳ್ಳವರಾಗಿ ಸ್ವಯಂ ವಿಧಿಸಿಕೊಂಡ ನಿಧಿಯಾಗಿರತಕ್ಕದ್ದು.

(4) ವಿಶ್ವವಿದ್ಯಾಲಯವು, ಸಾಮಾನ್ಯ ನಿಧಿ ಅಥವಾ ಅಭಿವೃದ್ಧಿ ನಿಧಿಯಿಂದ ಯಾವುದೇ ಮೊಬಲಗನ್ನು ವಿಶ್ವವಿದ್ಯಾಲಯದ ದತ್ತಿ ನಿಧಿಗೆ ವರ್ಗಾಯಿಸಬಹುದು. ವಿಶ್ವವಿದ್ಯಾಲಯದ ಸಮಾಪಣೆಗೊಳಿಸುವ ಸಂದರ್ಭವನ್ನು ಹೊರತುಪಡಿಸಿ, ಇತರ ಯಾವ ಸಂದರ್ಭಗಳಲ್ಲೂ ವಿಶ್ವವಿದ್ಯಾಲಯದ ದತ್ತಿ ನಿಧಿಯಿಂದ ಯಾವುದೇ ಮೊಬಲಗನ್ನು ಇತರ ಉದ್ದೇಶಗಳಿಗಾಗಿ ವರ್ಗಾಯಿಸತಕ್ಕದ್ದಲ್ಲ.

(5) ವಿಶ್ವವಿದ್ಯಾಲಯದ ದತ್ತಿ ನಿಧಿಯಿಂದ ಬರುವ ವರಮಾನದ ಶೇಕಡಾ ಎಂಭತ್ತರಷ್ಟನ್ನು ವಿಶ್ವವಿದ್ಯಾಲಯದ ಅಭಿವೃದ್ಧಿ ಅಥವಾ ಸಾಮಾನ್ಯ ಕೆಲಸದ ಉದ್ದೇಶಗಳಿಗಾಗಿ ಬಳಸಿಕೊಳ್ಳತಕ್ಕದ್ದು. ಉಳಿದ ಶೇಕಡಾ ಇಪ್ಪತ್ತರಷ್ಟನ್ನು ವಿಶ್ವವಿದ್ಯಾಲಯದ ದತ್ತಿ ನಿಧಿಯಲ್ಲಿ ಪುನಃ ತೊಡಗಿಸತಕ್ಕದ್ದು.

50. ಸಾಮಾನ್ಯ ನಿಧಿ.– (1) ವಿಶ್ವವಿದ್ಯಾಲಯವು, ಒಂದು ಸಾಮಾನ್ಯ ನಿಧಿಯನ್ನು ಸ್ಥಾಪಿಸತಕ್ಕದ್ದು. ಇದರಲ್ಲಿ ಈ ಮುಂದಿನ ಮೊಬಲಗುಗಳನ್ನು ಜಮಾ ಮಾಡತಕ್ಕದ್ದು, ಎಂದರೆ:–

(i) ವಿಶ್ವವಿದ್ಯಾಲಯವು ವಿಧಿಸಬಹುದಾದ ಎಲ್ಲಾ ಶುಲ್ಕಗಳು;

(ii) ಯಾವುದೇ ಇತರ ಮೂಲದಿಂದ ಸ್ವೀಕರಿಸಲಾದ ಎಲ್ಲಾ ಮೊತ್ತ;

(iii) ವಿಶ್ವವಿದ್ಯಾಲಯಕ್ಕೆ ಮಾಡಿದ ಎಲ್ಲಾ ದೇಣಿಗೆಗಳು;

(iv) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ನಿಷೇಧಿಸದೇ ಇರುವ ಯಾವೊಬ್ಬ ಇತರ ವ್ಯಕ್ತಿ ಅಥವಾ ಸಂಸ್ಥೆಯು ಈ ಸಂಬಂಧದಲ್ಲಿ ಕೊಟ್ಟ ಎಲ್ಲಾ ದೇಣಿಗೆಗಳು/ವಂತಿಗೆಗಳು;

(2) ಸಾಮಾನ್ಯ ನಿಧಿಗೆ ಜಮಾ ಮಾಡುವ ನಿಧಿಗಳನ್ನು ವಿಶ್ವವಿದ್ಯಾಲಯದ ಎಲ್ಲಾ ಆವರ್ತಕ ವೆಚ್ಚಗಳನ್ನು ಭರಿಸಲು ಉಪಯೋಗಿಸಿಕೊಳ್ಳತಕ್ಕದ್ದು.

51. ಅಭಿವೃದ್ಧಿ ನಿಧಿ.– (1) ವಿಶ್ವವಿದ್ಯಾಲಯವು, ಒಂದು ಅಭಿವೃದ್ಧಿ ನಿಧಿಯನ್ನು ಸಹ ಸ್ಥಾಪಿಸತಕ್ಕದ್ದು. ಇದರಲ್ಲಿ ಈ ಮುಂದಿನ ಮೊಬಲಗುಗಳನ್ನು ಜಮಾ ಮಾಡತಕ್ಕದ್ದು, ಎಂದರೆ:–

(i) ವಿದ್ಯಾರ್ಥಿಗಳಿಂದ ವಿಧಿಸಬಹುದಾದ ಅಭಿವೃದ್ಧಿ ಶುಲ್ಕಗಳು;

(ii) ವಿಶ್ವವಿದ್ಯಾಲಯದ ಅಭಿವೃದ್ಧಿಯ ಉದ್ದೇಶಗಳಿಗಾಗಿ ಯಾವುದೇ ಇತರ ಮೂಲಗಳಿಂದ ಸ್ವೀಕರಿಸಿದ ಎಲ್ಲಾ ಮೊತ್ತ;

(iii) ವಿಶ್ವವಿದ್ಯಾಲಯಕ್ಕೆ ಮಾಡಿದ ಎಲ್ಲಾ ವಂತಿಗೆಗಳು;

(iv) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ನಿಷೇಧಿಸದೇ ಇರುವ ಯಾವೊಬ್ಬ ಇತರ ವ್ಯಕ್ತಿ ಅಥವಾ ಸಂಸ್ಥೆಯು ಈ ಸಂಬಂಧದಲ್ಲಿ ಕೊಟ್ಟ ಎಲ್ಲಾ ದೇಣಿಗೆಗಳು/ವಂತಿಗೆಗಳು; ಮತ್ತು

(v) ಶಾಶ್ವತ ಶಾಸನಬದ್ಧ ದತ್ತಿ ನಿಧಿಯಿಂದ ಸ್ವೀಕರಿಸಲಾದ ಎಲ್ಲಾ ವರಮಾನಗಳು.

(2) ಅಭಿವೃದ್ಧಿ ನಿಧಿಗೆ ಕಾಲಕಾಲಕ್ಕೆ ಜಮಾ ಮಾಡಿದ ನಿಧಿಯನ್ನು ವಿಶ್ವವಿದ್ಯಾಲಯದ ಅಭಿವೃದ್ಧಿಗಾಗಿ ಉಪಯೋಗಿಸಿಕೊಳ್ಳತಕ್ಕದ್ದು.

52. ನಿಧಿಗಳ ನಿರ್ವಹಣೆ.– 48, 49, 50 ಮತ್ತು 51ನೇ ಪ್ರಕರಣಗಳಡಿಯಲ್ಲಿ ಸ್ಥಾಪಿಸಲಾದ ನಿಧಿಗಳನ್ನು ಪ್ರಬಂಧಕ ಮಂಡಳಿಯ ಸಾಮಾನ್ಯ ಮೇಲ್ವಿಚಾರಣೆ ಮತ್ತು ನಿಯಂತ್ರಣಕ್ಕೆ ಒಳಪಟ್ಟು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ನಿಯಂತ್ರಿಸತಕ್ಕದ್ದು ಹಾಗೂ ನಿರ್ವಹಿಸತಕ್ಕದ್ದು.

53. ವಾರ್ಷಿಕ ವರದಿ.– (1) ವಿಶ್ವವಿದ್ಯಾಲಯದ ವಾರ್ಷಿಕ ವರದಿಯನ್ನು ವ್ಯವಸ್ಥಾಪನಾ ಮಂಡಳಿಯ ನಿರ್ದೇಶನದಲ್ಲಿ ತಯಾರಿಸತಕ್ಕದ್ದು ಮತ್ತು ಅದರ ಅನುಮೋದನೆಗಾಗಿ ಪ್ರಬಂಧಕ ಮಂಡಳಿಗೆ ಸಲ್ಲಿಸತಕ್ಕದ್ದು.

(2) ಪ್ರಬಂಧಕ ಮಂಡಳಿಯು ವಾರ್ಷಿಕ ವರದಿಯನ್ನು ತನ್ನ ಸಭೆಯಲ್ಲಿ ಪರಿಗಣಿಸತಕ್ಕದ್ದು ಹಾಗೂ ಅದನ್ನು ಮಾರ್ಪಾಡುಗಳೊಡನೆ ಅಥವಾ ಮಾರ್ಪಾಡುಗಳಿಲ್ಲದೆ ಅನುಮೋದಿಸಬಹುದು.

(3) ಪ್ರಬಂಧಕ ಮಂಡಳಿಯು ಸೂಕ್ತವಾಗಿ ಅನುಮೋದಿಸಿದ ವಾರ್ಷಿಕ ವರದಿಯ ಒಂದು ಪ್ರತಿಯನ್ನು ಪ್ರತಿವರ್ಷದ ಮಾರ್ಚ್ 31ಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದ ತರುವಾಯ ಬರುವ ಡಿಸೆಂಬರ್ 31ಕ್ಕೆ ಮೊದಲು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

54. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.– (1) ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕ ಪತ್ರ ಮತ್ತು ಜಮಾ ಖರ್ಚು ಪಟ್ಟಿಯನ್ನು ವ್ಯವಸ್ಥಾಪನಾ ಮಂಡಳಿಯ ನಿರ್ದೇಶನದಲ್ಲಿ ತಯಾರಿಸತಕ್ಕದ್ದು ಮತ್ತು ವಿಶ್ವವಿದ್ಯಾಲಯಕ್ಕೆ ಎಲ್ಲಾ ಮೂಲಗಳಿಂದ ಪ್ರಾಪ್ತವಾಗುವ ಅಥವಾ ಸ್ವೀಕರಿಸಲಾಗುವ ಎಲ್ಲಾ ನಿಧಿಗಳು ಹಾಗೂ ವಿತರಿಸಿದ ಅಥವಾ ಸಂದಾಯ ಮಾಡಿದ ಎಲ್ಲಾ ಮೊಬಲಗುಗಳನ್ನು ವಿಶ್ವವಿದ್ಯಾಲಯವು ನಿರ್ವಹಿಸುವ ಲೆಕ್ಕಪತ್ರದಲ್ಲಿ ನಮೂದಿಸತಕ್ಕದ್ದು.

(2) ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳನ್ನು ಪ್ರತಿ ವರ್ಷವೂ ಭಾರತದ ಚಾರ್ಟೆಡ್ ಅಕೌಂಟೆಂಟ್‌ಗಳ ಸಂಸ್ಥೆಯ ಸದಸ್ಯರಾಗಿರುವ ಒಬ್ಬ ಲೆಕ್ಕಪರಿಶೋಧಕರಿಂದ ಲೆಕ್ಕಪರಿಶೋಧನೆ ಮಾಡಿಸತಕ್ಕದ್ದು.

(3) ವಾರ್ಷಿಕ ಲೆಕ್ಕಪತ್ರಗಳು ಮತ್ತು ಜಮಾ ಖರ್ಚು ಪಟ್ಟಿಯನ್ನು ಲೆಕ್ಕಪರಿಶೋಧನಾ ವರದಿಯೊಡನೆ, ಪ್ರತಿ ವರ್ಷದ ಮಾರ್ಚ್ 31ಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದ ತರುವಾಯ ಬರುವ ನವೆಂಬರ್ 30ಕ್ಕೆ ಮೊದಲು ಪ್ರಬಂಧಕ ಮಂಡಳಿಗೆ ಸಲ್ಲಿಸತಕ್ಕದ್ದು.

(4) ವಾರ್ಷಿಕ ಲೆಕ್ಕಪತ್ರಗಳು, ಜಮಾಖರ್ಚು ಪಟ್ಟಿ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಪ್ರಬಂಧಕ ಮಂಡಳಿಯು ತನ್ನ ಸಭೆಯಲ್ಲಿ ಪರ್ಯಾಲೋಚಿಸತಕ್ಕದ್ದು ಮತ್ತು ಪ್ರಬಂಧಕ ಮಂಡಳಿಯು ಅದನ್ನು ತನ್ನ ಅಭಿಪ್ರಾಯಗಳೊಡನೆ ಸಂದರ್ಶಕರಿಗೆ ಹಾಗೂ ಸರ್ಕಾರಕ್ಕೆ ಪ್ರತಿ ವರ್ಷದ ಡಿಸೆಂಬರ್ 31ಕ್ಕೆ ಮೊದಲು ಕಳುಹಿಸತಕ್ಕದ್ದು.

55. ವಿಶ್ವವಿದ್ಯಾಲಯ ದಾಖಲೆಗಳ ರುಜುವಾತಿನ ಮಾದರಿ.– ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ಸಮಿತಿಯ ಯಾವುದೇ ರಶೀದಿ, ಅರ್ಜಿ, ಸೂಚನೆ, ಆದೇಶ, ವ್ಯವಹರಣೆ ಅಥವಾ ಗೊತ್ತುವಳಿಯು ಅಥವಾ ವಿಶ್ವವಿದ್ಯಾಲಯದ ಸ್ವಾಧೀನದಲ್ಲಿರುವ ಇತರ ದಾಖಲೆಗಳು ಅಥವಾ ವಿಶ್ವವಿದ್ಯಾಲಯವು ಯುಕ್ತವಾಗಿ ನಿರ್ವಹಿಸುವ ಯಾವುದೇ ರಿಜಿಸ್ಟರ್‌ನಲ್ಲಿಯ ಯಾವುದೇ ನಮೂದುಗಳ ಪ್ರತಿಯನ್ನು, ಅದರ ಮೇಲೆ ಕುಲಸಚಿವರು, ಪ್ರಮಾಣೀಕರಿಸಿದ್ದರೆ, ಅದನ್ನು ಅಂಥ ರಶೀದಿ, ಅರ್ಜಿ, ಸೂಚನೆ, ಆದೇಶ, ವ್ಯವಹರಣೆ, ಗೊತ್ತುವಳಿ ಅಥವಾ ದಾಖಲೆ ಅಥವಾ ರಿಜಿಸ್ಟರ್‌ನಲ್ಲಿ ಇರುವ ನಮೂದನ್ನು ಮೇಲ್ನೋಟದ ಸಾಕ್ಷ್ಯವೆಂಬುದಾಗಿ ಸ್ವೀಕರಿಸತಕ್ಕದ್ದು ಮತ್ತು ವಿಷಯಗಳ ಸಾಕ್ಷಿಯಾಗಿ ಅಂಗೀಕರಿಸತಕ್ಕದ್ದು ಹಾಗೂ ಮೂಲ ದಾಖಲೆಗಳನ್ನೇ ಸಲ್ಲಿಸಿದ್ದರೆ ಅದನ್ನು, ದಾಖಲಿಸಿರುವ ವಿಷಯಗಳು ಮತ್ತು ವಹಿವಾಟುಗಳ ಸಾಕ್ಷ್ಯವಾಗಿ ಅಂಗೀಕರಿಸಲಾಗುತ್ತಿತ್ತೋ, ಅದೇ ರೀತಿಯಲ್ಲಿ ಇವನ್ನೂ ಸಾಕ್ಷ್ಯವಾಗಿ ಅಂಗೀಕರಿಸತಕ್ಕದ್ದು.

56. ನಿರ್ದೇಶನಗಳನ್ನು ನೀಡಲು ರಾಜ್ಯ ಸರ್ಕಾರದ ಅಧಿಕಾರ.– ರಾಜ್ಯಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಅಥವಾ ಅದರಲ್ಲಿ ಇರುವ ಯಾವುವೇ ಉಪಬಂಧಗಳನ್ನು ಅಥವಾ ಅದರಡಿಯಲ್ಲಿ ರಚಿಸಿದ ಯಾವುವೇ ನಿಯಮಗಳು ಅಥವಾ ಆದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿರ್ದೇಶನ ನೀಡುವುದು ಅವಶ್ಯವೆಂದು ಅಥವಾ ಉಚಿತವೆಂದು ಅಭಿಪ್ರಾಯಪಟ್ಟಲ್ಲಿ ಅದು ಅಂಥ ನಿರ್ದೇಶನಗಳನ್ನು ನೀಡಬಹುದು ಮತ್ತು ವಿಶ್ವವಿದ್ಯಾಲಯದ ಪ್ರಬಂಧಕ ಮಂಡಳಿ ಅಥವಾ ಸಂದರ್ಭಾನುಸಾರವಾಗಿ ವ್ಯವಸ್ಥಾಪನಾ ಮಂಡಳಿಯು ಅಂಥ ಪ್ರತಿಯೊಂದು ನಿರ್ದೇಶನವನ್ನು ಪಾಲಿಸತಕ್ಕದ್ದು.

57. ದಂಡಗಳು.– (1) ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಉಪಬಂಧಗಳನ್ನು ಉಲ್ಲಂಘಿಸುವ ಯಾವೊಬ್ಬ ವ್ಯಕ್ತಿಯು, ಅಪರಾಧ ನಿರ್ಣಯವಾದ ಮೇಲೆ, ಹತ್ತು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಈ ಪ್ರಕರಣದ ಅಡಿಯಲ್ಲಿನ ದಂಡನೆಯನ್ನು ಇತರ ಯಾವುದೇ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಲಾದ ದಂಡನೆಗೆ ಬಾಧಕವಾಗದಂತೆ ವಿಧಿಸಬಹುದು.

58. ಪ್ರವೇಶಿಸುವ ಮತ್ತು ಪರಿಶೋಧಿಸುವ ಅಧಿಕಾರ.– ಈ ಉದ್ದೇಶಕ್ಕಾಗಿ, ರಾಜ್ಯಸರ್ಕಾರದಿಂದ ಪ್ರಾಧಿಕೃತಗೊಂಡ 'ಎ' ಸಮೂಹದ ಅಧಿಕಾರಿ ದರ್ಜೆಗಿಂತ ಕಡಿಮೆಇಲ್ಲದ ದರ್ಜೆಯ ಯಾವೊಬ್ಬ ಅಧಿಕಾರಿಯು, ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ಕ್ಯಾಪಿಟೇಶನ್ ಶುಲ್ಕ ನಿಷೇಧ) ಅಧಿನಿಯಮ, 1984ರ (1984ರ ಕರ್ನಾಟಕ ಅಧಿನಿಯಮ 37) ಅಡಿಯಲ್ಲಿ ನಿರ್ದಿಷ್ಟಪಡಿಸಿರಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟು, ಈ ಅಧಿನಿಯಮದ ಉದ್ದೇಶಗಳಿಗಾಗಿ, ಆ ಅಧಿನಿಯಮದ 9ನೇ ಪ್ರಕರಣದ ಅಡಿಯಲ್ಲಿ ಉಪಬಂಧಿಸಲಾದಂತಹವೇ ಅಧಿಕಾರಗಳನ್ನು ಚಲಾಯಿಸಲು ಮತ್ತು ಪ್ರಕಾರ್ಯಗಳನ್ನು ನೆರವೇರಿಸಲು ಅಧಿಕೃತನಾದ ಅಧಿಕಾರಿ ಎಂಬುದಾಗಿ ಭಾವಿಸತಕ್ಕದ್ದು.

59. ವಿಶ್ವವಿದ್ಯಾಲಯವನ್ನು ಸಮಾಪನಗೊಳಿಸಲು ನಿರ್ದೇಶನವನ್ನು ನೀಡುವ ಅಧಿಕಾರ.– (1) ವಿಶ್ವವಿದ್ಯಾಲಯವು ತನ್ನ ರಚನೆ ಅಥವಾ ನಿಗಮನವನ್ನು ನಿಯಂತ್ರಿಸುವ ಕಾನೂನಿಗೆ ಅನುಸಾರವಾಗಿ, ತನ್ನ ಸಮಾಪನವನ್ನು ಉದ್ದೇಶಿಸಿದ್ದಲ್ಲಿ, ಅದು ಕನಿಷ್ಠ ಆರು ತಿಂಗಳ ಲಿಖಿತ ಪೂರ್ವ ಸೂಚನೆಯನ್ನು (ನೋಟಿಸು) ಸರ್ಕಾರಕ್ಕೆ ನೀಡತಕ್ಕದ್ದು.

(2) ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಈ ಕೆಳಗಿನವುಗಳ ಬಗ್ಗೆ, ಎಂದರೆ:–

(i) ಪದವಿಯನ್ನು ನೀಡುವುದಕ್ಕಾಗಿ ಬೋಧನೆಯ ಗುಣಮಟ್ಟ;

(ii) ಶಿಕ್ಷಣದ ಗುಣಮಟ್ಟ;

(iii) ಉನ್ನತ ಶಿಕ್ಷಣದ ವ್ಯಾಪಾರೀಕರಣವನ್ನು ತಡೆಗಟ್ಟುವುದು;

(iv) ಅಧಿನಿಯಮದ ಉಪಬಂಧಗಳ ಉಲ್ಲಂಘನೆಯ ಬಗ್ಗೆ, ಯಾವುದಾದರೂ ಇದ್ದಲ್ಲಿ,

– ಇವುಗಳ ಬಗ್ಗೆ ನಿಯತಕಾಲಿಕ ಪರಿವೀಕ್ಷಣೆಯನ್ನು ನಡೆಸತಕ್ಕದ್ದು ಮತ್ತು ಸರ್ಕಾರಕ್ಕೆ ವರದಿಯನ್ನು ಕಳುಹಿಸತಕ್ಕದ್ದು.

(3) ದುರ್ವ್ಯವಹರಣೆ, ದುರಾಡಳಿತ ಮತ್ತು ಅಶಿಸ್ತು ಆಗಿದೆ ಎಂಬುದನ್ನು ಗುರುತಿಸಿದರೆ, ಸರ್ಕಾರವು, ವಿಶ್ವವಿದ್ಯಾಲಯದ ಆಡಳಿತವರ್ಗದವರಿಗೆ ಆಡಳಿತವನ್ನು ಸರಿಪಡಿಸಬೇಕೆಂದು ನಿರ್ದೇಶನಗಳನ್ನು ನೀಡತಕ್ಕದ್ದು. ನಿಯಮಿಸಬಹುದಾದ ಅಂಥ ಅವಧಿಯೊಳಗೆ ಆ ನಿರ್ದೇಶನಗಳನ್ನು ಪಾಲಿಸದಿದ್ದಲ್ಲಿ ವಿಶ್ವವಿದ್ಯಾಲಯವನ್ನು ಅಥವಾ ಅದರ ಯಾವುದೇ ವ್ಯಾಸಂಗ ಕ್ರಮವನ್ನು (ಕೋರ್ಸ್) ಸಮಾಪನಗೊಳಿಸುವ ಬಗ್ಗೆ ತೀರ್ಮಾನವನ್ನು ಕೈಗೊಳ್ಳುವ ಹಕ್ಕು ಸರ್ಕಾರದಲ್ಲಿ ನಿಹಿತವಾಗಿರತಕ್ಕದ್ದು.

(4) ವಿಶ್ವವಿದ್ಯಾಲಯವನ್ನು ಅಥವಾ ಅದರ ಯಾವುದೇ ವ್ಯಾಸಂಗ ಕ್ರಮವನ್ನು (ಕೋರ್ಸ್) ಸಮಾಪನಗೊಳಿಸುವ ವಿಧಾನವು, ಸರ್ಕಾರವು ಈ ಸಂಬಂಧದಲ್ಲಿ ನಿಯಮಿಸಬಹುದಾದಂತೆ ಇರತಕ್ಕದ್ದು:

ಪರಂತು, ವಿಶ್ವವಿದ್ಯಾಲಯವು ತನ್ನ ಕಾರಣಗಳನ್ನು ಹೇಳಿಕೊಳ್ಳಲು ಸಮಂಜಸ ಅವಕಾಶಗಳನ್ನು ನೀಡಿದ ಹೊರತು ಅಂಥ ಯಾವುದೇ ಕ್ರಮವನ್ನು ಕೈಗೊಳ್ಳತಕ್ಕದ್ದಲ್ಲ.

(5) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ನೋಟಿಸನ್ನು ಸ್ವೀಕರಿಸಿದ ಮೇಲೆ, ಸರ್ಕಾರವು ಸಂಬಂಧಿಸಿದ ನಿಯಂತ್ರಣಾ ಪ್ರಾಧಿಕಾರದೊಡನೆ ಸಮಾಲೋಚಿಸಿ, ವಿಶ್ವವಿದ್ಯಾಲಯವನ್ನು ಸಮಾಪನಗೊಳಿಸಲು ಅಥವಾ ವ್ಯಾಸಂಗ ಕ್ರಮವನ್ನು ಪರಿಸಮಾಪನಗೊಳಿಸಲು ಉದ್ದೇಶಿಸಿದ ದಿನಾಂಕದಿಂದ, ವಿಶ್ವವಿದ್ಯಾಲಯದಲ್ಲಿ ನಿಯತ ವ್ಯಾಸಂಗ ಕ್ರಮಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಕೊನೆಯ ತಂಡ (ಬ್ಯಾಚ್) ತನ್ನ ವ್ಯಾಸಂಗ ಕ್ರಮವನ್ನು ಮುಗಿಸುವವರೆಗೆ ಪರಿನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ವಿಧಾನದಲ್ಲಿ ವಿಶ್ವವಿದ್ಯಾಲಯದ ಆಡಳಿತಕ್ಕೆ ಸೂಕ್ತ ವ್ಯವಸ್ಥೆಯನ್ನು ಮಾಡತಕ್ಕದ್ದು.

60. ಸಮಾಪನೆಯ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ವೆಚ್ಚಗಳು.– (1) 59ನೇ ಪ್ರಕರಣದ (5)ನೇ ಉಪಪ್ರಕರಣದ ಅಡಿಯಲ್ಲಿ ವಿಶ್ವವಿದ್ಯಾಲಯದ ಆಡಳಿತವನ್ನು ಹಸ್ತಾಂತರಗೊಳಿಸುವ ಅವಧಿಯಲ್ಲಿ ಅದರ ಆಡಳಿತಾತ್ಮಕ ವೆಚ್ಚಗಳನ್ನು ಶಾಶ್ವತ ಶಾಸನಬದ್ಧ ದತ್ತಿ ನಿಧಿ, ಸಾಮಾನ್ಯ ನಿಧಿ ಅಥವಾ ಅಭಿವೃದ್ಧಿ ನಿಧಿಯಿಂದ ನೇಮಿಸಬಹುದಾದ ಅಂಥ ವಿಧಾನದಲ್ಲಿ ಭರಿಸತಕ್ಕದ್ದು.

(2) ವಿಶ್ವವಿದ್ಯಾಲಯದ ಆಡಳಿತವನ್ನು ಹಸ್ತಾಂತರಗೊಳಿಸುವ ಅವಧಿಯಲ್ಲಿ ವಿಶ್ವವಿದ್ಯಾಲಯದ ವೆಚ್ಚವನ್ನು ಭರಿಸಲು 48, 49, 50 ಮತ್ತು 51ನೇ ಪ್ರಕರಣಗಳ ಅಡಿಯಲ್ಲಿ ಉಲ್ಲೇಖಿಸಲಾದ ನಿಧಿಯು ಸಾಕಷ್ಟು ಇಲ್ಲದಿದ್ದಲ್ಲಿ, ಅಂಥ ವೆಚ್ಚವನ್ನು ಸರ್ಕಾರವು, ವಿಶ್ವವಿದ್ಯಾಲಯದ ಸ್ವತ್ತುಗಳು ಮತ್ತು ಆಸ್ತಿಗಳನ್ನು ವಿಲೇ ಮಾಡುವ ಮೂಲಕ ಭರಿಸತಕ್ಕದ್ದು.

(3) ವಿಶ್ವವಿದ್ಯಾಲಯದ ಸಮಾಪನೆಯು ದುರ್ವ್ಯವಹರಣೆ ಅಥವಾ ದುರಾಡಳಿತದ ಕಾರಣಗಳಿಗಾಗಿ ಆಗಿದ್ದರೆ, ಸರ್ಕಾರವು ಅಂಥ ದುರ್ವ್ಯವಹಾರಕ್ಕೆ ಅಥವಾ ದುರಾಡಳಿತಕ್ಕೆ ಹೊಣೆಯಾಗಿರುವ ವ್ಯಕ್ತಿಗಳನ್ನು ಗುರುತಿಸುವ ಮತ್ತು ಅವರ ಮೇಲೆ ತಾನು ಸೂಕ್ತವೆಂದು ಭಾವಿಸಬಹುದಾದ ಅಂಥ ದಂಡನೆಯನ್ನು ವಿಧಿಸಲು ಸ್ವತಂತ್ರವಾಗಿರತಕ್ಕದ್ದು.

61. ತೊಂದರೆಗಳ ನಿವಾರಣೆಗೆ ಅಧಿಕಾರ.– (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವ ಸಂಬಂಧದಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು, ಅಧಿಸೂಚನೆಯ ಅಥವಾ ಆದೇಶದ ಮೂಲಕ ತೊಂದರೆಯ ನಿವಾರಣೆಗಾಗಿ ಅವಶ್ಯಕ ಹಾಗೂ ಸಮಂಜಸವೆಂದು ತನಗೆ ಕಂಡುಬರುವಂಥ ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದ ಉಪಬಂಧಗಳನ್ನು ರಚಿಸಬಹುದು:

2. ಸರ್ಕಾರದ ಆದೇಶ ಸಂಖ್ಯೆ: ಸಿ.ಆ.ಸು.ಇ 08 ಸಹಿಮ 95, ದಿನಾಂಕ 20-06-1995 (ಅನುಬಂಧ-1 ಮತ್ತು 2).
3. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 28 ಸೇನೇನಿ 95 ದಿ. 19-8-95.
4. ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 34 ಎಸ್‌ಆರ್‌ಆರ್ 95 ದಿ. 06-03-1996.
5. ಸರ್ಕಾರದ ಆದೇಶ ಸಂಖ್ಯೆ: ಇಡಿ 93 ಎಸ್‌ಎಲ್‌ಬಿ 97 ದಿ.31-01-97.
6. ಸರ್ಕಾರದ ಆದೇಶ ಸಂಖ್ಯೆ: ಇಡಿ 190 ಎಸ್‌ಎಲ್‌ಬಿ 97 ದಿ. 26-08-97.
7. ಸರ್ಕಾರದ ಅಧಿಸೂಚನೆ ಸಂಖ್ಯೆ: ಎಸ್.ಡಬ್ಲ್ಯೂಡಿ 132 ಎಸ್‌ಎಡಿ 97 ದಿ. 08-02-2000.
8. ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಅರ್ 23 ಎಸ್‌ಆರ್‌ಆರ್ 99 ದಿ. 23-11-2000.
9. ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 44 ಸೇನೇನಿ 2001, ದಿ. 27-07-2001.
10. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 97 ಸೇನೇನಿ 2002, ದಿ. 22-11-2002.
11. ಸರ್ಕಾರದ ಪತ್ರ ಸಂಖ್ಯೆ: ಇಡಿ 174 ಎಸ್‌ಎಲ್‌ಬಿ 2002, ದಿ. 26-11-2002.
12. ಸರ್ಕಾರದ ಅಧಿಸೂಚನೆ ಸಂಖ್ಯೆ: ಎಸ್‌ಡಬ್ಲ್ಯೂಡಿ 126 ಬಿಸಿಎ 2002, ದಿ. 13-02-2003.
13. ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 59 ಎಸ್‌ಆರ್‌ಇ 2002, ದಿ. 24-06-2003.
14. ಸರಕಾರದ ಆದೇಶ ಸಂಖ್ಯೆ ಇಡಿ 125 ಪಿಟಿಐ 2003 ದಿ. 16-08-2003.
15. ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 96 ಸೇನೇನಿ 2005 ಬೆಂಗಳೂರು ದಿ. 10-08-2005.
16. ಸರ್ಕಾರದ ಆದೇಶ ಸಂಖ್ಯೆ: ಇಡಿ 82/ಎಸ್‌ಎಲ್‌ಬಿ/2003/ಪಾರ್ಟ್/ಬೆಂಗಳೂರು, ದಿನಾಂಕ: 17-06-2006
17. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 33/ಎಸ್‌ಬಿಸಿ 81 ದಿನಾಂಕ 01-09-1981

18. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 30/ಸಹಿಮ 94 ದಿನಾಂಕ 03-05-1994

19. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 53/ಸೇನೇನಿ 2007 ಬೆಂಗಳೂರು ದಿ: 04-01-2008

20. ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ/16/ಸೇನೇನಿ 2008 ಬೆಂಗಳೂರು ದಿ: 01-09-2008.

21. ಸರ್ಕಾರದ ಆದೇಶ ಸಂಖ್ಯೆ ಸಿಆಸುಇ/128/ಸೇನೇನಿ 2006, ಬೆಂಗಳುರು ದಿ: 1-8-2009.

22. ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಆಸುಇ 21/ಸೇನೇನಿ 2009, ಬೆಂಗಳೂರು, ದಿ: 30-3-2010.

23. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 50 ಎಸ್.ಆರ್.ಆರ್ 2007 ದಿನಾಂಕ: 26.07.2011

24. ಸರ್ಕಾರದ ಆದೇಶ ಸಂಖ್ಯೆ ಇಡಿ.90.ಎಂಸಿಡಿ.2010(ಭಾಗ), ಬೆಂಗಳೂರು,ದಿನಾಂಕ 30.11.2011.

25. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಸಿ4(1).ಆ.ವಿ.ಶಿ.ನೇ/01/2011-12, ದಿನಾಂಕ 02-03-2012.

26. ನಿರ್ದೇಶಕರು(ಪ್ರೌ.ಶಿಕ್ಷಣ) ಆಯುಕ್ತರ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ ಸಿ4(1)/ಆ.ವಿ.ಶಿ.ನೇ/1/11-12, ದಿನಾಂಕ 20-03-2012.

* * * * *

ಸಾರ್ವಜನಿಕ ಶಿಕ್ಷಣ ಇಲಾಖೆ ಗುಲ್ಬರ್ಗಾ ವಿಭಾಗದ 6 ಶೈಕ್ಷಣಿಕ ಜಿಲ್ಲೆಗಳ (ಬಳ್ಳಾರಿ, ಬೀದರ್, ಗುಲ್ಬರ್ಗಾ, ಕೊಪ್ಪಳ, ರಾಯಚೂರು ಮತ್ತು ಯಾದಗಿರಿ) ಸರ್ಕಾರಿ ಪ್ರೌಢ ಶಾಲೆಗಳು, ಆದರ್ಶ ವಿದ್ಯಾಲಯಗಳು ಮತ್ತು ಆರ್.ಎಂ.ಎಸ್.ಎ ಅಡಿಯಲ್ಲಿ ಉನ್ನತೀಕರಿಸಲಾದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಪ್ರೌಢಶಾಲಾ ಸಹಾಯಕ ಶಿಕ್ಷಕರು ಗ್ರೇಡ್-2 ಹಾಗೂ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1 ವೃಂದದ (ವಿವಿಧ ವಿಷಯ ಮತ್ತು ಬೋಧನಾ ಮಾಧ್ಯಮ) ಹುದ್ದೆಗಳಿಗೆ ವಿಭಾಗ ಮಟ್ಟದಲ್ಲಿ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಅಂದರೆ **"ದಿ ಕರ್ನಾಟಕ ಎಜುಕೇಷನ್ ಡಿಪಾರ್ಟ್‌ಮೆಂಟ್ ಸರ್ವೀಸಸ್ (ಡಿಪಾರ್ಟ್‌ಮೆಂಟ್ ಆಫ್ ಪಬ್ಲಿಕ್ ಇನ್ಸ್‌ಸ್ಟ್ರಕ್ಷನ್) (ರಿಕ್ರೂಟ್‌ಮೆಂಟ್) (ಅಮೆಂಡ್‌ಮೆಂಟ್) ರೂಲ್ಸ್ 2002"** ನಿಯಮಗಳನ್ವಯ ಆಯ್ಕೆ ಮಾಡಲು ಈ ನೇಮಕಾತಿ ಅಧಿಸೂಚನೆ ಹೊರಡಿಸಿದೆ. **ಅಂದರೆ ನೇಮಕಾತಿ ಅಧಿಸೂಚನೆ ದಿನಾಂಕದಂದು ಅರ್ಹರಾಗಿರುವ** ಅಭ್ಯರ್ಥಿಗಳಿಂದ ನಿಗಧಿಪಡಿಸಿರುವ ಅರ್ಜಿ ನಮೂನೆಯಲ್ಲಿ **ಆನ್ ಲೈನ್** ಮೂಲಕ ಅರ್ಜಿಗಳನ್ನು ಕರೆಯಲಾಗಿದೆ. **ಇತರೆ ಯಾವುದೇ ನಮೂನೆಯಲ್ಲಿ ಸಲ್ಲಿಸುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.**

1. ಆಯ್ಕೆಗಾಗಿ ಪ್ರಕಟಿಸಿರುವ ಹುದ್ದೆಗಳು:-

(ಎ) ಪ್ರೌಢ ಶಾಲಾ ಸಹಾಯಕ ಶಿಕ್ಷಕ ಗ್ರೇಡ್-2 ವೃಂದದ ಹುದ್ದೆಗಳು :-

ಅ) ಕಲಾ ಶಿಕ್ಷಕರು (ಕನ್ನಡ, ಆಂಗ್ಲ, ಮರಾಠಿ, ತಮಿಳು, ಹಿಂದಿ ಮತ್ತು ಉರ್ದು ಮಾಧ್ಯಮ)

ಆ) ಭೌತ ವಿಜ್ಞಾನ (ಕನ್ನಡ, ಆಂಗ್ಲ ಮರಾಠಿ, ತೆಲಗು ಮತ್ತು ಉರ್ದು ಮಾಧ್ಯಮ)

ಇ) ಜೀವ ವಿಜ್ಞಾನ (ಕನ್ನಡ, ಆಂಗ್ಲ, ಮರಾಠಿ ಮತ್ತು ಉರ್ದು ಮಾಧ್ಯಮ)

ಈ) ಭಾಷಾ ಶಿಕ್ಷಕರು (ಕನ್ನಡ, ಆಂಗ್ಲ, ಹಿಂದಿ, ಮರಾಠಿ ಮತ್ತು ಉರ್ದು)

(ಬಿ) ದೈಹಿಕ ಶಿಕ್ಷಣ ಶಿಕ್ಷಕ ಗ್ರೇಡ್-1 ಹುದ್ದೆಗಳು

2. ಅಧಿಸೂಚಿತ ಹುದ್ದೆಗಳ ವರ್ಗೀಕರಣ:-

ಸರಕಾರದ ಆದೇಶ ಸಂಖ್ಯೆ: ಸಿಆಸುಇ 08 ಸಹಿಮ 95 ದಿನಾಂಕ 20-06-1995, ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 97 ಸೇನೇನಿ 2002 ದಿನಾಂಕ 22-11-2002 ಮತ್ತು ಸರ್ಕಾರದ ಆದೇಶ ಸಂಖ್ಯೆ ಸಿ.ಆ.ಸು.ಇ.53 ಸೇನೇನಿ 2007, ದಿನಾಂಕ 04-01-2008ರ ಪ್ರಕಾರ ವಿಷಯವಾರು ಮತ್ತು ಮಾಧ್ಯಮವಾರು ಹುದ್ದೆಗಳನ್ನು ಈ ಮುಂದಿನ **ಅನುಬಂಧ-2** ರಂತೆ ವರ್ಗೀಕರಿಸಿದೆ.

ಮುಂದುವರಿದು ಆಯ್ಕೆ ಪಟ್ಟಿಯನ್ನು ತಯಾರಿಸುವಾಗ ಸಮತಳ ಮೀಸಲಾತಿಗೆ ಸಂಬಂದಿಸಿದಂತೆ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ವಿವರಿಸಿರುವ ಕಾರ್ಯವಿಧಾನವನ್ನು ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ16/ ಸೇನೆನಿ/ 2008 ದಿನಾಂಕ:-01-09-2008ರಲ್ಲಿ ಆದೇಶಿಸಿರುವಂತೆ ಅಳವಡಿಸಿಕೊಳ್ಳಲಾಗುವುದು.

ಟಿಪ್ಪಣಿ: ಪ್ರೌಢ ಶಾಲಾ ಸಹಾಯಕ ಶಿಕ್ಷಕ ಗ್ರೇಡ್-2 ವೃಂದದ ವಿವಿಧ ವಿಷಯ ಮತ್ತು ಬೋಧನಾ ಮಾಧ್ಯಮದ ಮತ್ತು ದೈಹಿಕ ಶಿಕ್ಷಣ ಶಿಕ್ಷಕ (ಗ್ರೇಡ್ -1) ವೃಂದದ ಖಾಲಿ ಹುದ್ದೆಗಳ ಸಂಖ್ಯೆ ಹಾಗೂ ಮೀಸಲಾತಿ ವರ್ಗೀಕರಣದ ವಿವರಗಳನ್ನು ಈ ಅಧಿಸೂಚನೆಗೆ ಲಗತ್ತಿಸಿರುವ "ಹುದ್ದೆಗಳ ವರ್ಗೀಕರಣದ ಅನುಬಂಧದಲ್ಲಿ" ಪ್ರತ್ಯೇಕವಾಗಿ ವಿವರಿಸಿದೆ. ಪ್ರಕಟಿಸಲಾಗಿರುವ ಹುದ್ದೆಗಳ ಸಂಖ್ಯೆ ಮತ್ತು ವರ್ಗೀಕರಣವು ಅನಿವಾರ್ಯ ಸಂದರ್ಭಗಳಲ್ಲಿ ಬದಲಾವಣೆಗೆ ಒಳಪಟ್ಟಿರುತ್ತದೆ

3. ಆಯ್ಕೆಗೆ ಅರ್ಹತೆ:-

ನೇಮಕಾತಿ ಅಧಿಸೂಚನೆ ದಿನಾಂಕದಂದು ಪ್ರೌಢ ಶಾಲಾ ಸಹಾಯಕ ಶಿಕ್ಷಕ ಗ್ರೇಡ್-2 ವೃಂದದ (ವಿವಿಧ ವಿಷಯ ಮತ್ತು ಬೋಧನಾ ಮಾಧ್ಯಮದ) ಮತ್ತು ದೈಹಿಕ ಶಿಕ್ಷಣ ಶಿಕ್ಷಕ ಗ್ರೇಡ್-I ಹುದ್ದೆಗಳಿಗೆ ಆಯ್ಕೆಗಾಗಿ ಅರ್ಹತೆ ಪಡೆಯಲು ಅಭ್ಯರ್ಥಿಗಳು ಆಯಾ ವಿಷಯ ಮತ್ತು ಬೋಧನಾ ಮಾಧ್ಯಮದ ಹುದ್ದೆಗಳಿಗೆ **"ದಿ ಕರ್ನಾಟಕ ಎಜುಕೇಷನ್ ಡಿಪಾರ್ಟ್‌ಮೆಂಟ್ ಸರ್ವೀಸಸ್ (ಡಿಪಾರ್ಟ್‌ಮೆಂಟ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್) (ರಿಕ್ರೂಟ್‌ಮೆಂಟ್) (ಅಮೆಂಡ್‌ಮೆಂಟ್) ರೂಲ್ಸ್ 2002"** ನಿಯಮಗಳಲ್ಲಿ ನಿಗದಿ ಪಡಿಸಿರುವ ವಿದ್ಯಾರ್ಹತೆಗಳನ್ನು ಹೊಂದಿರಬೇಕು. ಮತ್ತು ನಿಗದಿಪಡಿಸಲಾದ ವಯೋಮಿತಿಯೊಳಗಿದ್ದು, ಆಯ್ಕೆ ಪ್ರಾಧಿಕಾರಿಯು ನಡೆಸುವ ವಿಭಾಗ ಮಟ್ಟದ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಗೆ ಕಡ್ಡಾಯವಾಗಿ ಹಾಜರಾಗಬೇಕು. **ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾದ ಮಾತ್ರಕ್ಕೆ ಅಭ್ಯರ್ಥಿಯು ಆಯ್ಕೆಗೆ ಅರ್ಹತೆ ಪಡೆಯುವುದಿಲ್ಲ. ಅಭ್ಯರ್ಥಿಯು ಇದರ ಜೊತೆಗೆ ನೇಮಕಾತಿ ನಿಯಮಗಳಲ್ಲಿ ನಿಗದಿಪಡಿಸಿರುವ ವಿದ್ಯಾರ್ಹತೆಗಳನ್ನು ಹೊಂದಿದ್ದು ಮತ್ತು ನಿಗದಿತ ವಯೋಮಿತಿಯೊಳಗೆ ಇದ್ದಲ್ಲಿ ಮಾತ್ರ ಆಯ್ಕೆಗೆ ಪರಿಗಣಿಸಲಾಗುವುದು.**

4. ಅಯ್ಕೆ ಮತ್ತು ನೇಮಕಾತಿ:-

ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಪ್ರಾಧಿಕಾರಿಗಳಾದ ವಿಭಾಗೀಯ ಸಹ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ವಿಭಾಗ, ಗುಲ್ಬರ್ಗಾ ರವರು **"ದಿ ಕರ್ನಾಟಕ ಎಜುಕೇಷನ್ ಡಿಪಾರ್ಟ್‌ಮೆಂಟ್ ಸರ್ವೀಸಸ್ (ಡಿಪಾರ್ಟ್‌ಮೆಂಟ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್) (ರಿಕ್ರೂಟ್‌ಮೆಂಟ್) (ಅಮೆಂಡ್‌ಮೆಂಟ್) ರೂಲ್ಸ್ 2002"** ಹಾಗೂ ಸಂಬಂಧಿಸಿದ ಕಾಲದಿಂದ ಕಾಲಕ್ಕೆ ತಿದ್ದುಪಡಿಯಾದ ಪ್ರಚಲಿತ ಸೇವಾ ನಿಯಮಗಳನ್ವಯ ವಿಭಾಗೀಯ ಮಟ್ಟದಲ್ಲಿ ಆಯ್ಕೆ ಪ್ರಾಧಿಕಾರಿಯಾಗಿರುತ್ತಾರೆ ಮತ್ತು ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು [ಆಡಳಿತ] ಸಶಿಇ ರವರು ನೇಮಕಾತಿ ಪ್ರಾಧಿಕಾರಿಯಾಗಿರುತ್ತಾರೆ.

5. ಅರ್ಜಿ ಸಲ್ಲಿಸುವ ವಿಧಾನ:-

ಅಭ್ಯರ್ಥಿಯು ಆನ್ ಲೈನ್ (ON LINE) ಮೂಲಕ ಇಲಾಖೆಯ ಅಧಿಕೃತ ವೆಬ್ ಸೈಟ್ (http://schooleducation.kar.nic.in) ಮುಖಾಂತರ ಅರ್ಜಿ ಸಲ್ಲಿಸಬೇಕು. ಅರ್ಜಿಗಳನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ಪ್ರತ್ಯೇಕವಾಗಿ ಸಲ್ಲಿಸಲು ಅವಕಾಶ ಇರುವುದಿಲ್ಲ. ಅಭ್ಯರ್ಥಿಗಳು ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಿದ ನಂತರ (After submission of application) ದೊರೆಯುವ ಗಣಕೀಕೃತ ಅರ್ಜಿ ಸಂಖ್ಯೆಯನ್ನು ಪಡೆದುಕೊಳ್ಳುವುದು ಮತ್ತು ಸದರಿ ಸಂಖ್ಯೆಯನ್ನು ಕಡ್ಡಾಯವಾಗಿ ಬರೆದಿಟ್ಟುಕೊಳ್ಳತಕ್ಕದ್ದು. ಈ ಅರ್ಜಿ ಸಂಖ್ಯೆಯು ನೇಮಕಾತಿ ಪ್ರಕ್ರಿಯೆಯ ಎಲ್ಲಾ ಹಂತಗಳಿಗೆ ಅವಶ್ಯಕವಾಗಿರುತ್ತದೆ. ಆನ್ ಲೈನ್ ಅರ್ಜಿಯನ್ನು ಭರ್ತಿ ಮಾಡಿದ ನಂತರ ಅಭ್ಯರ್ಥಿಗಳು ಸ್ವೀಕೃತಿ ಪತ್ರ ಮತ್ತು ಚಲನ್ ಪ್ರತಿಗಳ ಮುದ್ರಿತ ಪ್ರತಿಗಳನ್ನು ತೆಗೆದುಕೊಳ್ಳತಕ್ಕದ್ದು. ಮುದ್ರಿತ ಚಲನ್ ಪ್ರತಿಯನ್ನು ಆಧರಿಸಿ ಪರೀಕ್ಷಾ ಶುಲ್ಕವನ್ನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಯಾವುದಾದರೂ ಶಾಖೆಯಲ್ಲಿ ಪಾವತಿಸಬಹುದು. ಒಮ್ಮೆ ಪರೀಕ್ಷಾ ಶುಲ್ಕವನ್ನು ಪಾವತಿಸಿದ ನಂತರ ಯಾವುದೇ ಸಂದರ್ಭದಲ್ಲಿಯೂ ಹಿಂದಿರುಗಿಸಲಾಗುವುದಿಲ್ಲ ಹಾಗೂ ಸದರಿ ಶುಲ್ಕವನ್ನು ಇತರೆ ಯಾವುದೇ ಪರೀಕ್ಷೆ ಅಥವಾ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ. ಈ ಕೆಳಕಂಡಂತೆ ನಿಗದಿಪಡಿಸಿದ ಅರ್ಜಿ ಶುಲ್ಕವನ್ನು ಕೊನೆಯ ದಿನಾಂಕದೊಳಗೆ ಆನ್‌ಲೈನ್ ಮೂಲಕವೇ ಪಾವತಿಸುವುದು. ಅಭ್ಯರ್ಥಿಯು ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಪ್ರವೇಶಪತ್ರಗಳನ್ನು ಮೇಲೆ ನಮೂದಿಸಿರುವ ವೆಬ್‌ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬೇಕು ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ನಿಗದಿಪಡಿಸಿದ ಅವಧಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವಾಗ ಅಭ್ಯರ್ಥಿಗೆ ನೀಡಿರುವ ನೋಂದಣಿ ಸಂಖ್ಯೆ ಮತ್ತು ಇತರೆ ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ನಮೂದಿಸಿ ಸ್ಪರ್ಧಾತ್ಮಕ ಪರೀಕ್ಷೆಯ ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳುವುದು. ಕೊನೆಯ ದಿನಾಂಕದ ನಂತರ ಪಾವತಿಸಿದ ಅರ್ಜಿ ಶುಲ್ಕವನ್ನು ಪರಿಗಣಿಸುವುದಿಲ್ಲ. ಡಿ.ಡಿ./ಪೋಸ್ಟಲ್ ಆರ್ಡರ್ ಮತ್ತು ಮನಿ ಆರ್ಡರ್‌ಗಳನ್ನು ಪರಿಗಣಿಸಲಾಗುವುದಿಲ್ಲ ಮತ್ತು ಸ್ವೀಕರಿಸಲಾಗುವುದಿಲ್ಲ. ಅರ್ಜಿಗಳನ್ನು ಆನ್ ಲೈನ್ ಮೂಲಕ ಭರ್ತಿ ಮಾಡಬೇಕಾಗಿದ್ದು, ಈ ಬಗ್ಗೆ ಮಾರ್ಗಸೂಚಿಯನ್ನು ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

6. ಶುಲ್ಕ:-

1. ಸಾಮಾನ್ಯ ಅರ್ಹತೆ, ಪ್ರವರ್ಗ 2(ಎ), 2(ಬಿ), 3(ಎ), 3(ಬಿ)ಗೆ ಸೇರಿದ ಅಭ್ಯರ್ಥಿಗಳಿಗೆ ರೂ. 400/-, ಈ ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಸಲ್ಲಿಸಿದಲ್ಲಿ ಪ್ರತಿ ಹೆಚ್ಚುವರಿ ಹುದ್ದೆಗೆ ರೂ. 200/- ಶುಲ್ಕವನ್ನು ಹೆಚ್ಚುವರಿಯಾಗಿ ಪಾವತಿಸಬೇಕು.

ಉದಾ: ಒಬ್ಬ ಅಭ್ಯರ್ಥಿ ಕನ್ನಡ ಭಾಷಾ ಶಿಕ್ಷಕ ಹುದ್ದೆಗೆ ಅರ್ಜಿ ಸಲ್ಲಿಸಿದಲ್ಲಿ ಶುಲ್ಕ ರೂ. 400/– ಆಗಿರುತ್ತದೆ. ಅದೇ ಅಭ್ಯರ್ಥಿ, ಕನ್ನಡ ಭಾಷೆಯ ಜೊತೆಗೆ ಕಲಾ ಶಿಕ್ಷಕ ಹುದ್ದೆಗೆ ಅರ್ಜಿಸಲ್ಲಿಸಿದಲ್ಲಿ ಶುಲ್ಕ ರೂ. 400/– + ರೂ. 200/– = ರೂ.600/– ಆಗುತ್ತದೆ.

2. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1 ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ ಶುಲ್ಕ ವಿನಾಯಿತಿ ಇದೆ.

ಸೂಚನೆ: **ದಾಖಲಾತಿಗಳ ಪರಿಶೀಲನೆ ಸಮಯದಲ್ಲಿ ಶುಲ್ಕ ವಿನಾಯ್ತಿ ಪಡೆದಿರುವ ಪ್ರಕರಣಗಳನ್ನು ಪರಿಶೀಲಿಸಲಾಗುತ್ತದೆ. ಸರಿಯಾದ ದಾಖಲೆಗಳಿಲ್ಲದಿದ್ದಲ್ಲಿ ಶುಲ್ಕ ವಿನಾಯ್ತಿ ಪಡೆದ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುತ್ತದೆ.**

7. ಅರ್ಜಿ ಸಲ್ಲಿಸುವ ಅವಧಿ :–

ಅರ್ಜಿಯನ್ನು ದಿನಾಂಕ: 10.04.2012 ರಿಂದ 10.05.2012 ರವರೆಗೆ ನಿಗಧಿತ ಅವಧಿಯಲ್ಲಿ ಆನ್ ಲೈನ್ ಮೂಲಕ ಮಾತ್ರ ಸಲ್ಲಿಸಬೇಕು.

8. ಪ್ರೌಢ ಶಾಲಾ ಸಹಾಯಕ ಶಿಕ್ಷಕ ಗ್ರೇಡ್–2 ವೃಂದದ (ವಿವಿಧ ವಿಷಯ ಹಾಗೂ ಬೋಧನಾ ಮಾಧ್ಯಮದ) ಮತ್ತು ದೈಹಿಕ ಶಿಕ್ಷಣ ಶಿಕ್ಷಕ ಗ್ರೇಡ್–1 ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಬಗ್ಗೆ.

ಪ್ರೌಢ ಶಾಲಾ ಸಹಾಯಕ ಶಿಕ್ಷಕರು ಗ್ರೇಡ್–2 ವೃಂದದ, (ವಿವಿಧ ವಿಷಯ ಹಾಗೂ ಬೋಧನಾ ಮಾಧ್ಯಮದ) ಮತ್ತು ದೈಹಿಕ ಶಿಕ್ಷಣ ಶಿಕ್ಷಕ ಗ್ರೇಡ್–1 ಹುದ್ದೆಗಳಿಗೆ ಒಂದೇ ಅರ್ಜಿ ನಮೂನೆಯನ್ನು ನಿಗಧಿಪಡಿಸಿದೆ. ಅಭ್ಯರ್ಥಿಗಳು ಒಂದೇ ಅರ್ಜಿಯಲ್ಲಿ ಒಂದಕ್ಕಿಂತ ಹೆಚ್ಚು ವಿಷಯದ ಅಥವಾ ಬೋಧನಾ ಮಾಧ್ಯಮದ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ. ಆದರೆ ಅಭ್ಯರ್ಥಿಗಳು ವಿವಿಧ ವಿಷಯ ಹಾಗೂ ಬೋಧನಾ ಮಾಧ್ಯಮದ ಹುದ್ದೆಗಳಿಗೆ ಆದ್ಯತೆಯನ್ನು ನಮೂದಿಸಬೇಕು. **ಆದ್ಯತೆ ಪ್ರಕಾರ ಆಯ್ಕೆ ಮಾಡಲಾಗುವುದು. ಒಂದು ಆದ್ಯತೆಯ ಪ್ರಕಾರ ಆಯ್ಕೆ ಹೊಂದಿದ್ದಲ್ಲಿ ಉಳಿದ ಆದ್ಯತೆಗಳನ್ನು ಕೈಬಿಡಲಾಗುವುದು.**

9. ವಿದ್ಯಾರ್ಹತೆಗಳು:–

ಅಭ್ಯರ್ಥಿಗಳು ನೇಮಕಾತಿ ಅಧಿಸೂಚನೆ ದಿನಾಂಕದಂದು "ದಿ ಕರ್ನಾಟಕ ಎಜುಕೇಷನ್ ಡಿಪಾರ್ಟ್‌ಮೆಂಟ್ ಸರ್ವೀಸಸ್ (ಡಿಪಾರ್ಟ್‌ಮೆಂಟ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್) (ರಿಕ್ರೂಟ್‌ಮೆಂಟ್) (ಅಮೆಂಡ್‌ಮೆಂಟ್) ರೂಲ್ಸ್ 2002" ನಿಯಮಗಳಲ್ಲಿ ನಿಗದಿಪಡಿಸಿರುವಂತೆ, ಪ್ರೌಢ ಶಾಲಾ ಸಹಾಯಕ ಶಿಕ್ಷಕ ಗ್ರೇಡ್–2 ವೃಂದದ (ವಿವಿಧ ವಿಷಯಗಳು ಮತ್ತು ಬೋಧನಾ ಮಾಧ್ಯಮದ) ಮತ್ತು ದೈಹಿಕ ಶಿಕ್ಷಣ ಶಿಕ್ಷಕ ಗ್ರೇಡ್–1 ವೃಂದದ ಹುದ್ದೆಗಳಿಗೆ ಹೊಂದಿರಬೇಕಾದ ವಿದ್ಯಾರ್ಹತೆಗಳ ವಿವರಗಳು ಈ ಮುಂದೆ ತಿಳಿಸಿದಂತಿರುತ್ತದೆ.

(ಅ) ಕಲಾ ಶಿಕ್ಷಕರ (ಕನ್ನಡ, ಆಂಗ್ಲ, ಮರಾಠಿ, ಹಿಂದಿ, ತಮಿಳು ಮತ್ತು ಉರ್ದು ಮಾಧ್ಯಮ) ಹುದ್ದೆಗಳಿಗೆ

Arts Teacher (Kannada, English, Marathi, Tamil, Hindi & Urdu Medium):-

i) ಅಭ್ಯರ್ಥಿಯು ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾಲಯದ "ಬ್ಯಾಚಲರ್ ಆಫ್ ಆರ್ಟ್ಸ್" (ಬಿ.ಎ) ಪದವೀಧರರಾಗಿದ್ದು, ಈ ಪದವಿ ಪರೀಕ್ಷೆಯಲ್ಲಿ "ಇತಿಹಾಸ, ಅರ್ಥಶಾಸ್ತ್ರ, ಭೂಗೋಳ ಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜ ಶಾಸ್ತ್ರ ಇವುಗಳಲ್ಲಿ ಯಾವುದಾದರೂ ಎರಡು ಐಚ್ಛಿಕ ವಿಷಯಗಳನ್ನು ಅಧ್ಯಯನ ಮಾಡಿರಬೇಕು.

ಮತ್ತು

ii] ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾನಿಲಯದಿಂದ ಬ್ಯಾಚುಲರ್ ಆಫ್ ಎಜ್ಯುಕೇಶನ್ (ಬಿ.ಇಡಿ) ಪದವಿಯನ್ನು ಪಡೆದಿರಬೇಕು.

ಹಾಗೂ

iii) ಬೋಧನಾ ಮಾಧ್ಯಮದ ಭಾಷೆಯನ್ನು ಅಭ್ಯರ್ಥಿಯು ಬ್ಯಾಚುಲರ್ ಆಫ್ ಆರ್ಟ್ಸ್ (ಬಿ.ಎ) ಪದವಿಯಲ್ಲಿ ಒಂದು ಭಾಷೆಯನ್ನಾಗಿ ಅಧ್ಯಯನ ಮಾಡಿರಬೇಕು.

ಅಥವಾ

ಬೋಧನಾ ಮಾಧ್ಯಮದ ಭಾಷೆಯನ್ನು ಬಿ.ಎ. ಪದವಿಯಲ್ಲಿ ಅಧ್ಯಯನ ಮಾಡದೆ ಇದ್ದಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಬೋಧನಾ ಮಾಧ್ಯಮದ ಭಾಷೆಯನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಅಧ್ಯಯನ ಮಾಡಿರಬೇಕು.

ಅಥವಾ

ಎಸ್.ಎಸ್.ಎಲ್.ಸಿ. ಅಥವಾ ಬಿ.ಎ., ಪದವಿ ಪರೀಕ್ಷೆಯನ್ನು ಬೋಧನಾ ಮಾಧ್ಯಮದ ಭಾಷೆಯ ಮಾಧ್ಯಮದಲ್ಲಿ ಅಧ್ಯಯನ ಮಾಡಿರಬೇಕು.

ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾನಿಲಯದಿಂದ ಸಂಬಂಧಿಸಿದ ಬೋಧನಾ ಮಾಧ್ಯಮದ ಭಾಷೆಯಲ್ಲಿ **ಡಿಪ್ಲೋಮಾ** ಹೊಂದಿರಬೇಕು.

ಕನ್ನಡ ಮಾಧ್ಯಮದಲ್ಲಿ ಬೋಧಿಸುವ ವಿಷಯಗಳಿಗೆ ಸಂಬಂಧಿಸಿದಂತೆ ಮೇಲೆ ತಿಳಿಸಿದ ನಿಬಂಧನೆಗಳ ಪ್ರಕಾರ ಇಲ್ಲದಿದ್ದಲ್ಲಿ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು ಅಥವಾ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಇವರುಗಳ ವತಿಯಿಂದ ನಡೆಸಲ್ಪಡುವ ಕನ್ನಡ ಸರ್ಟಿಫಿಕೇಟ್ ಕೋರ್ಸ್‌ನಲ್ಲಿ ಉತ್ತೀರ್ಣತೆ ಹೊಂದಿರಬೇಕು.

(ಆ) ಭೌತ ವಿಜ್ಞಾನ ಶಿಕ್ಷಕರ (ಕನ್ನಡ, ಆಂಗ್ಲ, ಮರಾಠಿ, ತೆಲಗು ಮತ್ತು ಉರ್ದು ಮಾಧ್ಯಮ) ಹುದ್ದೆಗಳಿಗೆ

Physical Science Teacher (Kannada, English, Marathi, Telegu & Urdu Medium):-

i) ಅಭ್ಯರ್ಥಿಯು ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾಲಯದ "ಬ್ಯಾಚಲರ್ ಆಫ್ ಸೈನ್ಸ್" (ಬಿ.ಎಸ್ಸಿ) ಪದವೀಧರರಾಗಿದ್ದು, ಈ ಪದವಿ ಪರೀಕ್ಷೆಯಲ್ಲಿ ಈ ಕೆಳಕಂಡ ಐಚ್ಛಿಕ ವಿಷಯಗಳಲ್ಲಿ ಎರಡು ಐಚ್ಛಿಕ ವಿಷಯಗಳನ್ನು ಅಧ್ಯಯನ ಮಾಡಿರಬೇಕು. ಇದರಲ್ಲಿ "ಗಣಿತ ಶಾಸ್ತ್ರ" ಐಚ್ಛಿಕ ವಿಷಯವನ್ನು ಕಡ್ಡಾಯವಾಗಿ ಅಧ್ಯಯನ ಮಾಡಿರಬೇಕು.

"ಭೌತಶಾಸ್ತ್ರ, ಗಣಿತಶಾಸ್ತ್ರ, ರಸಾಯನ ಶಾಸ್ತ್ರ"

ಅಥವಾ

"ಭೌತಶಾಸ್ತ್ರ, ಗಣಿತಶಾಸ್ತ್ರ, ಕಂಪ್ಯೂಟರ್ ಸೈನ್ಸ್"

ಅಥವಾ

"ಭೌತಶಾಸ್ತ್ರ, ಗಣಿತಶಾಸ್ತ್ರ, ಎಲೆಕ್ಟ್ರಾನಿಕ್ಸ್"

ಮತ್ತು

ii) ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾಲಯದಿಂದ **"ಬ್ಯಾಚಲರ್ ಆಫ್ ಎಜುಕೇಷನ್"** (ಬಿ.ಇಡಿ.,) ಪದವಿ ಪಡೆದಿರಬೇಕು.

ಹಾಗೂ

iii) ಬೋಧನಾ ಮಾಧ್ಯಮದ ಭಾಷೆಯನ್ನು ಅಭ್ಯರ್ಥಿಯು **"ಬ್ಯಾಚಲರ್ ಆಫ್ ಸೈನ್ಸ್"** (ಬಿ.ಎಸ್ಸಿ) ಪದವಿಯಲ್ಲಿ ಒಂದು ಭಾಷೆಯನ್ನಾಗಿ ಅಧ್ಯಯನ ಮಾಡಿರಬೇಕು.

ಅಥವಾ

ಬೋಧನಾ ಮಾಧ್ಯಮದ ಭಾಷೆಯನ್ನು ಬಿ.ಎಸ್ಸಿ. ಪದವಿಯಲ್ಲಿ ಅಧ್ಯಯನ ಮಾಡದೆ ಇದ್ದಲ್ಲಿ **ಎಸ್.ಎಸ್.ಎಲ್.ಸಿ.** ಪರೀಕ್ಷೆಯಲ್ಲಿ ಬೋಧನಾ ಮಾಧ್ಯಮದ ಭಾಷೆಯನ್ನು **ಪ್ರಥಮ ಅಥವಾ ದ್ವಿತೀಯ** ಭಾಷೆಯನ್ನಾಗಿ ಅಧ್ಯಯನ ಮಾಡಿರಬೇಕು.

ಅಥವಾ

ಎಸ್.ಎಸ್.ಎಲ್.ಸಿ. ಅಥವಾ ಬಿ.ಎಸ್ಸಿ. ಪದವಿ ಪರೀಕ್ಷೆಯನ್ನು **ಬೋಧನಾ ಮಾಧ್ಯಮದ** ಭಾಷೆಯ ಮಾಧ್ಯಮದಲ್ಲಿ ಅಧ್ಯಯನ ಮಾಡಿರಬೇಕು.

ಅಥವಾ

ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾಲಯದಿಂದ, ಸಂಬಂಧಿಸಿದ ಬೋಧನಾ ಮಾಧ್ಯಮದ ಭಾಷೆಯಲ್ಲಿ **ಡಿಪ್ಲೋಮಾ** ವನ್ನು ಹೊಂದಿರಬೇಕು.

ಕನ್ನಡ ಮಾಧ್ಯಮದಲ್ಲಿ ಬೋಧಿಸುವ ವಿಷಯಗಳಿಗೆ ಸಂಬಂಧಿಸಿದಂತೆ ಮೇಲೆ ತಿಳಿಸಿದ ನಿಬಂಧನೆಗಳ ಪ್ರಕಾರ ಇಲ್ಲದಿದ್ದಲ್ಲಿ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು ಅಥವಾ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಇವರುಗಳ ವತಿಯಿಂದ ನಡೆಸಲ್ಪಡುವ ಕನ್ನಡ ಸರ್ಟಿಫಿಕೇಟ್ ಕೋರ್ಸ್‌ನಲ್ಲಿ ಉತ್ತೀರ್ಣತೆ ಪಡೆದಿರಬೇಕು.

(ಇ) ಜೀವ ವಿಜ್ಞಾನ ಶಿಕ್ಷಕರ (ಕನ್ನಡ, ಆಂಗ್ಲ, ಮರಾಠಿ ಮತ್ತು ಉರ್ದು ಮಾಧ್ಯಮ) ಹುದ್ದೆಗಳಿಗೆ

Biological Science Teacher (Kannada, English, Marathi & Urdu Medium):-

i) ಅಭ್ಯರ್ಥಿಯು, ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾಲಯದ **"ಬ್ಯಾಚಲರ್ ಆಫ್ ಸೈನ್ಸ್"** (ಬಿ.ಎಸ್ಸಿ) ಪದವೀಧರರಾಗಿದ್ದು, ಈ ಪದವಿ ಪರೀಕ್ಷೆಯಲ್ಲಿ **ರಸಾಯನ ಶಾಸ್ತ್ರ, ಸಸ್ಯಶಾಸ್ತ್ರ ಮತ್ತು ಪ್ರಾಣಿಶಾಸ್ತ್ರ** ಈ ಐಚ್ಛಿಕ ವಿಷಯಗಳಲ್ಲಿ ಎರಡು ಐಚ್ಛಿಕ ವಿಷಯಗಳನ್ನು ಅಧ್ಯಯನ ಮಾಡಿರಬೇಕು. ಹಾಗೂ ಇದರಲ್ಲಿ **"ರಸಾಯನಶಾಸ್ತ್ರ "** ಐಚ್ಛಿಕ ವಿಷಯವನ್ನು ಕಡ್ಡಾಯವಾಗಿ ಅಧ್ಯಯನ ಮಾಡಿರಬೇಕು.

ಮತ್ತು

ii) ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾಲಯದಿಂದ **"ಬ್ಯಾಚಲರ್ ಆಫ್ ಎಜುಕೇಷನ್"** (ಬಿ.ಎಡ್) ಪದವಿ ಪಡೆದಿರಬೇಕು.

ಹಾಗೂ

iii) ಬೋಧನಾ ಮಾಧ್ಯಮದ ಭಾಷೆಯನ್ನು ಅಭ್ಯರ್ಥಿಯು **"ಬ್ಯಾಚಲರ್ ಆಫ್ ಸೈನ್ಸ್"** (ಬಿ.ಎಸ್ಸಿ) ಪದವಿಯಲ್ಲಿ ಒಂದು ಭಾಷೆಯನ್ನಾಗಿ ಅಧ್ಯಯನ ಮಾಡಿರಬೇಕು.

ಅಥವಾ

ಬೋಧನಾ ಮಾಧ್ಯಮದ ಭಾಷೆಯನ್ನು ಬಿ.ಎಸ್ಸಿ. ಪದವಿಯಲ್ಲಿ ಅಧ್ಯಯನ ಮಾಡದೆ ಇದ್ದಲ್ಲಿ **ಎಸ್.ಎಸ್.ಎಲ್.ಸಿ.** ಪರೀಕ್ಷೆಯಲ್ಲಿ ಬೋಧನಾ ಮಾಧ್ಯಮದ ಭಾಷೆಯನ್ನು **ಪ್ರಥಮ ಅಥವಾ ದ್ವಿತೀಯ** ಭಾಷೆಯನ್ನಾಗಿ ಅಧ್ಯಯನ ಮಾಡಿರಬೇಕು.

ಅಥವಾ

ಎಸ್.ಎಸ್.ಎಲ್.ಸಿ. ಅಥವಾ ಬಿ.ಎಸ್ಸಿ. ಪದವಿ ಪರೀಕ್ಷೆಯನ್ನು **ಬೋಧನಾ ಮಾಧ್ಯಮದ** ಭಾಷೆಯ ಮಾಧ್ಯಮದಲ್ಲಿ ಅಧ್ಯಯನ ಮಾಡಿರಬೇಕು.

ಅಥವಾ

ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾಲಯದಿಂದ, ಸಂಬಂಧಿಸಿದ ಬೋಧನಾ ಮಾಧ್ಯಮದ ಭಾಷೆಯಲ್ಲಿ **'ಡಿಪ್ಲೋಮಾ'** ವನ್ನು ಹೊಂದಿರಬೇಕು.

ಕನ್ನಡ ಮಾಧ್ಯಮದಲ್ಲಿ ಬೋಧಿಸುವ ವಿಷಯಗಳಿಗೆ ಸಂಬಂಧಿಸಿದಂತೆ ಮೇಲೆ ತಿಳಿಸಿದ ನಿಬಂಧನೆಗಳ ಪ್ರಕಾರ ಇಲ್ಲದಿದ್ದಲ್ಲಿ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು ಅಥವಾ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಇವರುಗಳ ವತಿಯಿಂದ ನಡೆಸಲ್ಪಡುವ ಕನ್ನಡ ಸರ್ಟಿಫಿಕೇಟ್ ಕೋರ್ಸ್‌ನಲ್ಲಿ ಉತ್ತೀರ್ಣತೆ ಪಡೆದಿರಬೇಕು.

(ಈ) ಭಾಷಾ ಶಿಕ್ಷಕರ ಹುದ್ದೆಗಳಿಗೆ (Language Assistants):-

i) ಅಭ್ಯರ್ಥಿಯು ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾಲಯದ **"ಬ್ಯಾಚಲರ್ ಆಫ್ ಆರ್ಟ್ಸ್"** (ಬಿ.ಎ) ಪದವೀಧರರಾಗಿದ್ದು, ಈ ಪದವಿ ಪರೀಕ್ಷೆಯಲ್ಲಿ ಸಂಬಂಧಿಸಿದ ಭಾಷಾ ಶಿಕ್ಷಕರ ಹುದ್ದೆಗೆ ಅನುಗುಣವಾದ ಭಾಷೆಯನ್ನು ಒಂದು ಐಚ್ಛಿಕ ವಿಷಯವನ್ನಾಗಿ (Optional) ಅಧ್ಯಯನ ಮಾಡಿರಬೇಕು. ಭಾಷೆಗಳು ಅಂದರೆ **ಕನ್ನಡ, ಇಂಗ್ಲೀಷ್, ಹಿಂದಿ, ಉರ್ದು, ತೆಲುಗು, ತಮಿಳು, ಸಂಸ್ಕೃತ ಮತ್ತು ಮರಾಠಿ**

ಅಥವಾ

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಬೆಂಗಳೂರು ಇವರು ನಡೆಸುವ (04) ನಾಲ್ಕು ವರ್ಷಗಳ ಅವಧಿಯ **ಕನ್ನಡ ಪಂಡಿತ, ಸಂಸ್ಕೃತ ವಿದ್ವಾನ್, ಉರ್ದು ಮುನ್ಷಿ** ಪರೀಕ್ಷೆಯನ್ನು ಪಾಸು ಮಾಡಿರಬೇಕು.

ಮತ್ತು

ii) ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾಲಯದಿಂದ **"ಬ್ಯಾಚಲರ್ ಆಫ್ ಎಜುಕೇಷನ್"** (ಬಿ.ಇಡಿ.,) ಪದವಿ ಪಡೆದಿರಬೇಕು.

ಬ್ಯಾಚುಲರ್ ಪದವಿಯಲ್ಲಿ ಸಂಬಂಧಿಸಿದ ಭಾಷಾ ಶಿಕ್ಷಕರ ಹುದ್ದೆಗೆ ಅನುಗುಣವಾದ ಭಾಷಾ ಐಚ್ಛಿಕ ವಿಷಯವನ್ನು ಅಧ್ಯಯನ ಮಾಡದೆ ಇದ್ದಲ್ಲಿ ಅಂಥಹ ಅಭ್ಯರ್ಥಿಗಳು;

a) ಸಂಬಂದಿಸಿದ ಭಾಷಾ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು (Post Graduate Degree) ಹೊಂದಿದ್ದಲ್ಲಿ ಸಂಬಂಧಿಸಿದ ಭಾಷಾ ಶಿಕ್ಷಕರ ಹುದ್ದೆಗೆ ಪರಿಗಣಿಸಲು ಅರ್ಹತೆ ಪಡೆಯುತ್ತಾರೆ.

b) **ರೀಜನಲ್ ಇನ್ಸ್‌ಟ್ಯೂಟ್ ಆಫ್ ಇಂಗ್ಲೀಷ್ ಸೌತ್ ಇಂಡಿಯಾ** ಇವರು ನೀಡುವ **ಪೋಸ್ಟ್ ಗ್ರಾಜುಯೇಟ್ ಡಿಪ್ಲೋಮಾ ಸರ್ಟಿಫಿಕೇಟ್ ಇನ್ ಇಂಗ್ಲೀಷ್** ಹೊಂದಿದ್ದಲ್ಲಿ ಅಂತಹ ಅಭ್ಯರ್ಥಿಗಳು ಇಂಗ್ಲೀಷ್ ಭಾಷಾ ಶಿಕ್ಷಕರ ಹುದ್ದೆಗೆ ಪರಿಗಣಿಸಲು ಅರ್ಹತೆ ಪಡೆಯುತ್ತಾರೆ.

c) ಹಿಂದಿ ಭಾಷಾ ಶಿಕ್ಷಕರ ಹುದ್ದೆಗೆ ಅಭ್ಯರ್ಥಿಯು. ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾಲಯದ **ಬ್ಯಾಚುಲರ್** ಪದವೀಧರರಾಗಿದ್ದು, ಈ ಪದವಿಯಲ್ಲಿ ಹಿಂದಿಯನ್ನು ಒಂದು ಐಚ್ಛಿಕ ವಿಷಯವನ್ನಾಗಿ ಅಧ್ಯಯನ ಮಾಡಿರಬೇಕು.

ಮತ್ತು

ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾಲಯದಿಂದ **ಬ್ಯಾಚುಲರ್ ಆಫ್ ಎಜುಕೇಷನ್** (ಬಿ.ಇಡಿ.,) ಪದವೀಧರರಾಗಿದ್ದು, ಈ ಪದವಿ ಪರೀಕ್ಷೆಯಲ್ಲಿ ಹಿಂದಿಯನ್ನು ಬೋಧನಾ ವಿಷಯವನ್ನಾಗಿ ಅಧ್ಯಯನ ಮಾಡಿರಬೇಕು.

d) ಇಂಗ್ಲೀಷ್ ಭಾಷಾ ಶಿಕ್ಷಕರ ಹುದ್ದೆಗೆ ಸಂಬಂಧಿಸಿದಂತೆ ಅಭ್ಯರ್ಥಿಗಳು ಬಿ.ಎಡ್. ಪದವಿಯಲ್ಲಿ ಇಂಗ್ಲೀಷ್‌ನ್ನು ಬೋಧನಾ ವಿಷಯವನ್ನಾಗಿ ಅಧ್ಯಯನ ಮಾಡದೆ ಇದ್ದಲ್ಲಿ ಅಂತಹ ಅಭ್ಯರ್ಥಿಗಳು **ರೀಜನಲ್ ಇನ್ಸ್‌ಟ್ಯೂಟ್ ಆಫ್ ಇಂಗ್ಲೀಷ್, ಸೌತ್ ಇಂಡಿಯಾ** ಇವರು ನೀಡುವ **ಪೋಸ್ಟ್ ಗ್ರಾಜುಯೇಟ್ ಡಿಪ್ಲೋಮಾ ಸರ್ಟಿಫಿಕೇಟ್ ಇನ್ ಇಂಗ್ಲೀಷ್** ಹೊಂದಿದ್ದಲ್ಲಿ ನೇಮಕಾತಿಗೆ ಪರಿಗಣಿಸಲು ಅರ್ಹತೆ ಪಡೆಯುತ್ತಾರೆ.

ವಿಶೇಷ ಸೂಚನೆ:– **ಮೇಲ್ಕಂಡ ಎ, ಬಿ ಮತ್ತು ಡಿ ಪ್ರಕರಣಗಳಲ್ಲಿ ಅಭ್ಯರ್ಥಿಯು ಬ್ಯಾಚುಲರ್ ಪದವಿ ಮತ್ತು ಬ್ಯಾಚುಲರ್ ಆಫ್ ಎಜುಕೇಷನ್ ಪದವಿ ಪರೀಕ್ಷೆಗಳಲ್ಲಿ ಪಡೆದಿರುವ ಅಂಕಗಳನ್ನು ಮಾತ್ರ ಮೆರಿಟ್ ಕಂಡುಕೊಳ್ಳಲು ಪರಿಗಣಿಸಲಾಗುತ್ತದೆ. ಆದರೆ ಸ್ನಾತಕೋತ್ತರ ಮತ್ತು ಡಿಪ್ಲೋಮಾ ಪರೀಕ್ಷೆಗಳಲ್ಲಿ ಪಡೆದಿರುವ ಅಂಕಗಳನ್ನು ಮೆರಿಟ್ ಕಂಡು ಹಿಡಿಯಲು ಗಣನೆಗೆ ತೆಗೆದುಕೊಳ್ಳವುದಿಲ್ಲ.**

ಹಿಂದಿ ಭಾಷಾ ಶಿಕ್ಷಕರ ಹುದ್ದೆಗೆ ಸಂಬಂಧಿಸಿದಂತೆ ಅಭ್ಯರ್ಥಿಯು:–

1. ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ, ಮದ್ರಾಸ್ ಇವರು ನಡೆಸುವ **ರಾಷ್ಟ್ರಭಾಷಾ ಪ್ರವೀಣ್ ಮತ್ತು ಶಿಕ್ಷಾ ಸ್ನಾತಕ್** (ಹಿಂದಿ ಮತ್ತು ಮತ್ತೊಂದು ಭಾಷೆಯನ್ನು ಬೋಧನಾ ವಿಷಯವನ್ನಾಗಿ **ಶಿಕ್ಷಾ ಸ್ನಾತಕ್** ಪರೀಕ್ಷೆಯಲ್ಲಿ ಅಧ್ಯಯನ ಮಾಡಿರಬೇಕು) ಮತ್ತು **ಪದವಿ ಪೂರ್ವ ಶಿಕ್ಷಣ (ಪಿ.ಯು.ಸಿ) ಕೋರ್ಸಿನಲ್ಲಿ ಉತ್ತೀರ್ಣರಾಗಿದ್ದು**, ಸದರಿ ಕೋರ್ಸಿನಲ್ಲಿ ಕನ್ನಡ ಅಥವಾ ಯಾವುದೇ ಒಂದು ಪ್ರಾದೇಶಿಕ ಭಾಷೆಯನ್ನು ಒಂದು ವಿಷಯವನ್ನಾಗಿ ಅಥವಾ ಮಾಧ್ಯಮವನ್ನಾಗಿ ವ್ಯಾಸಂಗ ಮಾಡಿರಬೇಕು.

ಅಥವಾ

2. ರಾಜ್ಯ ಸರ್ಕಾರವು ತತ್ಸಮಾನ ವಿದ್ಯಾರ್ಹತೆ ಎಂದು ಘೋಷಿರುವ ಇತರೆ ಯಾವುದೇ ವಿದ್ಯಾರ್ಹತೆಯನ್ನು ಹೊಂದಿದ್ದಲ್ಲಿ ನೇಮಕಾತಿಗೆ ಪರಿಗಣಿಸಲು ಅರ್ಹತೆ ಪಡೆಯುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ ಇಡಿ 125 ಪಿಟಿಐ 2003 ದಿನಾಂಕ 16–08–2003 ಹಾಗೂ ಸರ್ಕಾರದ ಆದೇಶ ಸಂಖ್ಯೆ ಇಡಿ 160 ಪಿಟಿಐ 2003 ದಿನಾಂಕ 24–02–2004ರನ್ವಯ ಈಕೆಳಕಂಡಂತೆ ಪದವಿ ಮತ್ತು ಬಿ.ಇಡಿ., ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿರಬೇಕು.

ಅ) ಪದವಿ ತತ್ಸಮಾನ ಪರೀಕ್ಷೆ ಹೆಸರು	ಸಂಸ್ಥೆಯ ಹೆಸರು
1. ಹಿಂದಿ ರತ್ನ	ಮೈಸೂರು ಹಿಂದಿ ಪ್ರಚಾರ ಪರಿಷತ್,ಬೆಂಗಳೂರು
2. ರಾಜ ಭಾಷಾ ವಿದ್ವಾನ್	ಕರ್ನಾಟಕ ಹಿಂದಿ ಪ್ರಚಾರ ಸಮಿತಿ,ಬೆಂಗಳೂರು
3. ಹಿಂದಿ ಭಾಷಾ ಪ್ರವೀಣ್	ಕರ್ನಾಟಕ ಮಹಿಳಾ ಹಿಂದಿ ಸೇವಾ ಸಮಿತಿ,ಬೆಂಗಳೂರು
4. ರಾಷ್ಟ್ರಭಾಷಾ ಪ್ರವೀಣ್	ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ,ಮದ್ರಾಸ್

ಆ) ಬಿಎಡ್ ತತ್ಸಮಾನ ಪರೀಕ್ಷೆ ಹೆಸರು — ಸಂಸ್ಥೆಯ ಹೆಸರು

ಬಿಎಡ್ ತತ್ಸಮಾನ ಪರೀಕ್ಷೆ ಹೆಸರು	ಸಂಸ್ಥೆಯ ಹೆಸರು
1. ಹಿಂದಿ ಶಿಕ್ಷಕ್	ಅ. ಕರ್ನಾಟಕ ಮಹಿಳಾ ಹಿಂದಿ ಸೇವಾ ಸಮಿತಿ,ಬೆಂಗಳೂರು
	ಆ. ಕರ್ನಾಟಕ ಹಿಂದಿ ಪ್ರಚಾರ ಸಮಿತಿ,ಬೆಂಗಳೂರು
	ಇ. ಮೈಸೂರು ಹಿಂದಿ ಪ್ರಚಾರ ಪರಿಷತ್,ಬೆಂಗಳೂರು
	ಈ. ಮಾನಸ ಎಜುಕೇಷನ್ ಸೊಸೈಟಿ, ತುಮಕೂರು
	ಉ.ಕರ್ನಾಟಕ ಲೇಬರ್ ಎಜುಕೇಷನ್ ಸೊಸೈಟಿ,ಬೀದರ್
2. ಹಿಂದಿ ಶಿಕ್ಷಣ ಪಾರಂಗತ್	ಕೇಂದ್ರೀಯ ಹಿಂದಿ ಸಂಸ್ಥಾನ್, ಆಗ್ರಾ [ಸರ್ಕಾರಿ ಹಿಂದಿ ಶಿಕ್ಷಕರ ತರಬೇತಿ ಕಾಲೇಜು, ಮೈಸೂರು.]

ಷರತ್ತುಗಳು :-

I) ಹಿಂದಿ ಶಿಕ್ಷಕ್ ಮತ್ತು ಹಿಂದಿ ಶಿಕ್ಷಣ ಪಾರಂಗತ್ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ಸದರಿ ಕೋರ್ಸನ್ನು ಸೇರುವ ಮುಂಚೆ ಪಿ.ಯು.ಸಿ.ಯಲ್ಲಿ ಉತ್ತೀರ್ಣರಾಗಿದ್ದು, ಸದರಿ ಪಿ.ಯು ಕೋರ್ಸಿನಲ್ಲಿ ಕನ್ನಡ ಅಥವಾ ಯಾವುದಾದರೂ ಒಂದು ಪ್ರಾದೇಶಿಕ ಭಾಷೆಯನ್ನು ಒಂದು ವಿಷಯವನ್ನಾಗಿ ಅಥವಾ ಮಾಧ್ಯಮವನ್ನಾಗಿ ವ್ಯಾಸಂಗ ಮಾಡಿರಬೇಕು.

II) ಹಿಂದಿ ಜೊತೆಗೆ ಮತ್ತೊಂದು ಭಾಷೆಯನ್ನು ಬೋಧನಾ ವಿಧಾನವನ್ನಾಗಿ ಅಧ್ಯಯನ ಮಾಡಿರಬೇಕು.

(ಉ) ದೈಹಿಕ ಶಿಕ್ಷಣ ಶಿಕ್ಷಕ ಗ್ರೇಡ್-1 ಹುದ್ದೆಗಳಿಗೆ (Physical Education Teacher Grade-I):-

i) ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾಲಯದ **"ಬ್ಯಾಚಲರ್ ಪದವಿ"** ಯನ್ನು ಪಡೆದಿರಬೇಕು.

ಮತ್ತು

ii) ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾಲಯದ **"ಬ್ಯಾಚಲರ್ ಆಫ್ ಫಿಸಿಕಲ್ ಎಜುಕೆಷನ್"** ಪದವಿಯನ್ನು ಪಡೆದಿರಬೇಕು. ಅಥವಾ **ಗೌರ್ನಮೆಂಟ್ ಕಾಲೇಜ್ ಆಫ್ ಫಿಸಿಕಲ್ ಎಜುಕೇಷನ್** ಇಲ್ಲಿಂದ **ಡಿಪ್ಲೋಮಾ ಇನ್ ಫಿಸಿಕಲ್ ಎಜುಕೇಷನ್** ಹೊಂದಿರಬೇಕು. ಅಥವಾ ರಾಜ್ಯ ಸರಕಾರವು ತತ್ಸಮಾನ ಪರೀಕ್ಷೆ ಎಂದು ಪರಿಗಣಿಸಿರುವ ವಿದ್ಯಾರ್ಹತೆಯನ್ನು ಹೊಂದಿರಬೇಕು.

10. **ವೇತನ ಶ್ರೇಣಿ:-** ಪ್ರೌಢ ಶಾಲಾ ಸಹಾಯಕ ಶಿಕ್ಷಕರು ಗ್ರೇಡ್-2 ಹಾಗೂ ದೈಹಿಕ ಶಿಕ್ಷಣ ಶಿಕ್ಷಕ ಗ್ರೇಡ್-1 ವೃಂದದ ಹುದ್ದೆಗಳಿಗೆ: ರೂ.8825 – 225-9500-250-10500-300-12300-350-14400-400-16000.

11. **ವಯೋಮಿತಿ**

ಅಭ್ಯರ್ಥಿಗಳು ಈ **ನೇಮಕಾತಿ ಅಧಿಸೂಚನೆ** ದಿನಾಂಕದಂದು ಮುಂದೆ **ತಿಳಿಸಿರುವ** ಕನಿಷ್ಠ ಮತ್ತು ಗರಿಷ್ಠ **ವಯೋಮಿತಿಯೊಳಗಿರಬೇಕು.**

ಕನಿಷ್ಠ: 20 ವರ್ಷಗಳು ತುಂಬಿರಬೇಕು.

ಗರಿಷ್ಠ:

ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡ ಅಥವಾ ಹಿಂದುಳಿದ ಪ್ರವರ್ಗ-1ಕ್ಕೆ ಸೇರಿದ ಅಭ್ಯರ್ಥಿಗಳು	: **45 ವರ್ಷಗಳನ್ನು ತಲುಪಿರಬಾರದು.**
ಪ್ರವರ್ಗ 2(ಎ), 2(ಬಿ), 3(ಎ) ಮತ್ತು 3(ಬಿ) ಗಳಿಗೆ ಸೇರಿದ ಅಭ್ಯರ್ಥಿಗಳು	: **43 ವರ್ಷಗಳನ್ನು** ತಲುಪಿರಬಾರದು.
ಇತರೆ ಅಭ್ಯರ್ಥಿಗಳು [ಸಾಮಾನ್ಯ ಅಭ್ಯರ್ಥಿಗಳು]	: **40 ವರ್ಷಗಳನ್ನು** ತಲುಪಿರಬಾರದು.

ಸರ್ಕಾರಿ ಪ್ರೌಢಶಾಲೆಗಳಲ್ಲಿ ಕಾರ್ಯನಿರ್ವಹಿಸಿದ /ನಿರ್ವಹಿಸುತ್ತಿರುವ "ಅರೆಕಾಲಿಕ" ಮತ್ತು ಗೌರವ ಶಿಕ್ಷಕರುಗಳಿಗೆ ಗರಿಷ್ಠ ವಯೋಮಿತಿಯನ್ನು ಅವರುಗಳು "ಅರೆಕಾಲಿಕ/ಗೌರವ ಶಿಕ್ಷಕರ ಸೇವೆ ಸಲ್ಲಿಸಿದ ವರ್ಷಗಳಷ್ಟು (ಗರಿಷ್ಠ 10 ವರ್ಷಗಳ ಮಿತಿಗೆ ಒಳಪಟ್ಟು)ಸಡಿಲಿಕೆ ಇರುತ್ತದೆ.

12. **ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆ:–ಆಯ್ಕೆ ಬಯಸುವ ಪ್ರತಿ ಅಭ್ಯರ್ಥಿಯು ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಪ್ರಥಮ ಹಾಗೂ ದ್ವಿತೀಯ ಪತ್ರಿಕೆಯ ಪರೀಕ್ಷೆಗಳಿಗೆ ಕಡ್ಡಾಯವಾಗಿ ಹಾಜರಾಗಬೇಕು.**

13. **ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆ ಬಗ್ಗೆ ವಿವರಗಳು:–**

i) **ಪರೀಕ್ಷೆ ಹೆಸರು:** ಪ್ರೌಢಶಾಲಾ ಸಹಾಯಕ ಶಿಕ್ಷಕ ಗ್ರೇಡ್–2 ವೃಂದದ ಮತ್ತು ದೈಹಿಕ ಶಿಕ್ಷಣ ಶಿಕ್ಷಕ ಗ್ರೇಡ್–I ವೃಂದದ ಶಿಕ್ಷಕರ ಹುದ್ದೆಗಳಿಗೆ ನೇರ ನೇಮಕಾತಿಗಾಗಿ ನಡೆಸುವ ವಿಭಾಗೀಯ ಮಟ್ಟದ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆ.

ii) **ಪರೀಕ್ಷೆ ನಡೆಸುವ ಪ್ರಾಧಿಕಾರಿ:** ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯನ್ನು ಗುಲ್ಬರ್ಗಾ ವಿಭಾಗೀಯ ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ವಿಭಾಗ, ಗುಲ್ಬರ್ಗಾ ಇವರು ವಿಭಾಗ ಮಟ್ಟದಲ್ಲಿ ನಡೆಸುವರು. ವಿಭಾಗದ ವ್ಯಾಪ್ತಿಯಲ್ಲಿ ಬರುವ ಶೈಕ್ಷಣಿಕ ಜಿಲ್ಲೆಗಳು (ಬಳ್ಳಾರಿ, ಬೀದರ್, ಗುಲ್ಬರ್ಗಾ, ಕೊಪ್ಪಳ, ರಾಯಚೂರು ಮತ್ತು ಯಾದಗಿರಿ) ಪರೀಕ್ಷಾ ಕೇಂದ್ರಗಳಾಗಿರುತ್ತವೆ.

iii) **ಪರೀಕ್ಷೆಯ ದಿನಾಂಕ :** 23.06.2012 ರಿಂದ 26.06.2012. ರವರೆಗೆ

iv) ಪರೀಕ್ಷೆಯ ಅವಧಿ ಮತ್ತು ಸಮಯ :

ಪರೀಕ್ಷಾ ವಿಷಯ	ದಿನಾಂಕ	ಸಮಯ
ಸಾಮಾನ್ಯ ಪತ್ರಿಕೆ –1	23–06–2012	ಬೆಳಗ್ಗೆ 10 ರಿಂದ 12 ಗಂಟೆವರೆಗೆ
ಕಲಾ ಶಿಕ್ಷಕರು ಪತ್ರಿಕೆ–2	23–06–2012	ಮಧ್ಯಾಹ್ನ 2 ರಿಂದ 4 ಗಂಟೆವರೆಗೆ
ದೈ.ಶಿ. ಗ್ರೇಡ್–I ಪತ್ರಿಕೆ–2	24–06–2012	ಬೆಳಗ್ಗೆ 10 ರಿಂದ 12 ಗಂಟೆವರೆಗೆ
ಭೌತವಿಜ್ಞಾನ/ಜೀವವಿಜ್ಞಾನ ಪತ್ರಿಕೆ–2	24–06–2012	ಮಧ್ಯಾಹ್ನ 2 ರಿಂದ 4 ಗಂಟೆವರೆಗೆ
ಕನ್ನಡ ಭಾಷಾ ಶಿಕ್ಷಕರು ಪತ್ರಿಕೆ–2	25–06–2012	ಬೆಳಗ್ಗೆ 10 ರಿಂದ 12 ಗಂಟೆವರೆಗೆ
ಆಂಗ್ಲ ಭಾಷಾ ಶಿಕ್ಷಕರು ಪತ್ರಿಕೆ–2	25–06–2012	ಮಧ್ಯಾಹ್ನ 2 ರಿಂದ 4 ಗಂಟೆವರೆ
ಹಿಂದಿ ಭಾಷಾ ಶಿಕ್ಷಕರು ಪತ್ರಿಕೆ–2	26–06–2012	ಬೆಳಗ್ಗೆ 10 ರಿಂದ 12 ಗಂಟೆವರೆಗೆ
ಸಂಸ್ಕೃತ/ಉರ್ದು/ತಮಿಳು / ಪತ್ರಿಕೆ–2	26–06–2012	ಮಧ್ಯಾಹ್ನ 2 ರಿಂದ 4 ಗಂಟೆವರೆಗೆ

v) **ಪರೀಕ್ಷಾ ಮಾಧ್ಯಮ: ಕನ್ನಡ ಮತ್ತು ಆಂಗ್ಲ ಮಾಧ್ಯಮ**

vi) **ಪ್ರಶ್ನೆಪತ್ರಿಕೆ, ಅಂಕಗಳು ಮತ್ತು ವಿಷಯ:** ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಕೆಳಕಂಡ ವಿಷಯಗಳನ್ನೊಳಗೊಂಡ ಪರೀಕ್ಷಾ ವಿಷಯಗಳು ಎರಡು ಪ್ರಶ್ನೆ ಪತ್ರಿಕೆಗಳನ್ನು ಹೊಂದಿರುತ್ತದೆ. ಒಂದನೇ ಪ್ರಶ್ನೆ ಪತ್ರಿಕೆಯು (ಪತ್ರಿಕೆ–I) 100 ಅಂಕಗಳನ್ನು ಒಳಗೊಂಡಿದ್ದು, ಎಲ್ಲಾ ವಿಷಯದ ಹುದ್ದೆಗಳಿಗೂ ಕಡ್ಡಾಯವಾಗಿರುತ್ತದೆ.

ಕ್ರ.ಸಂ.	ಹುದ್ದೆಯ ಹೆಸರು	ವಿಷಯ	ಅಂಕಗಳು
1	**ಪ್ರೌಢಶಾಲಾ ಸಹಾಯಕ ಶಿಕ್ಷಕ ಗ್ರೇಡ್–2 (ಫಿಸಿಕಲ್ ಸೈನ್ಸ್, ಬಯಾಲಜಿಕಲ್ ಸೈನ್ಸ್, ಕಲಾ ಹಾಗೂ ಕನ್ನಡ, ಆಂಗ್ಲ, ಹಿಂದಿ, ಮರಾಠಿ ಮತ್ತು ಉರ್ದು ಭಾಷಾ ಶಿಕ್ಷಕರ ಹುದ್ದೆಗಳು), ದೈಹಿಕ ಶಿಕ್ಷಣ ಶಿಕ್ಷಕ ಗ್ರೇಡ್–1**	**ಒಂದನೇ ಪ್ರಶ್ನೆ ಪತ್ರಿಕೆ** ಸಾಮಾನ್ಯ ಜ್ಞಾನ ಶೈಕ್ಷಣಿಕ ಮನೋವಿಜ್ಞಾನ ಮೆಂಟಲ್ ಎಬಿಲಿಟಿ	100
2	**ಕಲಾ ಶಿಕ್ಷಕರು**	**ಎರಡನೇ ಪ್ರಶ್ನೆ ಪತ್ರಿಕೆ** ಇತಿಹಾಸ, ಭೂಗೋಳ ಶಾಸ್ತ್ರ, ಅರ್ಥಶಾಸ್ತ್ರ ಪೌರನೀತಿ	100
3	**ಭಾಷಾ ಶಿಕ್ಷಕರ ಹುದ್ದೆಗಳಿಗೆ**	ಕನ್ನಡ / ಇಂಗ್ಲೀಷ್/ ಹಿಂದಿ/ ಮರಾಠಿ / ಉರ್ದು	100
4	**ಭೌತ ವಿಜ್ಞಾನ ಶಿಕ್ಷಕರು (ಫಿಸಿಕಲ್ ಸೈನ್ಸ್)**	ಭೌತ ಶಾಸ್ತ್ರ ಮತ್ತು ಗಣಿತ ಶಾಸ್ತ್ರ	100

5	ಜೀವ ವಿಜ್ಞಾನ ಶಿಕ್ಷಕರು (ಬಯಾಲಾಜಿಕಲ್ ಸೈನ್ಸ್)	ರಸಾಯನ ಶಾಸ್ತ್ರ, ಪ್ರಾಣಿ ಶಾಸ್ತ್ರ, ಸಸ್ಯಶಾಸ್ತ್ರ	100
6	ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1	ದೈಹಿಕ ಶಿಕ್ಷಣದ ಇತಿಹಾಸ, ತತ್ವಗಳು ಮತ್ತು ತತ್ವಜ್ಞಾನ, ದೈಹಿಕ ಶಿಕ್ಷಣದ ಆಡಳಿತ ಮತ್ತು ಸಂಘಟನೆ, ದೈಹಿಕ ಶಿಕ್ಷಣದ ಮನೋಜ್ಞಾನ ಸಾಮಾಗ್ರಿ ಮತ್ತು ಬೋಧನಾ ವಿಧಾನ, ಅಂಗರಚನಾಶಾಸ್ತ್ರ, ಅಂಗಕಾರ್ಯಶಾಸ್ತ್ರ ಮತ್ತು ಜೀವಶಾಸ್ತ್ರ, ಆರೋಗ್ಯ ಶಿಕ್ಷಣ, ಸುರಕ್ಷಣಾ ಶಿಕ್ಷಣ ಮತ್ತು ಅಂಗಲಸ ವ್ಯಾಯಮ, ಕ್ರೀಢಾಧಿಕಾರತ್ವ ಮತ್ತು ಕ್ರೀಡಾ ತರಬೇತಿ ತತ್ವಗಳು	100

ಪ್ರಶ್ನೆಗಳ ವ್ಯಾಪ್ತಿ ಹಾಗೂ ಸ್ವರೂಪ: 1) ಪ್ರಶ್ನೆಗಳು ನಿಗದಿಪಡಿಸಲಾಗಿರುವ ಪಠ್ಯವಸ್ತುವಿನ ವ್ಯಾಪ್ತಿಯಲ್ಲಿರುತ್ತದೆ.

2) ಪ್ರಶ್ನೆಗಳು ವಸ್ತುನಿಷ್ಠವಾಗಿದ್ದು ಪ್ರತಿ ಪ್ರಶ್ನೆಗೆ ಒಂದು ಅಂಕ ನಿಗದಿಪಡಿಸಿದೆ.

3) ಪ್ರತಿ ಪ್ರಶ್ನೆ 4 ಉತ್ತರಗಳನ್ನು ಹೊಂದಿದ್ದು ಇವುಗಳಲ್ಲಿ ಒಂದು ಸರಿ ಉತ್ತರವಾಗಿರುತ್ತದೆ.

4) ಉತ್ತರಗಳನ್ನು " ಓ.ಎಂ.ಆರ್." ಶೀಟನಲ್ಲಿ ಗುರ್ತಿಸುವುದು.

ಭಾಷಾ ವಿಷಯ ಹೊರತುಪಡಿಸಿ ಇತರೆ ಎಲ್ಲಾ ವಿಷಯಗಳ ಪ್ರಶ್ನೆ ಪತ್ರಿಕೆಗಳು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿರುತ್ತವೆ. ಭಾಷಾ ವಿಷಯಕ್ಕೆ ಸಂಬಂಧಿಸಿದಂತೆ ಆಯಾ ಭಾಷೆಯಲ್ಲಿರುತ್ತವೆ.

14. ಆಯ್ಕೆ ವಿಧಾನ:

ಅಭ್ಯರ್ಥಿಗಳನ್ನು **"ದಿ ಕರ್ನಾಟಕ ಎಜುಕೇಷನ್ ಡಿಪಾರ್ಟ್‌ಮೆಂಟ್ ಸರ್ವೀಸಸ್ (ಡಿಪಾರ್ಟ್‌ಮೆಂಟ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್) (ರಿಕ್ರೂಟ್‌ಮೆಂಟ್) (ಅಮೆಂಡ್‌ಮೆಂಟ್) ರೂಲ್ಸ್ 2002"** ನಿಯಮಗಳ ಅನ್ವಯ ಮೆರಿಟ್ ಮತ್ತು ಕರ್ನಾಟಕ ಸರ್ಕಾರದ ಪ್ರಚಲಿತ ಮೀಸಲಾತಿ ನಿಯಮಗಳ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.

15. ಅರ್ಹತೆ ನಿರ್ಧರಿಸುವುದು:-

ಅ) ಪ್ರೌಢಶಾಲಾ ಸಹಾಯಕ ಶಿಕ್ಷಕ ಗ್ರೇಡ್-2 ವೃಂದ (ಕಲಾ, ಭೌತ ವಿಜ್ಞಾನ, ಜೀವ ವಿಜ್ಞಾನ ಮತ್ತು ಭಾಷೆಗಳು) ಶಿಕ್ಷಕರ ವಿವಿಧ ಮಾಧ್ಯಮದ ಹುದ್ದೆಗಳಿಗೆ:-

ಅಭ್ಯರ್ಥಿಯು ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಡೆದ ಒಟ್ಟು ಅಂಕಗಳ ಶೇಕಡ 70%, ಮತ್ತು ಬಿ.ಎ/ಬಿ.ಎಸ್ಸಿ. ಪದವಿ ಪರೀಕ್ಷೆಯ ಒಟ್ಟು ಅಂಕಗಳ ಶೇಕಡ 20%, ಹಾಗೂ ಬಿ.ಎಡ್. ಪದವಿ ಪರೀಕ್ಷೆಯಲ್ಲಿ ಪಡೆದಿರುವ ಒಟ್ಟು ಅಂಕಗಳ ಶೇಕಡ 10%, ರಷ್ಟು, ಈ ಮೂರು ಒಟ್ಟು ಅಂಕಗಳ ಮೇಲೆ ಮೆರಿಟ್ ಪಟ್ಟಿ ತಯಾರಿಸಿ, ಪ್ರಚಲಿತ ಮೀಸಲಾತಿ ನಿಯಮಗಳ ಅನ್ವಯ ಆಯ್ಕೆ ಮಾಡಲಾಗುವುದು.

ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ 70% ಗೆ ಅಂಕಗಳನ್ನು ಲೆಕ್ಕಾಚಾರ ಮಾಡುವಾಗ ಪ್ರಥಮ ಪತ್ರಿಕೆ ಹಾಗೂ ದ್ವಿತೀಯ ಪತ್ರಿಕೆಯಲ್ಲಿ ಪಡೆದ ಅಂಕಗಳನ್ನು ಪ್ರತ್ಯೇಕವಾಗಿ ಲೆಕ್ಕಾಚಾರ ಮಾಡಿ ಶೇಕಡವಾರು ಅಂಕಗಳನ್ನು ನಿಗಧಿಪಡಿಸಲಾಗುವುದು. ಈ ರೀತಿ ನಿಗಧಿಪಡಿಸಲಾದ ಎರಡು ಪತ್ರಿಕೆಗಳ ಶೇಕಡವಾರು ಅಂಕಗಳನ್ನು ಕೂಡಿಸಿ ಅವುಗಳ ಸರಾಸರಿ ಅಂಕಗಳನ್ನು ತೆಗೆದುಕೊಳ್ಳಲಾಗುವುದು.

ಮೇಲ್ಕಂಡಂತೆ ಮೆರಿಟ್ ಲಿಸ್ಟ್ ತಯಾರಿಸುವಾಗ ಅಭ್ಯರ್ಥಿಯು **ಸರ್ಕಾರಿ ಪ್ರೌಢ** ಶಾಲೆಗಳಲ್ಲಿ ಸಂಬಂಧಿಸಿದ ವಿಷಯದಲ್ಲಿ "ಅರೆಕಾಲಿಕ ಅಥವಾ ಗೌರವ" ಶಿಕ್ಷಕರಾಗಿ, ಅಥವಾ ಭಾರತೀಯ ಜನಗಣತಿ ಸಂಸ್ಥೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಸಕ್ಷಮ ಪ್ರಾಧಿಕಾರದಿಂದ ನೇಮಕಗೊಂಡು ಹಾಲಿ ಸೇವೆ ಸಲ್ಲಿಸುತ್ತಿದ್ದಲ್ಲಿ / ಸೇವೆ ಸಲ್ಲಿಸಿದ್ದಲ್ಲಿ ಹಾಗೆ ಸೇವೆ ಸಲ್ಲಿಸಿದ ಪೂರ್ಣಗೊಂಡ ಪ್ರತಿ ಒಂದು ವರ್ಷದ ಸೇವೆಗೆ ಶೇಕಡ 2% ರಷ್ಟು ಕೃಪಾಂಕಗಳನ್ನು ನೇಮಕಾತಿ ನಿಯಮಗಳ ಪ್ರಕಾರ ಅರ್ಹತೆ ಇದ್ದಲ್ಲಿ ಮಾತ್ರ ಮೇಲಿನ ಕಂಡಿಕೆಯಲ್ಲಿ ವಿವರಿಸಿರುವ ಒಟ್ಟು ಅಂಕಗಳಿಗೆ ಸೇರಿಸಲಾಗುವುದು.

ವಿವರಣೆ:- ಅ) ಮೊದಲಿಗೆ, ಬಿ.ಎ/ಬಿ.ಎಸ್ಸಿ. ಪದವಿ ಪರೀಕ್ಷೆಯ ಎಲ್ಲಾ ವರ್ಷಗಳಲ್ಲಿ, ಎಲ್ಲಾ ವಿಷಯಗಳಲ್ಲಿ ಪಡೆದಿರುವ ಒಟ್ಟು ಅಂಕಗಳನ್ನು ಶೇಕಡ 20%ಕ್ಕೆ ಲೆಕ್ಕ ಹಾಕಲಾಗುವುದು.

ಆ) ಬಿ.ಇಡಿ., ಪದವಿ ಪರೀಕ್ಷೆಯಲ್ಲಿ ಪಡೆದ ಒಟ್ಟು ಅಂಕಗಳನ್ನು ಶೇಕಡ 10%ಕ್ಕೆ ಲೆಕ್ಕ ಹಾಕಲಾಗುವುದು.

ಇ) ನಂತರ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಡೆದ ಒಟ್ಟು ಅಂಕಗಳನ್ನು ಶೇಕಡ 70%ಕ್ಕೆ ಲೆಕ್ಕ ಹಾಕಲಾಗುವುದು.

ಈ) ಬಿ.ಎ/ಬಿ.ಎಸ್ಸಿ/ಬ್ಯಾಚುಲರ್ ಪದವಿ/ತತ್ಸಮಾನ ಪರೀಕ್ಷೆಯ ಶೇಕಡ 20%, ಬಿ.ಇಡಿ., ಪದವಿಯ/ಬಿ.ಪಿ.ಇಡಿ../ತತ್ಸಮಾನ ಪರೀಕ್ಷೆಯ ಶೇಕಡ 10%, ಮತ್ತು ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಶೇಕಡ 70% ಅಂಕಗಳನ್ನು ಸೇರಿಸಿ ಒಟ್ಟು ಶೇಕಡ 100 ಅಂಕಕ್ಕೆ ಪಡೆದ

ಉ) ಮೇಲಿನ ಒಟ್ಟು ಶೇಕಡ ಅಂಕಗಳಿಗೆ (ಪ್ಯಾರ "ಈ"). ಅರೆಕಾಲಿಕ ಅಥವಾ ಗೌರವ ಶಿಕ್ಷಕ/ಭಾರತೀಯ ಜನಗಣತಿಯಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸಿದಂತಹ ಅಭ್ಯರ್ಥಿಗಳಿಗೆ ಪ್ರಸ್ತುತ ನೇಮಕಾತಿ ನಿಯಮಗಳ ಪ್ರಕಾರ ಅರ್ಹತೆ ಇದ್ದಲ್ಲಿ ಮಾತ್ರ ಪ್ರತಿ ಪೂರ್ಣಗೊಂಡ ಒಂದು ವರ್ಷದ ಸೇವೆಗೆ ಶೇಕಡ 2% ರಂತೆ ಕೃಪಾಂಕಗಳನ್ನು ಸೇರಿಸಲಾಗುವುದು.

16. ಮೀಸಲಾತಿ ಅವಕಾಶಗಳು:-

ಅ) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 08 ಸಹಿಮ 95 ದಿನಾಂಕ 20-06-1995 ಮತ್ತು ನಂತರ ಹಾಲಿ ಜಾರಿಯಲ್ಲಿರುವ ಮೀಸಲಾತಿ ನಿಯಮಗಳ ಪ್ರಕಾರ ಲಭ್ಯವಿರುವ ರಿಕ್ತ ಸ್ಥಾನಗಳನ್ನು ಈ ಕೆಳಕಂಡ ಪ್ರಮಾಣದಲ್ಲಿ ನಿಯಮಾನುಸಾರ ಮೀಸಲಿರಿಸಲಾಗಿದೆ.

ಸಾಮಾನ್ಯ ಅರ್ಹತೆ	ಶೇ. 50
ಪರಿಶಿಷ್ಟ ಪಂಗಡ	ಶೇ. 03
ಪರಿಶಿಷ್ಟ ಜಾತಿ	ಶೇ. 15
ಪ್ರವರ್ಗ-1	ಶೇ. 04
ಪ್ರವರ್ಗ-2ಎ	ಶೇ. 15
ಪ್ರವರ್ಗ-2ಬಿ	ಶೇ. 04
ಪ್ರವರ್ಗ-3ಎ	ಶೇ. 04
ಪ್ರವರ್ಗ-3ಬಿ	ಶೇ. 05
ಒಟ್ಟು	ಶೇ. 100

ಮೀಸಲಾತಿ ಸೌಲಭ್ಯ ಪಡೆಯಲು ಅಭ್ಯರ್ಥಿಗಳು ಸಲ್ಲಿಸಬೇಕಾದ ಪ್ರಮಾಣ ಪತ್ರಗಳು:

1	ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು	ನಮೂನೆ- ಡಿ (ನಿಯಮ 3ಎ(2)(3). ಸರಕಾರದ ಆದೇಶ ಸಂಖ್ಯೆ: ಎಸ್‌ಡಬ್ಲೂಡಿ 132 ಎಸ್‌ಎಡಿ 97 ದಿನಾಂಕ 08-02-2000
2	ಹಿಂದುಳಿದ ಪ್ರವರ್ಗ-1 ಕ್ಕೆ ಸೇರಿದ ಅಭ್ಯರ್ಥಿಗಳು	ನಮೂನೆ-ಇ (ನಿಯಮ 3ಎ(2)(3). ಸರಕಾರದ ಆದೇಶ ಸಂಖ್ಯೆ: ಎಸ್‌ಡಬ್ಲೂಡಿ 132 ಎಸ್‌ಎಡಿ 97 ದಿನಾಂಕ 08-02-2000
3	ಹಿಂದುಳಿದ ಪ್ರವರ್ಗ 2ಎ. 2ಬಿ. 3ಎ. ಮತ್ತು 3ಬಿ ಗೆ ಸೇರಿದ ಅಭ್ಯರ್ಥಿಗಳು	ನಮೂನೆ-ಎಫ್ (ನಿಯಮ 3ಎ(2)(3). ಸರಕಾರದ ಆದೇಶ ಸಂಖ್ಯೆ: ಎಸ್‌ಡಬ್ಲೂಡಿ 126 ಎಸ್‌ಎಡಿ 97 ದಿನಾಂಕ 13-02-2003

ಅಭ್ಯರ್ಥಿಗಳು ಮೇಲೆ ನಿಗದಿಪಡಿಸಿರುವ ನಿಗದಿತ ನಮೂನೆಗಳಲ್ಲಿಯೇ ಸಂಬಂಧಿಸಿದ ವ್ಯಾಪ್ತಿಯ ತಹಸೀಲ್ದಾರರ ದರ್ಜೆಗಿಂತ ಕಡಿಮೆ ಇಲ್ಲದ ರೆವಿನ್ಯೂ ಪ್ರಾಧಿಕಾರಿಯಿಂದ ಪ್ರಮಾಣ ಪತ್ರವನ್ನು ಪಡೆದಿರಬೇಕು.

ಮೇಲ್ಕಂಡ ಮೀಸಲಾತಿ ಪ್ರಮಾಣ ಪತ್ರಗಳು ಚಾಲ್ತಿಯಲ್ಲಿರುವ ನಿಯಮಗಳ ಪ್ರಕಾರವಿರಬೇಕು ಮತ್ತು ಅವಧಿ ಮೀರಿದ ಮೀಸಲಾತಿ ಪ್ರಮಾಣ ಪತ್ರಗಳನ್ನು ತಿರಸ್ಕರಿಸಲಾಗುವುದು.

ಆ) ಮೇಲೆ ವಿವರಿಸಿರುವ ಪ್ರಕಾರ ಸಾಮಾನ್ಯ ಅರ್ಹತೆ ಸೇರಿದಂತೆ ಪ್ರತಿ ಮೀಸಲಾತಿ ಪ್ರವರ್ಗಗಳಿಗೆ ಈ ಕೆಳಕಂಡ ಆದೇಶಗಳ ಪ್ರಕಾರ **"ಸಮತಳ ಮೀಸಲಾತಿ"** (Horizontal reservation) ಅನ್ವಯ ಹುದ್ದೆಗಳನ್ನು ವರ್ಗೀಕರಿಸಲಾಗಿದೆ.

1	ಮಾಜಿ ಸೈನಿಕರಿಗೆ	ಶೇಕಡ 10	ಕರ್ನಾಟಕ ಸಿವಿಲ್ ಸರ್ವೀಸಸ್ (ಜನರಲ್ ರೆಕ್ರೂಟ್‌ಮೆಂಟ್) ರೂಲ್ಸ್ 1977ರ ನಿಯಮ 9(1)ರ ಅನ್ವಯ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 97 ಸೇನೆನಿ 2002 ದಿನಾಂಕ 22-11-2002.ಮತ್ತು ಸರ್ಕಾರದ ಆದೇಶ ಸಂಖ್ಯೆ ಸಿಆಸುಇ53/ಸೇನೆನಿ/2007 ದಿನಾಂಕ:-04-01-2008
2	ಅಂಗವಿಕಲರಿಗೆ	ಶೇಕಡ 5	ಕರ್ನಾಟಕ ಸಿವಿಲ್ ಸರ್ವೀಸಸ್ (ಜನರಲ್ ರೆಕ್ರೂಟ್‌ಮೆಂಟ್) ರೂಲ್ಸ್ 1977 ನಿಯಮ 9(1)(ಎ)ರ ಅನ್ವಯ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 97 ಸೇನೆನಿ 2002 ದಿನಾಂಕ 22-11-2002. ಮತ್ತು ಸರ್ಕಾರದ ಆದೇಶ ಸಂಖ್ಯೆ ಸಿಆಸುಇ53/ಸೇನೆನಿ/2007 ದಿನಾಂಕ:-04-01-2008
3	ಮಹಿಳಾ ಅಭ್ಯರ್ಥಿಗಳಿಗೆ	ಶೇಕಡ 30	ಕರ್ನಾಟಕ ಸಿವಿಲ್ ಸರ್ವೀಸಸ್ (ಜನರಲ್ ರೆಕ್ರೂಟ್‌ಮೆಂಟ್) ರೂಲ್ಸ್ 1977ರ ನಿಯಮ 9(1)(ಬಿ) ಮತ್ತು ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 97 ಸೇನೆನಿ 2002 ದಿನಾಂಕ 22-11-2002. ಹಾಗೂ ಸರ್ಕಾರದ ಸುತ್ತೋಲೆ ಸಂಖ್ಯೆ ಸಿಆಸುಇ 16/ಸೇನೇನಿ 2008 ದಿನಾಂಕ 01-09-2008 ಮತ್ತು ಸರ್ಕಾರದ ಆದೇಶ ಸಂಖ್ಯೆ ಸಿಆಸುಇ53/ಸೇನೆನಿ/2007ದಿನಾಂಕ:-04-01-2008

4	ಯೋಜನೆಗಳಿಂದ ನಿರಾಶ್ರಿತರಾದವರ ಕುಟುಂಬದವರ ಅಭ್ಯರ್ಥಿಗಳಿಗಾಗಿ	ಶೇಕಡ 5	ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 23 ಎಸ್‌ಆರ್‌ಆರ್ 99 ದಿನಾಂಕ 23-11-2000 ಮತ್ತು ಸರ್ಕಾರದ ಆದೇಶದ ಸಂಖ್ಯೆ: ಸಿಆಸುಇ 97 ಸೇನೆನಿ 2002 ದಿನಾಂಕ 22-11-2002 ಮತ್ತು ಸರ್ಕಾರದ ಆದೇಶ ಸಂಖ್ಯೆ ಸಿಆಸುಇ53/ಸೇನೆನಿ/2007 ದಿನಾಂಕ:-04-01-2008
5	ಗ್ರಾಮೀಣ ಅಭ್ಯರ್ಥಿಗಳಿಗೆ	ಶೇಕಡ 25	2000ದ ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳಿಗಾಗಿ (ರಾಜ್ಯ ಸಿವಿಲ್ ಸೇವೆಗಳಲ್ಲಿ ನೇಮಕಾತಿ ಅಥವಾ ಹುದ್ದೆಗಳ ಮೀಸಲಾತಿ ವಿಧೇಯಕ) ಹಾಗೂ ಸರಕಾರದ ಆದೇಶ ಸಂಖ್ಯೆ: ಸಿಆಸುಇ 97 ಸೇನೆನಿ 2002 ದಿನಾಂಕ 22-11-2002 ಮತ್ತು ಸರ್ಕಾರದ ಆದೇಶ ಸಂಖ್ಯೆ ಸಿಆಸುಇ53/ಸೇನೆನಿ/2007 ದಿನಾಂಕ:-04-01-2008
6	ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗಾಗಿ	ಶೇಕಡ 5	ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 71 ಎಸ್‌ಆರ್‌ಆರ್ 2001 ದಿನಾಂಕ 24-10-2002 ಮತ್ತು ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 97 ಸೇನೆನಿ 2002 ದಿನಾಂಕ 22-11-2002 ಮತ್ತು ಸರ್ಕಾರದ ಆದೇಶ ಸಂಖ್ಯೆ ಸಿಆಸುಇ53/ಸೇನೆನಿ/2007 ದಿನಾಂಕ:-04-01-2008

17. ಮಾಜಿ ಸೈನಿಕ ಅಭ್ಯರ್ಥಿಗಳು :

"ಮಾಜಿ ಸೈನಿಕ"ರಿಗಾಗಿ ಮೀಸಲಿಟ್ಟ ಖಾಲಿ ಹುದ್ದೆಗಳನ್ನು ಮಿಲಿಟರಿ ಸೇವೆಯಿಂದ ಬಿಡುಗಡೆ ಹೊಂದಿದ ವ್ಯಕ್ತಿಗಳಿಂದ ಮತ್ತು ಭಾರತ ದೇಶದ ಒಕ್ಕೂಟದ ಸಶಸ್ತ್ರ ದಳದಲ್ಲಿ ಸೇವೆ ಸಲ್ಲಿಸುವಾಗ ಕೊಲ್ಲಲ್ಪಟ್ಟ ಅಥವಾ ಶಾಶ್ವತವಾಗಿ ಅಂಗಹೀನರಾದ ವ್ಯಕ್ತಿಗಳ ಕುಟುಂಬದ ಸದಸ್ಯರಿಂದ ನೇಮಕಾತಿ ಮೂಲಕ ತುಂಬಲಾಗುತ್ತದೆ.

ಮಾಜಿ ಸೈನಿಕರ ಗುಂಪಿನಲ್ಲಿ ಕೆಳಕಂಡವರು ಆಯ್ಕೆಗೆ ಅರ್ಹರು:-

1) ಮಾಜಿ ಸೈನಿಕ ಎಂದರೆ ಸಶಸ್ತ್ರ ದಳಗಳಾದ ನಿಯಮಿತ ಭೂದಳ, ನೌಕಾದಳ ಮತ್ತು ವಾಯುದಳದಲ್ಲಿ ಯಾವುದೇ ಶ್ರೇಣಿಯಲ್ಲಿ (ಯೋಧ ಅಥವಾ ಅಯೋಧನಾಗಿ) ಸೇವೆ ಸಲ್ಲಿಸಿದ ವ್ಯಕ್ತಿ. ಅಂದರೆ:-

(ಅ) ಅಂತಹ ಸೇವೆಯಿಂದ ನಿವೃತ್ತಿ ಹೊಂದಿದ ನಂತರ ನಿವೃತ್ತಿ ವೇತನ ಪಡೆಯುತ್ತಿರುವ ವ್ಯಕ್ತಿ.

ಅಥವಾ

(ಆ) ವೈದ್ಯಕೀಯ ಕಾರಣಗಳಿಂದ ಮಿಲಿಟರಿ ಸೇವೆಗೆ ಅನರ್ಹನಾದವನೆಂದೋ ಅಥವಾ ವ್ಯಕ್ತಿಯ ಹಿಡಿತಕ್ಕೂ ಮೀರಿದ ಪರಿಸ್ಥಿತಿಗಳಿಂದ ಮತ್ತು ವೈದ್ಯಕೀಯ ಅಥವಾ ಅಸಾಮರ್ಥ್ಯದ ಪಿಂಚಣಿ ಪಡೆದು ಸೇವೆಯಿಂದ ಬಿಡುಗಡೆಯಾದ ವ್ಯಕ್ತಿ.

ಅಥವಾ

(ಇ) ಸ್ವಂತ ಕೋರಿಕೆ ಹೊರತುಪಡಿಸಿ ಸಿಬ್ಬಂದಿ ಕಡಿತದ ಪರಿಣಾಮದಿಂದ ಅಂತಹ ಸೇವೆಯಿಂದ ಬಿಡುಗಡೆ ಹೊಂದಿದ ವ್ಯಕ್ತಿ.

ಅಥವಾ

(ಈ) ತನ್ನ ಸ್ವಂತ ಕೋರಿಕೆಯ ಮೇರೆಗೆ ಅಥವಾ ದುರ್ನಡತೆ ಅಥವಾ ಅಸಾಮರ್ಥ್ಯದ ಕಾರಣದಿಂದಾಗಿ ತೆಗೆದು ಹಾಕಿರುವ ಅಥವಾ ಕರ್ತವ್ಯದಿಂದ ವಜಾ ಮಾಡಿದ ವ್ಯಕ್ತಿಗಳನ್ನು ಹೊರತುಪಡಿಸಿ, ನಿರ್ಧಿಷ್ಟ ಅವಧಿಯನ್ನು ಪೂರೈಸಿದ ತರುವಾಯ ಬಿಡುಗಡೆ ಹೊಂದಿದ ವ್ಯಕ್ತಿ ಮತ್ತು ಗ್ರಾಚ್ಯುಟಿ ಪಡೆಯುತ್ತಿರುವ ವ್ಯಕ್ತಿ.

2) ಮಾಜಿ ಸೈನಿಕ ಅವಲಂಬಿತರ ಗುಂಪಿನಲ್ಲಿ ಆಯ್ಕೆ ಬಯಸುವ ಅಭ್ಯರ್ಥಿಗಳು ಅಂದರೆ:-

ಕೇಂದ್ರ ಸಶಸ್ತ್ರ ದಳದಲ್ಲಿ ಸೇವೆ ಸಲ್ಲಿಸುವಾಗ ಕೊಲ್ಲಲ್ಪಟ್ಟ ಅಥವಾ ಶಾಶ್ವತವಾಗಿ ದೈಹಿಕ ವಿಕಲತೆ ಹೊಂದಿದ ವ್ಯಕ್ತಿಗಳ ಕುಟುಂಬದವರು. **(ಸಂಬಂಧಾನುಸಾರ ಹೆಂಡತಿ ಅಥವಾ ಗಂಡ ಮತ್ತು ಮಕ್ಕಳು ಮತ್ತು ಮಲ ಮಕ್ಕಳು ಮಾಜಿ ಸೈನಿಕರ ಅವಲಂಬಿತರಡಿಯಲ್ಲಿ ಮೀಸಲಾತಿಗೆ ಅರ್ಹರಾಗಿರುತ್ತಾರೆ. ಆದರೆ ಅಂತಹವರಿಗೆ ವಯೋಮಿತಿ ಸಡಿಲಿಕೆ ಇಲ್ಲ)**

3) ಮಾಜಿ ಸೈನಿಕ ಗುಂಪಿನಲ್ಲಿ ಆಯ್ಕೆ ಹೊಂದಲು ಈ ಕೆಳಕಂಡವರು ಅರ್ಹರಲ್ಲ:

ಅ) ಈ ಸೌಲಭ್ಯಕ್ಕೆ ಡಿಫೆನ್ಸ್ ಸೆಕ್ಯುರಿಟಿ ಕೋರ್ಸ್, ಜನರಲ್ ರಿಸರ್ವ್ ಇಂಜನಿಯರಿಂಗ್ ಕೋರ್ಸ್ ಲೋಕ ಸಹಾಯಕ ಸೇವೆ ಮತ್ತು ಪ್ಯಾರಾ ಮಿಲಿಟರಿ ದಳದಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿ ಅರ್ಹರಲ್ಲ.

ಆ) ಕೇಂದ್ರ ಸಶಸ್ತ್ರದಳದ ಸೇವೆಯಲ್ಲಿ ವ್ಯಕ್ತಿಗಳು ಸೇವೆಯಿಂದ ನಿವೃತ್ತಿ ಹೊಂದಿದ ನಂತರ ಮಾಜಿ ಸೈನಿಕರ ವರ್ಗದಡಿ ಬರುವ ವ್ಯಕ್ತಿಗೆ ಒಪ್ಪಂದವು ಪೂರ್ಣವಾಗಲು ಒಂದು ವರ್ಷಕ್ಕೆ ಮುನ್ನ ಪುನರ್ ಉದ್ಯೋಗಕ್ಕೆ ಅರ್ಜಿ ಹಾಕಿಕೊಳ್ಳಲು ಹಾಗೂ ಅವರಿಗೆ ಮಾಜಿ ಸೈನಿಕರಿಗೆ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಹೊಂದಲು ಅನುಮತಿ ನೀಡಲಾಗಿದೆ. ಆದರೆ, ಸಮವಸ್ತ್ರವನ್ನು ತ್ಯಜಿಸಲು ಅನುಮತಿ ನೀಡುವವರೆಗೆ ರಾಜ್ಯ ನಾಗರೀಕ ಸೇವೆ ಅಥವಾ ಹುದ್ದೆಗೆ ನೇಮಕ ಹೊಂದುವಂತಿಲ್ಲ.

ಸೂಚನೆ:

"ಮಾಜಿ ಸೈನಿಕ" "ಸಶಸ್ತ್ರ ದಳದ ಸದಸ್ಯ" ಮತ್ತು **"ಕುಟುಂಬದ ಸದಸ್ಯ"** ಎಂಬ ಪದಗಳ ಅರ್ಥವು ಕಾಲದಿಂದ ಕಾಲಕ್ಕೆ ತಿದ್ದುಪಡಿಯಾಧ **ಕರ್ನಾಟಕ ರಾಜ್ಯ ಸರ್ಕಾರಿ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977** ರಲ್ಲಿ ವಿವರಿಸಿರುವಂತೆ ಇರುತ್ತದೆ.

18. ಅಂಗವಿಕಲ ಅಭ್ಯರ್ಥಿಗಳು :–

ಕರ್ನಾಟಕ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಎಂಎಂಡಬ್ಲ್ಯೂ. 107. ಪಿಹೆಚ್‌ಪಿ 2003 ದಿನಾಂಕ: 11–07–2003 ಮತ್ತು ಡಿಪಿಎಆರ್ 50 ಎಸ್‌ಆರ್‌ಆರ್ 2000 ದಿನಾಂಕ: 03–09–2005ರ ಅನ್ವಯ ತಾನು **"ಅಂಗವಿಕಲರ ಗುಂಪಿಗೆ ಸೇರಿದವರೆಂದು ಹೇಳಿಕೊಳ್ಳುವ ಅಭ್ಯರ್ಥಿಯು"** ವೈದ್ಯಕೀಯ ಪ್ರಮಾಣ ಪತ್ರವನ್ನು ಹೊಂದಿರಬೇಕು. ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್.ಸಿಆಸುಇ 50 ಎಸ್.ಆರ್.ಆರ್. 2007, ದಿನಾಂಕ: 26–07–2011ರಲ್ಲಿ ನಿಗದಿಪಡಿಸಿರುವ ಅಂಗವಿಕಲ ಅಭ್ಯರ್ಥಿಗಳನ್ನು ಮಾತ್ರ ಪರಿಗಣಿಸಲಾಗುವುದು. ಸರ್ಕಾರಿ ಆದೇಶ ಸಂಖ್ಯೆ ಎಂ.ಎ.ಇ107 /ಪಿ.ಹೆಚ್.ಪಿ /2003 ದಿನಾಂಕ 11/7/2003 ರಲ್ಲಿ ನಿಗಧಿಪಡಿಸಿರುವ ನಮೂನೆಯಲ್ಲಿ ವೈದ್ಯಕೀಯ ಪ್ರಮಾಣ ಪತ್ರಗಳನ್ನು ಸಕ್ಷಮ ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪಡೆದಿರಬೇಕು. ಈ ಪ್ರಮಾಣ ಪತ್ರವನ್ನು ಅರ್ಜಿ ಸಲ್ಲಿಸುವ ದಿನಾಂಕಕ್ಕೆ ಅಭ್ಯರ್ಥಿಯು ಪಡೆದುಕೊಂಡಿರಬೇಕು.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 50 ಎಸ್.ಆರ್.ಆರ್ 2007 ದಿನಾಂಕ: 26.07.2011 ರಲ್ಲಿ ರಾಜ್ಯ ಸರ್ಕಾರವು ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಅಂಗವಿಕಲರು ನಿರ್ವಹಿಸಬಹುದಾದ ಹುದ್ದೆಗಳನ್ನು ಗುರುತಿಸಿದೆ. ಸದರಿ ಅಧಿಸೂಚನೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಅಂಗವಿಕಲ ಅಭ್ಯರ್ಥಿಗಳಿಗೆ ಗುರುತಿಸಿರುವ ಹುದ್ದೆಗಳ ಉದ್ಧೃತ ಭಾಗವನ್ನು ಈ ಕೆಳಗೆ ನೀಡಲಾಗಿದೆ.

Blind	Low Vision	Leprosy Cured	Hearing Impaired	Locomotor Disablity	Mentally ill	Mentally Retarded
Primary School Music Teacher, Secondary School Asistant Grade-II, Asistant Masters-(Arts) (Languages) Special Teacher Grade-II, Drama Teachers, Dance Teachers, Music Teachers. FDA, SDA	Primary School Music Teacher, Asst.Masters-(General) (English) (Hindi) Secondary School Asistant Grade-II, Asistant Masters- (Arts) (Languages) Special Teacher Grade-II, Drama Teachers, Dance Teachers, Music Teachers. FDA, SDA, Group D Posts, Peon.	Primary School Assistant Masters (General) (Science) (English) (Hindi) Drawing Teacher Secondary School Asistant Grade-II Asistant Masters-(Arts) (Physical Science) (Biological Science) (Languages) Special Teacher Grade-II,	Primary School Asst.Masters-(General) (English) (Hindi) Drawing Teachers. Secondary School Asistant Grade-II, Assistant Masters (Languages) Physical Education Teacher Grade-1, Special Teacher Grade-II, Drawing Teachers, Drama Teachers, Dance Teachers, Craft Teachers. FDA, SDA, Typist, Group D.	Primary School Asst.Masters-(General) (Science) (English) (Hindi) Drawing Teachers. Secondary School Asistant Grade-II, Asistant Masters- (Arts) (Physical Science) (Biological Science) (Languages) Special Teacher Grade-II, Drawing Teachers, Drama Teachers, Dance Teachers, Craft Teachers, Music Teachers.	FDA, SDA, Group-D Posts	–

		Drawing Teachers, Drama Teachers, Dance Teachers, Craft Teachers, Music Teachers. FDA, SDA, Typist, Steno & Group D.		FDA, SDA, Typist, Steno & Group D posts.		

1. ದೈಹಿಕ ಅಂಗವಿಕಲ ಅಭ್ಯರ್ಥಿಗಳು ಸರ್ಕಾರಿ ಜಿಲ್ಲಾ ಆಸ್ಪತ್ರೆಗಳಲ್ಲಿರುವ ಮೂಳೆ ತಜ್ಞ (Orthopaedic Surgeon) ರಿಂದ ದೈಹಿಕ ಅಂಗವಿಕಲತೆಯ ಮೌಲೀಕರಣವನ್ನು ALimco Kanpur(W.H.O Standard) ಇದರ ಆಧಾರದ ಮೇಲೆ ಮಾಡಿಸುವುದು ಕಡ್ಡಾಯವಾಗಿರುತ್ತದೆ. ಹಾಗೂ ಶ್ರವಣ ದೋಷ ಹೊಂದಿರುವ ಅಂಗವಿಕಲ ಅಭ್ಯರ್ಥಿಗಳ ಪ್ರಮಾಣ ಪತ್ರದಲ್ಲಿ ಶ್ರವಣ ದೋಷದ ಪ್ರಮಾಣವನ್ನು ಡೆಸಿಬಲ್ಸ್ (Decibels) ಗಳಲ್ಲಿ ಕಡ್ಡಾಯವಾಗಿ ನಮೂದಿಸತಕ್ಕದ್ದು.

19. ಗ್ರಾಮೀಣ ಅಭ್ಯರ್ಥಿಗಳು :-

ಗ್ರಾಮೀಣ ಅಭ್ಯರ್ಥಿ ಎಂದರೆ ಕರ್ನಾಟಕ ಪೌರ ನಿಯಮಗಳ ಅಧಿನಿಯಮ 1976 ಅಥವಾ ಕರ್ನಾಟಕ ಪೌರ ಸಭೆಗಳ ಅಧಿನಿಯಮ 1964 ರಡಿಯಲ್ಲಿ ನಿರ್ದಿಷ್ಟಪಡಿಸಿದ ಒಂದು ದೊಡ್ಡ ನಗರ ಪ್ರದೇಶ, ಸಣ್ಣ ನಗರ ಪ್ರದೇಶ ಅಥವಾ ಪರಿವರ್ತನೆ ಹಂತದಲ್ಲಿರುವ ಪ್ರದೇಶ ಹೊರತಾಗಿ ಇತರೆ ಯಾವುದೇ ಪ್ರದೇಶದಲ್ಲಿರುವ ಶಾಲೆಯಲ್ಲಿ 1 ನೇ ತರಗತಿಯಿಂದ 10 ನೇ ತರಗತಿಯವರೆಗೆ ವ್ಯಾಸಂಗ ಮಾಡಿದ ಅಭ್ಯರ್ಥಿ.

ಗ್ರಾಮೀಣ ಅಭ್ಯರ್ಥಿಗಳ ಮೀಸಲಾತಿ ಅಡಿಯಲ್ಲಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಸಂಬಂಧಿಸಿದ ಪ್ರಮಾಣ ಪತ್ರಗಳನ್ನು **ಸರಕಾರದ ಆದೇಶ ಸಂಖ್ಯೆ: ಡಿಪಿಎಆರ್ 96 ಸೇನೆನಿ 2005 ದಿನಾಂಕ 10-08-2005** ರಲ್ಲಿ ನೀಡಿರುವ ನಿಗದಿತ ನಮೂನೆಯಲ್ಲಿ ಮಾತ್ರ ಸಲ್ಲಿಸಬೇಕು.

1) ಸಾಮಾನ್ಯ ವರ್ಗದ ಅಭ್ಯರ್ಥಿಗಳು ನಮೂನೆ-1 ರಲ್ಲಿ ಅಂದರೆ, ಮೇಲುಸ್ಥರದಲ್ಲಿ (creamy layer) ಬರುವದಿಲ್ಲವೆಂದು ಸಂಬಂಧಿಸಿದ ತಹಸೀಲ್ದಾರರವರಿಂದ ಪಡೆದ ಪ್ರಮಾಣ ಪತ್ರದ ಜೊತೆಗೆ ಸರಕಾರದ ಆದೇಶ ದಿನಾಂಕ 10-08-2005ರಲ್ಲಿ ನಿಗದಿಪಡಿಸಲಾದ ನಮೂನೆ-2 ರಲ್ಲಿ ಗ್ರಾಮೀಣ ವ್ಯಾಸಂಗ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.

2) ಪ್ರವರ್ಗ-1, 2ಎ, 2ಬಿ, 3ಎ, 3ಬಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು ತಮ್ಮ ಮೀಸಲಾತಿ ಪ್ರಮಾಣ ಪತ್ರದ ಜೊತೆಗೆ ಸರಕಾರದ ಆದೇಶ ದಿನಾಂಕ 10-08-2005ರಲ್ಲಿ ನಿಗದಿ ಪಡಿಸಲಾದ ನಮೂನೆ-2ರಲ್ಲಿ ಗ್ರಾಮೀಣ ವ್ಯಾಸಂಗ ಪ್ರಮಾಣ ಪತ್ರವನ್ನು ಪಡೆದಿರಬೇಕು.

20. ಯೋಜನಾ ನಿರಾಶ್ರಿತ ಕುಟುಂಬದ ಅಭ್ಯರ್ಥಿಗಳು :-

ಸರ್ಕಾರದ ಅಧಿಸೂಚನೆ ಸಂಖ್ಯೆ ಡಿಪಿಎಆರ್.23.ಎಸ್‌ಆರ್‌ಆರ್.99, ಬೆಂಗಳೂರು ದಿನಾಂಕ 23-11-2000 ರನ್ವಯ ಯೋಜನಾ ನಿರಾಶ್ರಿತ ಕುಟುಂಬದ ಅಭ್ಯರ್ಥಿ ಮೀಸಲಾತಿ ಪಡೆಯಲಿಚ್ಛಿಸುವ ಅಭ್ಯರ್ಥಿಗಳು ಸರ್ಕಾರಿ ಸುತ್ತೋಲೆ ಸಂಖ್ಯೆ: ಸಿ.ಆ.ಸು.ಇ.:44:ಸೇ.ನೇನಿ ದಿನಾಂಕ 27-07-2001ರಲ್ಲಿ ನಿಗದಿಪಡಿಸಲಾದ ನಮೂನೆಯಲ್ಲಿ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರದಿಂದ (ತಹಶೀಲ್ದಾರ್) ಅರ್ಜಿ ಸಲ್ಲಿಸುವ ಕೊನೆ ದಿನಾಂಕದೊಳಗೆ ಪಡೆದಿರಬೇಕು.

21. ಕನ್ನಡ ಮಾಧ್ಯಮದ ಅಭ್ಯರ್ಥಿಗಳು:-

1ನೇ ತರಗತಿಯಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳು ಈ ಮೀಸಲಾತಿಗೆ ಅರ್ಹರಾಗುತ್ತಾರೆ. (1ನೇ ತರಗತಿಗೆ ದಾಖಲಾಗದೇ ನೇರವಾಗಿ ನಂತರದ ಹೆಚ್ಚಿನ ತರಗತಿಗೆ ದಾಖಲಾಗಿ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ್ದಲ್ಲಿ ಸಹ ಈ ಸೌಲಭ್ಯಕ್ಕೆ ಅರ್ಹರಾಗುವರು) ಈ ಅಭ್ಯರ್ಥಿಗಳು ಸಂಬಂಧಿಸಿದ ಮುಖ್ಯೋಪಾಧ್ಯಾಯರಿಂದ ದೃಢೀಕೃತ ಪ್ರಮಾಣ ಪತ್ರಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳವರ ಮೇಲು ಸಹಿಯೊಂದಿಗೆ ಸಲ್ಲಿಸತಕ್ಕದ್ದು. ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದೊಳಗೆ ಪಡೆದಿರಬೇಕು.

22. **ಎ) ಗೌರವ ಶಿಕ್ಷಕರ ಪ್ರಮಾಣ ಪತ್ರ:**

ಸರ್ಕಾರಿ ಪ್ರೌಢಶಾಲೆಗಳಲ್ಲಿ ಗೌರವ ಶಿಕ್ಷಕರಾಗಿ ಸಲ್ಲಿಸಿದ ಸೇವಾ ಅವಧಿಗೆ ಕೃಪಾಂಕ ಪಡೆಯಲಿಚ್ಛಿಸುವ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಸಂಬಂಧಿಸಿದ ಶಾಲೆಯ ಮುಖ್ಯಸ್ಥರಿಂದ ಪ್ರಮಾಣ ಪತ್ರವನ್ನು ಪಡೆದು, ಆಯಾ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಇವರಿಂದ ದೃಢೀಕರಿಸಿಕೊಂಡಿರಬೇಕು. ಸದರಿ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದೊಳಗೆ ಪಡೆದಿರಬೇಕು.

ಬಿ) ಅರೆಕಾಲಿಕ ಶಿಕ್ಷಕರ ಪ್ರಮಾಣ ಪತ್ರ :–

ಸರ್ಕಾರಿ ಪ್ರೌಢಶಾಲೆಗಳಲ್ಲಿ ಅರೆಕಾಲಿಕ ಶಿಕ್ಷಕರಾಗಿ ಸಲ್ಲಿಸಿದ ಸೇವಾ ಅವಧಿಗೆ ಕೃಪಾಂಕ ಪಡೆಯಲಿಚ್ಛಿಸುವ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಸಂಬಂಧಿಸಿದ ಶಾಲೆಯ ಮುಖ್ಯಸ್ಥರಿಂದ ಪ್ರಮಾಣ ಪತ್ರವನ್ನು ಪಡೆದು, ಆಯಾ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಇವರಿಂದ ದೃಢೀಕರಿಸಿಕೊಂಡಿರಬೇಕು. ಸದರಿ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದೊಳಗೆ ಪಡೆದಿರಬೇಕು.

23. ಅಭ್ಯರ್ಥಿಗಳ ಮಾಹಿತಿ ಸಂಬಂಧ ಆಕ್ಷೇಪಣೆ ಸ್ವೀಕರಿಸಿ ದಾಖಲಿಸುವುದು :–

ಅಭ್ಯರ್ಥಿಯು ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳು, ಅರ್ಹತಾದಾಯಕ ಪರೀಕ್ಷೆಯಲ್ಲಿ ಪಡೆದಿರುವ ಅಂಕಗಳು ಹಾಗೂ ಅಭ್ಯರ್ಥಿಯು ಅರ್ಜಿಯಲ್ಲಿ ಕ್ಲೇಮ್ ಮಾಡಿರುವ ಮೀಸಲಾತಿ ವಿವರಗಳನ್ನು ಒಳಗೊಂಡ ಪೂರ್ಣ ಮಾಹಿತಿಯನ್ನು ಇಲಾಖೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ ಎಲ್ಲಾ ಅಭ್ಯರ್ಥಿಗಳ ವಿವರಗಳನ್ನು ಅಂದರೆ ಅಭ್ಯರ್ಥಿಯು ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳು, ಅರ್ಹತಾದಾಯಕ ಪರೀಕ್ಷೆಯಲ್ಲಿ ಪಡೆದಿರುವ ಅಂಕಗಳು ಹಾಗೂ ಆನ್‌ಲೈನ್ ಅರ್ಜಿಯಲ್ಲಿ ಕ್ಲೇಮ್ ಮಾಡಿರುವ ಮೀಸಲಾತಿ ವಿವರಗಳನ್ನು ಒಳಗೊಂಡ ಪೂರ್ಣ ಮಾಹಿತಿಯನ್ನು ಇಲಾಖಾ ವೆಬ್‌ಸೈಟ್ www.Schooleducation.kar.nic.in ನಲ್ಲಿ ಪ್ರಕಟಿಸಿ, ನಿಗದಿತ ಸಮಯ ನೀಡಿ ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗುವುದು. ಅಭ್ಯರ್ಥಿಯು ಆನ್‌ಲೈನ್ ಮೂಲಕ ಸಲ್ಲಿಸಿರುವ ಅರ್ಜಿಯಲ್ಲಿ ದಾಖಲಿಸಿದ ಶೈಕ್ಷಣಿಕ ಮಾಹಿತಿಯಲ್ಲಿ ವ್ಯತ್ಯಾಸವಾಗಿದ್ದಲ್ಲಿ ಮಾತ್ರ ನಿಗದಿತ ನಮೂನೆಯಲ್ಲಿ ಆಕ್ಷೇಪಣೆಗಳನ್ನು ಸಲ್ಲಿಸಬೇಕಾಗುತ್ತದೆ. ಆದರೆ ಮೂಲ ಅರ್ಜಿಯಲ್ಲಿ ದಾಖಲಿಸದಿರುವ ಯಾವುದೇ ಮಾಹಿತಿಯನ್ನು ಪರಿಗಣಿಸಲಾಗುವುದಿಲ್ಲ. ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ, ಅಭ್ಯರ್ಥಿಗಳು ನೀಡಿದ ಶೈಕ್ಷಣಿಕ ದಾಖಲೆಗಳ ಆಧಾರದ ಮೇಲೆ ಪರಿಷ್ಕರಿಸಿ ಪುನಃ ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

24. ತಾತ್ಕಾಲಿಕ ಆಯ್ಕೆಪಟ್ಟಿ :–

ಕಂಡಿಕೆ 23ರಲ್ಲಿ ನೀಡಿರುವ ಸೂಚನೆಯಂತೆ ಅಭ್ಯರ್ಥಿಗಳ ಆಕ್ಷೇಪಣೆಗಳನ್ನು ಸ್ವೀಕರಿಸಿ ಪರಿಷ್ಕೃತ ವಿವರ ಪ್ರಕಟಿಸಿದ ನಂತರ ವಿಷಯವಾರು, ಹುದ್ದೆವಾರು ಮೀಸಲಾತಿ ಹಾಗೂ ಮೆರಿಟ್‌ಗೆ ಅನುಗುಣವಾಗಿ ಅಗತ್ಯ ಪ್ರಮಾಣದ ಅಭ್ಯರ್ಥಿಗಳ ದಾಖಲಾತಿಗಳನ್ನು ಪರಿಶೀಲಿಸಲು ನಿಗದಿತ ದಿನಾಂಕ ಮತ್ತು ಸ್ಥಳದಲ್ಲಿ ಮೂಲ ದಾಖಲಾತಿಗಳೊಂದಿಗೆ ಹಾಜರಾಗಲು ತಿಳಿಸಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಸಂಬಂಧಿಸಿದ ಅಭ್ಯರ್ಥಿಗಳು ಪ್ರಕಟಿತ ದಿನಾಂಕಗಳಲ್ಲಿ ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಿರುವ / ಆಯ್ಕೆ ಬಯಸಿರುವ ಎಲ್ಲಾ ಹುದ್ದೆಗಳಿಗೆ ಸಂಬಂಧಿಸಿದಂತೆ ಮೂಲ ದಾಖಲಾತಿಗಳನ್ನು ಪರಿಶೀಲನೆಗೆ ಹಾಜರುಪಡಿಸುವುದು ಹಾಗೂ ಒಂದು ಸೆಟ್ ಮೂಲ ಪ್ರತಿಗಳ ಛಾಯಾ ಪ್ರತಿಗಳನ್ನು ಅಭ್ಯರ್ಥಿಗಳು ಸ್ವಯಂ ದೃಢೀಕರಿಸಿ ಪರಿಶೀಲನಾಧಿಕಾರಿಗಳಿಗೆ ನೀಡಿ ಸ್ವೀಕೃತಿ ಪಡೆಯುವುದು. ನಿಗದಿಪಡಿಸಿದ ದಿನಾಂಕಗಳಲ್ಲಿ ಅಭ್ಯರ್ಥಿಗಳು ದಾಖಲಾತಿ ಪರಿಶೀಲನೆಗೆ ಎಲ್ಲಾ ಮೂಲ ದಾಖಲಾತಿಗಳೊಂದಿಗೆ ಹಾಜರಾಗದಿದ್ದಲ್ಲಿ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.

ಈ ಪ್ರಕ್ರಿಯೆಯನ್ನು ಪ್ರಕಟಿತ ವಿಷಯವಾರು ಹುದ್ದೆಗಳ ಸಂಖ್ಯೆಗನುಗುಣವಾಗಿ ಎಲ್ಲಾ ಮೂಲ ದಾಖಲೆಗಳನ್ನು ಪರಿಶೀಲನೆಗೆ ಒಳಪಡಿಸಿ, ಅರ್ಹತೆ ಹೊಂದಿರುವ ಎಲ್ಲಾ ಅಭ್ಯರ್ಥಿಗಳು ಲಭ್ಯವಾಗುವವರೆಗೆ ಮುಂದುವರೆಸಲಾಗುವುದು. ಇದನ್ನು ಆಧರಿಸಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಿ ಆಕ್ಷೇಪಣೆಗಳನ್ನು ಆಹ್ವಾನಿಸಲಾಗುವುದು.

ವಿಶೇಷ ಸೂಚನೆಗಳು:–

ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟಿಸಿದ ನಂತರ ಅಭ್ಯರ್ಥಿಗಳು ಆಕ್ಷೇಪಣೆ ಸಲ್ಲಿಸುವಾಗ ಮೂಲ ಅರ್ಜಿಯಲ್ಲಿ ದಾಖಲಿಸಿದ ವಿಷಯಗಳಿಗೆ ಸಂಬಂಧಿಸಿದಂತೆ ಮಾತ್ರ ಆಕ್ಷೇಪಣೆ ಸಲ್ಲಿಸಬಹುದು. (ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ) ನಮೂದಿಸಲು ಬಿಟ್ಟು ಹೋಗಿದ್ದ / ಮರೆತು ಹೋಗಿದ್ದ ಯಾವುದೇ ಮಾಹಿತಿಗಳನ್ನು ಅಂದರೆ ಅಂಕಗಳ ವಿವರ, ಮೀಸಲಾತಿ ಪ್ರವರ್ಗ / ಗೌರವ ಶಿಕ್ಷಕರಾಗಿ / ಅರೆಕಾಲಿಕ ಶಿಕ್ಷಕರಾಗಿ / ಜನಗಣಗತಿ ಸಂಸ್ಥೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸಿದ ವರ್ಷಗಳ ಬಗ್ಗೆ ಮಾಹಿತಿಗಳು ಇತ್ಯಾದಿ ಆಯ್ಕೆಗೆ ಸಂಬಂಧಿಸಿದ ಮಾಹಿತಿಗಳನ್ನು ಹಾಗೂ ಹೊಸದಾಗಿ ದಾಖಲಿಸಲು ಬಯಸುವ ಯಾವುದೇ ಮಾಹಿತಿಗಳನ್ನು ಸಲ್ಲಿಸಲು ಅವಕಾಶವಿರುವುದಿಲ್ಲ. ಅಂತಹ ಆಕ್ಷೇಪಣೆ ಮತ್ತು ಲಗತ್ತುಗಳನ್ನು ಪರಿಗಣಿಸದೆ ತಿರಸ್ಕರಿಸಲಾಗುವುದು.

25. ಅಂತಿಮ ಆಯ್ಕೆ ಪಟ್ಟಿ:–

1) ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿ ಆಯ್ಕೆ ಹೊಂದಿರುವ ಎಲ್ಲಾ ಅಭ್ಯರ್ಥಿಗಳ ಮೂಲ ಅಂಕಪಟ್ಟಿ ಮತ್ತು ಪ್ರಮಾಣ ಪತ್ರಗಳನ್ನು ಪರಿಶೀಲಿಸಿ ದೃಢಪಡಿಸಿಕೊಂಡ ನಂತರ ಅಂತಿಮ ಆಯ್ಕೆಪಟ್ಟಿಯನ್ನು ಪ್ರಕಟಿಸಲಾಗುವುದು. ಮೂಲ ಪ್ರಮಾಣ ಪತ್ರಗಳನ್ನು ಪರಿಶೀಲನೆಗೆ ಸಲ್ಲಿಸದೇ ಇರುವ ಅಭ್ಯರ್ಥಿಗಳು ಅಂತಿಮ ಆಯ್ಕೆಪಟ್ಟಿಯಲ್ಲಿ ಪರಿಗಣನೆಗೆ ಬರುವುದಿಲ್ಲ.

2) ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸುವ ಸಂದರ್ಭದಲ್ಲಿ ಅಭ್ಯರ್ಥಿಗಳು ಅರ್ಜಿಯಲ್ಲಿ ನಮೂದಿಸಿರುವ ಜಿಲ್ಲಾ ಆದ್ಯತೆಯನ್ನು ಆಧಾರವಾಗಿಟ್ಟುಕೊಂಡು ಮೆರಿಟ್ ಮತ್ತು ಮೀಸಲಾತಿ ಆಧರಿಸಿ ನಿಯಮಾನುಸಾರ ಜಿಲ್ಲೆಗಳನ್ನು ಹಂಚಿಕೆ ಮಾಡಲಾಗುತ್ತದೆ.

3) ಜಿಲ್ಲಾ ಮಟ್ಟದ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾದ ಅರ್ಹ ಅಭ್ಯರ್ಥಿಗಳ ಅರ್ಹತೆ ಮತ್ತು ಮೀಸಲಾತಿಗಳನ್ನು ಖಚಿತಪಡಿಸಿಕೊಂಡು ನೇಮಕಾತಿ ಪ್ರಾಧಿಕಾರಿಯಾದ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರು ನೇಮಕಾತಿ ಆದೇಶವನ್ನು ಕೌನ್ಸಿಲಿಂಗ್ ಮೂಲಕ ನೀಡುತ್ತಾರೆ.

4) ಆರ್.ಎಂ.ಎಸ್.ಎ ವತಿಯಿಂದ ಉನ್ನತೀಕರಿಸಿದ ಪ್ರೌಢಶಾಲೆಗಳು ಮತ್ತು ಆದರ್ಶ ವಿದ್ಯಾಲಯಗಳಿಗೆ ತೈನಾತಿಸಲ್ಪಟ್ಟ ಶಿಕ್ಷಕರು ಆ ಯೋಜನೆ ಇರುವರೆಗೆ ಅಥವಾ ಆ ಹುದ್ದೆಗಳು ಯೋಜನೇತರ ಹುದ್ದೆಗಳಾಗಿ ಪರಿವರ್ತನೆಯಾಗುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಅವರ ವರ್ಗಾವಣೆಯು ಆ ಶಾಲಾ ಘಟಕಗಳಲ್ಲಿ ಆಗುತ್ತದೆ.

5) ಅಂತಿಮ ಆಯ್ಕೆಪಟ್ಟಿ ತಯಾರಿಸುವಾಗ ಮಹಿಳೆಯರಿಗೆ ಮೀಸಲಿರಿಸಿದ ರಿಕ್ತ ಸ್ಥಾನಗಳಿಗೆ ಅರ್ಹ ಮಹಿಳಾ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಅಂತಹ ರಿಕ್ತ ಸ್ಥಾನಗಳನ್ನು ಆಯಾ ವರ್ಗಕ್ಕೆ ಸೇರಿದ ಪುರುಷ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.ಮಾಜಿ ಸೈನಿಕರಿಗಾಗಿ ಮೀಸಲಿರಿಸಿದ ರಿಕ್ತ ಸ್ಥಾನಗಳಿಗೆ ಅರ್ಹ ಮಾಜಿ ಸೈನಿಕ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಅಂತಹ ರಿಕ್ತ ಸ್ಥಾನಗಳನ್ನು ಆಯಾ ವರ್ಗಕ್ಕೆ ಸೇರಿದ ಇತರೆ ಅರ್ಹ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.ಇದೇ ರೀತಿ ಯೋಜನಾ ನಿರಾಶ್ರಿತ / ಕನ್ನಡ ಮಾಧ್ಯಮದ / ಗ್ರಾಮೀಣ ಅರ್ಹ ಅಭ್ಯರ್ಥಿಗಳು ದೊರಯದಿದ್ದಲ್ಲಿ ಅಂತಹ ರಿಕ್ತ ಸ್ಥಾನಗಳನ್ನು ಆಯಾ ಪ್ರವರ್ಗಕ್ಕೆ ಸೇರಿದ ಇತರೆ ಅರ್ಹ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.ಅರ್ಹ ಅಂಗವಿಕಲ ಅಭ್ಯರ್ಥಿಗಳು ದೊರೆಯದಿದ್ದಲ್ಲಿ ಅಂತಹ ರಿಕ್ತ ಸ್ಥಾನಗಳನ್ನು ಭರ್ತಿ ಮಾಡದೆ ಬ್ಯಾಕ್‌ಲಾಗ್ ಹುದ್ದೆಗಳೆಂದು ಪರಿಗಣಿಸಲಾಗುವುದು.

26. ನಿಬಂಧನೆಗಳು:–

1) ಅಭ್ಯರ್ಥಿಯು ಆನ್ ಲೈನ್ ಮೂಲಕ ಸಲ್ಲಿಸಲ್ಪಟ್ಟ ಮೂಲ ಅರ್ಜಿಯಲ್ಲಿ ನೀಡಿರುವ ಮಾಹಿತಿಗಳ ಬದಲಾವಣೆಗೆ ಯಾವುದೇ ಹಂತದಲ್ಲೂ ಅವಕಾಶವಿರುವುದಿಲ್ಲ. ಆದುದರಿಂದ ಅಭ್ಯರ್ಥಿಯು ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅರ್ಹತೆ, ಮೀಸಲಾತಿ ಹಾಗೂ ಇತರೆ ವಿವರಗಳ ಬಗ್ಗೆ ಖಾತ್ರಿ ಪಡಿಸಿಕೊಂಡು ವಿವರಗಳನ್ನು ದಾಖಲಿಸುವುದು ಅಭ್ಯರ್ಥಿಗಳ ವೈಯಕ್ತಿಕ ಜವಾಬ್ದಾರಿಯಾಗಿರುತ್ತದೆ.

2) ಅಭ್ಯರ್ಥಿಯು ಕೋರುವ ಮೀಸಲಾತಿ ಮತ್ತು ಇತರೆ ಯಾವುದೇ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಎಲ್ಲಾ ಪ್ರಮಾಣ ಪತ್ರಗಳ ದೃಢೀಕೃತ ಪ್ರತಿಗಳನ್ನು ಅರ್ಜಿ ಸಲ್ಲಿಸಲು ನಿಗಧಿ ಪಡಿಸಿರುವ ಕೊನೆಯ ದಿನಾಂಕದೊಳಗೆ ಪಡೆದಿರಬೇಕು. ಸದರಿ ಮೂಲ ಪ್ರಮಾಣ ಪತ್ರಗಳನ್ನು ಆಯ್ಕೆ ಪ್ರಾಧಿಕಾರ/ನೇಮಕಾತಿ ಪ್ರಾಧಿಕಾರ ಸೂಚಿಸಿದ ದಿನದಂದು ಪರಿಶೀಲನೆಗೆ ಹಾಜರುಪಡಿಸಬೇಕು. ಒಂದು ವೇಳೆ ಯಾವುವೇ ಪ್ರಮಾಣ ಪತ್ರಗಳನ್ನು ಹಾಜರು ಪಡಿಸಲು ವಿಫಲರಾದಲ್ಲಿ ಅಂತಹ ಮೀಸಲಾತಿಯನ್ನು ರದ್ದುಪಡಿಸಲಾಗುವುದು.

3) ಅಭ್ಯರ್ಥಿಯು ಅರ್ಜಿ ಸಲ್ಲಿಸುವ ಸಮಯದಲ್ಲಿ ಯಾವುದೇ ಸರ್ಕಾರಿ ಇಲಾಖೆಯಲ್ಲಿ ಖಾಯಂ ಅಥವಾ ಹಂಗಾಮಿಯಾಗಿ ನೌಕರಿಯಲ್ಲಿದ್ದರೆ ಅವನು / ಅವಳು ತಾನು ಸೇವೆ ಸಲ್ಲಿಸುತ್ತಿರುವ ಹುದ್ದೆಯ ನೇಮಕಾತಿ ಪ್ರಾಧಿಕಾರಿಯವರ ಸಮ್ಮತಿಯಿಲ್ಲದೆ ಅರ್ಜಿಯನ್ನು ಸಲ್ಲಿಸಿದ್ದರೆ,- ಅಂತಹ ಅಭ್ಯರ್ಥಿ ನೇಮಕಾತಿಗೆ ಅರ್ಹರಾಗುವುದಿಲ್ಲ. ಆದುದರಿಂದ ಸೇವೆಯಲ್ಲಿರುವ ಅಭ್ಯರ್ಥಿಗಳು ಸೇವೆಯಲ್ಲಿರುವ ಬಗ್ಗೆ ಸೇವಾ ಪ್ರಮಾಣ ಪತ್ರ ಮತ್ತು ಸದರಿ ಪ್ರಸ್ತುತ ಹುದ್ದೆಗೆ ಅರ್ಜಿ ಸಲ್ಲಿಸುವ ಬಗ್ಗೆ ಸಂಬಂಧಿಸಿದ ನೇಮಕಾತಿ ಪ್ರಾಧಿಕಾರದಿಂದ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು (No objection certificate) ಪಡೆದಿಟ್ಟುಕೊಂಡಿರಬೇಕು.

4) ಅರ್ಜಿ ನಮೂನೆ, ಉತ್ತರ ಪತ್ರಿಕೆ, ಪ್ರವೇಶ ಪತ್ರಗಳ ನಿಗದಿತ ಸ್ಥಳಗಳಲ್ಲಿ ಎಡಗೈ ಹೆಬ್ಬೆಟ್ಟು ಗುರುತನ್ನು ಸ್ಪಷ್ಟವಾಗಿ ಹಾಕಬೇಕು. ಎಡಗೈ ಹೆಬ್ಬೆರಳ ಗುರುತು ರಹಿತ ಅರ್ಜಿಯನ್ನು ಯಾವುದೇ ಸೂಚನೆ ನೀಡದೆ ತಿರಸ್ಕರಿಸಲಾಗುವುದು.

5) ಅಭ್ಯರ್ಥಿಗಳು ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಿದ ನಂತರ ಪ್ರವೇಶ ಪತ್ರದ ಪ್ರತಿಯನ್ನು ದ್ವಿಪ್ರತಿಯಲ್ಲಿ ಡೌನ್ ಲೋಡ್ ಮಾಡಿಕೊಂಡು ಆ ಪ್ರತಿಗಳಲ್ಲಿ ಒಂದೇ ಮಾದರಿಯ ಇತ್ತೀಚಿನ ತಲಾ ಒಂದು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಅಂಟಿಸಬೇಕು.

27. ನ್ಯಾಯಾಲಯ ವ್ಯಾಪ್ತಿ:

ಗುಲ್ಬರ್ಗಾ ವಿಭಾಗದ ಪ್ರೌಢಶಾಲಾ ಶಿಕ್ಷಕರ ನೇಮಕಾತಿಗಳಿಗೆ ಸಂಬಂಧಿಸಿದಂತೆ, ನ್ಯಾಯಾಲಯದ ಪ್ರಕರಣ ದಾಖಲಾದಲ್ಲಿ ನೇಮಕಾತಿ ಪ್ರಾಧಿಕಾರವಾದ ಸಂಬಂಧಿಸಿದ ಉಪನಿರ್ದೇಶಕರು (ಆಡಳಿತ) ಆಯ್ಕೆ ಪ್ರಾಧಿಕಾರವಾದ ವಿಭಾಗೀಯ ಸಹ ನಿರ್ದೇಶಕರು, ಗುಲ್ಬರ್ಗಾ ವಿಭಾಗ, ಗುಲ್ಬರ್ಗಾ, ನಿರ್ದೇಶಕರು ಗುಲ್ಬರ್ಗಾ, ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ಇವರು ಪ್ರತಿಸ್ಪಂದಿಸುವ ಅಧಿಕಾರಿಗಳಾಗಿರುತ್ತಾರೆ.

28. ಸೂಚನೆಗಳು:

ಯಾವುದೇ ವ್ಯಕ್ತಿಯು ಸರ್ಕಾರಿ ನೇಮಕಾತಿಗೆ ಈ ಕೆಳಕಂಡ ಸಂದರ್ಭದಲ್ಲಿ ಅರ್ಹನಾಗುವುದಿಲ್ಲ:

ಅ) ಯಾವುದೇ ನಿಷೇಧಿತ ಸಂಘ ಸಂಸ್ಥೆಯ ಸದಸ್ಯನಾಗಿರುವಲ್ಲಿ ಅಥವಾ ಸದಸ್ಯರಾಗಿದ್ದಲ್ಲಿ ಅಥವಾ ಯಾವುದೇ ನಿಷೇಧಿತ ಸಂಸ್ಥೆಯ ಕಾರ್ಯ ಚಟುವಟಿಕೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಲ್ಲಿ.

ಆ) ಭಾರತ ಸಂವಿಧಾನಕ್ಕೆ ಚ್ಯುತಿ ತರುವ ಕಾರ್ಯದಲ್ಲಿ ಪ್ರವೃತ್ತನಾದಲ್ಲಿ.

ಇ) ಕಾನೂನು ಭಂಗ ಮಾಡಿ ಹಿಂಸಾಕೃತ್ಯದಲ್ಲಿ ತೊಡಗಿದವರಾಗಿದ್ದರೆ.

ಈ) ಭಾರತ ದೇಶದ ಸಾರ್ವಭೌಮತೆ ಹಾಗೂ ಸುಭದ್ರತೆಗೆ ಧಕ್ಕೆ ತರುವ ಕಾರ್ಯದಲ್ಲಿ ಪ್ರವೃತ್ತರಾಗಿದ್ದರೆ.

ಉ) ಭಾರತ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಸೇವೆಯಿಂದ ಉಚ್ಚಾಟನೆಗೊಂಡ ಪ್ರಸಂಗಗಳಲ್ಲಿ.

ಊ) ನ್ಯಾಯಬಾಹಿರ ಕೃತ್ಯಗಳಲ್ಲಿ ತೊಡಗಿ ಅಪರಾಧಕ್ಕೆ ಒಳಗಾದ ಪ್ರಸಂಗಗಳಲ್ಲಿ.

ಋ) ಒಬ್ಬ ಜೀವಂತ ಪತ್ನಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವ ಪುರುಷ ಅಭ್ಯರ್ಥಿಯು ಮತ್ತು ಈಗಾಗಲೇ ಇನ್ನೊಬ್ಬ ಹೆಂಡತಿಯಿರುವ ವ್ಯಕ್ತಿಯನ್ನು ಮದುವೆಯಾಗಿರುವ ಮಹಿಳಾ ಅಭ್ಯರ್ಥಿಯು ಸರ್ಕಾರದಿಂದ ಪೂರ್ವಾನುಮತಿಯನ್ನು ಪಡೆಯದೆ ನೇಮಕಾತಿಗೆ ಅರ್ಹರಾಗುವುದಿಲ್ಲ.

ಎ) ಅಭ್ಯರ್ಥಿಯು ಮತ್ತೊಬ್ಬ ವ್ಯಕ್ತಿಯಂತೆ ನಟಿಸಿ ವಂಚಿಸಿದ ಅಥವಾ ದಾಖಲೆಗಳನ್ನು ತಿದ್ದಿದ ಅಥವಾ ಸೃಷ್ಟಿಸಿದ ಅಥವಾ ಸರಿಯಿಲ್ಲದ ಅಥವಾ ಸುಳ್ಳು ಅಥವಾ ದೋಷಪೂರ್ಣ ವಿವರಗಳನ್ನು ನೀಡುವ ಅಥವಾ ನೇಮಕಾತಿಗಾಗಿ ನಡೆಸುವ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅನುಚಿತ ರೀತಿಯಲ್ಲಿ ವರ್ತಿಸುವ ಅಥವಾ ವರ್ತಿಸಲು ಪ್ರಯತ್ನಿಸಿದ ಅಥವಾ ಅವನ / ಅವಳ ನೇಮಕಾತಿಗಾಗಿ ಸಂಬಂಧಿಸಿದಂತೆ ಯಾವುದೇ ಇತರ ಅಕ್ರಮ ಅನುಚಿತ ವಿಧಾನಗಳನ್ನು ಅನುಸರಿಸಿದ ಕಾರಣದಿಂದಾಗಿ ತಪ್ಪಿತಸ್ಥನೆಂದು ಕಂಡು ಬಂದಲ್ಲಿ ಅವನ / ಅವಳ ಅಭ್ಯರ್ಥಿ ತನವನ್ನು ಯಾವುದೇ ಸೂಚನೆ ನೀಡದೆ ರದ್ದುಗೊಳಿಸಲಾಗುವುದು ಮತ್ತು ಅಂತಹವರನ್ನು ಕ್ರಿಮಿನಲ್ ಪ್ರಾಸಿಕ್ಯೂಷನ್‌ಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡಿಸಲಾಗುವುದು.

ಏ) ಆಯ್ಕೆ ಪ್ರಾಧಿಕಾರಿಯು ನಡೆಸುವ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆ ಮತ್ತು ಅರ್ಹತಾ ಪರೀಕ್ಷೆಗಳಲ್ಲಿ ಪಡೆದಿರುವ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡಿದ ಆಯ್ಕೆಪಟ್ಟಿಯಲ್ಲಿ ಅವನ / ಅವಳ ಆಯ್ಕೆಯು ಖಾಯಂ ಆಗದ ಹೊರತು ನೇಮಕಾತಿಗಾಗಿ ಹಕ್ಕನ್ನು ಪಡೆದುಕೊಳ್ಳುವುದಿಲ್ಲ.

ಐ) ಈ ನೇಮಕಾತಿಯು, ಮತ್ತು ಈ ಅಧಿಸೂಚನೆಯಲ್ಲಿ ತಿಳಿಸಿರುವ ಆದೇಶಗಳು, ಜ್ಞಾಪನಗಳು, ಸುತ್ತೋಲೆಗಳು ಕಾಲದಿಂದ ಕಾಲಕ್ಕೆ ಹೊರಡಿಸಿರುವ ಆದೇಶಗಳು ಮತ್ತು ತಿದ್ದುಪಡಿಗೆ ಒಳಪಟ್ಟಿರುತ್ತದೆ.

ಒ) ಆಯ್ಕೆ ಮತ್ತು ನೇಮಕಾತಿ ಪ್ರಕ್ರಿಯೆಯ ಯಾವುದೇ ಹಂತದಲ್ಲಿ ಆಯ್ಕೆಗೆ ಪರಿಗಣಿಸಿರುವ ಅಂಶಗಳ ಬಗ್ಗೆ ವ್ಯತ್ಯಾಸ ಕಂಡು ಬಂದಲ್ಲಿ ಅಥವಾ ಆಕ್ಷೇಪಣೆ ಸಲ್ಲಿಕೆಯಾದಲ್ಲಿ, ಕೋರ್ಟಿನ ತೀರ್ಪುಗಳು, ಇಲಾಖೆ ಸುತ್ತೋಲೆಗಳು, ಸರಕಾರದ ನಿರ್ದೇಶನಗಳು ಬಂದಲ್ಲಿ ಪ್ರಕಟಿಸಿರುವ ಪಟ್ಟಿಗಳಲ್ಲಿ ಸೂಕ್ತ ಬದಲಾವಣೆ ಮಾಡಿ ಆಯ್ಕೆ ಪಟ್ಟಿ ಪರಿಷ್ಕರಿಸುವ ಅಧಿಕಾರವನ್ನು ಆಯ್ಕೆ ಪ್ರಾಧಿಕಾರ ಹೊಂದಿರುತ್ತದೆ.

ಓ) ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಈ ಸಂಬಂಧ ಆಯ್ಕೆ ಪ್ರಾಧಿಕಾರಿ/ನೇಮಕಾತಿ ಪ್ರಾಧಿಕಾರಿಗಳು ನೀಡುವ ಸೂಚನೆಗಳನ್ನು ಇಲಾಖೆಯ ಅಧಿಕೃತ ವೆಬ್‌ಸೈಟ್‌ನಲ್ಲಿ (www.schooleducation.kar.nic.in) ಅವಲೋಕಿಸುವುದು.

(ಶೇಖ್ ಮೆಹಬೂಬ್ ಹುಸೇನ್)
ಆಯ್ಕೆ ಪ್ರಾಧಿಕಾರಿ ಹಾಗೂ ವಿಭಾಗೀಯ ಕಾರ್ಯದರ್ಶಿಗಳು
ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಮತ್ತು ಪದನಿಮಿತ್ತ
ಸಹನಿರ್ದೇಶಕರು,
ಸಾರ್ವಜನಿಕ ಶಿಕ್ಷಣ ಇಲಾಖೆ,
ಗುಲ್ಬರ್ಗಾ ವಿಭಾಗ, ಆಯುಕ್ತರ ಕಛೇರಿ, ಗುಲ್ಬರ್ಗಾ

ಅನುಬಂಧ-1

ಗುಲಬರ್ಗಾ ವಿಭಾಗ ಗುಲಬರ್ಗಾ

2012-13 ನೇ ಸಾಲಿನ ಪ್ರೌಢ ಶಾಲಾ ಸಹ ಶಿಕ್ಷಕರು ಗ್ರೇಡ್-2 ಹಾಗೂ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1 ವೃಂದದ ಖಾಲಿ ಹುದ್ದೆಗಳನ್ನು ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಭರ್ತಿ ಮಾಡಲು ಪ್ರಕಟಿಸಲಾದ ಹುದ್ದೆಗಳ ವಿವರ

ಕ್ರ. ಸಂ.	ಜಿಲ್ಲೆಯ ಹೆಸರು	ಕಲಾ						ಭೌತ ವಿಜ್ಞಾನ					ಜೀವ ವಿಜ್ಞಾನ				ಭಾಷೆಗಳು					ದೈ.ಶಿ.ಶಿ. ಗ್ರೇಡ್-1	ಒಟ್ಟು
		ಕನ್ನಡ	ಉರ್ದು	ಮರಾಠಿ	ಹಿಂದಿ	ತೆಲುಗು	ಇಂಗ್ಲೀಷ್	ಕನ್ನಡ	ಉರ್ದು	ಮರಾಠಿ	ತೆಲುಗು	ಇಂಗ್ಲೀಷ್	ಕನ್ನಡ	ಉರ್ದು	ಮರಾಠಿ	ಇಂಗ್ಲೀಷ್	ಕನ್ನಡ	ಇಂಗ್ಲೀಷ್	ಹಿಂದಿ	ಉರ್ದು	ಮರಾಠಿ		
1	2	3	4	5	6	7	8	9	10	11	12	13	14	15	16	17	18	19	20	21	22	23	24
1	ಬಳ್ಳಾರಿ	05	0	0	0	01	06	04	0	0	01	06	13	0	0	07	13	11	11	0	0	14	92
2	ಬೀದರ್	16	06	02	0	0	04	04	02	0	0	04	10	03	03	04	22	28	12	03	03	17	143
3	ಗುಲಬರ್ಗಾ	20	05	0	0	0	07	25	0	01	0	07	22	05	0	07	33	38	26	05	01	32	234
4	ಕೊಪ್ಪಳ	18	01	0	0	0	04	04	01	0	0	04	19	02	0	04	23	24	22	01	0	21	148
5	ರಾಯಚೂರು	29	04	0	0	0	05	15	01	0	0	05	28	03	0	05	34	36	30	04	0	35	234
6	ಯಾದಗೀರ	08	01	0	01	0	03	25	03	0	0	03	14	01	0	03	12	12	11	01	0	15	113
	ಒಟ್ಟು	**96**	**17**	**02**	**01**	**01**	**29**	**77**	**07**	**01**	**01**	**29**	**106**	**14**	**03**	**30**	**137**	**149**	**112**	**14**	**04**	**134**	**964**

ಆಯ್ಕೆ ಪ್ರಾಧಿಕಾರಿಗಳು ಹಾಗೂ ಕಾರ್ಯದರ್ಶಿಗಳು
ಮತ್ತು ಪದನಿಮಿತ್ತ ಸಹನಿರ್ದೇಶಕರು
ಸಾ.ಶಿ.ಇ. ಆಯುಕ್ತರ ಕಛೇರಿ. ಗುಲಬರ್ಗಾ

ಅನುಬಂಧ –2

ಪ್ರಕಟಿತ ಹುದ್ದೆಗಳ ವರ್ಗೀಕರಣ

ಹಿಂದಿನ ನೇಮಕಾತಿಯ ರೋಸ್ಟರಿನ ಅಂತಿಮ ಬಿಂದು				13	03	04	12	03	03	03	40	81
ಜಿಲ್ಲೆ	ವಿಷಯ	ಪ್ರಕಟಿತ ಹುದ್ದೆಗಳು		ಪ.ಜಾ	ಪ.ಪಂ	ಪ್ರ-1	2ಎ	2ಬಿ	3ಎ	3ಬಿ	ಸಾ.ಅ	ಒಟ್ಟು
ಬಳ್ಳಾರಿ	ಕಲಾ (ಕನ್ನಡ ಮಾಧ್ಯಮ)	05	ಇತರೆ	0	0	0	0	0	0	01	01	02
			ಗ್ರಾಮೀಣ	0	0	0	01	0	0	0	01	02
			ಕ.ಮಾ.ಅ.	0	0	0	0	0	0	0	0	0
			ಯೋ.ಅ.	0	0	0	0	0	0	0	0	0
			ಮಾ.ಸೈ.	0	0	0	0	0	0	0	0	0
			ಅಂ.ವಿ.	0	0	0	0	0	0	0	0	0
			ಮ.ಅ.	0	0	0	0	0	0	0	01	01
			ಒಟ್ಟು	0	0	0	01	0	0	01	03	05

ಹಿಂದಿನ ನೇಮಕಾತಿಯ ರೋಸ್ಟರಿನ ಅಂತಿಮ ಬಿಂದು				01	0	0	0	0	0	0	0	01
ಜಿಲ್ಲೆ	ವಿಷಯ	ಪ್ರಕಟಿತ ಹುದ್ದೆಗಳು		ಪ.ಜಾ	ಪ.ಪಂ	ಪ್ರ-1	2ಎ	2ಬಿ	3ಎ	3ಬಿ	ಸಾ.ಅ	ಒಟ್ಟು
ಬಳ್ಳಾರಿ	ಕಲಾ (ತಮಿಳು ಮಾಧ್ಯಮ)	01	ಇತರೆ	0	0	0	0	0	0	0	01	01
			ಗ್ರಾಮೀಣ	0	0	0	0	0	0	0	0	0
			ಕ.ಮಾ.ಅ.	0	0	0	0	0	0	0	0	0
			ಯೋ.ಅ.	0	0	0	0	0	0	0	0	0
			ಮಾ.ಸೈ.	0	0	0	0	0	0	0	0	0
			ಅಂ.ವಿ.	0	0	0	0	0	0	0	0	0
			ಮ.ಅ.	0	0	0	0	0	0	0	0	0
			ಒಟ್ಟು	0	0	0	0	0	0	0	01	01

ಈ ಹಿಂದೆ ಪ್ರಕಟಿಸಲಾದ ಪ್ರೌಢ ಶಾಲಾ ಶಿಕ್ಷಕರ ನೇಮಕಾತಿ ಅಧಿಸೂಚನೆಯಲ್ಲಿ ಪ್ರಕಟಿತ ಹುದ್ದೆಗಳ ಕೊನೆಯ ರೋಸ್ಟರ್ ಬಿಂದುವಿನಿಂದ ಮುಂದುವರಿಸಲಾಗಿದೆ.

ಸಹಿ/–

ನೇಮಕಾತಿ ಪ್ರಾಧಿಕಾರಿಗಳು

ಹಾಗೂ ಉಪನಿರ್ದೇಶಕರು (ಆಡಳಿತ)

ಸಾರ್ವಜನಿಕ ಶಿಕ್ಷಣ ಇಲಾಖೆ

ಬಳ್ಳಾರಿ ಜಿಲ್ಲೆ

ಅನುಬಂಧ –2
ಪ್ರಕಟಿತ ಹುದ್ದೆಗಳ ವರ್ಗೀಕರಣ

ಹಿಂದಿನ ನೇಮಕಾತಿಯ ರೋಸ್ಟರೀನ ಅಂತಿಮ ಬಿಂದು				೦	೦	೦	೦	೦	೦	೦	೦	೦
ಜಿಲ್ಲೆ	ವಿಷಯ	ಪ್ರಕಟಿತ ಹುದ್ದೆಗಳು		ಪ.ಜಾ	ಪ.ಪಂ	ಪ್ರ–1	2ಎ	2ಬಿ	3ಎ	3ಬಿ	ಸಾ.ಅ	ಒಟ್ಟು
ಬಳ್ಳಾರಿ	ಕಲಾ (ಆಂಗ್ಲ ಮಾಧ್ಯಮ)	06	**ಇತರೆ**	01	01	01	0	0	0	0	01	04
			ಗ್ರಾಮೀಣ	0	0	0	0	0	0	0	01	01
			ಕ.ಮಾ.ಅ.	0	0	0	0	0	0	0	0	O
			ಯೋ.ಅ.	0	0	0	0	0	0	0	0	O
			ಮಾ.ಸೈ.	0	0	0	0	0	0	0	0	O
			ಅಂ.ವಿ.	0	0	0	0	0	0	0	0	O
			ಮ.ಅ.	0	0	0	0	0	0	0	01	01
			ಒಟ್ಟು	01	01	01	0	0	0	0	03	06

ಹಿಂದಿನ ನೇಮಕಾತಿಯ ರೋಸ್ಟರೀನ ಅಂತಿಮ ಬಿಂದು				70	14	19	69	18	18	22	230	460
ಜಿಲ್ಲೆ	ವಿಷಯ	ಪ್ರಕಟಿತ ಹುದ್ದೆಗಳು		ಪ.ಜಾ	ಪ.ಪಂ	ಪ್ರ–1	2ಎ	2ಬಿ	3ಎ	3ಬಿ	ಸಾ.ಅ	ಒಟ್ಟು
ಬಳ್ಳಾರಿ	ಭೌತ ವಿಜ್ಞಾನ (ಕನ್ನಡ ಮಾಧ್ಯಮ)	04	**ಇತರೆ**	0	0	0	0	0	0	0	01	01
			ಗ್ರಾಮೀಣ	0	0	0	0	0	0	0	0	O
			ಕ.ಮಾ.ಅ.	0	0	0	0	0	0	0	0	O
			ಯೋ.ಅ.	0	0	0	0	0	0	0	0	O
			ಮಾ.ಸೈ.	0	0	0	01	0	0	0	0	01
			ಅಂ.ವಿ.	0	0	0	0	01	0	0	0	01
			ಮ.ಅ.	0	0	0	0	0	0	0	01	01
			ಒಟ್ಟು	0	0	0	01	01	0	0	02	04

ಈ ಹಿಂದೆ ಪ್ರಕಟಿಸಲಾದ ಪ್ರೌಢ ಶಾಲಾ ಶಿಕ್ಷಕರ ನೇಮಕಾತಿ ಅಧಿಸೂಚನೆಯಲ್ಲಿ ಪ್ರಕಟಿತ ಹುದ್ದೆಗಳ ಕೊನೆಯ ರೋಸ್ಟರ್ ಬಿಂದುವಿನಿಂದ ಮುಂದುವರಿಸಲಾಗಿದೆ.

ಸಹಿ/–
ನೇಮಕಾತಿ ಪ್ರಾಧಿಕಾರಿಗಳು
ಹಾಗೂ ಉಪನಿರ್ದೇಶಕರು (ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ

ಅನುಬಂಧ -2
ಪ್ರಕಟಿತ ಹುದ್ದೆಗಳ ವರ್ಗೀಕರಣ

ಹಿಂದಿನ ನೇಮಕಾತಿಯ ರೋಸ್ಟರಿನ ಅಂತಿಮ ಬಿಂದು				01	01	01	0	0	0	0	02	05
ಜಿಲ್ಲೆ	ವಿಷಯ	ಪ್ರಕಟಿತ ಹುದ್ದೆಗಳು		ಪ.ಜಾ	ಪ.ಪಂ	ಪ್ರ-1	2ಎ	2ಬಿ	3ಎ	3ಬಿ	ಸಾ.ಅ	ಒಟ್ಟು
ಬಳ್ಳಾರಿ	ಭೌತ ವಿಜ್ಞಾನ (ತೆಲುಗು ಮಾಧ್ಯಮ)	01	**ಇತರೆ**	0	0	0	0	0	0	0	0	0
			ಗ್ರಾಮೀಣ	0	0	0	0	0	0	0	01	01
			ಕ.ಮಾ.ಅ.	0	0	0	0	0	0	0	0	0
			ಯೋ.ಅ.	0	0	0	0	0	0	0	0	0
			ಮಾ.ಸೈ.	0	0	0	0	0	0	0	0	0
			ಅಂ.ವಿ.	0	0	0	0	0	0	0	0	0
			ಮ.ಅ.	0	0	0	0	0	0	0	0	0
			ಒಟ್ಟು	0	0	0	0	0	0	0	01	01

ಹಿಂದಿನ ನೇಮಕಾತಿಯ ರೋಸ್ಟರಿನ ಅಂತಿಮ ಬಿಂದು				0	0	0	0	0	0	0	0	0
ಜಿಲ್ಲೆ	ವಿಷಯ	ಪ್ರಕಟಿತ ಹುದ್ದೆಗಳು		ಪ.ಜಾ	ಪ.ಪಂ	ಪ್ರ-1	2ಎ	2ಬಿ	3ಎ	3ಬಿ	ಸಾ.ಅ	ಒಟ್ಟು
ಬಳ್ಳಾರಿ	ಭೌತ ವಿಜ್ಞಾನ (ಆಂಗ್ಲ ಮಾಧ್ಯಮ)	06	**ಇತರೆ**	01	01	01	0	0	0	0	01	04
			ಗ್ರಾಮೀಣ	0	0	0	0	0	0	0	01	01
			ಕ.ಮಾ.ಅ.	0	0	0	0	0	0	0	0	0
			ಯೋ.ಅ.	0	0	0	0	0	0	0	0	0
			ಮಾ.ಸೈ.	0	0	0	0	0	0	0	0	0
			ಅಂ.ವಿ.	0	0	0	0	0	0	0	0	0
			ಮ.ಅ.	0	0	0	0	0	0	0	01	01
			ಒಟ್ಟು	01	01	01	0	0	0	0	03	06

ಈ ಹಿಂದೆ ಪ್ರಕಟಿಸಲಾದ ಪ್ರೌಢ ಶಾಲಾ ಶಿಕ್ಷಕರ ನೇಮಕಾತಿ ಅಧಿಸೂಚನೆಯಲ್ಲಿ ಪ್ರಕಟಿತ ಹುದ್ದೆಗಳ ಕೊನೆಯ ರೋಸ್ಟರ್ ಬಿಂದುವಿನಿಂದ ಮುಂದುವರಿಸಲಾಗಿದೆ.

ಸಹಿ/-
ನೇಮಕಾತಿ ಪ್ರಾಧಿಕಾರಿಗಳು
ಹಾಗೂ ಉಪನಿರ್ದೇಶಕರು (ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ
ಬಳ್ಳಾರಿ ಜಿಲ್ಲೆ

ಅನುಬಂಧ –2
ಪ್ರಕಟಿತ ಹುದ್ದೆಗಳ ವರ್ಗೀಕರಣ

ಹಿಂದಿನ ನೇಮಕಾತಿಯ ರೋಸ್ಟರಿನ ಅಂತಿಮ ಬಿಂದು				12	03	03	11	03	03	03	38	76
ಜಿಲ್ಲೆ	ವಿಷಯ	ಪ್ರಕಟಿತ ಹುದ್ದೆಗಳು		ಪ.ಜಾ	ಪ.ಪಂ	ಪ್ರ–1	2ಎ	2ಬಿ	3ಎ	3ಬಿ	ಸಾ.ಅ	ಒಟ್ಟು
ಬಳ್ಳಾರಿ	ಜೀವ ವಿಜ್ಞಾನ (ಕನ್ನಡ ಮಾಧ್ಯಮ)	13	**ಇತರೆ**	0	0	01	0	01	0	01	01	04
			ಗ್ರಾಮೀಣ	01	0	0	01	0	0	0	01	03
			ಕ.ಮಾ.ಅ.	01	0	0	0	0	0	0	0	01
			ಯೋ.ಅ.	0	0	0	0	0	0	0	0	0
			ಮಾ.ಸೈ.	0	0	0	0	0	0	0	01	01
			ಅಂ.ವಿ.	0	0	0	0	0	0	0	02	02
			ಮ.ಅ.	0	0	0	01	0	0	0	01	02
			ಒಟ್ಟು	02	0	01	02	01	0	01	06	13

ಹಿಂದಿನ ನೇಮಕಾತಿಯ ರೋಸ್ಟರಿನ ಅಂತಿಮ ಬಿಂದು				0	0	0	0	0	0	0	0	0
ಜಿಲ್ಲೆ	ವಿಷಯ	ಪ್ರಕಟಿತ ಹುದ್ದೆಗಳು		ಪ.ಜಾ	ಪ.ಪಂ	ಪ್ರ–1	2ಎ	2ಬಿ	3ಎ	3ಬಿ	ಸಾ.ಅ	ಒಟ್ಟು
ಬಳ್ಳಾರಿ	ಜೀವ ವಿಜ್ಞಾನ (ಆಂಗ್ಲ ಮಾಧ್ಯಮ)	07	**ಇತರೆ**	01	01	01	01	0	0	0	01	05
			ಗ್ರಾಮೀಣ	0	0	0	0	0	0	0	01	01
			ಕ.ಮಾ.ಅ.	0	0	0	0	0	0	0	0	0
ನೇಮಕಾತಿ ಅಧಿಸೂಚನೆ ದಿನಾಂಕದಂದು ಪ್ರೌಢ ಶಾಲಾ ಸಹಾಯಕ ಶಿಕ್ಷಕ ಗ್ರೇಡ್–2 ವೃಂದದ (ವಿವಿಧ ವಿಷಯ ಮತ್ತು ಬೋಧನಾ ಮಾಧ್ಯಮದ) ಮತ್ತು ದೈಹಿಕ ಶಿಕ್ಷಣ ಶಿಕ್ಷಕ ಗ್ರೇಡ್–1 ಹುದ್ದೆಗಳಿಗೆ ಆಯ್ಕೆಗಾಗಿ ಅರ್ಹತೆ ಪಡೆಯಲು ಅಭ್ಯರ್ಥಿಗಳು ಆಯಾ ವಿಷಯ ಮತ್ತು ಬೋಧನಾ ಮಾಧ್ಯಮದ ಹುದ್ದೆಗಳಿಗೆ **"ದಿ ಕರ್ನಾಟಕ ಎಜುಕೇಷನ್ ಡಿಪಾರ್ಟ್‌ಮೆಂಟ್ ಸರ್ವೀಸಸ್ (ಡಿಪಾರ್ಟ್‌ಮೆಂಟ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್) (ರಿಕ್ರೂಟ್‌ಮೆಂಟ್) (ಅಮೆಂಡ್‌ಮೆಂಟ್) ರೂಲ್ಸ್ 2002"** ನಿಯಮಗಳಲ್ಲಿ ನಿಗದಿ ಪಡಿಸಿರುವ ವಿದ್ಯಾರ್ಹತೆಗಳನ್ನು ಹೊಂದಿರಬೇಕು. ಮತ್ತು ನಿಗದಿಪಡಿಸಲಾದ ವಯೋಮಿತಿಯೊಳಗಿದ್ದು, ಆಯ್ಕೆ ಪ್ರಾಧಿಕಾರಿಯು ನಡೆಸುವ ವಿಭಾಗ ಮಟ್ಟದ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಗೆ ಕಡ್ಡಾಯವಾಗಿ ಹಾಜರಾಗಬೇಕು. **ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾದ ಮಾತ್ರಕ್ಕೆ ಅಭ್ಯರ್ಥಿಯು ಆಯ್ಕೆಗೆ ಅರ್ಹತೆ ಪಡೆಯುವುದಿಲ್ಲ. ಅಭ್ಯರ್ಥಿಯು ಇದರ ಜೊತೆಗೆ ನೇಮಕಾತಿ ನಿಯಮಗಳಲ್ಲಿ ನಿಗದಿಪಡಿಸಿರುವ ವಿದ್ಯಾರ್ಹತೆಗಳನ್ನು ಹೊಂದಿದ್ದು ಮತ್ತು ನಿಗದಿತ ವಯೋಮಿತಿಯೊಳಗೆ ಇದ್ದಲ್ಲಿ ಮಾತ್ರ ಆಯ್ಕೆಗೆ ಪರಿಗಣಿಸಲಾಗುವುದು.**

4. ಆಯ್ಕೆ ಮತ್ತು ನೇಮಕಾತಿ:–

ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಪ್ರಾಧಿಕಾರಿಗಳಾದ ವಿಭಾಗೀಯ ಸಹ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು **"ದಿ ಕರ್ನಾಟಕ ಎಜುಕೇಷನ್ ಡಿಪಾರ್ಟ್‌ಮೆಂಟ್ ಸರ್ವೀಸಸ್ (ಡಿಪಾರ್ಟ್‌ಮೆಂಟ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್) (ರಿಕ್ರೂಟ್‌ಮೆಂಟ್) (ಅಮೆಂಡ್‌ಮೆಂಟ್) ರೂಲ್ಸ್ 2002"** ಹಾಗೂ ಸಂಬಂಧಿಸಿದ ಕಾಲದಿಂದ ಕಾಲಕ್ಕೆ ತಿದ್ದುಪಡಿಯಾದ ಪ್ರಚಲಿತ ಸೇವಾ ನಿಯಮಗಳನ್ವಯ ವಿಭಾಗೀಯ ಮಟ್ಟದಲ್ಲಿ ಆಯ್ಕೆ ಪ್ರಾಧಿಕಾರಿಯಾಗಿರುತ್ತಾರೆ ಮತ್ತು ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು [ಆಡಳಿತ]ರವರು ನೇಮಕಾತಿ ಪ್ರಾಧಿಕಾರಿಯಾಗಿರುತ್ತಾರೆ.

5. ಅರ್ಜಿ ಸಲ್ಲಿಸುವ ವಿಧಾನ:-

ಅಭ್ಯರ್ಥಿಯು ಆನ್ ಲೈನ್ (ON LINE) ಮೂಲಕ ಇಲಾಖೆಯ ಅಧಿಕೃತ ವೆಬ್ ಸೈಟ್ (http://schooleducation.kar.nic.in) ಮುಖಾಂತರ ಅರ್ಜಿ ಸಲ್ಲಿಸಬೇಕು. ಅರ್ಜಿಗಳನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ಪ್ರತ್ಯೇಕವಾಗಿ ಸಲ್ಲಿಸಲು ಅವಕಾಶ ಇರುವುದಿಲ್ಲ. ಅಭ್ಯರ್ಥಿಗಳು ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಿದ ನಂತರ (After submission of application) ದೊರೆಯುವ ಗಣಕೀಕೃತ ಅರ್ಜಿ ಸಂಖ್ಯೆಯನ್ನು ಪಡೆದುಕೊಳ್ಳುವುದು ಮತ್ತು ಸದರಿ ಸಂಖ್ಯೆಯನ್ನು ಕಡ್ಡಾಯವಾಗಿ ಬರೆದಿಟ್ಟುಕೊಳ್ಳತಕ್ಕದ್ದು. ಈ ಅರ್ಜಿ ಸಂಖ್ಯೆಯು ನೇಮಕಾತಿ ಪ್ರಕ್ರಿಯೆಯ ಎಲ್ಲಾ ಹಂತಗಳಿಗೆ ಅವಶ್ಯಕವಾಗಿರುತ್ತದೆ. ಆನ್ ಲೈನ್ ಅರ್ಜಿಯನ್ನು ಭರ್ತಿ ಮಾಡಿದ ನಂತರ ಅಭ್ಯರ್ಥಿಗಳು ಸ್ವೀಕೃತಿ ಪತ್ರ ಮತ್ತು ಚಲನ್ ಪ್ರತಿಗಳ ಮುದ್ರಿತ ಪ್ರತಿಗಳನ್ನು ತೆಗೆದುಕೊಳ್ಳತಕ್ಕದ್ದು. ಮುದ್ರಿತ ಚಲನ್ ಪ್ರತಿಯನ್ನು ಆಧರಿಸಿ ಪರೀಕ್ಷಾ ಶುಲ್ಕವನ್ನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಯಾವುದಾದರೂ ಶಾಖೆಯಲ್ಲಿ ಪಾವತಿಸಬಹುದು. ಒಮ್ಮೆ ಪರೀಕ್ಷಾ ಶುಲ್ಕವನ್ನು ಪಾವತಿಸಿದ ನಂತರ ಯಾವುದೇ ಸಂದರ್ಭದಲ್ಲಿಯೂ ಹಿಂದಿರುಗಿಸಲಾಗುವುದಿಲ್ಲ ಹಾಗೂ ಸದರಿ ಶುಲ್ಕವನ್ನು ಇತರೆ ಯಾವುದೇ ಪರೀಕ್ಷೆ ಅಥವಾ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ. ಈ ಕೆಳಕಂಡಂತೆ ನಿಗದಿಪಡಿಸಿದ ಅರ್ಜಿ ಶುಲ್ಕವನ್ನು ಕೊನೆಯ ದಿನಾಂಕದೊಳಗೆ ಆನ್‌ಲೈನ್ ಮೂಲಕವೇ ಪಾವತಿಸುವುದು. ಅಭ್ಯರ್ಥಿಯು ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಪ್ರವೇಶಪತ್ರಗಳನ್ನು ಮೇಲೆ ನಮೂದಿಸಿರುವ ವೆಬ್‌ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬೇಕು ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ನಿಗದಿಪಡಿಸಿದ ಅವಧಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವಾಗ ಅಭ್ಯರ್ಥಿಗೆ ನೀಡಿರುವ ನೋಂದಣಿ ಸಂಖ್ಯೆ ಮತ್ತು ಇತರೆ ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ನಮೂದಿಸಿ ಸ್ಪರ್ಧಾತ್ಮಕ ಪರೀಕ್ಷೆಯ ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳುವುದು. ಕೊನೆಯ ದಿನಾಂಕದ ನಂತರ ಪಾವತಿಸಿದ ಅರ್ಜಿ ಶುಲ್ಕವನ್ನು ಪರಿಗಣಿಸುವುದಿಲ್ಲ. ಡಿ.ಡಿ./ಪೋಸ್ಟಲ್ ಆರ್ಡರ್ ಮತ್ತು ಮನಿ ಆರ್ಡರ್‌ಗಳನ್ನು ಪರಿಗಣಿಸಲಾಗುವುದಿಲ್ಲ ಮತ್ತು ಸ್ವೀಕರಿಸಲಾಗುವುದಿಲ್ಲ. ಅರ್ಜಿಗಳನ್ನು ಆನ್ ಲೈನ್ ಮೂಲಕ ಭರ್ತಿ ಮಾಡಬೇಕಾಗಿದ್ದು, ಈ ಬಗ್ಗೆ ಮಾರ್ಗಸೂಚಿಯನ್ನು ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

6. ಶುಲ್ಕ:-

1. ಸಾಮಾನ್ಯ ಅರ್ಹತೆ, ಪ್ರವರ್ಗ 2(ಎ), 2(ಬಿ), 3(ಎ), 3(ಬಿ)ಗೆ ಸೇರಿದ ಅಭ್ಯರ್ಥಿಗಳಿಗೆ ರೂ. 400/-, ಈ ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಸಲ್ಲಿಸಿದಲ್ಲಿ ಪ್ರತಿ ಹೆಚ್ಚುವರಿ ಹುದ್ದೆಗೆ ರೂ. 200/- ಶುಲ್ಕವನ್ನು ಹೆಚ್ಚುವರಿಯಾಗಿ ಪಾವತಿಸಬೇಕು.

ಉದಾ: ಒಬ್ಬ ಅಭ್ಯರ್ಥಿ ಕನ್ನಡ ಭಾಷಾ ಶಿಕ್ಷಕ ಹುದ್ದೆಗೆ ಅರ್ಜಿ ಸಲ್ಲಿಸಿದಲ್ಲಿ ಶುಲ್ಕ ರೂ. 400/- ಆಗಿರುತ್ತದೆ. ಅದೇ ಅಭ್ಯರ್ಥಿ, ಕನ್ನಡ ಭಾಷೆಯ ಜೊತೆಗೆ ಕಲಾ ಶಿಕ್ಷಕ ಹುದ್ದೆಗೆ ಅರ್ಜಿಸಲ್ಲಿಸಿದಲ್ಲಿ ಶುಲ್ಕ ರೂ. 400/- + ರೂ. 200/- = ರೂ.600/- ಆಗುತ್ತದೆ.

2. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1 ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ ಶುಲ್ಕ ವಿನಾಯಿತಿ ಇದೆ.

ಸೂಚನೆ: ದಾಖಲಾತಿಗಳ ಪರಿಶೀಲನೆ ಸಮಯದಲ್ಲಿ ಶುಲ್ಕ ವಿನಾಯ್ತಿ ಪಡೆದಿರುವ ಪ್ರಕರಣಗಳನ್ನು ಪರಿಶೀಲಿಸಲಾಗುತ್ತದೆ. ಸರಿಯಾದ ದಾಖಲೆಗಳಿಲ್ಲದಿದ್ದಲ್ಲಿ ಶುಲ್ಕ ವಿನಾಯ್ತಿ ಪಡೆದ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುತ್ತದೆ.

7. ಅರ್ಜಿ ಸಲ್ಲಿಸುವ ಅವಧಿ :-

ಅರ್ಜಿಯನ್ನು ದಿನಾಂಕ: 10.04.2012 ರಿಂದ 10.05.2012 ರವರೆಗೆ ನಿಗಧಿತ ಅವಧಿಯಲ್ಲಿ ಆನ್ ಲೈನ್ ಮೂಲಕ ಮಾತ್ರ ಸಲ್ಲಿಸಬೇಕು.

8. ಪ್ರೌಢ ಶಾಲಾ ಸಹಾಯಕ ಶಿಕ್ಷಕ ಗ್ರೇಡ್-2 ವೃಂದದ (ವಿವಿಧ ವಿಷಯ ಹಾಗೂ ಬೋಧನಾ ಮಾಧ್ಯಮದ) ಮತ್ತು ದೈಹಿಕ ಶಿಕ್ಷಣ ಶಿಕ್ಷಕ ಗ್ರೇಡ್-1 ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಬಗ್ಗೆ.

ಪ್ರೌಢ ಶಾಲಾ ಸಹಾಯಕ ಶಿಕ್ಷಕರು ಗ್ರೇಡ್-2 ವೃಂದದ, (ವಿವಿಧ ವಿಷಯ ಹಾಗೂ ಬೋಧನಾ ಮಾಧ್ಯಮದ) ಮತ್ತು ದೈಹಿಕ ಶಿಕ್ಷಣ ಶಿಕ್ಷಕ ಗ್ರೇಡ್-1 ಹುದ್ದೆಗಳಿಗೆ ಒಂದೇ ಅರ್ಜಿ ನಮೂನೆಯನ್ನು ನಿಗಧಿಪಡಿಸಿದೆ. ಅಭ್ಯರ್ಥಿಗಳು ಒಂದೇ ಅರ್ಜಿಯಲ್ಲಿ ಒಂದಕ್ಕಿಂತ ಹೆಚ್ಚು ವಿಷಯದ ಅಥವಾ ಬೋಧನಾ ಮಾಧ್ಯಮದ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ. ಆದರೆ ಅಭ್ಯರ್ಥಿಗಳು ವಿವಿಧ ವಿಷಯ ಹಾಗೂ ಬೋಧನಾ ಮಾಧ್ಯಮದ ಹುದ್ದೆಗಳಿಗೆ ಆದ್ಯತೆಯನ್ನು ನಮೂದಿಸಬೇಕು. **ಆದ್ಯತೆ ಪ್ರಕಾರ ಆಯ್ಕೆ ಮಾಡಲಾಗುವುದು. ಒಂದು ಆದ್ಯತೆಯ ಪ್ರಕಾರ ಆಯ್ಕೆ ಹೊಂದಿದ್ದಲ್ಲಿ ಉಳಿದ ಆದ್ಯತೆಗಳನ್ನು ಕೈಬಿಡಲಾಗುವುದು.**

9. ವಿದ್ಯಾರ್ಹತೆಗಳು:-

ಅಭ್ಯರ್ಥಿಗಳು ನೇಮಕಾತಿ ಅಧಿಸೂಚನೆ ದಿನಾಂಕದಂದು "ದಿ ಕರ್ನಾಟಕ ಎಜುಕೇಷನ್ ಡಿಪಾರ್ಟ್‌ಮೆಂಟ್ ಸರ್ವೀಸಸ್ (ಡಿಪಾರ್ಟ್‌ಮೆಂಟ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್) (ರಿಕ್ರೂಟ್‌ಮೆಂಟ್) (ಅಮೆಂಡ್‌ಮೆಂಟ್) ರೂಲ್ಸ್ 2002" ನಿಯಮಗಳಲ್ಲಿ ನಿಗದಿಪಡಿಸಿರುವಂತೆ, ಪ್ರೌಢ ಶಾಲಾ ಸಹಾಯಕ ಶಿಕ್ಷಕ ಗ್ರೇಡ್-2 ವೃಂದದ (ವಿವಿಧ ವಿಷಯಗಳು ಮತ್ತು ಬೋಧನಾ ಮಾಧ್ಯಮದ) ಮತ್ತು ದೈಹಿಕ ಶಿಕ್ಷಣ ಶಿಕ್ಷಕ ಗ್ರೇಡ್-1 ವೃಂದದ ಹುದ್ದೆಗಳಿಗೆ ಹೊಂದಿರಬೇಕಾದ ವಿದ್ಯಾರ್ಹತೆಗಳ ವಿವರಗಳು ಈ ಮುಂದೆ ತಿಳಿಸಿದಂತಿರುತ್ತದೆ.

(ಅ) ಕಲಾ ಶಿಕ್ಷಕರ (ಕನ್ನಡ, ಆಂಗ್ಲ ,ತಮಿಳು,ತೆಲುಗು ಮತ್ತು ಉರ್ದು ಮಾಧ್ಯಮ) ಹುದ್ದೆಗಳಿಗೆ

Arts Teacher (Kannada,English,Temil,Telugu & Urdu Medium):-

i) ಅಭ್ಯರ್ಥಿಯು ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾಲಯದ "ಬ್ಯಾಚಲರ್ ಆಫ್ ಆರ್ಟ್ಸ್" (ಬಿ.ಎ) ಪದವೀಧರರಾಗಿದ್ದು, ಈ ಪದವಿ ಪರೀಕ್ಷೆಯಲ್ಲಿ "ಇತಿಹಾಸ, ಅರ್ಥಶಾಸ್ತ್ರ, ಭೂಗೋಳ ಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜ ಶಾಸ್ತ್ರ ಇವುಗಳಲ್ಲಿ ಯಾವುದಾದರೂ ಎರಡು ಐಚ್ಛಿಕ ವಿಷಯಗಳನ್ನು ಅಧ್ಯಯನ ಮಾಡಿರಬೇಕು.

ಮತ್ತು

ii] ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾನಿಲಯದಿಂದ ಬ್ಯಾಚುಲರ್ ಆಫ್ ಎಜ್ಯುಕೇಶನ್ (ಬಿ.ಇಡಿ) ಪದವಿಯನ್ನು ಪಡೆದಿರಬೇಕು.

ಹಾಗೂ

iii) ಬೋಧನಾ ಮಾಧ್ಯಮದ ಭಾಷೆಯನ್ನು ಅಭ್ಯರ್ಥಿಯು ಬ್ಯಾಚುಲರ್ ಆಫ್ ಆರ್ಟ್ಸ್ (ಬಿ.ಎ) ಪದವಿಯಲ್ಲಿ ಒಂದು ಭಾಷೆಯನ್ನಾಗಿ ಅಧ್ಯಯನ ಮಾಡಿರಬೇಕು.

ಅಥವಾ

ಬೋಧನಾ ಮಾಧ್ಯಮದ ಭಾಷೆಯನ್ನು ಬಿ.ಎ. ಪದವಿಯಲ್ಲಿ ಅಧ್ಯಯನ ಮಾಡದೆ ಇದ್ದಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಬೋಧನಾ ಮಾಧ್ಯಮದ ಭಾಷೆಯನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಅಧ್ಯಯನ ಮಾಡಿರಬೇಕು.

ಅಥವಾ

ಎಸ್.ಎಸ್.ಎಲ್.ಸಿ. ಅಥವಾ ಬಿ.ಎ.. ಪದವಿ ಪರೀಕ್ಷೆಯನ್ನು ಬೋಧನಾ ಮಾಧ್ಯಮದ ಭಾಷೆಯ ಮಾಧ್ಯಮದಲ್ಲಿ ಅಧ್ಯಯನ ಮಾಡಿರಬೇಕು.

ಅಥವಾ

ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾನಿಲಯದಿಂದ ಸಂಬಂಧಿಸಿದ ಬೋಧನಾ ಮಾಧ್ಯಮದ ಭಾಷೆಯಲ್ಲಿ **ಡಿಪ್ಲೋಮಾ** ಹೊಂದಿರಬೇಕು.

ಕನ್ನಡ ಮಾಧ್ಯಮದಲ್ಲಿ ಬೋಧಿಸುವ ವಿಷಯಗಳಿಗೆ ಸಂಬಂಧಿಸಿದಂತೆ ಮೇಲೆ ತಿಳಿಸಿದ ನಿಬಂಧನೆಗಳ ಪ್ರಕಾರ ಇಲ್ಲದಿದ್ದಲ್ಲಿ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು ಅಥವಾ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಇವರುಗಳ ವತಿಯಿಂದ ನಡೆಸಲ್ಪಡುವ ಕನ್ನಡ ಸರ್ಟಿಫಿಕೇಟ್ ಕೋರ್ಸ್‌ನಲ್ಲಿ ಉತ್ತೀರ್ಣತೆ ಹೊಂದಿರಬೇಕು.

(ಆ) ಭೌತ ವಿಜ್ಞಾನ ಶಿಕ್ಷಕರ (ಕನ್ನಡ, ಆಂಗ್ಲ ಮತ್ತು ಉರ್ದು ಮಾಧ್ಯಮ) ಹುದ್ದೆಗಳಿಗೆ

Physical Science Teacher (Kannada, English & Urdu Medium):-

i) ಅಭ್ಯರ್ಥಿಯು ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾಲಯದ "ಬ್ಯಾಚಲರ್ ಆಫ್ ಸೈನ್ಸ್" (ಬಿ.ಎಸ್ಸಿ) ಪದವೀಧರರಾಗಿದ್ದು, ಈ ಪದವಿ ಪರೀಕ್ಷೆಯಲ್ಲಿ ಈ ಕೆಳಕಂಡ ಐಚ್ಛಿಕ ವಿಷಯಗಳಲ್ಲಿ ಎರಡು ಐಚ್ಛಿಕ ವಿಷಯಗಳನ್ನು ಅಧ್ಯಯನ ಮಾಡಿರಬೇಕು. ಇದರಲ್ಲಿ "ಗಣಿತ ಶಾಸ್ತ್ರ" ಐಚ್ಛಿಕ ವಿಷಯವನ್ನು ಕಡ್ಡಾಯವಾಗಿ ಅಧ್ಯಯನ ಮಾಡಿರಬೇಕು.

"ಭೌತಶಾಸ್ತ್ರ, ಗಣಿತಶಾಸ್ತ್ರ, ರಸಾಯನ ಶಾಸ್ತ್ರ"

ಅಥವಾ

"ಭೌತಶಾಸ್ತ್ರ, ಗಣಿತಶಾಸ್ತ್ರ, ಕಂಪ್ಯೂಟರ್ ಸೈನ್ಸ್"

ಅಥವಾ

"ಭೌತಶಾಸ್ತ್ರ, ಗಣಿತಶಾಸ್ತ್ರ, ಎಲೆಕ್ಟ್ರಾನಿಕ್ಸ್"

ಮತ್ತು

ii) ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾಲಯದಿಂದ **"ಬ್ಯಾಚಲರ್ ಆಫ್ ಎಜುಕೇಷನ್"** (ಬಿ.ಇಡಿ.,) ಪದವಿ ಪಡೆದಿರಬೇಕು.

ಹಾಗೂ

iii) ಬೋಧನಾ ಮಾಧ್ಯಮದ ಭಾಷೆಯನ್ನು ಅಭ್ಯರ್ಥಿಯು **"ಬ್ಯಾಚಲರ್ ಆಫ್ ಸೈನ್ಸ್"** (ಬಿ.ಎಸ್ಸಿ) ಪದವಿಯಲ್ಲಿ ಒಂದು ಭಾಷೆಯನ್ನಾಗಿ ಅಧ್ಯಯನ ಮಾಡಿರಬೇಕು.

ಅಥವಾ

ಬೋಧನಾ ಮಾಧ್ಯಮದ ಭಾಷೆಯನ್ನು ಬಿ.ಎಸ್ಸಿ. ಪದವಿಯಲ್ಲಿ ಅಧ್ಯಯನ ಮಾಡದೆ ಇದ್ದಲ್ಲಿ **ಎಸ್.ಎಸ್.ಎಲ್.ಸಿ.** ಪರೀಕ್ಷೆಯಲ್ಲಿ ಬೋಧನಾ ಮಾಧ್ಯಮದ ಭಾಷೆಯನ್ನು **ಪ್ರಥಮ ಅಥವಾ ದ್ವಿತೀಯ** ಭಾಷೆಯನ್ನಾಗಿ ಅಧ್ಯಯನ ಮಾಡಿರಬೇಕು.

ಅಥವಾ

ಎಸ್.ಎಸ್.ಎಲ್.ಸಿ. ಅಥವಾ ಬಿ.ಎಸ್ಸಿ. ಪದವಿ ಪರೀಕ್ಷೆಯನ್ನು **ಬೋಧನಾ ಮಾಧ್ಯಮದ** ಭಾಷೆಯ ಮಾಧ್ಯಮದಲ್ಲಿ ಅಧ್ಯಯನ ಮಾಡಿರಬೇಕು.

ಅಥವಾ

ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾಲಯದಿಂದ, ಸಂಬಂಧಿಸಿದ ಬೋಧನಾ ಮಾಧ್ಯಮದ ಭಾಷೆಯಲ್ಲಿ **ಡಿಪ್ಲೋಮಾ** ವನ್ನು ಹೊಂದಿರಬೇಕು.

ಕನ್ನಡ ಮಾಧ್ಯಮದಲ್ಲಿ ಬೋಧಿಸುವ ವಿಷಯಗಳಿಗೆ ಸಂಬಂಧಿಸಿದಂತೆ ಮೇಲೆ ತಿಳಿಸಿದ ನಿಬಂಧನೆಗಳ ಪ್ರಕಾರ ಇಲ್ಲದಿದ್ದಲ್ಲಿ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು ಅಥವಾ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಇವರುಗಳ ವತಿಯಿಂದ ನಡೆಸಲ್ಪಡುವ ಕನ್ನಡ ಸರ್ಟಿಫಿಕೇಟ್ ಕೋರ್ಸ್‌ನಲ್ಲಿ ಉತ್ತೀರ್ಣತೆ ಪಡೆದಿರಬೇಕು.

(ಇ) ಜೀವ ವಿಜ್ಞಾನ ಶಿಕ್ಷಕರ (ಕನ್ನಡ,ಆಂಗ್ಲ ,ತಮಿಳು ಮತ್ತು ಉರ್ದು ಮಾಧ್ಯಮ) ಹುದ್ದೆಗಳಿಗೆ

Biological Science Teacher (Kannada,English Temil & Urdu Medium):-

i) ಅಭ್ಯರ್ಥಿಯು, ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾಲಯದ **"ಬ್ಯಾಚಲರ್ ಆಫ್ ಸೈನ್ಸ್"** (ಬಿ.ಎಸ್ಸಿ) ಪದವೀಧರರಾಗಿದ್ದು, ಈ ಪದವಿ ಪರೀಕ್ಷೆಯಲ್ಲಿ **ರಸಾಯನ ಶಾಸ್ತ್ರ, ಸಸ್ಯಶಾಸ್ತ್ರ ಮತ್ತು ಪ್ರಾಣಿಶಾಸ್ತ್ರ** ಈ ಐಚ್ಛಿಕ ವಿಷಯಗಳಲ್ಲಿ ಎರಡು ಐಚ್ಛಿಕ ವಿಷಯಗಳನ್ನು ಅಧ್ಯಯನ ಮಾಡಿರಬೇಕು. ಹಾಗೂ ಇದರಲ್ಲಿ **"ರಸಾಯನಶಾಸ್ತ್ರ "** ಐಚ್ಛಿಕ ವಿಷಯವನ್ನು ಕಡ್ಡಾಯವಾಗಿ ಅಧ್ಯಯನ ಮಾಡಿರಬೇಕು.

ಮತ್ತು

ii) ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾಲಯದಿಂದ **"ಬ್ಯಾಚಲರ್ ಆಫ್ ಎಜುಕೇಷನ್"** (ಬಿ.ಎಡ್) ಪದವಿ ಪಡೆದಿರಬೇಕು.

ಹಾಗೂ

iii) ಬೋಧನಾ ಮಾಧ್ಯಮದ ಭಾಷೆಯನ್ನು ಅಭ್ಯರ್ಥಿಯು **"ಬ್ಯಾಚಲರ್ ಆಫ್ ಸೈನ್ಸ್"** (ಬಿ.ಎಸ್ಸಿ) ಪದವಿಯಲ್ಲಿ ಒಂದು ಭಾಷೆಯನ್ನಾಗಿ ಅಧ್ಯಯನ ಮಾಡಿರಬೇಕು.

ಅಥವಾ

ಬೋಧನಾ ಮಾಧ್ಯಮದ ಭಾಷೆಯನ್ನು ಬಿ.ಎಸ್ಸಿ. ಪದವಿಯಲ್ಲಿ ಅಧ್ಯಯನ ಮಾಡದೆ ಇದ್ದಲ್ಲಿ **ಎಸ್.ಎಸ್.ಎಲ್.ಸಿ.** ಪರೀಕ್ಷೆಯಲ್ಲಿ ಬೋಧನಾ ಮಾಧ್ಯಮದ ಭಾಷೆಯನ್ನು **ಪ್ರಥಮ ಅಥವಾ ದ್ವಿತೀಯ** ಭಾಷೆಯನ್ನಾಗಿ ಅಧ್ಯಯನ ಮಾಡಿರಬೇಕು.

ಅಥವಾ

ಎಸ್.ಎಸ್.ಎಲ್.ಸಿ. ಅಥವಾ ಬಿ.ಎಸ್ಸಿ. ಪದವಿ ಪರೀಕ್ಷೆಯನ್ನು **ಬೋಧನಾ ಮಾಧ್ಯಮದ** ಭಾಷೆಯ ಮಾಧ್ಯಮದಲ್ಲಿ ಅಧ್ಯಯನ ಮಾಡಿರಬೇಕು.

ಅಥವಾ

ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾಲಯದಿಂದ, ಸಂಬಂಧಿಸಿದ ಬೋಧನಾ ಮಾಧ್ಯಮದ ಭಾಷೆಯಲ್ಲಿ **'ಡಿಪ್ಲೋಮಾ'** ವನ್ನು ಹೊಂದಿರಬೇಕು.

ಕನ್ನಡ ಮಾಧ್ಯಮದಲ್ಲಿ ಬೋಧಿಸುವ ವಿಷಯಗಳಿಗೆ ಸಂಬಂಧಿಸಿದಂತೆ ಮೇಲೆ ತಿಳಿಸಿದ ನಿಬಂಧನೆಗಳ ಪ್ರಕಾರ ಇಲ್ಲದಿದ್ದಲ್ಲಿ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು ಅಥವಾ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಇವರುಗಳ ವತಿಯಿಂದ ನಡೆಸಲ್ಪಡುವ ಕನ್ನಡ ಸರ್ಟಿಫಿಕೇಟ್ ಕೋರ್ಸ್‌ನಲ್ಲಿ ಉತ್ತೀರ್ಣತೆ ಪಡೆದಿರಬೇಕು.

(ಈ) ಭಾಷಾ ಶಿಕ್ಷಕರ ಹುದ್ದೆಗಳಿಗೆ (Language Assistants):-

i) ಅಭ್ಯರ್ಥಿಯು ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾಲಯದ **"ಬ್ಯಾಚಲರ್ ಆಫ್ ಆರ್ಟ್ಸ್"** (ಬಿ.ಎ) ಪದವೀಧರರಾಗಿದ್ದು, ಈ ಪದವಿ ಪರೀಕ್ಷೆಯಲ್ಲಿ ಸಂಬಂಧಿಸಿದ ಭಾಷಾ ಶಿಕ್ಷಕರ ಹುದ್ದೆಗೆ ಅನುಗುಣವಾದ ಭಾಷೆಯನ್ನು ಒಂದು ಐಚ್ಛಿಕ ವಿಷಯವನ್ನಾಗಿ (Optional) ಅಧ್ಯಯನ ಮಾಡಿರಬೇಕು. ಭಾಷೆಗಳು ಅಂದರೆ **ಕನ್ನಡ, ಇಂಗ್ಲೀಷ್, ಹಿಂದಿ, ಉರ್ದು,** ತಮಿಳು **ಮತ್ತು ಸಂಸ್ಕೃತ.**

ಅಥವಾ

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಬೆಂಗಳೂರು ಇವರು ನಡೆಸುವ (04) ನಾಲ್ಕು ವರ್ಷಗಳ ಅವಧಿಯ **ಕನ್ನಡ ಪಂಡಿತ, ಸಂಸ್ಕೃತ ವಿದ್ವಾನ್, ಉರ್ದು ಮುನ್ಷಿ** ಪರೀಕ್ಷೆಯನ್ನು ಪಾಸು ಮಾಡಿರಬೇಕು.

ಮತ್ತು

ii) ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾಲಯದಿಂದ **"ಬ್ಯಾಚಲರ್ ಆಫ್ ಎಜುಕೇಷನ್"** (ಬಿ.ಇಡಿ.,) ಪದವಿ ಪಡೆದಿರಬೇಕು.

ಬ್ಯಾಚುಲರ್ ಪದವಿಯಲ್ಲಿ ಸಂಬಂಧಿಸಿದ ಭಾಷಾ ಶಿಕ್ಷಕರ ಹುದ್ದೆಗೆ ಅನುಗುಣವಾದ ಭಾಷಾ ಐಚ್ಛಿಕ ವಿಷಯವನ್ನು ಅಧ್ಯಯನ ಮಾಡದೆ ಇದ್ದಲ್ಲಿ ಅಂಥಹ ಅಭ್ಯರ್ಥಿಗಳು;

a) ಸಂಬಂದಿಸಿದ ಭಾಷಾ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು (Post Graduate Degree) ಹೊಂದಿದ್ದಲ್ಲಿ ಸಂಬಂಧಿಸಿದ ಭಾಷಾ ಶಿಕ್ಷಕರ ಹುದ್ದೆಗೆ ಪರಿಗಣಿಸಲು ಅರ್ಹತೆ ಪಡೆಯುತ್ತಾರೆ.

b) **ರೀಜನಲ್ ಇನ್‌ಸ್ಟ್ಯೂಟ್ ಆಫ್ ಇಂಗ್ಲೀಷ್ ಸೌತ್ ಇಂಡಿಯಾ** ಇವರು ನೀಡುವ **ಪೋಸ್ಟ್ ಗ್ರಾಜುಯೇಟ್ ಡಿಪ್ಲೋಮಾ ಸರ್ಟಿಫಿಕೇಟ್ ಇನ್ ಇಂಗ್ಲೀಷ್** ಹೊಂದಿದ್ದಲ್ಲಿ ಅಂತಹ ಅಭ್ಯರ್ಥಿಗಳು ಇಂಗ್ಲೀಷ್ ಭಾಷಾ ಶಿಕ್ಷಕರ ಹುದ್ದೆಗೆ ಪರಿಗಣಿಸಲು ಅರ್ಹತೆ ಪಡೆಯುತ್ತಾರೆ.

c) ಹಿಂದಿ ಭಾಷಾ ಶಿಕ್ಷಕರ ಹುದ್ದೆಗೆ ಅಭ್ಯರ್ಥಿಯು, ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾಲಯದ **ಬ್ಯಾಚುಲರ್ ಪದವೀಧರರಾಗಿದ್ದು,** ಈ ಪದವಿಯಲ್ಲಿ ಹಿಂದಿಯನ್ನು ಒಂದು ಐಚ್ಛಿಕ ವಿಷಯವನ್ನಾಗಿ ಅಧ್ಯಯನ ಮಾಡಿರಬೇಕು.

ಮತ್ತು

ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾಲಯದಿಂದ **ಬ್ಯಾಚುಲರ್ ಆಫ್ ಎಜುಕೇಷನ್ (ಬಿ.ಇಡಿ.,)** ಪದವೀಧರರಾಗಿದ್ದು, ಈ ಪದವಿ ಪರೀಕ್ಷೆಯಲ್ಲಿ ಹಿಂದಿಯನ್ನು ಬೋಧನಾ ವಿಷಯವನ್ನಾಗಿ ಅಧ್ಯಯನ ಮಾಡಿರಬೇಕು.

d) ಇಂಗ್ಲೀಷ್ ಭಾಷಾ ಶಿಕ್ಷಕರ ಹುದ್ದೆಗೆ ಸಂಬಂಧಿಸಿದಂತೆ ಅಭ್ಯರ್ಥಿಗಳು ಬಿ.ಎಡ್. ಪದವಿಯಲ್ಲಿ ಇಂಗ್ಲೀಷ್‌ನ್ನು ಬೋಧನಾ ವಿಷಯವನ್ನಾಗಿ ಅಧ್ಯಯನ ಮಾಡದೆ ಇದ್ದಲ್ಲಿ ಅಂತಹ ಅಭ್ಯರ್ಥಿಗಳು **ರೀಜನಲ್ ಇನ್‌ಸ್ಟ್ಯೂಟ್ ಆಫ್ ಇಂಗ್ಲೀಷ್, ಸೌತ್ ಇಂಡಿಯಾ** ಇವರು ನೀಡುವ **ಪೋಸ್ಟ್ ಗ್ರಾಜುಯೇಟ್ ಡಿಪ್ಲೋಮಾ ಸರ್ಟಿಫಿಕೇಟ್ ಇನ್ ಇಂಗ್ಲೀಷ್** ಹೊಂದಿದ್ದಲ್ಲಿ ನೇಮಕಾತಿಗೆ ಪರಿಗಣಿಸಲು ಅರ್ಹತೆ ಪಡೆಯುತ್ತಾರೆ.

ವಿಶೇಷ ಸೂಚನೆ:– ಮೇಲ್ಕಂಡ ಎ, ಬಿ ಮತ್ತು ಡಿ ಪ್ರಕರಣಗಳಲ್ಲಿ ಅಭ್ಯರ್ಥಿಯು ಬ್ಯಾಚುಲರ್ ಪದವಿ ಮತ್ತು ಬ್ಯಾಚುಲರ್ ಆಫ್ ಎಜುಕೇಷನ್ ಪದವಿ ಪರೀಕ್ಷೆಗಳಲ್ಲಿ ಪಡೆದಿರುವ ಅಂಕಗಳನ್ನು ಮಾತ್ರ ಮೆರಿಟ್ ಕಂಡುಕೊಳ್ಳಲು ಪರಿಗಣಿಸಲಾಗುತ್ತದೆ. ಆದರೆ ಸ್ನಾತಕೋತ್ತರ ಮತ್ತು ಡಿಪ್ಲೋಮಾ ಪರೀಕ್ಷೆಗಳಲ್ಲಿ ಪಡೆದಿರುವ ಅಂಕಗಳನ್ನು ಮೆರಿಟ್ ಕಂಡು ಹಿಡಿಯಲು ಗಣನೆಗೆ ತೆಗೆದುಕೊಳ್ಳುವುದಿಲ್ಲ

ಹಿಂದಿ ಭಾಷಾ ಶಿಕ್ಷಕರ ಹುದ್ದೆಗೆ ಸಂಬಂಧಿಸಿದಂತೆ ಅಭ್ಯರ್ಥಿಯು:-

1. ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ, ಮದ್ರಾಸ್ ಇವರು ನಡೆಸುವ **ರಾಷ್ಟ್ರಭಾಷಾ ಪ್ರವೀಣ್ ಮತ್ತು ಶಿಕ್ಷಾ ಸ್ನಾತಕ್** (ಹಿಂದಿ ಮತ್ತು ಮತ್ತೊಂದು ಭಾಷೆಯನ್ನು ಬೋಧನಾ ವಿಷಯವನ್ನಾಗಿ **ಶಿಕ್ಷಾ ಸ್ನಾತಕ್** ಪರೀಕ್ಷೆಯಲ್ಲಿ ಅಧ್ಯಯನ ಮಾಡಿರಬೇಕು) ಮತ್ತು **ಪದವಿ ಪೂರ್ವ ಶಿಕ್ಷಣ (ಪಿ.ಯು.ಸಿ) ಕೋರ್ಸಿನಲ್ಲಿ** ಉತ್ತೀರ್ಣರಾಗಿದ್ದು, ಸದರಿ ಕೋರ್ಸಿನಲ್ಲಿ ಕನ್ನಡ ಅಥವಾ ಯಾವುದೇ ಒಂದು ಪ್ರಾದೇಶಿಕ ಭಾಷೆಯನ್ನು ಒಂದು ವಿಷಯವನ್ನಾಗಿ ಅಥವಾ ಮಾಧ್ಯಮವನ್ನಾಗಿ ವ್ಯಾಸಂಗ ಮಾಡಿರಬೇಕು.

ಅಥವಾ

2. ರಾಜ್ಯ ಸರ್ಕಾರವು ತತ್ಸಮಾನ ವಿದ್ಯಾರ್ಹತೆ ಎಂದು ಘೋಷಿರುವ ಇತರೆ ಯಾವುದೇ ವಿದ್ಯಾರ್ಹತೆಯನ್ನು ಹೊಂದಿದ್ದಲ್ಲಿ ನೇಮಕಾತಿಗೆ ಪರಿಗಣಿಸಲು ಅರ್ಹತೆ ಪಡೆಯುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ ಇಡಿ 125 ಪಿಟಿಐ 2003 ದಿನಾಂಕ 16-08-2003 ಹಾಗೂ ಸರ್ಕಾರದ ಆದೇಶ ಸಂಖ್ಯೆ ಇಡಿ 160 ಪಿಟಿಐ 2003 ದಿನಾಂಕ 24-02-2004ರನ್ವಯ ಈಕೆಳಕಂಡಂತೆ ಪದವಿ ಮತ್ತು ಬಿ.ಇಡಿ., ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿರಬೇಕು.

ಅ) ಪದವಿ ತತ್ಸಮಾನ ಪರೀಕ್ಷೆ ಹೆಸರು	ಸಂಸ್ಥೆಯ ಹೆಸರು
1. ಹಿಂದಿ ರತ್ನ	ಮೈಸೂರು ಹಿಂದಿ ಪ್ರಚಾರ ಪರಿಷತ್,ಬೆಂಗಳೂರು
2. ರಾಜ ಭಾಷಾ ವಿದ್ವಾನ್	ಕರ್ನಾಟಕ ಹಿಂದಿ ಪ್ರಚಾರ ಸಮಿತಿ,ಬೆಂಗಳೂರು
3. ಹಿಂದಿ ಭಾಷಾ ಪ್ರವೀಣ್	ಕರ್ನಾಟಕ ಮಹಿಳಾ ಹಿಂದಿ ಸೇವಾ ಸಮಿತಿ,ಬೆಂಗಳೂರು
4. ರಾಷ್ಟ್ರಭಾಷಾ ಪ್ರವೀಣ್	ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ,ಮದ್ರಾಸ್
ಆ) ಬಿಎಡ್ ತತ್ಸಮಾನ ಪರೀಕ್ಷೆ ಹೆಸರು	**ಸಂಸ್ಥೆಯ ಹೆಸರು**
1. ಹಿಂದಿ ಶಿಕ್ಷಕ್	ಅ. ಕರ್ನಾಟಕ ಮಹಿಳಾ ಹಿಂದಿ ಸೇವಾ ಸಮಿತಿ,ಬೆಂಗಳೂರು
	ಆ. ಕರ್ನಾಟಕ ಹಿಂದಿ ಪ್ರಚಾರ ಸಮಿತಿ,ಬೆಂಗಳೂರು
	ಇ. ಮೈಸೂರು ಹಿಂದಿ ಪ್ರಚಾರ ಪರಿಷತ್,ಬೆಂಗಳೂರು
	ಈ. ಮಾನಸ ಎಜುಕೇಷನ್ ಸೊಸೈಟಿ, ತುಮಕೂರು
	ಉ.ಕರ್ನಾಟಕ ಲೇಬರ್ ಎಜುಕೇಷನ್ ಸೊಸೈಟಿ.ಬೀದರ್
2. ಹಿಂದಿ ಶಿಕ್ಷಣ ಪಾರಂಗತ್	ಕೇಂದ್ರೀಯ ಹಿಂದಿ ಸಂಸ್ಥಾನ್, ಆಗ್ರಾ [ಸರ್ಕಾರಿ ಹಿಂದಿ ಶಿಕ್ಷಕರ ತರಬೇತಿ ಕಾಲೇಜು, ಮೈಸೂರು.]

ಪರಸ್ತುಗಳು :-

I) ಹಿಂದಿ ಶಿಕ್ಷಕ್ ಮತ್ತು ಹಿಂದಿ ಶಿಕ್ಷಣ ಪಾರಂಗತ್ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ಸದರಿ ಕೋರ್ಸನ್ನು ಸೇರುವ ಮುಂಚೆ ಪಿ.ಯು.ಸಿ.ಯಲ್ಲಿ ಉತ್ತೀರ್ಣರಾಗಿದ್ದು, ಸದರಿ ಪಿ.ಯು ಕೋರ್ಸಿನಲ್ಲಿ ಕನ್ನಡ ಅಥವಾ ಯಾವುದಾದರೂ ಒಂದು ಪ್ರಾದೇಶಿಕ ಭಾಷೆಯನ್ನು ಒಂದು ವಿಷಯವನ್ನಾಗಿ ಅಥವಾ ಮಾಧ್ಯಮವನ್ನಾಗಿ ವ್ಯಾಸಂಗ ಮಾಡಿರಬೇಕು.

II) ಹಿಂದಿ ಜೊತೆಗೆ ಮತ್ತೊಂದು ಭಾಷೆಯನ್ನು ಬೋಧನಾ ವಿಧಾನವನ್ನಾಗಿ ಅಧ್ಯಯನ ಮಾಡಿರಬೇಕು.

(ಉ) ದೈಹಿಕ ಶಿಕ್ಷಣ ಶಿಕ್ಷಕ ಗ್ರೇಡ್-1 ಹುದ್ದೆಗಳಿಗೆ (Physical Education Teacher Grade-I):-

i) ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾಲಯದ **"ಬ್ಯಾಚಲರ್ ಪದವಿ"** ಯನ್ನು ಪಡೆದಿರಬೇಕು.

ಮತ್ತು

ii) ಭಾರತ ದೇಶದ ಕಾನೂನಿನಂತೆ ಸ್ಥಾಪಿಸಲ್ಪಟ್ಟ ಮತ್ತು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ಅಂಗೀಕೃತವಾದ ಒಂದು ವಿಶ್ವವಿದ್ಯಾಲಯದ **"ಬ್ಯಾಚಲರ್ ಆಫ್ ಫಿಸಿಕಲ್ ಎಜುಕೇಷನ್"** ಪದವಿಯನ್ನು ಪಡೆದಿರಬೇಕು. ಅಥವಾ **ಗೌರ್ನಮೆಂಟ್ ಕಾಲೇಜ್ ಆಫ್**

ಫಿಸಿಕಲ್ ಎಜುಕೇಷನ್ ಇಲ್ಲಿಂದ ಡಿಪ್ಲೋಮಾ ಇನ್ ಫಿಸಿಕಲ್ ಎಜುಕೇಷನ್ ಹೊಂದಿರಬೇಕು. ಅಥವಾ ರಾಜ್ಯ ಸರಕಾರವು ತತ್ಸಮಾನ ಪರೀಕ್ಷೆ ಎಂದು ಪರಿಗಣಿಸಿರುವ ವಿದ್ಯಾರ್ಹತೆಯನ್ನು ಹೊಂದಿರಬೇಕು.

10. **ವೇತನ ಶ್ರೇಣಿ:-** ಪ್ರೌಢ ಶಾಲಾ ಸಹಾಯಕ ಶಿಕ್ಷಕರು ಗ್ರೇಡ್-2 ಹಾಗೂ ದೈಹಿಕ ಶಿಕ್ಷಣ ಶಿಕ್ಷಕ ಗ್ರೇಡ್-1 ವೃಂದದ ಹುದ್ದೆಗಳಿಗೆ: ರೂ.8825 – 225-9500-250-10500-300-12300-350-14400-400-16000.

11. **ವಯೋಮಿತಿ**

ಅಭ್ಯರ್ಥಿಗಳು ಈ ನೇಮಕಾತಿ ಅಧಿಸೂಚನೆ ದಿನಾಂಕದಂದು ಮುಂದೆ ತಿಳಿಸಿರುವ ಕನಿಷ್ಠ ಮತ್ತು ಗರಿಷ್ಠ ವಯೋಮಿತಿಯೊಳಗಿರಬೇಕು.

ಕನಿಷ್ಠ: 20 ವರ್ಷಗಳು ತುಂಬಿರಬೇಕು.

ಗರಿಷ್ಠ:

ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡ ಅಥವಾ ಹಿಂದುಳಿದ ಪ್ರವರ್ಗ-1ಕ್ಕೆ ಸೇರಿದ ಅಭ್ಯರ್ಥಿಗಳು	: **45 ವರ್ಷಗಳನ್ನು** ತಲುಪಿರಬಾರದು.
ಪ್ರವರ್ಗ 2(ಎ), 2(ಬಿ), 3(ಎ) ಮತ್ತು 3(ಬಿ) ಗಳಿಗೆ ಸೇರಿದ ಅಭ್ಯರ್ಥಿಗಳು	: **43 ವರ್ಷಗಳನ್ನು** ತಲುಪಿರಬಾರದು.
ಇತರೆ ಅಭ್ಯರ್ಥಿಗಳು [ಸಾಮಾನ್ಯ ಅಭ್ಯರ್ಥಿಗಳು]	: **40 ವರ್ಷಗಳನ್ನು** ತಲುಪಿರಬಾರದು.

ಸರ್ಕಾರಿ ಪ್ರೌಢಶಾಲೆಗಳಲ್ಲಿ ಕಾರ್ಯನಿರ್ವಹಿಸಿದ /ನಿರ್ವಹಿಸುತ್ತಿರುವ "ಅರೆಕಾಲಿಕ" ಮತ್ತು ಗೌರವ ಶಿಕ್ಷಕರುಗಳಿಗೆ ಗರಿಷ್ಠ ವಯೋಮಿತಿಯನ್ನು ಅವರುಗಳು "**ಅರೆಕಾಲಿಕ/ಗೌರವ ಶಿಕ್ಷಕರ** ಸೇವೆ ಸಲ್ಲಿಸಿದ ವರ್ಷಗಳಷ್ಟು (ಗರಿಷ್ಠ 10 ವರ್ಷಗಳ ಮಿತಿಗೆ ಒಳಪಟ್ಟು)ಸಡಿಲಿಕೆ ಇರುತ್ತದೆ.

12. **ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆ:-ಆಯ್ಕೆ ಬಯಸುವ ಪ್ರತಿ ಅಭ್ಯರ್ಥಿಯು ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಪ್ರಥಮ ಹಾಗೂ ದ್ವಿತೀಯ ಪತ್ರಿಕೆಯ ಪರೀಕ್ಷೆಗಳಿಗೆ ಕಡ್ಡಾಯವಾಗಿ ಹಾಜರಾಗಬೇಕು.**

13. **ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆ ಬಗ್ಗೆ ವಿವರಗಳು:-**

i) **ಪರೀಕ್ಷೆ ಹೆಸರು:** ಪ್ರೌಢಶಾಲಾ ಸಹಾಯಕ ಶಿಕ್ಷಕ ಗ್ರೇಡ್-2 ವೃಂದದ ಮತ್ತು ದೈಹಿಕ ಶಿಕ್ಷಣ ಶಿಕ್ಷಕ ಗ್ರೇಡ್-1 ವೃಂದದ ಶಿಕ್ಷಕರ ಹುದ್ದೆಗಳಿಗೆ ನೇರ ನೇಮಕಾತಿಗಾಗಿ ನಡೆಸುವ ವಿಭಾಗೀಯ ಮಟ್ಟದ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆ.

ii) **ಪರೀಕ್ಷೆ ನಡೆಸುವ ಪ್ರಾಧಿಕಾರಿ:** ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯನ್ನು ಬೆಂಗಳೂರು ವಿಭಾಗೀಯ ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ಇವರು ವಿಭಾಗ ಮಟ್ಟದಲ್ಲಿ ನಡೆಸುವರು. ವಿಭಾಗದ ವ್ಯಾಪ್ತಿಯಲ್ಲಿ ಬರುವ ಶೈಕ್ಷಣಿಕ ಜಿಲ್ಲೆಗಳು **(ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ಚಿತ್ರದುರ್ಗ, ತುಮಕೂರು, ಚಿಕ್ಕಬಳ್ಳಾಪುರ, ಮಧುಗಿರಿ, ದಾವಣಗೆರೆ ಮತ್ತು ಶಿವಮೊಗ್ಗ)** ಪರೀಕ್ಷಾ ಕೇಂದ್ರಗಳಾಗಿರುತ್ತವೆ..

iii) **ಪರೀಕ್ಷೆಯ ದಿನಾಂಕ :** 23.06.2012 ರಿಂದ 26.06.2012. ರವರೆಗೆ

iv) ಪರೀಕ್ಷೆಯ ಅವಧಿ ಮತ್ತು ಸಮಯ :

ಪರೀಕ್ಷಾ ವಿಷಯ	**ದಿನಾಂಕ**	**ಸಮಯ**
ಸಾಮಾನ್ಯ ಪತ್ರಿಕೆ -1	23-06-2012	ಬೆಳಗ್ಗೆ 10 ರಿಂದ 12 ಗಂಟೆವರೆಗೆ
ಕಲಾ ಶಿಕ್ಷಕರು ಪತ್ರಿಕೆ-2	23-06-2012	ಮಧ್ಯಾಹ್ನ 2 ರಿಂದ 4 ಗಂಟೆವರೆಗೆ
ದೈ.ಶಿ. ಗ್ರೇಡ್-1 ಪತ್ರಿಕೆ-2	24-06-2012	ಬೆಳಗ್ಗೆ 10 ರಿಂದ 12 ಗಂಟೆವರೆಗೆ
ಭೌತವಿಜ್ಞಾನ/ಜೀವವಿಜ್ಞಾನ ಪತ್ರಿಕೆ-2	24-06-2012	ಮಧ್ಯಾಹ್ನ 2 ರಿಂದ 4 ಗಂಟೆವರೆಗೆ
ಕನ್ನಡ ಭಾಷಾ ಶಿಕ್ಷಕರು ಪತ್ರಿಕೆ-2	25-06-2012	ಬೆಳಗ್ಗೆ 10 ರಿಂದ 12 ಗಂಟೆವರೆಗೆ
ಆಂಗ್ಲ ಭಾಷಾ ಶಿಕ್ಷಕರು ಪತ್ರಿಕೆ-2	25-06-2012	ಮಧ್ಯಾಹ್ನ 2 ರಿಂದ 4 ಗಂಟೆವರೆ
ಹಿಂದಿ ಭಾಷಾ ಶಿಕ್ಷಕರು ಪತ್ರಿಕೆ-2	26-06-2012	ಬೆಳಗ್ಗೆ 10 ರಿಂದ 12 ಗಂಟೆವರೆಗೆ
ಸಂಸ್ಕೃತ/ಉರ್ದು/ತಮಿಳು / ಪತ್ರಿಕೆ-2	26-06-2012	ಮಧ್ಯಾಹ್ನ 2 ರಿಂದ 4 ಗಂಟೆವರೆಗೆ

v) ಪರೀಕ್ಷಾ ಮಾಧ್ಯಮ: ಕನ್ನಡ ಮತ್ತು ಆಂಗ್ಲ ಮಾಧ್ಯಮ

vi) ಪ್ರಶ್ನೆಪತ್ರಿಕೆ, ಅಂಕಗಳು ಮತ್ತು ವಿಷಯ: ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಕೆಳಕಂಡ ವಿಷಯಗಳನ್ನೊಳಗೊಂಡ ಪರೀಕ್ಷಾ ವಿಷಯಗಳು ಎರಡು ಪ್ರಶ್ನೆ ಪತ್ರಿಕೆಗಳನ್ನು ಹೊಂದಿರುತ್ತದೆ. ಒಂದನೇ ಪ್ರಶ್ನೆ ಪತ್ರಿಕೆಯು (ಪತ್ರಿಕೆ-1) 100 ಅಂಕಗಳನ್ನು ಒಳಗೊಂಡಿದ್ದು, ಎಲ್ಲಾ ವಿಷಯದ ಹುದ್ದೆಗಳಿಗೂ ಕಡ್ಡಾಯವಾಗಿರುತ್ತದೆ.

ಕ್ರ.ಸಂ.	ಹುದ್ದೆಯ ಹೆಸರು	ವಿಷಯ	ಅಂಕಗಳು
1	ಪ್ರೌಢಶಾಲಾ ಸಹಾಯಕ ಶಿಕ್ಷಕ ಗ್ರೇಡ್-2 (ಫಿಸಿಕಲ್ ಸೈನ್ಸ್, ಬಯಾಲಜಿಕಲ್ ಸೈನ್ಸ್, ಕಲಾ ಹಾಗೂ ಕನ್ನಡ, ಆಂಗ್ಲ, ಹಿಂದಿ, ಸಂಸ್ಕೃತ, ತಮಿಳು ಮತ್ತು ಉರ್ದು ಭಾಷಾ ಶಿಕ್ಷಕರ ಹುದ್ದೆಗಳು), ದೈಹಿಕ ಶಿಕ್ಷಣ ಶಿಕ್ಷಕ ಗ್ರೇಡ್-1	ಒಂದನೇ ಪ್ರಶ್ನೆ ಪತ್ರಿಕೆ ಸಾಮಾನ್ಯ ಜ್ಞಾನ ಶೈಕ್ಷಣಿಕ ಮನೋವಿಜ್ಞಾನ ಮೆಂಟಲ್ ಎಬಿಲಿಟಿ	100
2	ಕಲಾ ಶಿಕ್ಷಕರು	ಎರಡನೇ ಪ್ರಶ್ನೆ ಪತ್ರಿಕೆ ಇತಿಹಾಸ, ಭೂಗೋಳ ಶಾಸ್ತ್ರ, ಅರ್ಥಶಾಸ್ತ್ರ ಪೌರನೀತಿ	100
3	ಭಾಷಾ ಶಿಕ್ಷಕರ ಹುದ್ದೆಗಳಿಗೆ	ಕನ್ನಡ / ಇಂಗ್ಲೀಷ್/ ಹಿಂದಿ/ ಸಂಸ್ಕೃತ/ಉರ್ದು/ತಮಿಳು	100
4	ಭೌತ ವಿಜ್ಞಾನ ಶಿಕ್ಷಕರು (ಫಿಸಿಕಲ್ ಸೈನ್ಸ್)	ಭೌತ ಶಾಸ್ತ್ರ ಮತ್ತು ಗಣಿತ ಶಾಸ್ತ್ರ	100
5	ಜೀವ ವಿಜ್ಞಾನ ಶಿಕ್ಷಕರು (ಬಯಾಲಾಜಿಕಲ್ ಸೈನ್ಸ್)	ರಸಾಯನ ಶಾಸ್ತ್ರ, ಪ್ರಾಣಿ ಶಾಸ್ತ್ರ, ಸಸ್ಯಶಾಸ್ತ್ರ	100
6	ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1	ದೈಹಿಕ ಶಿಕ್ಷಣದ ಇತಿಹಾಸ, ತತ್ವಗಳು ಮತ್ತು ತತ್ವಜ್ಞಾನ, ದೈಹಿಕ ಶಿಕ್ಷಣದ ಆಡಳಿತ ಮತ್ತು ಸಂಘಟನೆ, ದೈಹಿಕ ಶಿಕ್ಷಣದ ಮನೋಜ್ಞಾನ ಸಾಮಾಗ್ರಿ ಮತ್ತು ಬೋಧನಾ ವಿಧಾನ, ಅಂಗರಚನಾಶಾಸ್ತ್ರ, ಅಂಗಕಾರ್ಯಶಾಸ್ತ್ರ ಮತ್ತು ಜೀವಶಾಸ್ತ್ರ, ಆರೋಗ್ಯ ಶಿಕ್ಷಣ, ಸುರಕ್ಷಣಾ ಶಿಕ್ಷಣ ಮತ್ತು ಅಂಗೆಲಸ ವ್ಯಾಯಮ, ಕ್ರೀಢಾಧಿಕಾರತ್ವ ಮತ್ತು ಕ್ರೀಡಾ ತರಬೇತಿ ತತ್ವಗಳು	100

ಪ್ರಶ್ನೆಗಳ ವ್ಯಾಪ್ತಿ ಹಾಗೂ ಸ್ವರೂಪ: 1) ಪ್ರಶ್ನೆಗಳು ನಿಗದಿಪಡಿಸಲಾಗಿರುವ ಪಠ್ಯವಸ್ತುವಿನ ವ್ಯಾಪ್ತಿಯಲ್ಲಿರುತ್ತದೆ.

2) ಪ್ರಶ್ನೆಗಳು ವಸ್ತುನಿಷ್ಠವಾಗಿದ್ದು ಪ್ರತಿ ಪ್ರಶ್ನೆಗೆ ಒಂದು ಅಂಕ ನಿಗದಿಪಡಿಸಿದೆ.

3) ಪ್ರತಿ ಪ್ರಶ್ನೆ 4 ಉತ್ತರಗಳನ್ನು ಹೊಂದಿದ್ದು ಇವುಗಳಲ್ಲಿ ಒಂದು ಸರಿ ಉತ್ತರವಾಗಿರುತ್ತದೆ.

4) ಉತ್ತರಗಳನ್ನು " ಓ.ಎಂ.ಆರ್." ಶೀಟಿನಲ್ಲಿ ಗುರ್ತಿಸುವುದು.

ಭಾಷಾ ವಿಷಯ ಹೊರತುಪಡಿಸಿ ಇತರೆ ಎಲ್ಲಾ ವಿಷಯಗಳ ಪ್ರಶ್ನೆ ಪತ್ರಿಕೆಗಳು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿರುತ್ತವೆ. ಭಾಷಾ ವಿಷಯಕ್ಕೆ ಸಂಬಂಧಿಸಿದಂತೆ ಆಯಾ ಭಾಷೆಯಲ್ಲಿರುತ್ತವೆ.

14. ಆಯ್ಕೆ ವಿಧಾನ:

ಅಭ್ಯರ್ಥಿಗಳನ್ನು **"ದಿ ಕರ್ನಾಟಕ ಎಜುಕೇಷನ್ ಡಿಪಾರ್ಟ್‌ಮೆಂಟ್ ಸರ್ವೀಸಸ್ (ಡಿಪಾರ್ಟ್‌ಮೆಂಟ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್) (ರಿಕ್ರೂಟ್‌ಮೆಂಟ್) (ಅಮೆಂಡ್‌ಮೆಂಟ್) ರೂಲ್ಸ್ 2002"** ನಿಯಮಗಳ ಅನ್ವಯ ಮೆರಿಟ್ ಮತ್ತು ಕರ್ನಾಟಕ ಸರ್ಕಾರದ ಪ್ರಚಲಿತ ಮೀಸಲಾತಿ ನಿಯಮಗಳ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.

15. ಅರ್ಹತೆ ನಿರ್ಧರಿಸುವುದು:-

ಅ) ಪ್ರೌಢಶಾಲಾ ಸಹಾಯಕ ಶಿಕ್ಷಕ ಗ್ರೇಡ್-2 ವೃಂದ (ಕಲಾ, ಭೌತ ವಿಜ್ಞಾನ, ಜೀವ ವಿಜ್ಞಾನ ಮತ್ತು ಭಾಷೆಗಳು) ಶಿಕ್ಷಕರ ವಿವಿಧ ಮಾಧ್ಯಮದ ಹುದ್ದೆಗಳಿಗೆ:-

ಅಭ್ಯರ್ಥಿಯು ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಡೆದ ಒಟ್ಟು ಅಂಕಗಳ ಶೇಕಡ 70%, ಮತ್ತು ಬಿ.ಎ/ಬಿ.ಎಸ್ಸಿ. ಪದವಿ ಪರೀಕ್ಷೆಯ ಒಟ್ಟು ಅಂಕಗಳ ಶೇಕಡ 20%, ಹಾಗೂ ಬಿ.ಎಡ್. ಪದವಿ ಪರೀಕ್ಷೆಯಲ್ಲಿ ಪಡೆದಿರುವ ಒಟ್ಟು ಅಂಕಗಳ ಶೇಕಡ 10%, ರಷ್ಟು, ಈ ಮೂರು ಒಟ್ಟು ಅಂಕಗಳ ಮೇಲೆ ಮೆರಿಟ್ ಪಟ್ಟಿ ತಯಾರಿಸಿ, ಪ್ರಚಲಿತ ಮೀಸಲಾತಿ ನಿಯಮಗಳ ಅನ್ವಯ ಆಯ್ಕೆ ಮಾಡಲಾಗುವುದು.

ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ 70% ಗೆ ಅಂಕಗಳನ್ನು ಲೆಕ್ಕಾಚಾರ ಮಾಡುವಾಗ ಪ್ರಥಮ ಪತ್ರಿಕೆ ಹಾಗೂ ದ್ವಿತಿಯ ಪತ್ರಿಕೆಯಲ್ಲಿ ಪಡೆದ ಅಂಕಗಳನ್ನು ಪ್ರತ್ಯೇಕವಾಗಿ ಲೆಕ್ಕಾಚಾರ ಮಾಡಿ ಶೇಕಡವಾರು ಅಂಕಗಳನ್ನು ನಿಗಧಿಪಡಿಸಲಾಗುವುದು. ಈ ರೀತಿ ನಿಗಧಿಪಡಿಸಲಾದ ಎರಡು ಪತ್ರಿಕೆಗಳ ಶೇಕಡವಾರು ಅಂಕಗಳನ್ನು ಕೂಡಿಸಿ ಅವುಗಳ ಸರಾಸರಿ ಅಂಕಗಳನ್ನು ತೆಗೆದುಕೊಳ್ಳಲಾಗುವುದು.

ಮೇಲ್ಕಂಡಂತೆ ಮೆರಿಟ್ ಲಿಸ್ಟ್ ತಯಾರಿಸುವಾಗ ಅಭ್ಯರ್ಥಿಯು **ಸರ್ಕಾರಿ ಪ್ರೌಢ ಶಾಲೆಗಳಲ್ಲಿ** ಸಂಬಂಧಿಸಿದ ವಿಷಯದಲ್ಲಿ **"ಅರೆಕಾಲಿಕ ಅಥವಾ ಗೌರವ"** ಶಿಕ್ಷಕರಾಗಿ, ಅಥವಾ ಭಾರತೀಯ ಜನಗಣತಿ ಸಂಸ್ಥೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಸಕ್ಷಮ ಪ್ರಾಧಿಕಾರದಿಂದ ನೇಮಕಗೊಂಡು ಹಾಲಿ ಸೇವೆ ಸಲ್ಲಿಸುತ್ತಿದ್ದಲ್ಲಿ / ಸೇವೆ ಸಲ್ಲಿಸಿದ್ದಲ್ಲಿ ಹಾಗೆ ಸೇವೆ ಸಲ್ಲಿಸಿದ ಪೂರ್ಣಗೊಂಡ ಪ್ರತಿ ಒಂದು ವರ್ಷದ ಸೇವೆಗೆ ಶೇಕಡ 2% ರಷ್ಟು ಕೃಪಾಂಕಗಳನ್ನು ನೇಮಕಾತಿ ನಿಯಮಗಳ ಪ್ರಕಾರ ಅರ್ಹತೆ ಇದ್ದಲ್ಲಿ ಮಾತ್ರ ಮೇಲಿನ ಕಂಡಿಕೆಯಲ್ಲಿ ವಿವರಿಸಿರುವ ಒಟ್ಟು ಅಂಕಗಳಿಗೆ ಸೇರಿಸಲಾಗುವುದು.

ವಿವರಣೆ:- ಅ) ಮೊದಲಿಗೆ, ಬಿ.ಎ/ಬಿ.ಎಸ್ಸಿ. ಪದವಿ ಪರೀಕ್ಷೆಯ ಎಲ್ಲಾ ವರ್ಷಗಳಲ್ಲಿ, ಎಲ್ಲಾ ವಿಷಯಗಳಲ್ಲಿ ಪಡೆದಿರುವ ಒಟ್ಟು ಅಂಕಗಳನ್ನು ಶೇಕಡ 20%ಕ್ಕೆ ಲೆಕ್ಕ ಹಾಕಲಾಗುವುದು.

ಆ) ಬಿ.ಇಡಿ., ಪದವಿ ಪರೀಕ್ಷೆಯಲ್ಲಿ ಪಡೆದ ಒಟ್ಟು ಅಂಕಗಳನ್ನು ಶೇಕಡ 10%ಕ್ಕೆ ಲೆಕ್ಕ ಹಾಕಲಾಗುವುದು.

ಇ) ನಂತರ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪಡೆದ ಒಟ್ಟು ಅಂಕಗಳನ್ನು ಶೇಕಡ 70%ಕ್ಕೆ ಲೆಕ್ಕ ಹಾಕಲಾಗುವುದು.

ಈ) ಬಿ.ಎ/ಬಿ.ಎಸ್ಸಿ/ಬ್ಯಾಚುಲರ್ ಪದವಿ/ತತ್ಸಮಾನ ಪರೀಕ್ಷೆಯ ಶೇಕಡ 20%, ಬಿ.ಇಡಿ., ಪದವಿಯ/ಬಿ.ಪಿ.ಇಡಿ.,/ತತ್ಸಮಾನ ಪರೀಕ್ಷೆಯ ಶೇಕಡ 10%, ಮತ್ತು ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಶೇಕಡ 70% ಅಂಕಗಳನ್ನು ಸೇರಿಸಿ ಒಟ್ಟು ಶೇಕಡ 100 ಅಂಕಕ್ಕೆ ಪಡೆದ ಅಂಕಗಳನ್ನು ಕಂಡುಕೊಳ್ಳಲಾಗುವುದು. ಮತ್ತು ಮೆರಿಟಿಗೆ ಪರಿಗಣಿಸಲಾಗುವುದು.

ಉ) ಮೇಲಿನ ಒಟ್ಟು ಶೇಕಡ ಅಂಕಗಳಿಗೆ (ಪ್ಯಾರ "ಈ"), ಅರೆಕಾಲಿಕ ಅಥವಾ ಗೌರವ ಶಿಕ್ಷಕ/ಭಾರತೀಯ ಜನಗಣತಿಯಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸಿದಂತಹ ಅಭ್ಯರ್ಥಿಗಳಿಗೆ ಪ್ರಸ್ತುತ ನೇಮಕಾತಿ ನಿಯಮಗಳ ಪ್ರಕಾರ ಅರ್ಹತೆ ಇದ್ದಲ್ಲಿ ಮಾತ್ರ ಪ್ರತಿ ಪೂರ್ಣಗೊಂಡ ಒಂದು ವರ್ಷದ ಸೇವೆಗೆ ಶೇಕಡ 2% ರಂತೆ ಕೃಪಾಂಕಗಳನ್ನು ಸೇರಿಸಲಾಗುವುದು.

16. ಮೀಸಲಾತಿ ಅವಕಾಶಗಳು:-

ಅ) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 08 ಸಹಿಮ 95 ದಿನಾಂಕ 20-06-1995 ಮತ್ತು ನಂತರ ಹಾಲಿ ಜಾರಿಯಲ್ಲಿರುವ ಮೀಸಲಾತಿ ನಿಯಮಗಳ ಪ್ರಕಾರ ಲಭ್ಯವಿರುವ ರಿಕ್ತ ಸ್ಥಾನಗಳನ್ನು ಈ ಕೆಳಕಂಡ ಪ್ರಮಾಣದಲ್ಲಿ ನಿಯಮಾನುಸಾರ ಮೀಸಲಿರಿಸಲಾಗಿದೆ.

ಸಾಮಾನ್ಯ ಅರ್ಹತೆ	ಶೇ. 50
ಪರಿಶಿಷ್ಟ ಪಂಗಡ	ಶೇ. 03
ಪರಿಶಿಷ್ಟ ಜಾತಿ	ಶೇ. 15
ಪ್ರವರ್ಗ-1	ಶೇ. 04
ಪ್ರವರ್ಗ-2ಎ	ಶೇ. 15
ಪ್ರವರ್ಗ-2ಬಿ	ಶೇ. 04
ಪ್ರವರ್ಗ-3ಎ	ಶೇ. 04
ಪ್ರವರ್ಗ-3ಬಿ	ಶೇ. 05
ಒಟ್ಟು	ಶೇ. 100

ಮೀಸಲಾತಿ ಸೌಲಭ್ಯ ಪಡೆಯಲು ಅಭ್ಯರ್ಥಿಗಳು ಸಲ್ಲಿಸಬೇಕಾದ ಪ್ರಮಾಣ ಪತ್ರಗಳು:

1	ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು	ನಮೂನೆ- ಡಿ (ನಿಯಮ 3ಎ(2)(3), ಸರಕಾರದ ಆದೇಶ ಸಂಖ್ಯೆ: ಎಸ್‌ಡಬ್ಲೂಡಿ 132 ಎಸ್ಎಡಿ 97 ದಿನಾಂಕ 08-02-2000
2	ಹಿಂದುಳಿದ ಪ್ರವರ್ಗ-1 ಕ್ಕೆ ಸೇರಿದ ಅಭ್ಯರ್ಥಿಗಳು	ನಮೂನೆ-ಇ (ನಿಯಮ 3ಎ(2)(3), ಸರಕಾರದ ಆದೇಶ ಸಂಖ್ಯೆ: ಎಸ್‌ಡಬ್ಲೂಡಿ 132 ಎಸ್ಎಡಿ 97 ದಿನಾಂಕ 08-02-2000
3	ಹಿಂದುಳಿದ ಪ್ರವರ್ಗ 2ಎ, 2ಬಿ, 3ಎ, ಮತ್ತು 3ಬಿ ಗೆ ಸೇರಿದ ಅಭ್ಯರ್ಥಿಗಳು	ನಮೂನೆ-ಎಫ್ (ನಿಯಮ 3ಎ(2)(3), ಸರಕಾರದ ಆದೇಶ ಸಂಖ್ಯೆ: ಎಸ್‌ಡಬ್ಲೂಡಿ 126 ಎಸ್ಎಡಿ 97 ದಿನಾಂಕ 13-02-2003

ಅಭ್ಯರ್ಥಿಗಳು ಮೇಲೆ ನಿಗದಿಪಡಿಸಿರುವ ನಿಗದಿತ ನಮೂನೆಗಳಲ್ಲಿಯೇ ಸಂಬಂಧಿಸಿದ ವ್ಯಾಪ್ತಿಯ ತಹಸೀಲ್ದಾರರ ದರ್ಜೆಗಿಂತ ಕಡಿಮೆ ಇಲ್ಲದ ರೆವಿನ್ಯೂ ಪ್ರಾಧಿಕಾರಿಯಿಂದ ಪ್ರಮಾಣ ಪತ್ರವನ್ನು ಪಡೆದಿರಬೇಕು.

ಮೇಲ್ಕಂಡ ಮೀಸಲಾತಿ ಪ್ರಮಾಣ ಪತ್ರಗಳು ಚಾಲ್ತಿಯಲ್ಲಿರುವ ನಿಯಮಗಳ ಪ್ರಕಾರವಿರಬೇಕು ಮತ್ತು ಅವಧಿ ಮೀರಿದ ಮೀಸಲಾತಿ ಪ್ರಮಾಣ ಪತ್ರಗಳನ್ನು ತಿರಸ್ಕರಿಸಲಾಗುವುದು.

ಆ) ಮೇಲೆ ವಿವರಿಸಿರುವ ಪ್ರಕಾರ ಸಾಮಾನ್ಯ ಅರ್ಹತೆ ಸೇರಿದಂತೆ ಪ್ರತಿ ಮೀಸಲಾತಿ ಪ್ರವರ್ಗಗಳಿಗೆ ಈ ಕೆಳಕಂಡ ಆದೇಶಗಳ ಪ್ರಕಾರ **"ಸಮತಳ ಮೀಸಲಾತಿ"** (Horizontal reservation) ಅನ್ವಯ ಹುದ್ದೆಗಳನ್ನು ವರ್ಗೀಕರಿಸಲಾಗಿದೆ.

1	ಮಾಜಿ ಸೈನಿಕರಿಗೆ	ಶೇಕಡ 10	ಕರ್ನಾಟಕ ಸಿವಿಲ್ ಸರ್ವೀಸಸ್ (ಜನರಲ್ ರೆಕ್ರೂಟ್‌ಮೆಂಟ್) ರೂಲ್ಸ್ 1977ರ ನಿಯಮ 9(1)ರ ಅನ್ವಯ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 97 ಸೇನೆನಿ 2002 ದಿನಾಂಕ 22-11-2002.ಮತ್ತು ಸರ್ಕಾರದ ಆದೇಶ ಸಂಖ್ಯೆ ಸಿಆಸುಇ53/ಸೇನೆನಿ/2007 ದಿನಾಂಕ:-04-01-2008
2	ಅಂಗವಿಕಲರಿಗೆ	ಶೇಕಡ 5	ಕರ್ನಾಟಕ ಸಿವಿಲ್ ಸರ್ವೀಸಸ್ (ಜನರಲ್ ರೆಕ್ರೂಟ್‌ಮೆಂಟ್) ರೂಲ್ಸ್ 1977 ನಿಯಮ 9(1)(ಎ)ರ ಅನ್ವಯ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 97 ಸೇನೆನಿ 2002 ದಿನಾಂಕ 22-11-2002. ಮತ್ತು ಸರ್ಕಾರದ ಆದೇಶ ಸಂಖ್ಯೆ ಸಿಆಸುಇ53/ಸೇನೆನಿ/2007 ದಿನಾಂಕ:-04-01-2008
3	ಮಹಿಳಾ ಅಭ್ಯರ್ಥಿಗಳಿಗೆ	ಶೇಕಡ 30	ಕರ್ನಾಟಕ ಸಿವಿಲ್ ಸರ್ವೀಸಸ್ (ಜನರಲ್ ರೆಕ್ರೂಟ್‌ಮೆಂಟ್) ರೂಲ್ಸ್ 1977ರ ನಿಯಮ 9(1)(ಬಿ) ಮತ್ತು ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 97 ಸೇನೆನಿ 2002 ದಿನಾಂಕ 22-11-2002. ಹಾಗೂ ಸರ್ಕಾರದ ಸುತ್ತೋಲೆ ಸಂಖ್ಯೆ ಸಿಅಸುಇ 16/ಸೇನೇನಿ 2008 ದಿನಾಂಕ 01-09-2008 ಮತ್ತು ಸರ್ಕಾರದ ಆದೇಶ ಸಂಖ್ಯೆ ಸಿಆಸುಇ53/ಸೇನೆನಿ/2007ದಿನಾಂಕ:-04-01-2008
4	ಯೋಜನೆಗಳಿಂದ ನಿರಾಶ್ರಿತರಾದವರ ಕುಟುಂಬದವರ ಅಭ್ಯರ್ಥಿಗಳಿಗಾಗಿ	ಶೇಕಡ 5	ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 23 ಎಸ್‌ಆರ್‌ಆರ್ 99 ದಿನಾಂಕ 23-11-2000 ಮತ್ತು ಸರ್ಕಾರದ ಆದೇಶದ ಸಂಖ್ಯೆ: ಸಿಆಸುಇ 97 ಸೇನೆನಿ 2002 ದಿನಾಂಕ 22-11-2002 ಮತ್ತು ಸರ್ಕಾರದ ಆದೇಶ ಸಂಖ್ಯೆ ಸಿಆಸುಇ53/ಸೇನೆನಿ/2007 ದಿನಾಂಕ:-04-01-2008
5	ಗ್ರಾಮೀಣ ಅಭ್ಯರ್ಥಿಗಳಿಗೆ	ಶೇಕಡ 25	2000ದ ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳಿಗಾಗಿ (ರಾಜ್ಯ ಸಿವಿಲ್ ಸೇವೆಗಳಲ್ಲಿ ನೇಮಕಾತಿ ಅಥವಾ ಹುದ್ದೆಗಳ ಮೀಸಲಾತಿ ವಿಧೇಯಕ) ಹಾಗೂ ಸರಕಾರದ ಆದೇಶ ಸಂಖ್ಯೆ: ಸಿಆಸುಇ 97 ಸೇನೆನಿ 2002 ದಿನಾಂಕ 22-11-2002 ಮತ್ತು ಸರ್ಕಾರದ ಆದೇಶ ಸಂಖ್ಯೆ ಸಿಆಸುಇ53/ಸೇನೆನಿ/2007 ದಿನಾಂಕ:-04-01-2008
6	ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗಾಗಿ	ಶೇಕಡ 5	ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 71 ಎಸ್‌ಆರ್‌ಆರ್ 2001 ದಿನಾಂಕ 24-10-2002 ಮತ್ತು ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 97 ಸೇನೆನಿ 2002 ದಿನಾಂಕ 22-11-2002 ಮತ್ತು ಸರ್ಕಾರದ ಆದೇಶ ಸಂಖ್ಯೆ ಸಿಆಸುಇ53/ಸೇನೆನಿ/2007 ದಿನಾಂಕ:-04-01-2008

17. ಮಾಜಿ ಸೈನಿಕ ಅಭ್ಯರ್ಥಿಗಳು :

"ಮಾಜಿ ಸೈನಿಕ"ರಿಗಾಗಿ ಮೀಸಲಿಟ್ಟ ಖಾಲಿ ಹುದ್ದೆಗಳನ್ನು ಮಿಲಿಟರಿ ಸೇವೆಯಿಂದ ಬಿಡುಗಡೆ ಹೊಂದಿದ ವ್ಯಕ್ತಿಗಳಿಂದ ಮತ್ತು ಭಾರತ ದೇಶದ ಒಕ್ಕೂಟದ ಸಶಸ್ತ್ರ ದಳದಲ್ಲಿ ಸೇವೆ ಸಲ್ಲಿಸುವಾಗ ಕೊಲ್ಲಲ್ಪಟ್ಟ ಅಥವಾ ಶಾಶ್ವತವಾಗಿ ಅಂಗಹೀನರಾದ ವ್ಯಕ್ತಿಗಳ ಕುಟುಂಬದ ಸದಸ್ಯರಿಂದ ನೇಮಕಾತಿ ಮೂಲಕ ತುಂಬಲಾಗುತ್ತದೆ.

ಮಾಜಿ ಸೈನಿಕರ ಗುಂಪಿನಲ್ಲಿ ಕೆಳಕಂಡವರು ಆಯ್ಕೆಗೆ ಅರ್ಹರು:-

1) ಮಾಜಿ ಸೈನಿಕ ಎಂದರೆ ಸಶಸ್ತ್ರ ದಳಗಳಾದ ನಿಯಮಿತ ಭೂದಳ, ನೌಕಾದಳ ಮತ್ತು ವಾಯುದಳಗಳಲ್ಲಿ ಯಾವುದೇ ಶ್ರೇಣಿಯಲ್ಲಿ (ಯೋಧ ಅಥವಾ ಅಯೋಧನಾಗಿ) ಸೇವೆ ಸಲ್ಲಿಸಿದ ವ್ಯಕ್ತಿ. ಅಂದರೆ:-

(ಅ) ಅಂತಹ ಸೇವೆಯಿಂದ ನಿವೃತ್ತಿ ಹೊಂದಿದ ನಂತರ ನಿವೃತ್ತಿ ವೇತನ ಪಡೆಯುತ್ತಿರುವ ವ್ಯಕ್ತಿ.

(ಆ) ವೈದ್ಯಕೀಯ ಕಾರಣಗಳಿಂದ ಮಿಲಿಟರಿ ಸೇವೆಗೆ ಅನರ್ಹನಾದವನೆಂದೋ ಅಥವಾ ವ್ಯಕ್ತಿಯ ಹಿಡಿತಕ್ಕೂ ಮೀರಿದ ಪರಿಸ್ಥಿತಿಗಳಿಂದ ಮತ್ತು ವೈದ್ಯಕೀಯ ಅಥವಾ ಅಸಾಮರ್ಥ್ಯದ ಪಿಂಚಣಿ ಪಡೆದು ಸೇವೆಯಿಂದ ಬಿಡುಗಡೆಯಾದ ವ್ಯಕ್ತಿ.

ಅಥವಾ

(ಇ) ಸ್ವಂತ ಕೋರಿಕೆ ಹೊರತುಪಡಿಸಿ ಸಿಬ್ಬಂದಿ ಕಡಿತದ ಪರಿಣಾಮದಿಂದ ಅಂತಹ ಸೇವೆಯಿಂದ ಬಿಡುಗಡೆ ಹೊಂದಿದ ವ್ಯಕ್ತಿ.

ಅಥವಾ

(ಈ) ತನ್ನ ಸ್ವಂತ ಕೋರಿಕೆಯ ಮೇರೆಗೆ ಅಥವಾ ದುರ್ನಡತೆ ಅಥವಾ ಅಸಾಮರ್ಥ್ಯದ ಕಾರಣದಿಂದಾಗಿ ತೆಗೆದು ಹಾಕಿರುವ ಅಥವಾ ಕರ್ತವ್ಯದಿಂದ ವಜಾ ಮಾಡಿದ ವ್ಯಕ್ತಿಗಳನ್ನು ಹೊರತುಪಡಿಸಿ, ನಿರ್ದಿಷ್ಟ ಅವಧಿಯನ್ನು ಪೂರೈಸಿದ ತರುವಾಯ ಬಿಡುಗಡೆ ಹೊಂದಿದ ವ್ಯಕ್ತಿ ಮತ್ತು ಗ್ರಾಚ್ಯುಟಿ ಪಡೆಯುತ್ತಿರುವ ವ್ಯಕ್ತಿ.

2) ಮಾಜಿ ಸೈನಿಕ ಅವಲಂಬಿತರ ಗುಂಪಿನಲ್ಲಿ ಆಯ್ಕೆ ಬಯಸುವ ಅಭ್ಯರ್ಥಿಗಳು ಅಂದರೆ:-

ಕೇಂದ್ರ ಸಶಸ್ತ್ರ ದಳದಲ್ಲಿ ಸೇವೆ ಸಲ್ಲಿಸುವಾಗ ಕೊಲ್ಲಲ್ಪಟ್ಟ ಅಥವಾ ಶಾಶ್ವತವಾಗಿ ದೈಹಿಕ ವಿಕಲತೆ ಹೊಂದಿದ ವ್ಯಕ್ತಿಗಳ ಕುಟುಂಬದವರು. **(ಸಂಬಂಧಾನುಸಾರ ಹೆಂಡತಿ ಅಥವಾ ಗಂಡ ಮತ್ತು ಮಕ್ಕಳು ಮತ್ತು ಮಲ ಮಕ್ಕಳು ಮಾಜಿ ಸೈನಿಕರ ಅವಲಂಬಿತರಡಿಯಲ್ಲಿ ಮೀಸಲಾತಿಗೆ ಅರ್ಹರಾಗಿರುತ್ತಾರೆ. ಆದರೆ ಅಂತಹವರಿಗೆ ವಯೋಮಿತಿ ಸಡಿಲಿಕೆ ಇಲ್ಲ)**

3) ಮಾಜಿ ಸೈನಿಕ ಗುಂಪಿನಲ್ಲಿ ಆಯ್ಕೆ ಹೊಂದಲು ಈ ಕೆಳಕಂಡವರು ಅರ್ಹರಲ್ಲ:

ಅ) ಈ ಸೌಲಭ್ಯಕ್ಕೆ ಡಿಫೆನ್ಸ್ ಸೆಕ್ಯುರಿಟಿ ಕೋರ್ಸ್, ಜನರಲ್ ರಿಸರ್ವ್ ಇಂಜಿನಿಯರಿಂಗ್ ಕೋರ್ಸ್ ಲೋಕ ಸಹಾಯಕ ಸೇವೆ ಮತ್ತು ಪ್ಯಾರಾ ಮಿಲಿಟರಿ ದಳದಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿ ಅರ್ಹರಲ್ಲ.

ಆ) ಕೇಂದ್ರ ಸಶಸ್ತ್ರದಳದ ಸೇವೆಯಲ್ಲಿ ವ್ಯಕ್ತಿಗಳು ಸೇವೆಯಿಂದ ನಿವೃತ್ತಿ ಹೊಂದಿದ ನಂತರ ಮಾಜಿ ಸೈನಿಕರ ವರ್ಗದಡಿ ಬರುವ ವ್ಯಕ್ತಿಗೆ ಒಪ್ಪಂದವು ಪೂರ್ಣವಾಗಲು ಒಂದು ವರ್ಷಕ್ಕೆ ಮುನ್ನ ಪುನರ್ ಉದ್ಯೋಗಕ್ಕೆ ಅರ್ಜಿ ಹಾಕಿಕೊಳ್ಳಲು ಹಾಗೂ ಅವರಿಗೆ ಮಾಜಿ ಸೈನಿಕರಿಗೆ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಹೊಂದಲು ಅನುಮತಿ ನೀಡಲಾಗಿದೆ. ಆದರೆ, ಸಮವಸ್ತ್ರವನ್ನು ತ್ಯಜಿಸಲು ಅನುಮತಿ ನೀಡುವವರೆಗೆ ರಾಜ್ಯ ನಾಗರೀಕ ಸೇವೆ ಅಥವಾ ಹುದ್ದೆಗೆ ನೇಮಕ ಹೊಂದುವಂತಿಲ್ಲ.

ಸೂಚನೆ:

"ಮಾಜಿ ಸೈನಿಕ" "ಸಶಸ್ತ್ರ ದಳದ ಸದಸ್ಯ" ಮತ್ತು "ಕುಟುಂಬದ ಸದಸ್ಯ" ಎಂಬ ಪದಗಳ ಅರ್ಥವು ಕಾಲದಿಂದ ಕಾಲಕ್ಕೆ ತಿದ್ದುಪಡಿಯಾದ **ಕರ್ನಾಟಕ ರಾಜ್ಯ ಸರ್ಕಾರಿ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977** ರಲ್ಲಿ ವಿವರಿಸಿರುವಂತೆ ಇರುತ್ತದೆ.

18. ಅಂಗವಿಕಲ ಅಭ್ಯರ್ಥಿಗಳು :-

ಕರ್ನಾಟಕ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಎಂಎಂಡಬ್ಲೂ. 107. ಪಿಹೆಚ್‌ಪಿ 2003 ದಿನಾಂಕ: 11-07-2003 ಮತ್ತು ಡಿಪಿಎಆರ್ 50 ಎಸ್‌ಆರ್‌ಆರ್ 2000 ದಿನಾಂಕ: 03-09-2005ರ ಅನ್ವಯ ತಾನು **"ಅಂಗವಿಕಲರ ಗುಂಪಿಗೆ ಸೇರಿದವರೆಂದು ಹೇಳಿಕೊಳ್ಳುವ ಅಭ್ಯರ್ಥಿಯು"** ವೈದ್ಯಕೀಯ ಪ್ರಮಾಣ ಪತ್ರವನ್ನು ಹೊಂದಿರಬೇಕು. ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್.ಸಿಆಸುಇ 50 ಎಸ್.ಆರ್.ಆರ್. 2007, ದಿನಾಂಕ: 26-07-2011ರಲ್ಲಿ ನಿಗದಿಪಡಿಸಿರುವ ಅಂಗವಿಕಲ ಅಭ್ಯರ್ಥಿಗಳನ್ನು ಮಾತ್ರ ಪರಿಗಣಿಸಲಾಗುವುದು. ಸರ್ಕಾರಿ ಆದೇಶ ಸಂಖ್ಯೆ ಎಂ.ಎ.ಇ107 /ಪಿ.ಹೆಚ್.ಪಿ /2003 ದಿನಾಂಕ 11/7/2003 ರಲ್ಲಿ ನಿಗಧಿಪಡಿಸಿರುವ ನಮೂನೆಯಲ್ಲಿ ವೈದ್ಯಕೀಯ ಪ್ರಮಾಣ ಪತ್ರಗಳನ್ನು ಸಕ್ಷಮ ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪಡೆದಿರಬೇಕು. ಈ ಪ್ರಮಾಣ ಪತ್ರವನ್ನು ಅರ್ಜಿ ಸಲ್ಲಿಸುವ ದಿನಾಂಕಕ್ಕೆ ಅಭ್ಯರ್ಥಿಯು ಪಡೆದುಕೊಂಡಿರಬೇಕು.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 50 ಎಸ್.ಆರ್.ಆರ್ 2007 ದಿನಾಂಕ: 26.07.2011 ರಲ್ಲಿ ರಾಜ್ಯ ಸರ್ಕಾರವು ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಅಂಗವಿಕಲರು ನಿರ್ವಹಿಸಬಹುದಾದ ಹುದ್ದೆಗಳನ್ನು ಗುರುತಿಸಿದೆ. ಸದರಿ ಅಧಿಸೂಚನೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಅಂಗವಿಕಲ ಅಭ್ಯರ್ಥಿಗಳಿಗೆ ಗುರುತಿಸಿರುವ ಹುದ್ದೆಗಳ ಉದ್ಧೃತ ಭಾಗವನ್ನು ಈ ಕೆಳಗೆ ನೀಡಲಾಗಿದೆ.

Blind	Low Vision	Leprosy Cured	Hearing Impaired	Locomotor Disablity	Mentally ill	Mentally Retarded
Primary School Music Teacher, Secondary School Asistant Grade-II, Asistant Masters- (Arts) (Languages) Special Teacher Grade-II, Drama Teachers, Dance Teachers, Music Teachers. FDA, SDA	Primary School Music Teacher, Asst.Masters-(General) (English) (Hindi) Secondary School Asistant Grade-II, Asistant Masters- (Arts) (Languages) Special Teacher Grade-II, Drama Teachers, Dance Teachers, Music Teachers. FDA, SDA, Group D Posts, Peon.	Primary School Assistant Masters (General) (Science) (English) (Hindi) Drawing Teacher Secondary School Asistant Grade-II Asistant Masters- (Arts) (Physical Science) (Biological Science) (Languages) Special Teacher Grade-II, Drawing Teachers, Drama Teachers, Dance Teachers, Craft Teachers, Music Teachers. FDA, SDA, Typist, Steno & Group D.	Primary School Asst.Masters-(General) (English) (Hindi) Drawing Teachers. Secondary School Asistant Grade-II, Assistant Masters (Languages) Physical Education Teacher Grade-1, Special Teacher Grade-II, Drawing Teachers, Drama Teachers, Dance Teachers, Craft Teachers. FDA, SDA, Typist, Group D.	Primary School Asst.Masters-(General) (Science) (English) (Hindi) Drawing Teachers. Secondary School Asistant Grade-II, Asistant Masters- (Arts) (Physical Science) (Biological Science) (Languages) Special Teacher Grade-II, Drawing Teachers, Drama Teachers, Dance Teachers, Craft Teachers, Music Teachers. FDA, SDA, Typist, Steno & Group D posts.	FDA, SDA, Group-D Posts	–

1. ದೈಹಿಕ ಅಂಗವಿಕಲ ಅಭ್ಯರ್ಥಿಗಳು ಸರ್ಕಾರಿ ಜಿಲ್ಲಾ ಆಸ್ಪತ್ರೆಗಳಲ್ಲಿರುವ ಮೂಳೆ ತಜ್ಞ (Orthopaedic Surgeon) ರಿಂದ ದೈಹಿಕ ಅಂಗವಿಕಲತೆಯ ಮೌಲೀಕರಣವನ್ನು ALimco Kanpur(W.H.O Standard) ಇದರ ಆಧಾರದ ಮೇಲೆ ಮಾಡಿಸುವುದು ಕಡ್ಡಾಯವಾಗಿರುತ್ತದೆ. ಹಾಗೂ ಶ್ರವಣ ದೋಷ ಹೊಂದಿರುವ ಅಂಗವಿಕಲ ಅಭ್ಯರ್ಥಿಗಳ ಪ್ರಮಾಣ ಪತ್ರದಲ್ಲಿ ಶ್ರವಣ ದೋಷದ ಪ್ರಮಾಣವನ್ನು ಡೆಸಿಬಲ್ಸ್ (Decibels) ಗಳಲ್ಲಿ ಕಡ್ಡಾಯವಾಗಿ ನಮೂದಿಸತಕ್ಕದ್ದು.

19. ಗ್ರಾಮೀಣ ಅಭ್ಯರ್ಥಿಗಳು :–

ಗ್ರಾಮೀಣ ಅಭ್ಯರ್ಥಿ ಎಂದರೆ ಕರ್ನಾಟಕ ಪೌರ ನಿಯಮಗಳ ಅಧಿನಿಯಮ 1976 ಅಥವಾ ಕರ್ನಾಟಕ ಪೌರ ಸಭೆಗಳ ಅಧಿನಿಯಮ 1964 ರಡಿಯಲ್ಲಿ ನಿರ್ದಿಷ್ಟಪಡಿಸಿದ ಒಂದು ದೊಡ್ಡ ನಗರ ಪ್ರದೇಶ, ಸಣ್ಣ ನಗರ ಪ್ರದೇಶ ಅಥವಾ ಪರಿವರ್ತನೆ ಹಂತದಲ್ಲಿರುವ ಪ್ರದೇಶ ಹೊರತಾಗಿ ಇತರೆ ಯಾವುದೇ ಪ್ರದೇಶದಲ್ಲಿರುವ ಶಾಲೆಯಲ್ಲಿ 1 ನೇ ತರಗತಿಯಿಂದ 10 ನೇ ತರಗತಿಯವರೆಗೆ ವ್ಯಾಸಂಗ ಮಾಡಿದ ಅಭ್ಯರ್ಥಿ.

ಗ್ರಾಮೀಣ ಅಭ್ಯರ್ಥಿಗಳ ಮೀಸಲಾತಿ ಅಡಿಯಲ್ಲಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಸಂಬಂಧಿಸಿದ ಪ್ರಮಾಣ ಪತ್ರಗಳನ್ನು **ಸರಕಾರದ ಆದೇಶ ಸಂಖ್ಯೆ: ಡಿಪಿಎಆರ್ 96 ಸೇನೆನಿ 2005 ದಿನಾಂಕ 10–08–2005** ರಲ್ಲಿ ನೀಡಿರುವ ನಿಗದಿತ ನಮೂನೆಯಲ್ಲಿ ಮಾತ್ರ ಸಲ್ಲಿಸಬೇಕು.

1) ಸಾಮಾನ್ಯ ವರ್ಗದ ಅಭ್ಯರ್ಥಿಗಳು ನಮೂನೆ–1 ರಲ್ಲಿ ಅಂದರೆ, ಮೇಲುಸ್ಥರದಲ್ಲಿ (creamy layer) ಬರುವದಿಲ್ಲವೆಂದು ಸಂಬಂಧಿಸಿದ ತಹಸೀಲ್ದಾರರವರಿಂದ ಪಡೆದ ಪ್ರಮಾಣ ಪತ್ರದ ಜೊತೆಗೆ ಸರಕಾರದ ಆದೇಶ ದಿನಾಂಕ 10–08–2005ರಲ್ಲಿ ನಿಗದಿಪಡಿಸಲಾದ ನಮೂನೆ–2 ರಲ್ಲಿ ಗ್ರಾಮೀಣ ವ್ಯಾಸಂಗ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.

2) ಪ್ರವರ್ಗ-1, 2ಎ, 2ಬಿ, 3ಎ, 3ಬಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು ತಮ್ಮ ಮೀಸಲಾತಿ ಪ್ರಮಾಣ ಪತ್ರದ ಜೊತೆಗೆ ಸರಕಾರದ ಆದೇಶ ದಿನಾಂಕ 10-08-2005ರಲ್ಲಿ ನಿಗದಿ ಪಡಿಸಲಾದ ನಮೂನೆ-2ರಲ್ಲಿ ಗ್ರಾಮೀಣ ವ್ಯಾಸಂಗ ಪ್ರಮಾಣ ಪತ್ರವನ್ನು ಪಡೆದಿರಬೇಕು.

20. ಯೋಜನಾ ನಿರಾಶ್ರಿತ ಕುಟುಂಬದ ಅಭ್ಯರ್ಥಿಗಳು :-

ಸರ್ಕಾರದ ಅಧಿಸೂಚನೆ ಸಂಖ್ಯೆ ಡಿಪಿಎಆರ್.23.ಎಸ್‌ಆರ್‌ಆರ್.99, ಬೆಂಗಳೂರು ದಿನಾಂಕ 23-11-2000 ರನ್ವಯ ಯೋಜನಾ ನಿರಾಶ್ರಿತ ಕುಟುಂಬದ ಅಭ್ಯರ್ಥಿ ಮೀಸಲಾತಿ ಪಡೆಯಲಿಚ್ಛಿಸುವ ಅಭ್ಯರ್ಥಿಗಳು ಸರ್ಕಾರಿ ಸುತ್ತೋಲೆ ಸಂಖ್ಯೆ: ಸಿ.ಆ.ಸು.ಇ.:44:ಸೇ.ನೇನಿ ದಿನಾಂಕ 27-07-2001ರಲ್ಲಿ ನಿಗದಿಪಡಿಸಲಾದ ನಮೂನೆಯಲ್ಲಿ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರದಿಂದ (ತಹಶೀಲ್ದಾರ್) ಅರ್ಜಿ ಸಲ್ಲಿಸುವ ಕೊನೆ ದಿನಾಂಕದೊಳಗೆ ಪಡೆದಿರಬೇಕು.

21. ಕನ್ನಡ ಮಾಧ್ಯಮದ ಅಭ್ಯರ್ಥಿಗಳು:-

1ನೇ ತರಗತಿಯಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳು ಈ ಮೀಸಲಾತಿಗೆ ಅರ್ಹರಾಗುತ್ತಾರೆ. (1ನೇ ತರಗತಿಗೆ ದಾಖಲಾಗದೇ ನೇರವಾಗಿ ನಂತರದ ಹೆಚ್ಚಿನ ತರಗತಿಗೆ ದಾಖಲಾಗಿ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ್ದಲ್ಲಿ ಸಹ ಈ ಸೌಲಭ್ಯಕ್ಕೆ ಅರ್ಹರಾಗುವರು) ಈ ಅಭ್ಯರ್ಥಿಗಳು ಸಂಬಂಧಿಸಿದ ಮುಖ್ಯೋಪಾಧ್ಯಾಯರಿಂದ ದೃಢೀಕೃತ ಪ್ರಮಾಣ ಪತ್ರಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳವರ ಮೇಲು ಸಹಿಯೊಂದಿಗೆ ಸಲ್ಲಿಸತಕ್ಕದ್ದು. ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದೊಳಗೆ ಪಡೆದಿರಬೇಕು.

22. ಎ) ಗೌರವ ಶಿಕ್ಷಕರ ಪ್ರಮಾಣ ಪತ್ರ:

ಸರ್ಕಾರಿ ಪ್ರೌಢಶಾಲೆಗಳಲ್ಲಿ ಗೌರವ ಶಿಕ್ಷಕರಾಗಿ ಸಲ್ಲಿಸಿದ ಸೇವಾ ಅವಧಿಗೆ ಕೃಪಾಂಕ ಪಡೆಯಲಿಚ್ಛಿಸುವ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಸಂಬಂಧಿಸಿದ ಶಾಲೆಯ ಮುಖ್ಯಸ್ಥರಿಂದ ಪ್ರಮಾಣ ಪತ್ರವನ್ನು ಪಡೆದು, ಆಯಾ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಇವರಿಂದ ದೃಢೀಕರಿಸಿಕೊಂಡಿರಬೇಕು. ಸದರಿ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದೊಳಗೆ ಪಡೆದಿರಬೇಕು.

ಬಿ) ಅರೆಕಾಲಿಕ ಶಿಕ್ಷಕರ ಪ್ರಮಾಣ ಪತ್ರ :-

ಸರ್ಕಾರಿ ಪ್ರೌಢಶಾಲೆಗಳಲ್ಲಿ ಅರೆಕಾಲಿಕ ಶಿಕ್ಷಕರಾಗಿ ಸಲ್ಲಿಸಿದ ಸೇವಾ ಅವಧಿಗೆ ಕೃಪಾಂಕ ಪಡೆಯಲಿಚ್ಛಿಸುವ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಸಂಬಂಧಿಸಿದ ಶಾಲೆಯ ಮುಖ್ಯಸ್ಥರಿಂದ ಪ್ರಮಾಣ ಪತ್ರವನ್ನು ಪಡೆದು, ಆಯಾ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಇವರಿಂದ ದೃಢೀಕರಿಸಿಕೊಂಡಿರಬೇಕು. ಸದರಿ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದೊಳಗೆ ಪಡೆದಿರಬೇಕು.

23. ಅಭ್ಯರ್ಥಿಗಳ ಮಾಹಿತಿ ಸಂಬಂಧ ಆಕ್ಷೇಪಣೆ ಸ್ವೀಕರಿಸಿ ದಾಖಲಿಸುವುದು :-

ಅಭ್ಯರ್ಥಿಯು ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳು, ಅರ್ಹತಾದಾಯಕ ಪರೀಕ್ಷೆಯಲ್ಲಿ ಪಡೆದಿರುವ ಅಂಕಗಳು ಹಾಗೂ ಅಭ್ಯರ್ಥಿಯು ಅರ್ಜಿಯಲ್ಲಿ ಕ್ಲೇಮ್ ಮಾಡಿರುವ ಮೀಸಲಾತಿ ವಿವರಗಳನ್ನು ಒಳಗೊಂಡ ಪೂರ್ಣ ಮಾಹಿತಿಯನ್ನು ಇಲಾಖೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ ಎಲ್ಲಾ ಅಭ್ಯರ್ಥಿಗಳ ವಿವರಗಳನ್ನು ಅಂದರೆ ಅಭ್ಯರ್ಥಿಯು ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳು, ಅರ್ಹತಾದಾಯಕ ಪರೀಕ್ಷೆಯಲ್ಲಿ ಪಡೆದಿರುವ ಅಂಕಗಳು ಹಾಗೂ ಆನ್‌ಲೈನ್ ಅರ್ಜಿಯಲ್ಲಿ ಕ್ಲೇಮ್ ಮಾಡಿರುವ ಮೀಸಲಾತಿ ವಿವರಗಳನ್ನು ಒಳಗೊಂಡ ಪೂರ್ಣ ಮಾಹಿತಿಯನ್ನು ಇಲಾಖಾ ವೆಬ್‌ಸೈಟ್ www.Schooleducation.kar.nic.in ನಲ್ಲಿ ಪ್ರಕಟಿಸಿ, ನಿಗದಿತ ಸಮಯ ನೀಡಿ ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗುವುದು. ಅಭ್ಯರ್ಥಿಯು ಆನ್‌ಲೈನ್ ಮೂಲಕ ಸಲ್ಲಿಸಿರುವ ಅರ್ಜಿಯಲ್ಲಿ ದಾಖಲಿಸಿದ ಶೈಕ್ಷಣಿಕ ಮಾಹಿತಿಯಲ್ಲಿ ವ್ಯತ್ಯಾಸವಾಗಿದ್ದಲ್ಲಿ ಮಾತ್ರ ನಿಗದಿತ ನಮೂನೆಯಲ್ಲಿ ಆಕ್ಷೇಪಣೆಗಳನ್ನು ಸಲ್ಲಿಸಬೇಕಾಗುತ್ತದೆ. ಆದರೆ ಮೂಲ ಅರ್ಜಿಯಲ್ಲಿ ದಾಖಲಿಸದಿರುವ ಯಾವುದೇ ಮಾಹಿತಿಯನ್ನು ಪರಿಗಣಿಸಲಾಗುವುದಿಲ್ಲ. ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ, ಅಭ್ಯರ್ಥಿಗಳು ನೀಡಿದ ಶೈಕ್ಷಣಿಕ ದಾಖಲೆಗಳ ಆಧಾರದ ಮೇಲೆ ಪರಿಷ್ಕರಿಸಿ ಪುನಃ ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

24. ತಾತ್ಕಾಲಿಕ ಆಯ್ಕೆಪಟ್ಟಿ :-

ಕಂಡಿಕೆ 23ರಲ್ಲಿ ನೀಡಿರುವ ಸೂಚನೆಯಂತೆ ಅಭ್ಯರ್ಥಿಗಳ ಆಕ್ಷೇಪಣೆಗಳನ್ನು ಸ್ವೀಕರಿಸಿ ಪರಿಷ್ಕೃತ ವಿವರ ಪ್ರಕಟಿಸಿದ ನಂತರ ವಿಷಯವಾರು, ಹುದ್ದೆವಾರು ಮೀಸಲಾತಿ ಹಾಗೂ ಮೆರಿಟ್‌ಗೆ ಅನುಗುಣವಾಗಿ ಅಗತ್ಯ ಪ್ರಮಾಣದ ಅಭ್ಯರ್ಥಿಗಳ ದಾಖಲಾತಿಗಳನ್ನು ಪರಿಶೀಲಿಸಲು ನಿಗದಿತ ದಿನಾಂಕ ಮತ್ತು ಸ್ಥಳದಲ್ಲಿ ಮೂಲ ದಾಖಲಾತಿಗಳೊಂದಿಗೆ ಹಾಜರಾಗಲು ತಿಳಿಸಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಸಂಬಂಧಿಸಿದ ಅಭ್ಯರ್ಥಿಗಳು ಪ್ರಕಟಿತ ದಿನಾಂಕಗಳಲ್ಲಿ ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಿರುವ / ಆಯ್ಕೆ ಬಯಸಿರುವ ಎಲ್ಲಾ ಹುದ್ದೆಗಳಿಗೆ ಸಂಬಂಧಿಸಿದಂತೆ ಮೂಲ ದಾಖಲಾತಿಗಳನ್ನು ಪರಿಶೀಲನೆಗೆ ಹಾಜರುಪಡಿಸುವುದು ಹಾಗೂ ಒಂದು ಸೆಟ್ ಮೂಲ ಪ್ರತಿಗಳ ಛಾಯಾ ಪ್ರತಿಗಳನ್ನು ಅಭ್ಯರ್ಥಿಗಳು ಸ್ವಯಂ ದೃಢೀಕರಿಸಿ ಪರಿಶೀಲನಾಧಿಕಾರಿಗಳಿಗೆ ನೀಡಿ ಸ್ವೀಕೃತಿ ಪಡೆಯುವುದು. ನಿಗದಿಪಡಿಸಿದ ದಿನಾಂಕಗಳಲ್ಲಿ ಅಭ್ಯರ್ಥಿಗಳು ದಾಖಲಾತಿ ಪರಿಶೀಲನೆಗೆ ಎಲ್ಲಾ ಮೂಲ ದಾಖಲಾತಿಗಳೊಂದಿಗೆ ಹಾಜರಾಗದಿದ್ದಲ್ಲಿ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.

ಈ ಪ್ರಕ್ರಿಯೆಯನ್ನು ಪ್ರಕಟಿತ ವಿಷಯವಾರು ಹುದ್ದೆಗಳ ಸಂಖ್ಯೆಗನುಗುಣವಾಗಿ ಎಲ್ಲಾ ಮೂಲ ದಾಖಲೆಗಳನ್ನು ಪರಿಶೀಲನೆಗೆ ಒಳಪಡಿಸಿ, ಅರ್ಹತೆ ಹೊಂದಿರುವ ಎಲ್ಲಾ ಅಭ್ಯರ್ಥಿಗಳು ಲಭ್ಯವಾಗುವವರೆಗೆ ಮುಂದುವರೆಸಲಾಗುವುದು. ಇದನ್ನು ಆಧರಿಸಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಿ ಆಕ್ಷೇಪಣೆಗಳನ್ನು ಆಹ್ವಾನಿಸಲಾಗುವುದು.

ವಿಶೇಷ ಸೂಚನೆಗಳು:–

ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟಿಸಿದ ನಂತರ ಅಭ್ಯರ್ಥಿಗಳು ಆಕ್ಷೇಪಣೆ ಸಲ್ಲಿಸುವಾಗ ಮೂಲ ಅರ್ಜಿಯಲ್ಲಿ ದಾಖಲಿಸಿದ ವಿಷಯಗಳಿಗೆ ಸಂಬಂಧಿಸಿದಂತೆ ಮಾತ್ರ ಆಕ್ಷೇಪಣೆ ಸಲ್ಲಿಸಬಹುದು. (ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ) ನಮೂದಿಸಲು ಬಿಟ್ಟು ಹೋಗಿದ್ದ / ಮರೆತು ಹೋಗಿದ್ದ ಯಾವುದೇ ಮಾಹಿತಿಗಳನ್ನು ಅಂದರೆ ಅಂಕಗಳ ವಿವರ, ಮೀಸಲಾತಿ ಪ್ರವರ್ಗ / ಗೌರವ ಶಿಕ್ಷಕರಾಗಿ / ಅರೆಕಾಲಿಕ ಶಿಕ್ಷಕರಾಗಿ / ಜನಗಣಗತಿ ಸಂಸ್ಥೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸಿದ ವರ್ಷಗಳ ಬಗ್ಗೆ ಮಾಹಿತಿಗಳು ಇತ್ಯಾದಿ ಆಯ್ಕೆಗೆ ಸಂಬಂಧಿಸಿದ ಮಾಹಿತಿಗಳನ್ನು ಹಾಗೂ ಹೊಸದಾಗಿ ದಾಖಲಿಸಲು ಬಯಸುವ ಯಾವುದೇ ಮಾಹಿತಿಗಳನ್ನು ಸಲ್ಲಿಸಲು ಅವಕಾಶವಿರುವುದಿಲ್ಲ. ಅಂತಹ ಆಕ್ಷೇಪಣೆ ಮತ್ತು ಲಗತ್ತುಗಳನ್ನು ಪರಿಗಣಿಸದೆ ತಿರಸ್ಕರಿಸಲಾಗುವುದು.

25. ಅಂತಿಮ ಆಯ್ಕೆ ಪಟ್ಟಿ:–

1) ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿ ಆಯ್ಕೆ ಹೊಂದಿರುವ ಎಲ್ಲಾ ಅಭ್ಯರ್ಥಿಗಳ ಮೂಲ ಅಂಕಪಟ್ಟಿ ಮತ್ತು ಪ್ರಮಾಣ ಪತ್ರಗಳನ್ನು ಪರಿಶೀಲಿಸಿ ದೃಢಪಡಿಸಿಕೊಂಡ ನಂತರ ಅಂತಿಮ ಆಯ್ಕೆಪಟ್ಟಿಯನ್ನು ಪ್ರಕಟಿಸಲಾಗುವುದು. ಮೂಲ ಪ್ರಮಾಣ ಪತ್ರಗಳನ್ನು ಪರಿಶೀಲನೆಗೆ ಸಲ್ಲಿಸದೇ ಇರುವ ಅಭ್ಯರ್ಥಿಗಳು ಅಂತಿಮ ಆಯ್ಕೆಪಟ್ಟಿಯಲ್ಲಿ ಪರಿಗಣನೆಗೆ ಬರುವುದಿಲ್ಲ.

2) ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸುವ ಸಂದರ್ಭದಲ್ಲಿ ಅಭ್ಯರ್ಥಿಗಳು ಅರ್ಜಿಯಲ್ಲಿ ನಮೂದಿಸಿರುವ ಜಿಲ್ಲಾ ಆದ್ಯತೆಯನ್ನು ಆಧಾರವಾಗಿಟ್ಟುಕೊಂಡು ಮೆರಿಟ್ ಮತ್ತು ಮೀಸಲಾತಿ ಆಧರಿಸಿ ನಿಯಮಾನುಸಾರ ಜಿಲ್ಲೆಗಳನ್ನು ಹಂಚಿಕೆ ಮಾಡಲಾಗುತ್ತದೆ.

3) ಜಿಲ್ಲಾ ಮಟ್ಟದ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾದ ಅರ್ಹ ಅಭ್ಯರ್ಥಿಗಳ ಅರ್ಹತೆ ಮತ್ತು ಮೀಸಲಾತಿಗಳನ್ನು ಖಚಿತಪಡಿಸಿಕೊಂಡು ನೇಮಕಾತಿ ಪ್ರಾಧಿಕಾರಿಯಾದ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರು ನೇಮಕಾತಿ ಆದೇಶವನ್ನು ಕೌನ್ಸಿಲಿಂಗ್ ಮೂಲಕ ನೀಡುತ್ತಾರೆ.

4) ಆರ್.ಎಂ.ಎಸ್.ಎ ವತಿಯಿಂದ ಉನ್ನತೀಕರಿಸಿದ ಪ್ರೌಢಶಾಲೆಗಳು ಮತ್ತು ಆದರ್ಶ ವಿದ್ಯಾಲಯಗಳಿಗೆ ತೈನಾತಿಸಲ್ಪಟ್ಟ ಶಿಕ್ಷಕರು ಆ ಯೋಜನೆ ಇರುವರೆಗೆ ಅಥವಾ ಆ ಹುದ್ದೆಗಳು ಯೋಜನೇತರ ಹುದ್ದೆಗಳಾಗಿ ಪರಿವರ್ತನೆಯಾಗುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಅವರ ವರ್ಗಾವಣೆಯು ಆ ಶಾಲಾ ಘಟಕಗಳಲ್ಲಿ ಆಗುತ್ತದೆ.

5) **ಅಂತಿಮ ಆಯ್ಕೆಪಟ್ಟಿ ತಯಾರಿಸುವಾಗ** ಮಹಿಳೆಯರಿಗೆ ಮೀಸಲಿರಿಸಿದ ರಿಕ್ತ ಸ್ಥಾನಗಳಿಗೆ ಅರ್ಹ ಮಹಿಳಾ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಅಂತಹ ರಿಕ್ತ ಸ್ಥಾನಗಳನ್ನು ಆಯಾ ವರ್ಗಕ್ಕೆ ಸೇರಿದ ಪುರುಷ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು. ಮಾಜಿ ಸೈನಿಕರಿಗಾಗಿ ಮೀಸಲಿರಿಸಿದ ರಿಕ್ತ ಸ್ಥಾನಗಳಿಗೆ ಅರ್ಹ ಮಾಜಿ ಸೈನಿಕ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಅಂತಹ ರಿಕ್ತ ಸ್ಥಾನಗಳನ್ನು ಆಯಾ ವರ್ಗಕ್ಕೆ ಸೇರಿದ ಇತರೆ ಅರ್ಹ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು. ಇದೇ ರೀತಿ ಯೋಜನಾ ನಿರಾಶ್ರಿತ / ಕನ್ನಡ ಮಾಧ್ಯಮದ / ಗ್ರಾಮೀಣ ಅರ್ಹ ಅಭ್ಯರ್ಥಿಗಳು ದೊರಯದಿದ್ದಲ್ಲಿ ಅಂತಹ ರಿಕ್ತ ಸ್ಥಾನಗಳನ್ನು ಆಯಾ ಪ್ರವರ್ಗಕ್ಕೆ ಸೇರಿದ ಇತರೆ ಅರ್ಹ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.ಅರ್ಹ ಅಂಗವಿಕಲ ಅಭ್ಯರ್ಥಿಗಳು ದೊರೆಯದಿದ್ದಲ್ಲಿ ಅಂತಹ ರಿಕ್ತ ಸ್ಥಾನಗಳನ್ನು ಭರ್ತಿ ಮಾಡದೆ ಬ್ಯಾಕ್‌ಲಾಗ್ ಹುದ್ದೆಗಳೆಂದು ಪರಿಗಣಿಸಲಾಗುವುದು.

26. ನಿಬಂಧನೆಗಳು:–

1) ಅಭ್ಯರ್ಥಿಯು ಆನ್ ಲೈನ್ ಮೂಲಕ ಸಲ್ಲಿಸಲ್ಪಟ್ಟ ಮೂಲ ಅರ್ಜಿಯಲ್ಲಿ ನೀಡಿರುವ ಮಾಹಿತಿಗಳ ಬದಲಾವಣೆಗೆ ಯಾವುದೇ ಹಂತದಲ್ಲೂ ಅವಕಾಶವಿರುವುದಿಲ್ಲ. ಆದುದರಿಂದ ಅಭ್ಯರ್ಥಿಯು ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅರ್ಹತೆ, ಮೀಸಲಾತಿ ಹಾಗೂ ಇತರೆ ವಿವರಗಳ ಬಗ್ಗೆ ಖಾತ್ರಿ ಪಡಿಸಿಕೊಂಡು ವಿವರಗಳನ್ನು ದಾಖಲಿಸುವುದು ಅಭ್ಯರ್ಥಿಗಳ ವೈಯಕ್ತಿಕ ಜವಾಬ್ದಾರಿಯಾಗಿರುತ್ತದೆ.

2) ಅಭ್ಯರ್ಥಿಯು ಕೋರುವ ಮೀಸಲಾತಿ ಮತ್ತು ಇತರೆ ಯಾವುದೇ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಎಲ್ಲಾ ಪ್ರಮಾಣ ಪತ್ರಗಳ ದೃಢೀಕೃತ ಪ್ರತಿಗಳನ್ನು ಅರ್ಜಿ ಸಲ್ಲಿಸಲು ನಿಗಧಿ ಪಡಿಸಿರುವ ಕೊನೆಯ ದಿನಾಂಕದೊಳಗೆ ಪಡೆದಿರಬೇಕು. ಸದರಿ ಮೂಲ ಪ್ರಮಾಣ ಪತ್ರಗಳನ್ನು ಆಯ್ಕೆ ಪ್ರಾಧಿಕಾರ/ನೇಮಕಾತಿ ಪ್ರಾಧಿಕಾರ ಸೂಚಿಸಿದ ದಿನದಂದು ಪರಿಶೀಲನೆಗೆ ಹಾಜರುಪಡಿಸಬೇಕು. ಒಂದು ವೇಳೆ ಯಾವುದೇ ಪ್ರಮಾಣ ಪತ್ರಗಳನ್ನು ಹಾಜರು ಪಡಿಸಲು ವಿಫಲರಾದಲ್ಲಿ ಅಂತಹ ಮೀಸಲಾತಿಯನ್ನು ರದ್ದುಪಡಿಸಲಾಗುವುದು.

3) ಅಭ್ಯರ್ಥಿಯು ಅರ್ಜಿ ಸಲ್ಲಿಸುವ ಸಮಯದಲ್ಲಿ ಯಾವುದೇ ಸರ್ಕಾರಿ ಇಲಾಖೆಯಲ್ಲಿ ಖಾಯಂ ಅಥವಾ ಹಂಗಾಮಿಯಾಗಿ ನೌಕರಿಯಲ್ಲಿದ್ದರೆ ಅವನು / ಅವಳು ತಾನು ಸೇವೆ ಸಲ್ಲಿಸುತ್ತಿರುವ ಹುದ್ದೆಯ ನೇಮಕಾತಿ ಪ್ರಾಧಿಕಾರಿಯವರ ಸಮ್ಮತಿಯಿಲ್ಲದೆ ಅರ್ಜಿಯನ್ನು ಸಲ್ಲಿಸಿದ್ದರೆ, ಅಂತಹ ಅಭ್ಯರ್ಥಿ ನೇಮಕಾತಿಗೆ ಅರ್ಹರಾಗುವುದಿಲ್ಲ. ಆದುದರಿಂದ ಸೇವೆಯಲ್ಲಿರುವ ಅಭ್ಯರ್ಥಿಗಳು ಸೇವೆಯಲ್ಲಿರುವ ಬಗ್ಗೆ ಸೇವಾ ಪ್ರಮಾಣ ಪತ್ರ ಮತ್ತು ಸದರಿ ಪ್ರಸ್ತುತ ಹುದ್ದೆಗೆ ಅರ್ಜಿ ಸಲ್ಲಿಸುವ ಬಗ್ಗೆ ಸಂಬಂಧಿಸಿದ ನೇಮಕಾತಿ ಪ್ರಾಧಿಕಾರದಿಂದ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು (No objection certificate) ಪಡೆದಿಟ್ಟುಕೊಂಡಿರಬೇಕು.

4) ಅರ್ಜಿ ನಮೂನೆ, ಉತ್ತರ ಪತ್ರಿಕೆ, ಪ್ರವೇಶ ಪತ್ರಗಳ ನಿಗದಿತ ಸ್ಥಳಗಳಲ್ಲಿ ಎಡಗೈ ಹೆಬ್ಬೆಟ್ಟು ಗುರುತನ್ನು ಸ್ಪಷ್ಟವಾಗಿ ಹಾಕಬೇಕು. ಎಡಗೈ ಹೆಬ್ಬೆರಳ ಗುರುತು ರಹಿತ ಅರ್ಜಿಯನ್ನು ಯಾವುದೇ ಸೂಚನೆ ನೀಡದೆ ತಿರಸ್ಕರಿಸಲಾಗುವುದು.

5) ಅಭ್ಯರ್ಥಿಗಳು ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಿದ ನಂತರ ಪ್ರವೇಶ ಪತ್ರದ ಪ್ರತಿಯನ್ನು ದ್ವಿಪ್ರತಿಯಲ್ಲಿ ಡೌನ್ ಲೋಡ್ ಮಾಡಿಕೊಂಡು ಆ ಪ್ರತಿಗಳಲ್ಲಿ ಒಂದೇ ಮಾದರಿಯ ಇತ್ತೀಚಿನ ತಲಾ ಒಂದು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಅಂಟಿಸಬೇಕು.

27. ನ್ಯಾಯಾಲಯ ವ್ಯಾಪ್ತಿ:

ಬೆಂಗಳೂರು ವಿಭಾಗದ ಶಿಕ್ಷಕರ ನೇಮಕಾತಿಗಳಿಗೆ ಸಂಬಂಧಿಸಿದಂತೆ, ನ್ಯಾಯಾಲಯದ ಪ್ರಕರಣ ದಾಖಲಾದಲ್ಲಿ ನೇಮಕಾತಿ ಪ್ರಾಧಿಕಾರವಾದ ಸಂಬಂಧಿಸಿದ ಉಪನಿರ್ದೇಶಕರು(ಆಡಳಿತ) ಆಯ್ಕೆ ಪ್ರಾಧಿಕಾರವಾದ ವಿಭಾಗೀಯ ಸಹ ನಿರ್ದೇಶಕರು, ಬೆಂಗಳೂರು ವಿಭಾಗ, ಬೆಂಗಳೂರು, ನಿರ್ದೇಶಕರು (ಪ್ರೌಢ ಶಿಕ್ಷಣ), ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಪ್ರತಿಸ್ಪಂದಿಸುವ ಅಧಿಕಾರಿಗಳಾಗಿರುತ್ತಾರೆ.

28. ಸೂಚನೆಗಳು:

ಯಾವುದೇ ವ್ಯಕ್ತಿಯು ಸರ್ಕಾರಿ ನೇಮಕಾತಿಗೆ ಈ ಕೆಳಕಂಡ ಸಂದರ್ಭದಲ್ಲಿ ಅರ್ಹನಾಗುವುದಿಲ್ಲ:

ಅ) ಯಾವುದೇ ನಿಷೇಧಿತ ಸಂಘ ಸಂಸ್ಥೆಯ ಸದಸ್ಯನಾಗಿರುವಲ್ಲಿ ಅಥವಾ ಸದಸ್ಯರಾಗಿದ್ದಲ್ಲಿ ಅಥವಾ ಯಾವುದೇ ನಿಷೇಧಿತ ಸಂಸ್ಥೆಯ ಕಾರ್ಯ ಚಟುವಟಿಕೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಲ್ಲಿ.

ಆ) ಭಾರತ ಸಂವಿಧಾನಕ್ಕೆ ಚ್ಯುತಿ ತರುವ ಕಾರ್ಯದಲ್ಲಿ ಪ್ರವೃತ್ತನಾದಲ್ಲಿ.

ಇ) ಕಾನೂನು ಭಂಗ ಮಾಡಿ ಹಿಂಸಾಕೃತ್ಯದಲ್ಲಿ ತೊಡಗಿದವರಾಗಿದ್ದರೆ.

ಈ) ಭಾರತ ದೇಶದ ಸಾರ್ವಭೌಮತೆ ಹಾಗೂ ಸುಭದ್ರತೆಗೆ ಧಕ್ಕೆ ತರುವ ಕಾರ್ಯದಲ್ಲಿ ಪ್ರವೃತ್ತರಾಗಿದ್ದರೆ.

ಉ) ಭಾರತ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಸೇವೆಯಿಂದ ಉಚ್ಚಾಟನೆಗೊಂಡ ಪ್ರಸಂಗಗಳಲ್ಲಿ.

ಊ) ನ್ಯಾಯಬಾಹಿರ ಕೃತ್ಯಗಳಲ್ಲಿ ತೊಡಗಿ ಅಪರಾಧಕ್ಕೆ ಒಳಗಾದ ಪ್ರಸಂಗಗಳಲ್ಲಿ.

ಋ) ಒಬ್ಬ ಜೀವಂತ ಪತ್ನಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವ ಪುರುಷ ಅಭ್ಯರ್ಥಿಯು ಮತ್ತು ಈಗಾಗಲೇ ಇನ್ನೊಬ್ಬ ಹೆಂಡತಿಯಿರುವ ವ್ಯಕ್ತಿಯನ್ನು ಮದುವೆಯಾಗಿರುವ ಮಹಿಳಾ ಅಭ್ಯರ್ಥಿಯು ಸರ್ಕಾರದಿಂದ ಪೂರ್ವಾನುಮತಿಯನ್ನು ಪಡೆಯದೆ ನೇಮಕಾತಿಗೆ ಅರ್ಹರಾಗುವುದಿಲ್ಲ.

ಎ) ಅಭ್ಯರ್ಥಿಯು ಮತ್ತೊಬ್ಬ ವ್ಯಕ್ತಿಯಂತೆ ನಟಿಸಿ ವಂಚಿಸಿದ ಅಥವಾ ದಾಖಲೆಗಳನ್ನು ತಿದ್ದಿದ ಅಥವಾ ಸೃಷ್ಟಿಸಿದ ಅಥವಾ ಸರಿಯಿಲ್ಲದ ಅಥವಾ ಸುಳ್ಳು ಅಥವಾ ದೋಷಪೂರ್ಣ ವಿವರಗಳನ್ನು ನೀಡುವ ಅಥವಾ ನೇಮಕಾತಿಗಾಗಿ ನಡೆಸುವ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅನುಚಿತ ರೀತಿಯಲ್ಲಿ ವರ್ತಿಸುವ ಅಥವಾ ವರ್ತಿಸಲು ಪ್ರಯತ್ನಿಸಿದ ಅಥವಾ ಅವನ / ಅವಳ ನೇಮಕಾತಿಗಾಗಿ ಸಂಬಂಧಿಸಿದಂತೆ ಯಾವುದೇ ಇತರ ಅಕ್ರಮ ಅನುಚಿತ ವಿಧಾನಗಳನ್ನು ಅನುಸರಿಸಿದ ಕಾರಣದಿಂದಾಗಿ ತಪ್ಪಿತಸ್ಥನೆಂದು ಕಂಡು ಬಂದಲ್ಲಿ ಅವನ / ಅವಳ ಅಭ್ಯರ್ಥಿ ತನವನ್ನು ಯಾವುದೇ ಸೂಚನೆ ನೀಡದೆ ರದ್ದುಗೊಳಿಸಲಾಗುವುದು ಮತ್ತು ಅಂತಹವರನ್ನು ಕ್ರಿಮಿನಲ್ ಪ್ರಾಸಿಕ್ಯೂಷನ್‌ಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡಿಸಲಾಗುವುದು.

ಏ) ಆಯ್ಕೆ ಪ್ರಾಧಿಕಾರಿಯು ನಡೆಸುವ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆ ಮತ್ತು ಅರ್ಹತಾ ಪರೀಕ್ಷೆಗಳಲ್ಲಿ ಪಡೆದಿರುವ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡಿದ ಆಯ್ಕೆಪಟ್ಟಿಯಲ್ಲಿ ಅವನ / ಅವಳ ಆಯ್ಕೆಯು ಖಾಯಂ ಆಗದ ಹೊರತು ನೇಮಕಾತಿಗಾಗಿ ಹಕ್ಕನ್ನು ಪಡೆದುಕೊಳ್ಳುವುದಿಲ್ಲ.

ಐ) ಈ ನೇಮಕಾತಿಯು, ಮತ್ತು ಈ ಅಧಿಸೂಚನೆಯಲ್ಲಿ ತಿಳಿಸಿರುವ ಆದೇಶಗಳು, ಜ್ಞಾಪನಗಳು, ಸುತ್ತೋಲೆಗಳು ಕಾಲದಿಂದ ಕಾಲಕ್ಕೆ ಹೊರಡಿಸಿರುವ ಆದೇಶಗಳು ಮತ್ತು ತಿದ್ದುಪಡಿಗೆ ಒಳಪಟ್ಟಿರುತ್ತದೆ.

ಒ) ಆಯ್ಕೆ ಮತ್ತು ನೇಮಕಾತಿ ಪ್ರಕ್ರಿಯೆಯ ಯಾವುದೇ ಹಂತದಲ್ಲಿ ಆಯ್ಕೆಗೆ ಪರಿಗಣಿಸಿರುವ ಅಂಶಗಳ ಬಗ್ಗೆ ವ್ಯತ್ಯಾಸ ಕಂಡು ಬಂದಲ್ಲಿ ಅಥವಾ ಆಕ್ಷೇಪಣೆ ಸಲ್ಲಿಕೆಯಾದಲ್ಲಿ, ಕೋರ್ಟಿನ ತೀರ್ಪುಗಳು, ಇಲಾಖೆ ಸುತ್ತೋಲೆಗಳು, ಸರಕಾರದ ನಿರ್ದೇಶನಗಳು ಬಂದಲ್ಲಿ ಪ್ರಕಟಿಸಿರುವ ಪಟ್ಟಿಗಳಲ್ಲಿ ಸೂಕ್ತ ಬದಲಾವಣೆ ಮಾಡಿ ಆಯ್ಕೆ ಪಟ್ಟಿ ಪರಿಷ್ಕರಿಸುವ ಅಧಿಕಾರವನ್ನು ಆಯ್ಕೆ ಪ್ರಾಧಿಕಾರ ಹೊಂದಿರುತ್ತದೆ.

ಓ) **ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಈ ಸಂಬಂಧ ಆಯ್ಕೆ ಪ್ರಾಧಿಕಾರಿ/ನೇಮಕಾತಿ ಪ್ರಾಧಿಕಾರಿಗಳು ನೀಡುವ ಸೂಚನೆಗಳನ್ನು ಇಲಾಖೆಯ ಅಧಿಕೃತ ವೆಬ್‌ಸೈಟ್‌ನಲ್ಲಿ (www.schooleducation.kar.nic.in) ಅವಲೋಕಿಸುವುದು.**

(ಎಸ್.ಎಲ್.ಚವ್ಹಾಣ್)
ಆಯ್ಕೆ ಪ್ರಾಧಿಕಾರಿ ಹಾಗೂ ಸಹನಿರ್ದೇಶಕರು,
ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಂಗಳೂರು ವಿಭಾಗ, ಬೆಂಗಳೂರು.

ಅನುಬಂಧ – 1

ಆಯ್ಕೆ ಪ್ರಾಧಿಕಾರಿಗಳು ಹಾಗೂ ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ವಿಭಾಗ, ಆಯುಕ್ತರ ಕಛೇರಿ,ಬೆಂಗಳೂರು–01.

ಅ1/ಪ್ರೌಶಾಶಿ/ನೇಮಕ 01/2012–13 ದಿನಾಂಕ: 02.04.2012

<table>
<tr><th rowspan="2">ಜಿಲ್ಲೆಯ ಹೆಸರು</th><th colspan="7">ಭಾಷೆಗಳು</th><th colspan="5">ಕಲಾ</th><th colspan="5">ಪಿಸಿಎಂ</th><th colspan="5">ಸಿಬಿಜಡ್</th><th rowspan="2">ದೈಶಿ</th><th rowspan="2">ಒಟ್ಟು</th></tr>
<tr><th>ಕನ್ನಡ</th><th>ಇಂಗ್ಲೀ</th><th>ಹಿಂದಿ</th><th>ಉರ್ದು</th><th>ತೆಲುಗು</th><th>ತಮಿಳು</th><th>ಸಂಸ್ಕೃತ</th><th>ಕನ್ನಡ</th><th>ಉರ್ದು</th><th>ತೆಲುಗು</th><th>ತಮಿಳು</th><th>ಇಂಗ್ಲೀ</th><th>ಕನ್ನಡ</th><th>ಉರ್ದು</th><th>ತೆಲುಗು</th><th>ತಮಿಳು</th><th>ಇಂಗ್ಲೀ</th><th>ಕನ್ನಡ</th><th>ಉರ್ದು</th><th>ತೆಲುಗು</th><th>ತಮಿಳು</th><th>ಇಂಗ್ಲೀ</th></tr>
<tr><td>ಬೆಂಗಳೂರು ಉತ್ತರ</td><td>4</td><td>4</td><td>4</td><td></td><td></td><td></td><td></td><td>8</td><td></td><td></td><td></td><td></td><td>1</td><td></td><td></td><td></td><td></td><td>6</td><td></td><td></td><td></td><td></td><td>4</td><td>31</td></tr>
<tr><td>ಬೆಂಗಳೂರು ದಕ್ಷಿಣ</td><td>5</td><td>6</td><td>2</td><td>1</td><td></td><td></td><td></td><td>6</td><td>1</td><td>1</td><td></td><td></td><td>4</td><td>1</td><td></td><td></td><td></td><td>2</td><td>1</td><td></td><td></td><td></td><td>5</td><td>35</td></tr>
<tr><td>ಬೆಂಗಳೂರು ಗ್ರಾಮಾಂತರ</td><td>9</td><td>12</td><td>5</td><td>1</td><td></td><td></td><td></td><td>6</td><td>1</td><td></td><td></td><td></td><td>10</td><td></td><td></td><td></td><td></td><td>13</td><td>1</td><td></td><td></td><td></td><td>8</td><td>66</td></tr>
<tr><td>ರಾಮನಗರ</td><td>11</td><td>7</td><td>3</td><td>2</td><td></td><td></td><td></td><td>7</td><td>2</td><td></td><td></td><td>2</td><td>8</td><td></td><td></td><td></td><td>2</td><td>9</td><td>2</td><td></td><td></td><td>2</td><td>9</td><td>66</td></tr>
<tr><td>ಕೋಲಾರ</td><td>19</td><td>19</td><td>13</td><td></td><td></td><td></td><td></td><td>18</td><td></td><td></td><td></td><td>3</td><td>23</td><td></td><td></td><td></td><td>3</td><td>19</td><td></td><td></td><td></td><td>3</td><td>14</td><td>134</td></tr>
<tr><td>ಚಿಕ್ಕಬಳ್ಳಾಪುರ</td><td>20</td><td>27</td><td>9</td><td>2</td><td></td><td></td><td>1</td><td>18</td><td></td><td></td><td></td><td>4</td><td>18</td><td></td><td></td><td></td><td>4</td><td>16</td><td></td><td></td><td></td><td>4</td><td>10</td><td>133</td></tr>
<tr><td>ಮಧುಗಿರಿ</td><td>6</td><td>8</td><td>5</td><td>1</td><td></td><td></td><td>1</td><td>6</td><td></td><td></td><td></td><td>1</td><td>2</td><td></td><td></td><td></td><td>1</td><td>16</td><td>1</td><td></td><td></td><td>1</td><td>5</td><td>54</td></tr>
<tr><td>ತುಮಕೂರು</td><td>13</td><td>9</td><td>3</td><td>2</td><td></td><td></td><td>1</td><td>7</td><td>1</td><td></td><td></td><td></td><td></td><td></td><td></td><td></td><td></td><td>11</td><td></td><td></td><td></td><td></td><td>7</td><td>54</td></tr>
<tr><td>ಚಿತ್ರದುರ್ಗ</td><td>7</td><td>7</td><td>7</td><td></td><td></td><td></td><td></td><td>5</td><td></td><td></td><td></td><td>2</td><td></td><td></td><td></td><td></td><td>2</td><td>9</td><td></td><td></td><td></td><td>2</td><td>7</td><td>48</td></tr>
<tr><td>ದಾವಣಗೆರೆ</td><td>11</td><td>12</td><td>5</td><td>2</td><td></td><td></td><td></td><td>11</td><td>2</td><td></td><td></td><td>1</td><td>5</td><td>1</td><td></td><td></td><td>1</td><td>22</td><td>2</td><td></td><td></td><td>1</td><td>8</td><td>84</td></tr>
<tr><td>ಶಿವಮೊಗ್ಗ</td><td>13</td><td>11</td><td>6</td><td>5</td><td></td><td>2</td><td></td><td>6</td><td>5</td><td></td><td>1</td><td></td><td>8</td><td>3</td><td></td><td></td><td></td><td>11</td><td>7</td><td></td><td>1</td><td></td><td>11</td><td>90</td></tr>
<tr><td>ಒಟ್ಟು</td><td>118</td><td>122</td><td>62</td><td>16</td><td>0</td><td>2</td><td>3</td><td>98</td><td>12</td><td>1</td><td>1</td><td>13</td><td>79</td><td>5</td><td>0</td><td>0</td><td>13</td><td>134</td><td>14</td><td></td><td>1</td><td>13</td><td>88</td><td>795</td></tr>
</table>

ಅನುಬಂಧ – 2

2012–13 ನೇ ಸಾಲಿನ ಬೆಂಗಳೂರು ವಿಭಾಗದಲ್ಲಿ ಖಾಲಿ ಇರುವ ಸಹ ಶಿಕ್ಷಕರ ಗ್ರೇಡ್–2 ಹಾಗೂ ದೈಹಿಕ ಶಿಕ್ಷಣ ಶಿಕ್ಷಕರ ಗ್ರೇಡ್–1 ನೇಮಕಾತಿಗೆ ಹುದ್ದೆಗಳ ವರ್ಗೀಕರಣ.

ಜಿಲ್ಲೆಯ ಹೆಸರು : ಬೆಂಗಳೂರು ಉತ್ತರ ಜಿಲ್ಲೆ
ವಿಷಯ : ಕನ್ನಡ ಭಾಷೆ
ಒಟ್ಟು ಹುದ್ದೆಗಳು : 04

1. ಹಿಂದಿನ ನೇಮಕಾತಿಯ ಅಂತಿಮ ಬಿಂದು : 08
2. ಈ ನೇಮಕಾತಿಯ ಆರಂಭಿಕ ಬಿಂದು : 09
3. ಈ ನೇಮಕಾತಿಯ ಅಂತಿಮ ಬಿಂದು : 12

	ಪ.ಜಾತಿ	ಪ.ಪಂ	ಪ್ರ–1	2ಎ	2ಬಿ	3ಎ	3ಬಿ	ಸಾ.ಅ	ಒಟ್ಟು
ಇತರೆ					01				01
ಗ್ರಾಮೀಣ								01	01
ಕ.ಮಾ.ಅ									
ಯೋ.ಅ									
ಮಾ.ಸೈ									
ಅಂ.ವಿ									
ಮ.ಅ	01							01	02
ಒಟ್ಟು	01				01			02	04

2012–13 ನೇ ಸಾಲಿನ ಬೆಂಗಳೂರು ವಿಭಾಗದಲ್ಲಿ ಖಾಲಿ ಇರುವ ಸಹ ಶಿಕ್ಷಕರ ಗ್ರೇಡ್–2 ಹಾಗೂ ದೈಹಿಕ ಶಿಕ್ಷಣ ಶಿಕ್ಷಕರ ಗ್ರೇಡ್–1 ನೇಮಕಾತಿಗೆ ಹುದ್ದೆಗಳ ವರ್ಗೀಕರಣ.

ಜಿಲ್ಲೆಯ ಹೆಸರು : ಬೆಂಗಳೂರು ಉತ್ತರ ಜಿಲ್ಲೆ
ವಿಷಯ : ಆಂಗ್ಲ ಭಾಷೆ
ಒಟ್ಟು ಹುದ್ದೆಗಳು : 04

1. ಹಿಂದಿನ ನೇಮಕಾತಿಯ ಅಂತಿಮ ಬಿಂದು : 03
2. ಈ ನೇಮಕಾತಿಯ ಆರಂಭಿಕ ಬಿಂದು : 04
3. ಈ ನೇಮಕಾತಿಯ ಅಂತಿಮ ಬಿಂದು : 07

	ಪ.ಜಾತಿ	ಪ.ಪಂ	ಪ್ರ–1	2ಎ	2ಬಿ	3ಎ	3ಬಿ	ಸಾ.ಅ	ಒಟ್ಟು
ಇತರೆ			01	01					02
ಗ್ರಾಮೀಣ								01	01
ಕ.ಮಾ.ಅ									
ಯೋ.ಅ									
ಮಾ.ಸೈ									
ಅಂ.ವಿ									
ಮ.ಅ								01	01
ಒಟ್ಟು			01	01				02	04

2012–13 ನೇ ಸಾಲಿನ ಬೆಂಗಳೂರು ವಿಭಾಗದಲ್ಲಿ ಖಾಲಿ ಇರುವ ಸಹ ಶಿಕ್ಷಕರ ಗ್ರೇಡ್–2 ಹಾಗೂ ದೈಹಿಕ ಶಿಕ್ಷಣ ಶಿಕ್ಷಕರ ಗ್ರೇಡ್–1 ನೇಮಕಾತಿಗೆ ಹುದ್ದೆಗಳ ವರ್ಗೀಕರಣ.

ಜಿಲ್ಲೆಯ ಹೆಸರು : ಬೆಂಗಳೂರು ಉತ್ತರ ಜಿಲ್ಲೆ
ವಿಷಯ : ಹಿಂದಿ ಭಾಷೆ
ಒಟ್ಟು ಹುದ್ದೆಗಳು : 04

1. ಹಿಂದಿನ ನೇಮಕಾತಿಯ ಅಂತಿಮ ಬಿಂದು : 06
2. ಈ ನೇಮಕಾತಿಯ ಆರಂಭಿಕ ಬಿಂದು : 07
3. ಈ ನೇಮಕಾತಿಯ ಅಂತಿಮ ಬಿಂದು : 10

	ಪ.ಜಾತಿ	ಪ.ಪಂ	ಪ್ರ–1	2ಎ	2ಬಿ	3ಎ	3ಬಿ	ಸಾ.ಅ	ಒಟ್ಟು
ಇತರೆ				01					01
ಗ್ರಾಮೀಣ									
ಕ.ಮಾ.ಅ									
ಯೋ.ಅ									
ಮಾ.ಸೈ									
ಅಂ.ವಿ								01	01
ಮ.ಅ	01							01	02
ಒಟ್ಟು	01			01				02	04

2012–13 ನೇ ಸಾಲಿನ ಬೆಂಗಳೂರು ವಿಭಾಗದಲ್ಲಿ ಖಾಲಿ ಇರುವ ಸಹ ಶಿಕ್ಷಕರ ಗ್ರೇಡ್–2 ಹಾಗೂ ದೈಹಿಕ ಶಿಕ್ಷಣ ಶಿಕ್ಷಕರ ಗ್ರೇಡ್–1 ನೇಮಕಾತಿಗೆ ಹುದ್ದೆಗಳ ವರ್ಗೀಕರಣ.

ಜಿಲ್ಲೆಯ ಹೆಸರು : ಬೆಂಗಳೂರು ಉತ್ತರ ಜಿಲ್ಲೆ
ವಿಷಯ : ಕಲಾ ಕನ್ನಡ
ಒಟ್ಟು ಹುದ್ದೆಗಳು : 08

1. ಹಿಂದಿನ ನೇಮಕಾತಿಯ ಅಂತಿಮ ಬಿಂದು : 21
2. ಈ ನೇಮಕಾತಿಯ ಆರಂಭಿಕ ಬಿಂದು : 22
3. ಈ ನೇಮಕಾತಿಯ ಅಂತಿಮ ಬಿಂದು : 29

	ಪ.ಜಾತಿ	ಪ.ಪಂ	ಪ್ರ–1	2ಎ	2ಬಿ	3ಎ	3ಬಿ	ಸಾ.ಅ	ಒಟ್ಟು
ಇತರೆ								01	01
ಗ್ರಾಮೀಣ								01	01
ಕ.ಮಾ.ಅ									
ಯೋ.ಅ									
ಮಾ.ಸೈ									
ಅಂ.ವಿ	01			01				01	03
ಮ.ಅ	01			01				01	03
ಒಟ್ಟು	02			02				04	08

2012–13 ನೇ ಸಾಲಿನ ಬೆಂಗಳೂರು ವಿಭಾಗದಲ್ಲಿ ಖಾಲಿ ಇರುವ ಸಹ ಶಿಕ್ಷಕರ ಗ್ರೇಡ್–2 ಹಾಗೂ ದೈಹಿಕ ಶಿಕ್ಷಣ ಶಿಕ್ಷಕರ ಗ್ರೇಡ್–1 ನೇಮಕಾತಿಗೆ ಹುದ್ದೆಗಳ ವರ್ಗೀಕರಣ.

ಜಿಲ್ಲೆಯ ಹೆಸರು : ಬೆಂಗಳೂರು ಉತ್ತರ ಜಿಲ್ಲೆ
ವಿಷಯ : ಪಿಸಿಎಂ ಕನ್ನಡ
ಒಟ್ಟು ಹುದ್ದೆಗಳು : 01

1. ಹಿಂದಿನ ನೇಮಕಾತಿಯ ಅಂತಿಮ ಬಿಂದು : 77
2. ಈ ನೇಮಕಾತಿಯ ಆರಂಭಿಕ ಬಿಂದು : 78
3. ಈ ನೇಮಕಾತಿಯ ಅಂತಿಮ ಬಿಂದು : 78

	ಪ.ಜಾತಿ	ಪ.ಪಂ	ಪ್ರ–1	2ಎ	2ಬಿ	3ಎ	3ಬಿ	ಸಾ.ಅ	ಒಟ್ಟು
ಇತರೆ									
ಗ್ರಾಮೀಣ								01	01
ಕ.ಮಾ.ಅ									
ಯೋ.ಅ									
ಮಾ.ಸೈ									
ಅಂ.ವಿ									
ಮ.ಅ									
ಒಟ್ಟು								01	01

2012–13 ನೇ ಸಾಲಿನ ಬೆಂಗಳೂರು ವಿಭಾಗದಲ್ಲಿ ಖಾಲಿ ಇರುವ ಸಹ ಶಿಕ್ಷಕರ ಗ್ರೇಡ್–2 ಹಾಗೂ ದೈಹಿಕ ಶಿಕ್ಷಣ ಶಿಕ್ಷಕರ ಗ್ರೇಡ್–1 ನೇಮಕಾತಿಗೆ ಹುದ್ದೆಗಳ ವರ್ಗೀಕರಣ.

ಜಿಲ್ಲೆಯ ಹೆಸರು : ಬೆಂಗಳೂರು ಉತ್ತರ ಜಿಲ್ಲೆ
ವಿಷಯ : ಸಿಬಿಜಡ್ ಕನ್ನಡ
ಒಟ್ಟು ಹುದ್ದೆಗಳು : 06

1. ಹಿಂದಿನ ನೇಮಕಾತಿಯ ಅಂತಿಮ ಬಿಂದು : 10
2. ಈ ನೇಮಕಾತಿಯ ಆರಂಭಿಕ ಬಿಂದು : 11
3. ಈ ನೇಮಕಾತಿಯ ಅಂತಿಮ ಬಿಂದು : 16

	ಪ.ಜಾತಿ	ಪ.ಪಂ	ಪ್ರ–1	2ಎ	2ಬಿ	3ಎ	3ಬಿ	ಸಾ.ಅ	ಒಟ್ಟು
ಇತರೆ					01			01	02
ಗ್ರಾಮೀಣ	01							01	02
ಕ.ಮಾ.ಅ									
ಯೋ.ಅ									
ಮಾ.ಸೈ									
ಅಂ.ವಿ									
ಮ.ಅ				01				01	02
ಒಟ್ಟು	01			01	01			03	06

2012–13 ನೇ ಸಾಲಿನ ಬೆಂಗಳೂರು ವಿಭಾಗದಲ್ಲಿ ಖಾಲಿ ಇರುವ ಸಹ ಶಿಕ್ಷಕರ ಗ್ರೇಡ್–2 ಹಾಗೂ ದೈಹಿಕ ಶಿಕ್ಷಣ ಶಿಕ್ಷಕಂ ಗ್ರೇಡ್–1 ನೇಮಕಾತಿಗೆ ಹುದ್ದೆಗಳ ವರ್ಗೀಕರಣ.

ಜಿಲ್ಲೆಯ ಹೆಸರು : ಬೆಂಗಳೂರು ಉತ್ತರ ಜಿಲ್ಲೆ
ವಿಷಯ : ದೈಹಿಕ ಶಿಕ್ಷಣ ಗ್ರೇ–1
ಒಟ್ಟು ಹುದ್ದೆಗಳು : 04

1. ಹಿಂದಿನ ನೇಮಕಾತಿಯ ಅಂತಿಮ ಬಿಂದು : 06
2. ಈ ನೇಮಕಾತಿಯ ಆರಂಭಿಕ ಬಿಂದು : 07
3. ಈ ನೇಮಕಾತಿಯ ಅಂತಿಮ ಬಿಂದು : 10

	ಪ.ಜಾತಿ	ಪ.ಪಂ	ಪ್ರ–1	2ಎ	2ಬಿ	3ಎ	3ಬಿ	ಸಾ.ಅ	ಒಟ್ಟು
ಇತರೆ				01					02
ಗ್ರಾಮೀಣ								01	01
ಕ.ಮಾ.ಅ									
ಯೋ.ಅ									
ಮಾ.ಸೈ									
ಅಂ.ವಿ									
ಮ.ಅ	01							01	02
ಒಟ್ಟು	01			01				02	04

2012–13 ನೇ ಸಾಲಿನ ಬೆಂಗಳೂರು ವಿಭಾಗದಲ್ಲಿ ಖಾಲಿ ಇರುವ ಸಹ ಶಿಕ್ಷಕರ ಗ್ರೇಡ್–2 ಹಾಗೂ ದೈಹಿಕ ಶಿಕ್ಷಣ ಶಿಕ್ಷಕರ ಗ್ರೇಡ್–1 ನೇಮಕಾತಿಗೆ ಹುದ್ದೆಗಳ ವರ್ಗೀಕರಣ.

ಜಿಲ್ಲೆಯ ಹೆಸರು : ಬೆಂಗಳೂರು ದಕ್ಷಿಣ ಜಿಲ್ಲೆ
ವಿಷಯ : ಕನ್ನಡ ಭಾಷೆ
ಒಟ್ಟು ಹುದ್ದೆಗಳು : 05

1. ಹಿಂದಿನ ನೇಮಕಾತಿಯ ಅಂತಿಮ ಬಿಂದು : 17
2. ಈ ನೇಮಕಾತಿಯ ಆರಂಭಿಕ ಬಿಂದು : 18
3. ಈ ನೇಮಕಾತಿಯ ಅಂತಿಮ ಬಿಂದು : 22

	ಪ.ಜಾತಿ	ಪ.ಪಂ	ಪ್ರ–1	2ಎ	2ಬಿ	3ಎ	3ಬಿ	ಸಾ.ಅ	ಒಟ್ಟು
ಇತರೆ							01	01	02
ಗ್ರಾಮೀಣ				01				01	02
ಕ.ಮಾ.ಅ									
ಯೋ.ಅ									
ಮಾ.ಸೈ								01	01
ಅಂ.ವಿ									
ಮ.ಅ									
ಒಟ್ಟು				01			01	03	05

2012–13 ನೇ ಸಾಲಿನ ಬೆಂಗಳೂರು ವಿಭಾಗದಲ್ಲಿ ಖಾಲಿ ಇರುವ ಸಹ ಶಿಕ್ಷಕರ ಗ್ರೇಡ್–2 ಹಾಗೂ ದೈಹಿಕ ಶಿಕ್ಷಣ ಶಿಕ್ಷಕರ ಗ್ರೇಡ್–1 ನೇಮಕಾತಿಗೆ ಹುದ್ದೆಗಳ ವರ್ಗೀಕರಣ.

ಜಿಲ್ಲೆಯ ಹೆಸರು : ಬೆಂಗಳೂರು ದಕ್ಷಿಣ ಜಿಲ್ಲೆ
ವಿಷಯ : ಆಂಗ್ಲ ಭಾಷೆ
